# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, 05 ನೇ ಮಾರ್ಚ್ 2016**

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ *ಮಧ್ಯಾಹ್ನ 10 ಗಂಟೆ 09 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

***<u>ಸಂತಾಪ ಸೂಚನೆ</u>***

**ವಿಷಯ:– ಲೋಕಸಭೆಯ ಮಾಜಿ ಸ್ಪೀಕರ್ ಶ್ರೀ ಪಿ.ಎ. ಸಂಗ್ಮಾರವರು ನಿಧನರಾದ ಬಗ್ಗೆ.**

**ಸಭಾಪತಿಯವರು:–** ನಿನ್ನೆ ದಿವಸ ನಮ್ಮ ದೇಶದ ಹಿರಿಯರು ನಮ್ಮನ್ನು ಅಗಲಿದ್ದಾರೆ.

(ಹೇಳಿಕೆಯನ್ನು ಲಗತ್ತಿಸಿದೆ)

**(ಮುಂದು)**

(ಸಭಾಪತಿಯವರ ಉಪಸ್ಥಿತಿ)

**ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು, ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 15(2)ನೇ ಅನುಚ್ಛೇದದ ಮೇರೆಗೆ ಮಾರ್ಚ್ 2015ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿ(ಸಂಖ್ಯೆ:3)ನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ವಿಶೇಷ ಜಂಟಿ ಸದನ ಸಮಿತಿ ಹಾಗೂ ವಿಶೇಷ ಸದನ ಸಮಿತಿಗಳ ಕಾಲವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ,

(ಅ) ದಿನಾಂಕಃ31.12.2015ರವರೆಗೆ ವಿಸ್ತರಿಸಲಾಗಿದ್ದ "ಹೊರ ರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು" ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕಃ30ನೇ ಜೂನ್,2016ರವರೆಗೆ (6 ತಿಂಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಆ) ದಿನಾಂಕಃ31.12.2015ರವೆಗೆ ವಿಸ್ತರಿಸಲಾಗಿದ್ದ "ಭೋವಿ ಮತ್ತು ವಡ್ಡರ್ ಸಮುದಾಯಗಳ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕಃ 30ನೇ ಜೂನ್ 2016ರವರೆಗೆ(6 ತಿಂಗಳವರೆಗೆ) ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರುಃ–** ಮಂಡಿಸಲಾಯಿತು.

**ವಿಶೇಷ ಸದನ ಸಮಿತಿಗಳ ಕಾಲವಕಾಶವನ್ನು ವಿಸ್ತರಿಸುವ ಪ್ರಸ್ತಾವಕ್ಕೆ ಸದನವು ಅನುಮತಿ ನೀಡಿತು**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಮ್ಮ ನೆರೆಯ ರಾಜ್ಯ ತಮಿಳುನಾಡು ಹಾಗೂ ಇನ್ನಿತರೆ ರಾಜ್ಯಗಳಲ್ಲಿ ಭೋವಿ ಮತ್ತು ವಡ್ಡರ್ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ. ನಮ್ಮ ರಾಜ್ಯದಲ್ಲಿ ಯಾಕೆ ಇಷ್ಟೊಂದು ತಡವಾಗುತ್ತಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕಾಗಿ ರಚನೆಯಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಕಾಲಾವಕಾಶವನ್ನು ಪುನಃ ಪುನಃ ವಿಸ್ತರಿಸುವುದರಲ್ಲಿ ಅರ್ಥವಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:–** ವಿಶೇಷ ಜಂಟಿ ಸದನ ಸಮಿತಿಯು ಸಭೆ ಸೇರಿ ಸರ್ಕಾರಕ್ಕೆ ವರದಿ ಕೊಡಬೇಕಾಗಿದೆ. ನಂತರ ಸರ್ಕಾರ ಅದನ್ನು ಸದನದ ಮುಂದೆ ಮಂಡಿಸಿ, ಸದನದ ಅಂಗೀಕಾರವನ್ನು ಪಡೆದುಕೊಳ್ಳಬೇಕಾಗಿದೆ. ಅದಕ್ಕಾಗಿ ಆ ಸಮಿತಿಯ ಕಾಲಾವಧಿಯನ್ನು ವಿಸ್ತರಣೆ ಮಾಡಲಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ವರದಿಯನ್ನು ಮಂಡನೆ ಮಾಡಬೇಕಾದರೆ, ಪುನಃ ಸಮಿತಿಯ ಕಾಲಾವಧಿಯನ್ನು ವಿಸ್ತರಣೆ ಮಾಡಲೇಬೇಕಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸಮಿತಿಯ ಕಾಲಾವಧಿಯನ್ನು ವಿಸ್ತರಣೆ ಮಾಡುವುದು ಬೇಡವೆಂದು ನಾನು ಹೇಳುತ್ತಿಲ್ಲ. ಆದರೆ, ಪುನಃ ಪುನಃ ಕಾಲಾವಕಾಶವನ್ನು ಕೇಳುವುದು ಸರಿಯಲ್ಲ. ಬೇಗನೆ ವರದಿಯನ್ನು ಮಂಡನೆ ಮಾಡಿ ಎಂದು ಸಮಿತಿಗೆ ತಾವು ಸೂಚಿಸಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಕಡೆಯಿಂದ ಯಾವುದೇ ತೊಂದರೆಯಿಲ್ಲ. ಸಮಿತಿಯು ನಮಗೆ ವರದಿಯನ್ನು ಕೊಟ್ಟರೆ, ನಾವು ಅದನ್ನು ಸದನದಲ್ಲಿ ಮಂಡನೆ ಮಾಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸಮಿತಿಗೆ ನಿಗದಿ ಮಾಡಿದ್ದ ಕಾಲಾವಧಿ ಮುಕ್ತಾಯಗೊಂಡಿದೆ. ಈಗ ವರದಿಯನ್ನು ಸಲ್ಲಿಸುವುದಕ್ಕಾಗಿಯೇ ಕಾಲಾವಕಾಶ ಬೇಕಾಗಿದೆ. ತಾವು ಈಗ ಕಾಲಾವಕಾಶವನ್ನು ವಿಸ್ತರಣೆ ಮಾಡಿದರೆ ಮಾತ್ರ ನಾವು ವರದಿಯನ್ನು ಸಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಮಿತಿಗೆ ವರದಿಯನ್ನು ಸಲ್ಲಿಸುವುದಕ್ಕೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ.

**ಸಭಾಪತಿಯವರು:–** ಸದನ ಸಮಾವೇಶಗೊಂಡಾಗ ಮಾತ್ರ ಅವರು ವರದಿಯನ್ನು ಸಲ್ಲಿಕೆ ಮಾಡಬೇಕಾಗಿದೆ. ಈ ತಿಂಗಳೊಳಗೆ ಕೊಡಬಹುದು. ಇಲ್ಲದಿದ್ದರೆ ಜೂನ್ ತಿಂಗಳಿನಲ್ಲಿ ನಡೆಯುವ ಅಧಿವೇಶನದಲ್ಲಿ ಕೊಡಬೇಕಾಗುತ್ತದೆ. ಆದ್ದರಿಂದ ಈ ಸಮಿತಿಯ ಕಾಲಾವಕಾಶವನ್ನು ಆರು ತಿಂಗಳ ಕಾಲ ಅಂದರೆ ಜೂನ್ ತಿಂಗಳವರೆಗೆ ವಿಸ್ತರಣೆ ಮಾಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಆ ಸಮಿತಿಯವರು ವರದಿಯನ್ನು ಸಲ್ಲಿಸುವುದು ಮಾತ್ರ ಬಾಕಿ ಉಳಿದಿದೆ. ಅವರು ವರದಿ ಒಪ್ಪಿಸಿದ ಕೂಡಲೇ ನಾವು ಸದನದ ಮುಂದೆ ಮಂಡಿಸುತ್ತೇವೆ. ಮಾನ್ಯ ಸದಸ್ಯರ ಬೇಡಿಕೆ ಮೇಲೆ ಈ ಸದನ ಸಮಿತಿಯನ್ನು ರಚನೆ ಮಾಡಲಾಗಿತ್ತು. ಸದನ ಸಮಿತಿ ಪೂರ್ತಿಯಾಗಿ ತನ್ನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಇನ್ನೂ ಆರು ತಿಂಗಳ ಕಾಲಾವಕಾಶವನ್ನು ಕೇಳಿದ್ದಾರೆ, ಅದಕ್ಕಿಂತ ಪೂರ್ವದಲ್ಲಿಯೇ ವರದಿಯನ್ನು ಸಲ್ಲಿಸಿದರೆ ಆ ವರದಿಯನ್ನು ಆಧರಿಸಿ ನಾವು ನಿರ್ಣಯವನ್ನು ಕೈಗೊಳ್ಳುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಈ ಸದನ ಸಮಿತಿಯ ಅಧ್ಯಕ್ಷರಾಗಿರುವ ಮಾನ್ಯ ವಿ.ಎಸ್.ಉಗ್ರಪ್ಪನವರು ಈ ಅಧಿವೇಶನದಲ್ಲಿಯೇ ವರದಿಯನ್ನು ಮಂಡನೆ ಮಾಡುವುದಕ್ಕೆ ಕಾಲಾವಕಾಶವನ್ನು ಕೇಳಿದ್ದಾರೆ.

## ಅರ್ಜಿಯನ್ನೊಪ್ಪಿಸುವುದು

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶಿತರು):–** ಕರ್ನಾಟಕ ರಾಜ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ವೇತನ ಸೇವಾ ಭದ್ರತೆ ಕುರಿತ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

## ವಿಶೇಷ ಪ್ರಸ್ತಾವಗಳು

ವಿಷಯಃ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಮರಳುಗಾರಿಕೆ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮಾತ್ರವಲ್ಲ ಕರಾವಳಿ ಜಿಲ್ಲೆಗಳಾದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮರಳು ನೀತಿಯಿಂದ ಗ್ರಾಮೀಣ ರಸ್ತೆಗಳು, ಕುಡಿಯುವ ನೀರಿನ ಘಟಕ, ಶೌಚಾಲಯ ಒಟ್ಟಾರೆ ಮರಳಿನ ಗೊಂದಲದಿಂದ ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ ಕೆಲಸಗಳೇ ಸ್ಥಗಿತವಾಗಿದೆ. ಮರಳಿನ ಕೊರತೆಯಿಂದ ಬಡವರ ಮನೆಗಳ ಕೆಲಸ ಅರ್ಧಕ್ಕೆ ನಿಂತುಹೋಗಿವೆ.

ಉಡುಪಿ ಜಿಲ್ಲೆಯಲ್ಲಿ ಸಿ.ಆರ್.ಜಡ್.ವ್ಯಾಪ್ತಿಯಲ್ಲಿ 18 ಬ್ಯಾಗ್‌ಗಳನ್ನು ಗುರುತಿಸಿ ಮರಳುಗಾರಿಕೆಗೆ ಪರವಾನಿಗೆ ನೀಡಿದ್ದು, ಕಳೆದ ಜನವರಿ 22ರಿಂದ ಮರಳುಗಾರಿಕೆ ಸ್ಥಗಿತವಾಗಿದೆ. ನಾನ್ ಸಿ.ಆರ್.ಜಡ್.ನಲ್ಲಿ ಗುರುತಿಸಿ ಪಿ.ಡಬ್ಲ್ಯೂಡಿ. ಮೂಲಕ ಸರಕಾರಕ್ಕೆ ಕಳುಹಿಸಿದ್ದರೂ ಯಾವುದೇ ಪ್ರಗತಿಯಾಗದೆ ಮರಳಿನ ಸಂಗ್ರಹವೇ ಆಗುತ್ತಿಲ್ಲ.

ಇದ್ದಕ್ಕಿದಂತೆ ದಿನಾಂಕಃ26.02.2016ರಂದು ಕುಂದಾಪುರ ತಾಲ್ಲೂಕು ಬಸ್ರೂರು, ಕಂಡ್ಲೂರು ಭಾಗದಲ್ಲಿ ಮರಳು ದಿಬ್ಬದ ಬಳಿ ತೆರಳಿದ ಕಂದಾಯ ಮತ್ತು ಗಣಿ ಇಲಾಖೆಯ ಅಧಿಕಾರಿಗಳು ಕೂಲಿ ಮಾಡುವ ಬಡವರ ಶೆಡ್‌ಗಳನ್ನು ಧ್ವಂಸ ಮಾಡಿದ್ದು ಎಲ್ಲಿಂದಲೋ ಕೂಲಿಗಾಗಿ ಬಂದ ಜನ ನಿದ್ರಾಹಾರಗಳಿಲ್ಲದೇ ಬೀದಿಗೆ ಬಿದ್ದಿದ್ದಾರೆ. ನಿಯಮಬದ್ಧವಾಗಿ ಮರಳುಗಾರಿಕೆಯ ಬದಲಾಗಿ ಸರಕಾರದ ನಿರ್ಲಕ್ಷ್ಯದಿಂದಾಗಿ ಮರಳುಗಾರಿಕೆಯಲ್ಲಿ ಗೂಂಡಾಗಿರಿ, ಭ್ರಷ್ಟಾಚಾರ ತಾಂಡವಾಡುತ್ತಿದೆ. ಮರಳು ನೀತಿಯ ಗೊಂದಲದಿಂದ ಸಾವಿರಾರು ಮಂದಿ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಅಭಿವೃದ್ಧಿ ನಿಂತು ಹೋಗಿದೆ.

ಇದರೊಂದಿಗೆ ಕಳೆದ ವರ್ಷ ಮರಳುಗಾರಿಕೆಯಿಂದ ವಸೂಲಾದ ರಾಜಧನದಲ್ಲಿ ಶೇಕಡಾ 25ರಷ್ಟು ಮೊತ್ತವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ನೀಡುವ ಬಗ್ಗೆ ಈಗಾಗಲೇ

ನಿರ್ಣಯ ಕೈಗೊಂಡಿದ್ದರೂ ಉಡುಪಿ ಜಿಲ್ಲೆಯೊಂದರಲ್ಲೇ 1.5 ಕೋಟಿ ರೂಪಾಯಿಗಳ ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಗೆ ಗಣಿ ಇಲಾಖೆಯಿಂದ ನೀಡಬೇಕಾಗಿದ್ದು, ವೃಥಾ ವಿಳಂಬ ಮಾಡುತ್ತಿದ್ದಾರೆ.

ತಮ್ಮ ಮೂಲಕ ನಾನು ಸರಕಾರವನ್ನು ಅಗ್ರಹಿಸುವುದೇನೆಂದರೆ, ತಕ್ಷಣ ರಾಜ್ಯ ಸರಕಾರ ಮಧ್ಯೆ ಪ್ರವೇಶಿಸಿ ಉಡುಪಿ ಮತ್ತು ದಕ್ಷಿಣ ಕನ್ನೆ ಜಿಲ್ಲೆಯಲ್ಲಿ ಮರಳುಗಾರಿಕೆ ಕ್ರಮಬದ್ಧಗೊಳಿಸಿ ಅಭಿವೃದ್ಧಿಗಾಗಿ ಮತ್ತು ಬಡವರ ಮನೆ ನಿರ್ಮಾಣಕ್ಕೆ ಮರಳು ಕಡಿಮೆ ವೆಚ್ಚದಲ್ಲಿ ಸಿಗಲು ಯೋಜನೆ ರೂಪಿಸಬೇಕೆಂದು ಹಾಗೂ ವಸೂಲಾದ ರಾಜಧನದ ಶೇಕಡಾ 25ರಷ್ಟು ಮೊತ್ತವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಗಣಿ ಮತ್ತು ಭೂವಿಜ್ಞಾನ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಈ ದಿನವೇ ಉತ್ತರವನ್ನು ಕೊಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕೊಡಲು ನಮಗೆ ಮೂರು ದಿನಗಳ ಕಾಲಾವಕಾಶವಿದೆ. ಮಾಹಿತಿಯನ್ನು ತರಿಸಿಕೊಡುವುದಕ್ಕೆ ಸಮಯ ಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮೂರು ದಿನ ಕಾಲಾವಕಾಶವಿದೆ ಆನಂತರ ಕೊಡುತ್ತೇವೆಂದು ಹೇಳಿದರೆ, ಅಲ್ಲಿಯವರೆಗೆ ಅಧಿವೇಶನ ಇರುವುದಿಲ್ಲ. ಈ ದಿನವೇ ಕೊನೆಯ ದಿನವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಅರ್ಧ ಗಂಟೆಯಲ್ಲಿ ಮಾಹಿತಿಯನ್ನು ತರಿಸಿಕೊಡಬಹುದು.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಈ ದಿನವೇ ಕೊಡಲು ಪ್ರಯತ್ನ ಮಾಡಲಾಗುತ್ತದೆ. ಆಗದಿದ್ದರೆ ನಂತರ ಕೊಡಿಸಲಾಗುತ್ತದೆ.

**ಸಭಾಪತಿಯವರುಃ–** ಪ್ರಶ್ನೋತ್ತರ ವೇಳೆ ಇಲ್ಲದೇ ಇರುವುದರಿಂದ ಶೂನ್ಯವೇಳೆಗೆ ಬದಲಾಗಿ ವಿಶೇಷ ಪ್ರಸ್ತಾವಗಳನ್ನು ತೆಗೆದುಕೊಳ್ಳಲಾಗಿದೆ. ಅವರ ಪ್ರಶ್ನೆಗೆ ಸರ್ಕಾರ ಉತ್ತರ ಕೊಡುವುದಾದರೆ ನನ್ನ ಅಭ್ಯಂತರವೇನೂ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳ್ಳದೇ ಇಡೀ ರಾಜ್ಯಕ್ಕೆ ಸೀಮಿತವಾಗಿ ಉತ್ತರವನ್ನು ಕೊಡಬೇಕಾಗುತ್ತದೆ.

(ಮುಂದುವರಿದಿದೆ)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ಆರ್.ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇವತ್ತು ಸಂಜೆಯೊಳಗೆ ಉತ್ತರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ವೇಳೆ ಮಾಹಿತಿಗಳನ್ನು ಸಂಗ್ರಹಣೆ ಮಾಡುವುದಕ್ಕೆ ವಿಫಲವಾದರೂ ಸಹ ಸುದೀರ್ಘವಾದ ಉತ್ತರವನ್ನು ಮಾನ್ಯ ಸಚಿವರಿಂದ ಕೊಡಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಇಡೀ ರಾಜ್ಯದ ಬಗ್ಗೆ ಕೇಳಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಡೀ ಕರ್ನಾಟಕ ರಾಜ್ಯ ಸೇರಿದಂತೆ ಉತ್ತರ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ನೀವು ನಿಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಏಕೆ ಕೇಳಿದ್ದೀರಿ? ನೀವು ವಿಧಾನ ಪರಿಷತ್ ಸದಸ್ಯರಾಗಿ ಅಲ್ಲಿಂದ ಆಯ್ಕೆಯಾಗಿರಬಹುದು. ನೀವು ರಾಜ್ಯಕ್ಕೆ ಸಂಬಂಧಿಸಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಡೀ ರಾಜ್ಯಕ್ಕೆ ಸೇರಿದಂತೆ ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಕೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉಡುಪಿ ಎಂದು ಏಕೆ ಉಲ್ಲೇಖ ಮಾಡಿದೆ ಎಂದರೆ ಮೊನ್ನೆ ದಿವಸ ಬಂದು ಪೊಲೀಸರು ಕಂದಾಯ ಇಲಾಖೆಯ ಅಧಿಕಾರಿಗಳು, ಗಣಿ ಇಲಾಖೆಯ ಅಧಿಕಾರಿಗಳು.......

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಇದರ ಬಗ್ಗೆ ಚರ್ಚೆ ಬೇಡ.

**ಸಭಾಪತಿಯವರು:–** ಇದು ಶೂನ್ಯ ವೇಳೆಯ ಬದಲು ಇರತಕ್ಕಂಥದ್ದು. ಪ್ರಶ್ನೋತ್ತರ ಇಲ್ಲದಿರುವ ದಿವಸ ಇದನ್ನು ತೆಗೆದುಕೊಳ್ಳುವಂಥದ್ದು. ಸಭಾನಾಯಕರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಬಗ್ಗೆ ಮತ್ತೊಂದು ನೋಟಿಸ್ ಕೊಡಲಿ.

ವಿಷಯ: ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸಾವಿರಾರು
ರೈತರಿಗೆ ಬಂಧನದ ಭೀತಿ ಎದುರಾಗಿರುವ ಬಗ್ಗೆ.

--------

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಪತ್ರಿಕೆಯಲ್ಲಿ **"ಹಾವೇರಿಯ ಸಾವಿರಾರು ರೈತರಿಗೆ ಕೋಳದ ಭಯ: ತುಂಗಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಹಗರಣ – ರಾಜ್ಯದ ಬೊಕ್ಕಸಕ್ಕೆ 5 ಕೋಟಿ ರೂಪಾಯಿ ನಷ್ಟದ ಆರೋಪ"** ಎಂದು ಬಂದಿದೆ. ಪೋಲಿಸರ ಗೋಲಿಬಾರ್, ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸಾವಿರಾರು ರೈತರಿಗೆ ಬಂಧನದ ಭೀತಿ ಎದುರಾಗಿದೆ. ಬಿಟಿ ಹತ್ತಿ ಕಂಟಕ, ಬರಗಾಲದಲ್ಲಿ ಬ್ಯಾಂಕುಗಳ ಕಿರಿಕಿರಿಯಿಂದ ಕಂಗಾಲಾಗಿರುವ ಹಿರೇಕೆರೂರು ತಾಲ್ಲೂಕಿನ 12 ಗ್ರಾಮಗಳ 1150 ರೈತರು ನಿದ್ದೆಯಿಲ್ಲದ ದಿನಗಳನ್ನು ಕಳೆಯುತ್ತಿದ್ದಾರೆ. ತುಂಗಾ ಮೇಲ್ದಂಡೆ ಕಾಲುವೆ ಕಾಮಗಾರಿಯ ಭೂಸ್ವಾಧೀನ ಮತ್ತು ಪರಿಹಾರ ವಿತರಣೆಯಲ್ಲಿ ನಡೆದಿದೆ ಎನ್ನಲಾದ 5 ಕೋಟಿ ಭ್ರಷ್ಟಾಚಾರ ಹಗರಣ ಈಗ 8 ವರ್ಷಗಳ ಬಳಿಕ ಎದ್ದು ಕುಳಿತಿದ್ದು, ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ಮೋಸದಾಟಕ್ಕೆ ಅಮಾಯಕ ರೈತರು ಜೈಲು ಪಾಲಾಗುವ ಪರಿಸ್ಥಿತಿ ಎದುರಾಗಿದೆ. ಈ ಅವಾಂತರದಿಂದಾಗಿ ನಡೆದ ಪ್ರಾಥಮಿಕ ತನಿಖೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಬರೋಬ್ಬರಿ 5 ಕೋಟಿ ನಷ್ಟವಾಗಿದೆ. ಹಾಗಾಗಿ ಅಂದಿನ ಭೂಸ್ವಾಧೀನ ವಿಶೇಷಾಧಿಕಾರಿ ಇಸ್ಮಾಯಿಲ್ ಶಿರಹಟ್ಟಿ ಶಿರಸ್ತೆದಾರ ಜಿ.ಎನ್.ಕಟ್ಟಿಮನಿ, ಕಲ್ಲಪ್ಪ ಲಮಾಣಿ ಸೇರಿ 30ಕ್ಕೂ ಹೆಚ್ಚು ಸರ್ಕಾರಿ ನೌಕರರು ಮತ್ತು 1,100 ಕ್ಕೂ ಹೆಚ್ಚು ರೈತರ ವಿರುದ್ಧ ಈಗ ಸಿಓಡಿ 408, 468, 471 ಕಲಂ ಅನ್ವಯ ಪ್ರಕರಣ ದಾಖಲಿಸಿ, ವಿಚಾರಣೆ ಆರಂಭಿಸಿದೆ. ಇತ್ತೀಚೆಗೆ ನಡೆದ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಹಳ್ಳಿಗಳೆಲ್ಲ ರಾಜಕೀಯ ಗದ್ದಲದಲ್ಲಿ ಮುಳುಗೇಳುತ್ತಿದ್ದಾಗ ಸಿಓಡಿ ಅಧಿಕಾರಿಗಳು ಆರೋಪ ಪಟ್ಟಿಯಲ್ಲಿರುವ 300 ರೈತರ ಮನೆ ಬಾಗಿಲು ತಟ್ಟಿ ಅವರನ್ನು ಸುದೀರ್ಘ ವಿಚಾರಣೆ ನಡೆಸಿದ್ದಾರೆ. 400 ಕ್ಕೂ ಹೆಚ್ಚು ರೈತರಿಗೆ ನೋಟಿಸ್ ನೀಡಿರುವುದರಿಂದ ನಿತ್ಯ ಹತ್ತಾರು ರೈತರು ವಿಚಾರಣೆಗೆ ಹಾಜರಾಲು ಚಪ್ಪಲಿ ಸವೆಸುತ್ತಿದ್ದಾರೆ. ತಾಲ್ಲೂಕಿನ ಶಿರಗಂಬಿ, ಹಿರೇಮೊರಬ, ಸತ್ತಗಿಹಳ್ಳಿ, ಮಕರಿ, ರಟ್ಟಿಹಳ್ಳಿ, ನೇಶ್ವಿ, ಕಡೂರ, ಬುಲ್ಲಾಪುರ, ಮೈದೂರ, ಮಾವಿನತೋಪು, ದೊಡ್ಡಗುಬ್ಬಿ ಗ್ರಾಮಗಳಲ್ಲಿ ಸಿಓಡಿ ಅಧಿಕಾರಿಗಳ ಹೆಜ್ಜೆ ಸಪ್ಪಳ ಅಲ್ಲಿನ ರೈತನ ನಿದ್ರೆಯೇ ಹಾರಿಹೋಗುವಂತೆ ಮಾಡಿದೆ. ಈ ರೈತರ

ನೆರವಿಗೆ ಧಾವಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ. **ಅನ್ನದಾತರ ಮೇಲೆ ಕೇಸು:** 272 ಕಿಮೀ ಉದ್ದ ಮೇಲ್ದಂಡೆ ಕಾಲುವೆಯ ಅನುಷ್ಠಾನ ಶಿವಮೊಗ್ಗ, ಹೊನ್ನಾಳಿ, ಹರಿಹರ, ಹಾನಗಲ್, ಹಾವೇರಿ ತಾಲ್ಲೂಕು ವ್ಯಾಪ್ತಿಯನ್ನು ಅತ್ಯಂತ ಸುರಳಿತವಾಗಿಯೇ ದಾಟುತ್ತ ಬಂದು ಹಿರೇಕೆರೂರು, ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮುಗ್ಗರಿಸಿದೆ. ನಮ್ಮ ಐದು ಎಕರೆ ಜಮೀನಿನಲ್ಲಿ ಭಾಗಶಃ ಕಾಲುವೆ ಹೋಗಿದೆ. 19 ಲಕ್ಷ ರೂಪಾಯಿ ಪರಿಹಾರ ಕೊಟ್ಟ ಸರ್ಕಾರ ಚೆಕ್ ಕದ್ದು ಹಣ ಪಡೆದಿದ್ದೀರಿ ಎಂದು ನಮ್ಮ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ 55 ದಿನ ಜೈಲಿನಲ್ಲಿ ನನ್ನನ್ನು ಇಟ್ಟಿದ್ದರು. ಬ್ಯಾಂಕ್ ಖಾತೆ ಸೀಸ್ ಮಾಡಲಾಯಿತು. ಹೊಲದಲ್ಲಿ ನಿರ್ಮಿಸಿದ ಕಾಲುವೆಗಳಲ್ಲಿ ಬಿದ್ದು ತಂದೆ ತೀರಿಕೊಂಡರು. ಈಗ ನೀವು ರೈತರೇ ಅಲ್ಲ ಎನ್ನುವ ಸರ್ಕಾರ ನಮ್ಮ ಹಿಂದೆ ಸಿಓಡಿ ಅಧಿಕಾರಿಯನ್ನು ಬಿಟ್ಟಿದೆ, ಹೊಲವೂ ಇಲ್ಲ, ಪರಿಹಾರವೂ ಇಲ್ಲ, ನಮಗೆ ವಿಷ ಕುಡಿಯುವುದೊಂದೇ ಬಾಕಿ ಎಂದು ಹನುಮಂತಪ್ಪ ಶಿರಗಂಬಿ ರೈತರು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಮಧ್ಯವರ್ತಿಗಳು ಮತ್ತು ಭೂಸ್ವಾಧೀನ ಅಧಿಕಾರಿಗಳು ನೂರಾರು ಅಮಾಯಕ ರೈತರಿಂದ ಹೆಬ್ಬಟ್ಟಿನ ಸಹಿ ಪಡೆದು ಪಂಗನಾಮ ಹಾಕಿದ್ದಾರೆ. ಇವರ ಕುತಂತ್ರದಿಂದ ಅನ್ನದಾತರೂ ಮೋಸ, ವಂಚನೆ, ಭ್ರಷ್ಟಾಚಾರದ ಕ್ರಿಮಿನಲ್ ಕೇಸ್ ಎದುರಿಸುವಂತಾಗಿದೆ. ಕಾಲುವೆಗೆ ಬೇಕಿದ್ದ ಭೂಮಿ ಸ್ವಾಧೀನ ಮಾಡಿಕೊಳ್ಳುವಲ್ಲಿ ಅಧಿಕಾರಿಗಳು ಮಧ್ಯವರ್ತಿಗಳ ಮಾತಿನಂತೆ ಬೇಕಾಬಿಟ್ಟಿಯಾಗಿ ನಡೆದುಕೊಂಡಿದ್ದಾರೆ. ಯಾರದ್ದೋ ಜಮೀನಿನ ಪರಿಹಾರವನ್ನು ಇನ್ನಾರಿಗೋ ಹಂಚಿದ್ದಾರೆ. ಕೆಲವರಿಗೆ ಕಿಲುಬುಗಾಸು ಕೊಟ್ಟು ಕೈತೊಳೆದುಕೊಂಡಿದ್ದರೆ, ಯೋಜನೆ ವ್ಯಾಪ್ತಿಗೆ ಬಾರದ ಭೂಮಿಗೂ ಪರಿಹಾರ ನೀಡಲಾಗಿದೆ. ಭೂಮಿ ಕಳೆದುಕೊಂಡ ಎಷ್ಟೋ ಸಂತ್ರಸ್ಥರಿಗೆ ಪರಿಹಾರವೇ ಸಿಕ್ಕಿಲ್ಲ. ಪ್ರಾಥಮಿಕ ತನಿಖೆಯನ್ವಯ ನಾಲ್ವರು ಅಧಿಕಾರಿಗಳನ್ನು ಸರ್ಕಾರ ಅಮಾನತು ಮಾಡಿ, 20ಕ್ಕೂ ಹೆಚ್ಚು ರೈತರನ್ನು ಜೈಲಿಗೆ ತಳ್ಳಿ ಇಡೀ ಪ್ರಕರಣವನ್ನು ಸಿಓಡಿಗೆ ಒಪ್ಪಿಸಿದೆ. ಭೂದಾಖಲೆಗಳ ಸಲ್ಲಿಕೆ, ಹೆಬ್ಬೆಟ್ಟಿನ ಸಹಿ, ಬ್ಯಾಂಕ್ ಖಾತೆಗೆ ಹಣ ಜಮೆ, ಖಾಲಿ ಚೆಕ್ ಇಟ್ಟುಕೊಂಡಿದ್ದು, ಇತ್ಯಾದಿಗಳನ್ನು ಗಮನಿಸಿದರೆ ಬಹುತೇಕ ರೈತರ ವಿರುದ್ಧದ ಆರೋಪ ಸಾಬೀತಾಗುವುದರಲ್ಲಿ ಸಂಶಯವೇ ಬೇಡ. ಆದರೆ, ಇಲ್ಲಿ ಮಧ್ಯವರ್ತಿಗಳು ಮತ್ತು ಅಧಿಕಾರಿಗಳು ಸೇರಿ ಮಾಡಿದ ಕುತಂತ್ರ ಎನ್ನುವ ಸತ್ಯ ಗೊತ್ತಿದ್ದೂ ಕಾನೂನು ಅಡಿ ಈ ಅಮಾಯಕ ಅನ್ನದಾತರು ಆರೋಪಿಗಳಾಗಿದ್ದಾರೆ. ಗೋಲಿಬಾರ್ ಇತ್ಯಾದಿ ಘಟನೆಗಳಿಂದ ಮೊದಲೇ ಸೋತಿರುವ ರೈತರ ಮೇಲೆ ತೂಗುಗತ್ತಿ ನೇತುಬಿಡುವುದು ಬೇಡ.

ಫೂಲನ್‌ದೇವಿ, ವೀರಪ್ಪನ್ ಇತ್ಯಾದಿ ಪ್ರಕರಣಗಳಲ್ಲಿ 'ದಂಡ ಪ್ರಕ್ರಿಯೆ ಸಂಹಿತೆ ಕಲಂ 321' ಬಳಸಿದಂತೆ ಇಲ್ಲೂ ಅನ್ವಯಿಸಿ ಅನ್ನದಾತರನ್ನು ಈ ಪ್ರಕರಣದಿಂದ ಪಾರು ಮಾಡಿ ಎಂದು ವಕೀಲ ಸಂಪತ್‌ಕುಮಾರ್ ಮುತ್ತಳ್ಳಿ ಸಿಎಂ ಅವರಲ್ಲಿ ಲಿಖಿತ ಮನವಿ ಸಲ್ಲಿಸಿದ್ದಾರೆ ಹಾಗೂ ನನಗೆ ಲಿಖಿತ ಮೂಲಕ ವಿನಂತಿಸಿದ್ದಾರೆ ಹಾಗೂ ಫೋನ್ ಮೂಲಕ ನನ್ನನ್ನು ಕೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೇ, ಈಗ ಓದಿರುವುದು ಸಾಕು. ಮಾನ್ಯ ಸಭಾನಾಯಕರು ಉತ್ತರ ಹೇಳುವುದು ಬೇಡವೇ? ಇದು ವಿಶೇಷ ಪ್ರಸ್ತಾವನೆ

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದು ರೈತರ ಸಮಸ್ಯೆ. ದಯಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ನಾನೇನಾದರೂ ಓದಿದರೆ ರೈತರ ಒಳ್ಳೆಯದಕ್ಕೆ ಓದುತ್ತೇನೆಯೇ ಹೊರತಾಗಿ ಮತ್ತೇನು ಇಲ್ಲ.

**ಸಭಾಪತಿಯವರು:-** ಈಗ ಸಭಾನಾಯಕರು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ನಿನ್ನೆ ಎಲ್ಲರೂ ರೈತರ ಒಳ್ಳೆಯದಕ್ಕೆ ಮಾತನಾಡಿದ್ದಾರೆ. ಮಾನ್ಯ ಸಭಾಪತಿಯವರೇ, ಮಾನ್ಯ ಜಲಸಂಪನ್ಮೂಲ ಸಚಿವರಿಂದ ಸಂಪೂರ್ಣವಾದ ಉತ್ತರ ಒದಗಿಸಿಕೊಡುತ್ತೇನೆ.

**ಸಭಾಪತಿಯವರು:-** ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮುಂದುವರೆದ ಚರ್ಚೆ. ಈಗ ಮೊದಲನೆಯದಾಗಿ ಮಾನ್ಯ ಗೋ.ಮಧುಸೂದನ್‌ರವರು ಮಾತನಾಡುತ್ತಾರೆ. ನಾನು ಮತ್ತೊಮ್ಮೆ ಸದನದ ಗಮನಕ್ಕೆ ತರುತ್ತೇನೆ. ತುಂಬಾ ಜನರಿಗೆ ಅವಕಾಶ ಕೊಡಬೇಕೆನ್ನುವ ಕಾರಣಕ್ಕಾಗಿ ನಾನು ಅಡ್ಜೆಸ್ಟ್ ಮಾಡುತ್ತಿದ್ದೇನೆ. ನಾವು ಹತ್ತು ನಿಮಿಷ ಸಮಯ ಇಟ್ಟುಕೊಳ್ಳೋಣ. ಎರಡು-ಮೂರು ನಿಮಿಷ ಹಿಂದೆ ಮುಂದೆಯಾದರೆ ನಾನು ಅಡ್ಜೆಸ್ಟ್ ಮಾಡುತ್ತೇನೆ. ಆಗ ಹೆಚ್ಚು ಜನರಿಗೆ ಅವಕಾಶ ಸಿಗುತ್ತದೆ. ಒಬ್ಬರು ಈ ಕಡೆ ಒಬ್ಬರು ಆ ಕಡೆ ಅವಕಾಶ ಕೊಡುತ್ತೇನೆ. ಈಗ ಮಧುಸೂದನ್‌ರವರು ಪ್ರಾರಂಭ ಮಾಡುತ್ತಾರೆ. ನಾನು ಮಧುಸೂದನ್ ಒಬ್ಬರಿಗೆ ಹೇಳುತ್ತಿಲ್ಲ,

ಎಲ್ಲರಿಗೂ ಹೇಳುತ್ತಿದ್ದೇನೆ. ನಿಮ್ಮ ಎದುರಿಗೆ ಗಡಿಯಾರಗಳಿವೆ. ಎಷ್ಟೊತ್ತಿಗೆ ಪ್ರಾರಂಭ ಮಾಡಿದ್ದೇವೆಂದು ನೀವೇ ನೋಟ್ ಮಾಡಿಕೊಂಡು ಹತ್ತು ನಿಮಿಷದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಿ. ನಾನು ಒಂದೆರಡು ನಿಮಿಷಕ್ಕೆ ಸಹಕರಿಸುತ್ತೇನೆ.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮುಂದುವರೆದ ಚರ್ಚೆ

**ಶ್ರೀ ಗೋ.ಮಧುಸೂದನ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಆಕಾರಕ್ಕೆ ತಕ್ಕ ಹಾಗೆ ಸಮಯ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಹಾಗಾದರೆ ನಾನು ಮಾನ್ಯ ರಘು ಆಚಾರ್ಯರವರಿಗೆ ಏನು ಮಾಡಲಿ? ಅವರಿಗೆ ಐದು ನಿಮಿಷ ಸಾಕೆ?

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಏಕೋ ಏನು ಗೊತ್ತಿಲ್ಲ, ಅನೇಕ ಸಂಗತಿಗಳನ್ನು ನಾವು ಜಾತಿಯಿಂದ ಧರ್ಮದಿಂದ ನೋಡುವಂಥದ್ದನ್ನು ಬೆಳೆಸಿಕೊಂಡು ಬಂದುಬಿಟ್ಟಿದ್ದೇವೆ. ಆದರೆ ಇವತ್ತು ತಮ್ಮ ನೇತೃತ್ವದಲ್ಲಿ ಬಹುಶಃ ನನಗನಿಸುತ್ತದೆ ಕರ್ನಾಟಕದ ಇತಿಹಾಸದಲ್ಲಿ ಒಂದು ಐತಿಹಾಸಿಕ ದಿನವಾಗುತ್ತಿದೆ. ಎಲ್ಲೋ ಒಂದು ಕಡೆ ವಕ್ಫ್ ಎನ್ನುವಂಥದ್ದು ಬರೀ ಯಾವುದೋ ಒಂದು ಜಾತಿಗೆ ಸೇರಿದಂತಹ ಒಂದು ಧರ್ಮಕ್ಕೆ ಸೇರಿದಂತಹ ಒಂದು ಧಾರ್ಮಿಕ ಸಂಸ್ಥೆ ಇತ್ತು. ಅದರ ಬಗ್ಗೆ ಇಲ್ಲಿ ಚರ್ಚೆ ಪ್ರಾರಂಭ ಮಾಡಿದಂಥವರು ಎಲ್ಲವೂ ಕೂಡ ಆ ಧರ್ಮಕ್ಕೆ ಸೇರದವರು ಚರ್ಚೆ ಮಾಡಿ ಅಷ್ಟೊ ದೊಡ್ಡ ಆಸ್ತಿಯನ್ನು ಬಹುಶಃ ನಮ್ಮ ಸರ್ಕಾರಿ ಲೆಕ್ಕದಲ್ಲಿ ಸಬ್ ರಿಜಿಸ್ಟ್ರಾರ್ ಲೆಕ್ಕದಲ್ಲಿ 2.6 ಲಕ್ಷ ಕೋಟಿ ರೂಪಾಯಿ ಆಗುತ್ತದೆ. ಬಜಾರ್ ಲೆಕ್ಕಕ್ಕೆ ತೆಗೆದುಕೊಂಡರೆ 14.15 ಲಕ್ಷ ಕೋಟಿ ಆಗುತ್ತದೆ. This is going to be the biggest scam in the country. ಅಂಥದ್ದರ ಬಗ್ಗೆ ಇವತ್ತು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ ಸದನದಲ್ಲಿ ಮಂಡಿಸುತ್ತಿದೆ. ಅದಕ್ಕೆ ತಾವು ಸೂಕ್ತವಾದ ಆದೇಶವನ್ನು ಕೊಟ್ಟಿದ್ದೀರಿ. ಸರ್ಕಾರ ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡಿದೆ. ಆ ಕಾರಣಕೋಸ್ಕರವಾಗಿ ಇವತ್ತಿನ ದಿನ ಇದೆಯಲ್ಲಾ ಇದು ಒಂದು ಐತಿಹಾಸಿಕವಾದ ದಿನ ಎಂದು ನಾನಾದರೂ ಯೋಚನೆ ಮಾಡುತ್ತೇನೆ. ಇವತ್ತು ನಾನು ಕುರಾನ್

ಷರೀಫ್ ಬಗ್ಗೆ ಮಾತನಾಡುವುದಕ್ಕೆ ನಾನು ಈ ಸದನವನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಮದರಸಾಗಳಿವೆ. ಈ 5 ಮದರಸಾಗಳಲ್ಲಿ ಅವರು ಕುರಾನ್ ಷರೀಫ್ ಪಾಠವನ್ನು ಮಾಡುತ್ತಿದ್ದಾರೆ. ಅಲ್ಲಿ ದೊಡ್ಡ ಗದ್ದಲ ಪ್ರಾರಂಭವಾಗಿದೆ, ದೊಡ್ಡ ಸಮಸ್ಯೆ ಪ್ರಾರಂಭವಾಗಿದೆ, ಹೈಕೋರ್ಟ್‌ವರೆಗೆ ಕೇಸ್ ಹೋಗಿದೆ. ಹೈಕೋರ್ಟ್, ನಮ್ಮಲ್ಲಿರುವಂತಹ ವಕ್ಫ್ ಬೋರ್ಡ್, ನಮ್ಮ ಹಿಂದಿನ ಮುಖ್ಯಮಂತ್ರಿಗಳು, ಜಿಲ್ಲಾ ಸಚಿವರು, ಮತ್ತು ಒಂದೇ ಒಂದು ಕಾಲದಲ್ಲಿ ಎಸ್.ಕೆ.ಬೆಳ್ಳುಬ್ಬಿ ಎನ್ನುವವರು ವಕ್ಫ್ ಖಾತೆ ಸಚಿವರಾಗಿದ್ದರು. ಅವರು ಒಂದು ಆದೇಶವನ್ನು ಮಾಡಿದ್ದಾರೆ. ಆ ಜನ ಕೇಳುತ್ತಿರುವುದು ಇಲ್ಲಿಯವರೆಗೆ ಓದಿಕೊಂಡು ಬಂದಿರುವುದು ಕುರಾನ್ ಷರೀಫ್ ಅನ್ನು ಕನ್ನಡದಲ್ಲಿ. ಈಗ ಅವರ ಮೇಲೆ ಹೇರಲಾಗುತ್ತಿರುವುದು ಕುರಾನ್ ಷರೀಫ್ ಅನ್ನು ಮಲೆಯಾಳಂನಲ್ಲಿ ಓದಿ ಎಂದು. ಆ ದಕ್ಷಿಣ ಕನ್ನಡದ ಬ್ಯಾರಿ ಮುಸಲ್ಮಾನರಿಗೆ ಸೇರಿದಂಥ ಯಾವ ಐದು ಮದರಸಾಗಳಿವೆ ಅವರಿಗೆ ಮಲೆಯಾಳಂ ಬರುವುದಿಲ್ಲ. ಅವರು ಕನ್ನಡ ಮಾತನಾಡುವಂಥ ಜನ. ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಬರುವಂಥದ್ದು.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

ಶ್ರೀ ಗೋ.ಮಧುಸೂದನ್(ಮುಂದುವರೆದಿದೆ)

ಅವರು ಕನ್ನಡ ಮಾತನಾಡುವಂತಹ ಜನ. ಕನ್ನಡ ಓದುತ್ತಾರೆ, ಬರೆಯುತ್ತಾರೆ. ಅವರ 2ನೇ ಕ್ಲಾಸ್‌ನಲ್ಲಿ ಇರುವಂತಹ ಒಂದು ಪದ್ಯವನ್ನು ಓದುತ್ತೇನೆ. *"ಅದಬುಗಳೇ ಇವೆ ಪಾಲಿಸಲು, ಊಟದ ಸಮಯದಿ ಗಮನಿಸಲು, ತಿನ್ನುವ ಮೊದಲೇ ತೊಳೆಯೋಣ, ಕೈಯನು ಬಾಯನು ತೊಳೆಯೋಣ, ತೊಡಗುವ ಸಮಯದಿ ಹೇಳೋಣ, ಬಿಸ್ಮಿಲ್ಲಾಹಿರ್ರೆಹಮಾನ್ ಷರೀಫ್ ಹೇಳೋಣ, ತಿಂದಾಗುತಲೇ ಹೇಳೋಣ, ಅಲ್-ಹಮ್ದು-ಲಿಲ್ಲಾಹ್ ಹೇಳೋಣ. ಬಲಗೈಯಿಂದಲೇ ತಿನ್ನೋಣ, ಬಲಗೈಯಿಂದಲೇ ಕುಡಿಯೋಣ, ಜಗಿದು ಜಗಿದು ತಿನ್ನೋಣ, ಸಾವಧಾನದಿ ತಿನ್ನೋಣ, ತಿಂದಾಗುತಲೇ ತೊಳೆಯೋಣ, ಕೈಯನು ಬಾಯನು ತೊಳೆಯೋಣ".* ಆ ಮಕ್ಕಳಿಗೆ ಅರೇಬಿಕ್ ಭಾಷೆಯಲ್ಲಿರುವ ಖುರಾನ್ ಷರೀಫ್ ಅನ್ನು . . . ಅದರಲ್ಲಿ, ಬಲಗೈಯಲ್ಲಿ ತಿನ್ನಬೇಕು, ತಿನ್ನುವುದಕ್ಕೆ ಮುಂಚೆ ಮೈ-ಕೈ ತೊಳೆದುಕೊಳ್ಳಬೇಕು, ಬಾಯಿ ತೊಳೆದು ಕೊಳ್ಳಬೇಕು ಈ ಎಲ್ಲಾ ಸಂಗತಿಗಳನ್ನು ಹೇಳಿದ್ದಾರೆ. ದರುಲ್-ಉಲ್-ಇಸ್ಲಾಂ ಎನ್ನುವಂಥದ್ದು, 2ನೇ ತರಗತಿಯ ಪಠ್ಯ ಪುಸ್ತಕ. ಈ ಪುಸ್ತಕವನ್ನು ಇಸ್ಲಾಮಿಕ್ ಎಜುಕೇಷನ್ ಬೋರ್ಡ್ ಆಫ್ ಇಂಡಿಯಾದವರು ಮಾಡಿದ್ದಾರೆ. ಆದರೆ ಅಲ್ಲಿ ಆ ಮಸೀದಿಗೆ ಸೇರಿದಂತಹ ಜನರು . . .ಆ ಮಸೀದಿಯ ಭಾವಚಿತ್ರಗಳು ನನ್ನ ಹತ್ತಿರ ಇವೆ. ಆ ದೊಡ್ಡ ದೊಡ್ಡ ಮಸೀದಿಗಳ ಎದುರುಗಡೆ ಮದರಸಾಗಳಿವೆ, ಆ ಮದರಸಾಗಳಿಗೆ ಬೀಗ ಹಾಕಿ ಇಟ್ಟಿದ್ದಾರೆ. ಮಕ್ಕಳನ್ನು ಅಲ್ಲಿ ಓದುವುದಕ್ಕೆ ಬಿಡುತ್ತಿಲ್ಲ. ಆ ಮದರಸಾಗಳಲ್ಲಿ ಓದಬೇಕಾದ ಮಕ್ಕಳು ಮರದ ಕೆಳಗಡೆ ಅಥವಾ ಶೆಡ್‌ಗಳಲ್ಲಿ ಓದುತ್ತಿದ್ದಾರೆ. ಮದರಸಾಗಳಲ್ಲಿ ಕನ್ನಡದಲ್ಲಿ ಪಾಠ ಮಾಡಬೇಕು. ಆದರೆ ಅಲ್ಲಿನ ಕೆಡಿಎಫ್ ಮತ್ತು ಎಸ್‌ಡಿಪಿಐ ಇವರಿಗೆ ಗೊಂದಲ ಇದೆ. ಅವರಿಗೆ ಇದು ಆಗುವುದಿಲ್ಲ, ಕೆಡಿಎಫ್ ಮತ್ತು ಎಸ್‌ಡಿಪಿಐ ಬೆಂಬಲಿಗರು ಅಲ್ಲಿನ ಐದಾರು ಮಸೀದಿಗಳಲ್ಲಿ ಇದ್ದಾರೆ. ಅವರು, ಮಳಿಯಾಳಂ ಭಾಷೆಯಲ್ಲೇ ಪಾಠ ಆಗಬೇಕು ಎಂದು ಹೇಳುತ್ತಿದ್ದಾರೆ. ಎಷ್ಟರಮಟ್ಟಿಗೆ ನಾವು ಈ ಭಾಷಾ ಜಗಳವನ್ನು ತೆಗೆದುಕೊಂಡು ಹೋಗಿದ್ದೇವೆ ಎಂದರೆ, ಕರ್ನಾಟಕದ ದಕ್ಷಿಣ ಕನ್ನಡದಲ್ಲಿ ನಮ್ಮ ಮಕ್ಕಳು ಖುರಾನ್ ಅನ್ನು ಕನ್ನಡದಲ್ಲಿ ಹೇಳುತ್ತೇವೆ ಎಂದರೆ, ಇಲ್ಲ, ಮಳಿಯಾಳಂನಲ್ಲಿ ಹೇಳಬೇಕೆಂದು ಆ ಭಾಷೆಯನ್ನು ಹೇರುವಂತಹ ಪ್ರಯತ್ನ ನಡೆಯುತ್ತಿದೆ. ಎಲ್ಲೋ ಒಂದು ಕಡೆ ಇದರಲ್ಲಿ ರಾಜಕೀಯ ಬಂದಿದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಅವರ ಪರವಾಗಿಯೇ ನಿಂತುಕೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಅವರ ಪರವಾಗಿ ನಿಂತುಕೊಂಡಿದ್ದಾರೆ ಎನ್ನುವ ಕಾರಣಕ್ಕೋಸ್ಕರವಾಗಿ ನಮ್ಮ ಮಕ್ಕಳು ಖುರಾನ್

ಅನ್ನು ಮಳಿಯಾಳಂ ಭಾಷೆಯಲ್ಲಿ ಓದುವಂತಹ ಸ್ಥಿತಿ ನಿರ್ಮಾಣವಾಗಿದೆ. ಅವರು ಖುರಾನ್ ಷರೀಫ್‌ಗಿಂತ ಹೆಚ್ಚಾಗಿ ಹೆದರಿರುವಂಥದ್ದು ಮಳಿಯಾಳಂ ಭಾಷೆಗೆ. ಆ ಮಕ್ಕಳಿಗೆ ಮಳಿಯಾಳಂ ಬರುವುದಿಲ್ಲ. ಅವರಿಗೆ ಕನ್ನಡ ಓದುವುದಕ್ಕೆ, ಬರೆಯುವುದಕ್ಕೆ ಬರುತ್ತದೆ. ಇಲ್ಲಿ ಇನ್ನೊಂದು ಅಡ್ವಾಂಟೇಜ್ ಏನೆಂದರೆ, ಮಕ್ಕಳು ಕನ್ನಡದಲ್ಲಿ ಖುರಾನ್ ಷರೀಫ್ ಓದಿದರೆ, ಕನ್ನಡ ಅವರಿಗೆ ಬಂತು ಎಂದರೆ, ಮುಂದೆ ಅವರು ಹೈಸ್ಕೂಲ್‌ಗೆ ಹೋದಾಗ ಕನ್ನಡವನ್ನು ಒಂದು ಭಾಷೆಯನ್ನಾಗಿ ಓದಬಹುದು. ಕನಿಷ್ಠ ಅವರು 50 ಅಂಕಗಳಿಗೋಸ್ಕರ ಓದಬೇಕಾಗುತ್ತದೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಅನುಕೂಲವಾಗುತ್ತದೆ. ಅವರು ಕನ್ನಡದಲ್ಲಿ ಓದುತ್ತೇವೆ ಎಂದರೆ ಅವರ ತಲೆಮೇಲೆ ಮಳಿಯಾಳಂ ಹೇರುತ್ತಿದ್ದಾರೆ. ಇದರ ಹಿಂದೆ ರಾಜಕಾರಣ ಇದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಕೆಡಿಎಫ್ ಮತ್ತು ಎಸ್‌ಡಿಪಿಐ ಒತ್ತಡ ಇದೆ. ಅವರ ಮಾತನ್ನು ಕಟ್ಟಿಕೊಂಡು ಕನ್ನಡ ಓದುವುದಕ್ಕೆ ಬಿಡುತ್ತಿಲ್ಲ. . . .

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, ಬ್ಯಾರಿ ಭಾಷೆ ದಕ್ಷಿಣ ಕನ್ನಡದಲ್ಲಿ ಮಾತ್ರ ಇದೆ. ಯಾರು ಬ್ಯಾರಿ ಭಾಷೆ ಮಾತನಾಡುತ್ತಾರೋ ಅವರಿಗೆ ಉರ್ದು ಗೊತ್ತಿಲ್ಲ. ಅವರು ಕನ್ನಡದಲ್ಲೇ ಎಲ್ಲವನ್ನೂ ಕಲಿಯುತ್ತಾರೆ. ಅವರು ಖುರಾನ್‌ಅನ್ನು ಕನ್ನಡದಲ್ಲೇ ಓದುತ್ತಾರೆ, ಬರೆಯುತ್ತಾರೆ. ಉರ್ದು ಭಾಷೆಯನ್ನು ಮಾತನಾಡುವುದಿಲ್ಲ. ಬ್ಯಾರಿ ಭಾಷೆ ಇರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ. ಅದಕ್ಕೋಸ್ಕರ ಅವರು ಕನ್ನಡದಲ್ಲಿ ಕಲಿಯುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಪಕ್ಕದ ರಾಜ್ಯದಿಂದ ಮಳಿಯಾಳಂ ಹೇರುವಂತಹ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಬೇರೆ ಕಾರಣ ಇದೆ. ಆ ಕುರಿತು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ವಿನಯ್‌ಕುಮಾರ್ ಸೊರಕೆ:-**ಮಾನ್ಯ ಸಭಾಪತಿಗಳೆ, ನಮ್ಮದೂ ದಕ್ಷಿಣ ಕನ್ನಡ ಜಿಲ್ಲೆ. ಹಿಂದೆ ಮದ್ರಾಸ್ ಸಂಸ್ಥಾನ ಇದ್ದಾಗ ಅದು ಮಲಬಾರ್ ಡಿಸ್ಟ್ರಿಕ್ಟ್ ಆಗಿತ್ತು. ಕಾಸರಗೋಡು ನಮಗೆ ಸೇರಬೇಕೆಂದು ಬಹಳ ವರ್ಷಗಳಿಂದ ಚಳುವಳಿ ನಡೆಯುತ್ತಿದೆ, ಆ ಚಳುವಳಿ ಇನ್ನೂ ಕೂಡ ಜೀವಂತವಾಗಿದೆ. ಕಾಸರಗೋಡು ಪರಿಸರದಲ್ಲೂ ಕನ್ನಡ ಭಾಷೆಯನ್ನೇ ಪಠ್ಯಪುಸ್ತಕದಲ್ಲಿ ಕಲಿಯವಂತಹ ವ್ಯವಸ್ಥೆ ಇದೆ. ಬ್ಯಾರಿಸ್ ಜನ ಕೇರಳ ರಾಜ್ಯದಿಂದ ಬಂದವರು. ಇವತ್ತಿಗೂ ಕೂಡ ಕಾಸರಗೋಡು ಬೇರೆ ಅಲ್ಲ, ಮಂಗಳೂರು ಬೇರೆ ಅಲ್ಲ. ಆಡಳಿತಾತ್ಮಕವಾಗಿ ನಾವು ಬಿಂಗಡಣೆ ಆಗಿದ್ದರೂ ಕೂಡ, ಎಲ್ಲಾ ವಹಿವಾಟು, ಎಲ್ಲಾ ಸಂಬಂಧಗಳು ಭಾವನಾತ್ಮಕವಾಗಿ ಒಂದೇ ರೀತಿ ಇದೆ. ಮಾನ್ಯ ಮಧುಸೂದನ್‌ರವರು ಎತ್ತಿರುವವಂತಹ ವಿಚಾರಗಳು ಇದುವರೆಗೂ ಗಮನಕ್ಕೆ ಬಂದಿಲ್ಲ. ಬ್ಯಾರಿಸ್ ಜನ ಮಳಿಯಾಳವನ್ನೇ

ಆಶ್ರಯಿಸಿರುವಂಥವರು. ಅವರು ಮನೆಯಲ್ಲಿ ಮಳಿಯಾಳಂ ಭಾಷೆಯನ್ನೇ, ಬ್ಯಾರಿ ಭಾಷೆಯನ್ನೇ ಮಾತನಾಡುತ್ತಾರೆ. ಇದರಲ್ಲಿ ಗೊಂದಲದ ಪ್ರಶ್ನೆಯಂತೂ ಗಮನಕ್ಕೆ ಬಂದಿಲ್ಲ..

**ಕ್ಯಾ.ಗಣೇಶ್ ಕಾರ್ಣಿಕ್:–** ಈ ಕುರಿತು ಕೋರ್ಟ್‌ನಲ್ಲಿ ಕೇಸ್ ಇದೆ . . .

**ಶ್ರೀ ವಿನಯ್‌ಕುಮಾರ್ ಸೊರಕೆ:–**ಕೋರ್ಟ್‌ನಲ್ಲಿ ಇರಬಹುದು. ಅವರಲ್ಲೂ ಜಮಾತೇ ಇಸ್ಲಾಂ ಎಂದಿದೆ, ಬೇರೆ ಬೇರೆ ರೀತಿಯಲ್ಲಿ ಇವೆ, ಅವರಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರಬಹುದು.

**ಶ್ರೀ ಗೋ.ಮಧುಸೂದ್:–**ಮಾನ್ಯ ಸಭಾಪತಿಗಳೆ, ಇದೇ ಸಂದರ್ಭದಲ್ಲಿ ಒಂದು ಶಬ್ದದ ಬಗ್ಗೆ ದೊಡ್ಡ ಚರ್ಚೆ ನಡೆದಿದೆ. "ಹಿಂದೂ" ಎನ್ನುವಂತಹ ಶಬ್ದ ಯಾರಿಗೆ ಸೀಮಿತವಾಗಿದೆ ಎಂಬ ಬಗ್ಗೆ ಚರ್ಚೆ ಆಗುತ್ತಿದೆ. ನಾವು–ನೀವು ಎಲ್ಲರೂ ಚಿಕ್ಕ ವಯಸ್ಸಿನಿಂದ ಒಂದು ಹಾಡನ್ನು ಕೇಳಿಕೊಂಡು ಬಂದಿದ್ದೇವೆ. "ಸಾರೇ ಜಹಾ ಸೇ ಅಚ್ಛಾ, ಹಿಂದೂಸ್ತಾ ಹಮಾರಾ। ಹಮ್ ಬುಲ್‌ಬುಲೇ ಹೈ ಇಸಕೀ, ಯಹ ಗುಲಿಸತಾ ಹಮಾರಾ" ಇದರಲ್ಲಿನ ಒಂದು ಪದ್ಯ "ಮಝಹಬ ನಹೀ ಸಿಖಾತಾ, ಆಪಸ ಮೇ ಬೈರ್ ರಖನಾ। ಹಿಂದೂ ಹೈ ಹಮ್, ಹಿಂದೂ ಹೈ ಹಮ್, ವತನ ಹೈ ಹಿಂದೂಸ್ತಾ ಹಮಾರಾ ಹಮಾರಾ।" ಎಂದು ಹೇಳುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಎಲ್ಲಾ ಕಾಂಗ್ರೆಸಿಗರು ಇದನ್ನು ಹೇಳಿದರು. ಈ ಗೀತೆ ಅವರೆಲ್ಲರೂ ಚಳುವಳಿ ಮಾಡಲು ಬೆಂಬಲ ಕೊಟ್ಟಿತು. ಆದರೆ ಈ "ಹಿಂದೂ" ಶಬ್ದವನ್ನು ಇಲ್ಲಿಯ ತನಕವೂ ಅವರಿಗೆ ಅರ್ಥ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಇದೇರೀತಿ ಅರ್ಥ ಬರುವಂತಹ ಇನ್ನೊಂದು ಶ್ಲೋಕವನ್ನು ಸ್ವಾತಂತ್ರವೀರ ವಿನಾಯಕ ದಾಮೋದರ್ ಸಾವರ್ಕರ್‌ರವರು ಕೊಡುತ್ತಾರೆ. ಅವರು 'ಹಿಂದೂತ್ವ' ಎನ್ನುವ ಒಂದು ಪುಸ್ತಕ ಬರೆಯುತ್ತಾರೆ. ಆ ಪುಸ್ತಕದಲ್ಲಿ ಹಿಂದೂ ಎಂದರೆ ಯಾರು ಎಂಬ ವಿವರ ಕೊಡುತ್ತಾರೆ. "ಆಸಿಂಧೂ ಸಿಂಧೂ ಪರ್ಯಂತ ಯಸ್ಯ ಭಾರತಭೂಮಿಕಾ। ಪಿತೃಭುಃ ಪುಣ್ಯಭೂಶ್ಚೈವ ಸ ವೈ ಹಿಂದೂರಿತಿ ಸ್ಮೃತಃ" ಎಂದು ಹೇಳಿದರು. ಅಂದರೆ, ಆಸಿಂಧೂ ಎಂದರೆ, ಸಿಂಧೂ ನದಿಯಿಂದ ಹಿಡಿದು ಹಿಂದೂ ಮಹಾಸಾಗರದವರೆಗೆ ಇರುವಂತಹ, ಯಸ್ಯ ಭಾರತಭೂಮಿಕಾ ಅಂದರೆ, ಯಾವ ಭಾರತ ಭೂಮಿಯನ್ನು, ಪಿತೃಭುಃ ಪುಣ್ಯಭೂಶ್ಚೈವ, ಇದು ನನ್ನ ಪಿತೃ ಭೂಮಿ, ಇದು ನನ್ನ ಪುಣ್ಯಭೂಮಿ ಎಂದು ಯಾರು ನಂಬುತ್ತಾರೋ, ಸ ವೈ ಹಿಂದೂರಿತಿ ಸ್ಮೃತಃ, ಅಂದರೆ, ಅವರನ್ನು ಮಾತ್ರವೇ ಹಿಂದೂಗಳೆಂದು ಕರೆಬೇಕು. ಇದು ಅತಿ ವಿಶಾಲ ಮನೋಭಾವದ ವ್ಯಾಖ್ಯನವಾಗಿದೆ. ಆದರೆ ನಾವು ಪದ ಪ್ರಯೋಗ ಮಾಡುವಾಗ,

ಹಿಂದೂ, ಮುಸಲ್ಮಾನ್ ಎಂದು ಪ್ರಯೋಗ ಮಾಡುತ್ತೇವೆ. ಈ ಮಾತನ್ನು ನಾನು ದುಃಖದಿಂದ ಹೇಳುತ್ತಿದ್ದೇನೆ.

**ಶ್ರೀ ಆರ್.ವಿ.ವೆಂಕಟೇಶ್:-**ನಾವು ಸಾವರ್ಕರ್ ಅಥವಾ ಇನ್ಯಾರ ಹೆಸರುಗಳನ್ನೂ ಕೇಳಿಲ್ಲ. ನಾನು ಮಹಾತ್ಮ ಗಾಂಧಿಯವರ ಹೆಸರು ಕೇಳಿದ್ದೇವೆ. "ರಘುಪತಿ ರಾಘವ ರಾಜಾರಾಂ, ಸಬ್‌ಕೋ ಸನ್ಮತಿ ದೇ ಭಗವಾನ್"ಎಂಬುದನ್ನು ಕೇಳಿದ್ದೇವೆ. ಅದರಲ್ಲಿರುವ ಹಿಂದೂತ್ವಕ್ಕೆ ಏನು ಅರ್ಥವಿದೆ ಎಂಬುದನ್ನಷ್ಟೇ ತಿಳಿದುಕೊಂಡಿದ್ದೇವೆ. ಮಾನ್ಯ ಸದಸ್ಯರು ಸಂಸ್ಕೃತದಲ್ಲಿ ಹೇಳಿದ್ದು ನಮಗೆ ಅರ್ಥ ಆಗುವುದಿಲ್ಲ. ನಾವೂ ಕೂಡ ಹಿಂದೂಗಳೆ. ನಾವು ತಿಳಿದುಕೊಂಡಿರುವ ಹಿಂದೂತ್ವ ಬೇರೆ. ಅವರು ಬೋಧಿಸುವಂಥದ್ದು, ಅವರು ಹೇಳತಕ್ಕಂಥದ್ದು, ಅವರು ಕಲಿತಿರುವಂತಹ ಸಂಸ್ಕೃತ ಬೇರೆ. ಎಲ್ಲರೂ ಒಂದೇ ರೀತಿಯಲ್ಲಿ ತಿಳಿದುಕೊಂದ್ದಾರೆ ಎಂದು ಸದನ ತಪ್ಪು ಕಲ್ಪನೆ ಮಾಡಿಕೊಳ್ಳುವುದು ಬೇಡ.

**ಸಭಾಪತಿಗಳು:-** ಅವರ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ, ಕೇಳೋಣ.

**ಶ್ರೀ ಗೋ.ಮಧುಸೂದನ್:-** ಸಾರೇ ಜಹಾ ಸೇ ಅಚ್ಛಾ ಎನ್ನುವ ಕವಿತೆಯನ್ನು ರಚನೆ ಮಾಡಿದ್ದು ಇಕ್ಬಾಲ್ ಎನ್ನುವಂತಹ ಕವಿ . . .

**ಶ್ರೀ ಕೆ.ಅಬ್ದುಲ್ ಜಬ್ಬಾರ್:-**ಮಾನ್ಯ ಸಭಾಪತಿಗಳೆ, ಮಾನ್ಯ ಮಧುಸೂದನ್‌ರವರಿಂದ ನಾವು ದೇಶಭಕ್ತಿ ಕಲಿಯುವಂತಹ ಅವಶ್ಯಕತೆ ಇಲ್ಲ.

**ಸಭಾಪತಿಗಳು:-** ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಹೇಳಲಿ ಬಿಡಿ. ಅವರು ಹೇಳುವುದೇ ಬೇಡ ಎಂದರೆ ಹೇಗೇ? ಅವರ ಮನಸ್ಸಿನಲ್ಲಿರುವ ಭಾವನೆಗಳನ್ನು ಹೇಳುವುದಕ್ಕೆ ಒಂದು ವೇದಿಕೆ ಇದೆ. ಅವರು ಇನ್ನೂ ಕನ್‌ಕ್ಲೂಡ್ ಮಾಡಿಲ್ಲ, ಪ್ರಸ್ತಾಪ ಮಾಡುತ್ತಿದ್ದಾರೆ. ಕನ್‌ಕ್ಲೂಷನ್‌ನಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ತೆಗೆದು ಹಾಕುತ್ತೇನೆ.

(ಮುಂದು . . .)

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದಂತಹ ಕವಿ ಇಕ್ಬಾಲ್ ಎನ್ನುವ ಕವಿ. ಆತ ರಚನೆ ಮಾಡಿದಂತಹ ಸಾರೇ ಜಹಾಂ ಸೇ ಅಚ್ಛಾ.

**ಸಭಾಪತಿಯವರು:–** ಇವತ್ತಿಗೂ ನಮ್ಮ ಸೈನಿಕರು ಪಥ ಸಂಚಲನದಲ್ಲಿ ಆ ಪದ್ಯವನ್ನು ಬ್ಯಾಂಡ್ ಸೆಟ್‌ನಲ್ಲಿ ನುಡಿಸುತ್ತಾರೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಕೇವಲ ಇಷ್ಟಕ್ಕೆ ವ್ಯಾಖ್ಯಾನ ನಿಲ್ಲುತ್ತಿಲ್ಲ. ನಮ್ಮ ದೇಶದಲ್ಲಿ ನಾವು ನಂಬಿರುವುದು ಅಷ್ಟಾದೇಶ ಪುರಾಣಗಳು ಎಂದು 18 ಪುರಾಣಗಳಿವೆ. ಅದರಲ್ಲಿ ಅತ್ಯಂತ ಪುರಾತನವಾದ ಪುರಾಣ ವಿಷ್ಣು ಪುರಾಣ. ಆ ವಿಷ್ಣು ಪುರಾಣದಲ್ಲಿ ಒಂದು ಶ್ಲೋಕ ಬರುತ್ತದೆ. ಅದೇನೆಂದರೆ, "ಹಿಮಾಲಯಂ ಸಮಾರಭ್ಯ, ಯಾವದಿಂದು ಸರೋವರಂ ತಮ್ ದೇವನಿರ್ಮಿತಂ ದೇಶಂ ಹಿಂದೂಸ್ಥಾನಂ ಪ್ರಚಕ್ಷತೆ" ಅದರ ಅರ್ಥ ಏನು? ಹಿಮಾಲಯದಿಂದ ಪ್ರಾರಂಭಿಸಿ ಇಂದೂ ಸರೋವರದವರೆಗೆ ಇರುವಂಥ ದೇವ ನಿರ್ಮಿತವಾದ ಈ ದೇಶ. ಬಿಜೆಪಿಯವರು ನಿರ್ಮಾಣ ಮಾಡಿರುವುದು, ಆರ್.ಎಸ್.ಎಸ್, ನಿರ್ಮಾಣ ಮಾಡಿರುವುದು, ಕಾಂಗ್ರೆಸ್‌ನವರು ಬಿಟ್ಟು ಹೋಗಿರುವುದು. "ದೇವನಿರ್ಮಿತಂ ದೇಶಂ ಹಿಂದೂಸ್ಥಾನಂ ಪ್ರಚಕ್ಷತೆ" ಎಂದು. ಇದರ ಬಗ್ಗೆ ಬಹಳ ಚೆನ್ನಾಗಿ ಅರ್ಥ ಹೇಳಿಬಿಟ್ಟಿದ್ದಾರೆ. ಈ ಹಿಂದೂ ಎನ್ನುವ ಶಬ್ಧ ಏನೆಂದರೆ, it is a code word. ಈಗ ನಾವು Karnataka Legislative Councilಗೆ K.L.C. ಎಂದು ಬರೆದುಬಿಡುತ್ತೇವೆ. ಆ ತರಹ ಹಿಮಾಲಯದ 'ಹಿ' ಇಂದೂ ಸರೋವರದ 'ಇಂದೂ' ಹಿ+ಇಂದು=ಹಿಂದೂ ಆಗಿದೆ. ಅಂದರೆ, ಈ ದೇಶ ಈ ಭೂಮಿಯಲ್ಲಿ ಇರುವಂತಹ ಸಭ್ಯತೆ ಹಿಂದೂ, ಸಂಸ್ಕೃತಿ ಹಿಂದೂ, ನಾಗರೀಕತೆ ಹಿಂದೂ, ಇತಿಹಾಸ ಹಿಂದೂ, ಸಂಗೀತ ಹಿಂದೂ, ಜನ ಹಿಂದೂ, ಅವರೆಲ್ಲರ ರಹನ್ ಸಹೆನ್ ಹಿಂದೂ, ವೇಷ ಭೂಷಣ ಹಿಂದೂ, ತಿನ್ನುವಂತಹ ಆಹಾರ ಹಿಂದೂ, ಕುಡಿಯುವಂತಹ ನೀರು ಹಿಂದೂ, ಉಸಿರಾಡುವಂತಹ ಗಾಳಿ ಹಿಂದೂ, ಪ್ರತಿಯೊಂದು ಹಿಂದೂ. ಅಂದರೆ, ಇದು ಸಂಪೂರ್ಣ ರಾಷ್ಟ್ರ ಭಕ್ತಿಯ ಕಲ್ಪನೆಯ ಶಬ್ಧ. ಅದಕೋಸ್ಕರವೇ ನೇತಾಜಿ ಸುಭಾಷ್‌ಚಂದ್ರ ಬೋಸ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿರುವಂಥವರು ಜೈ ಹಿಂದ್ ಎಂದು ಹೇಳಿದರು. ಅವರು ಹೇಳಿರುವ ಅರ್ಥ, ಜೈ ಹಿಂದ್ ಎಂದರೆ ಹಿಂದುಗಳಿಗೆ

ಜಯವಾಗಲಿ ಎಂದಲ್ಲ ಅಥವಾ ಮುಸಲ್ಮಾನರಿಗೆ ಧಿಕ್ಕಾರ ಎಂದಲ್ಲ, In fact, ಜೈ ಹಿಂದ್ ಎಂದು ಹೇಳಿದರೆ ಇಡೀ ಹಿಂದೂ. ಅಷ್ಟೇ ಏಕೆ? ಮಾನ್ಯ ಸಭಾಪತಿಯವರೆ, ನಾವು ನೀವು ಇಬ್ಬರು ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದೆವು. ನಮ್ಮ ಜೊತೆ ಜಮಾತೇ ಹಿಂದ್ ಇಸ್ಲಾಮಿ ಸಂಘಟನೆಯವರಿದ್ದರು. ನೀವು ಬಹಳ ದೊಡ್ಡ ಕ್ರಿಕೆಟ್ ಪ್ರೇಮಿ, ನೀವು ಯಾವಾಗಲೂ ಕಾಮೆಂಟರಿಯನ್ನು ಕೇಳುತ್ತೀರಿ. ಹಿಂದೆ ನಾವೆಲ್ಲಾ ಕಾಮೆಂಟರಿ ಕೇಳುತ್ತಿದ್ದೆವು. ಭಾರತ-ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ಆದಾಗ, ಭಾರತದ ಬಲ್ಲೇಬಾಜ್ ಬಗ್ಗೆ, ಭಾರತದ ಕಪ್ತಾನ್ ಬಗ್ಗೆ ಮಾತನಾಡಬೇಕಾದರೆ ಪಾಕಿಸ್ತಾನದ ರೇಡಿಯೋ ತಿರುಗಿಸಬೇಕು, ಅವರು ಹಿಂದೂಸ್ತಾನ್‌ಕೇ ಕಪ್ತಾನ್, ಹಿಂದೂಸ್ತಾನ್‌ಕೀ ಬಲ್ಲೇಬಾಜ್ ಎಂದು ಹೇಳುತ್ತಾರೆ. ಅವರು ಭಾರತದ ಬಗ್ಗೆ ಮಾತನಾಡಬೇಕಾದರೆ ಹಿಂದೂಸ್ತಾನ್ ಎಂದು ಮಾತನಾಡುತ್ತಾರೆ.

ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಒಂದು ಘಟನೆ ನಡೆಯಿತು. ಆ ಬಗ್ಗೆ ಹೇಳುತ್ತೇನೆ. ನಮ್ಮ ದೇಶದಲ್ಲಿ The Hindu ಎನ್ನುವ ಒಂದು ದಿನಪತ್ರಿಕೆ ಇದೆ. ಅದರ ಮೇಲೆ ಇದುವರೆಗೂ communal ಎಂದು ಯಾರು ಕೇಸ್ ಹಾಕಿಲ್ಲ. ಬೆಂಗಳೂರಿನಲ್ಲಿ ಇತ್ತೀಚೆಗೆ ಒಂದು ಫ್ಯಾಕ್ಟರಿಯನ್ನು ಮುಚ್ಚಬೇಕೆನ್ನುವ ಚರ್ಚೆ ನಡೆಯುತ್ತಿದೆ. ಅದಕ್ಕೆ "Hindustan Machine Tools" ಎಂದು ಕರೆಯುತ್ತಾರೆ. ಇಲ್ಲಿ ಒಂದು ಏರೋಪ್ಲೇನ್ ಫ್ಯಾಕ್ಟರಿ ಇದೆ, ಅದಕ್ಕೆ "Hindustan Aeronautical Limited" ಎಂದು ಹೇಳುತ್ತಾರೆ. ಹಾಗಾಗಿ ನಾನು ಹೇಳುತ್ತಿರುವುದೇನೆಂದರೆ, ನಮ್ಮೆಲ್ಲಾ ಪಠ್ಯ ಕ್ರಮದಲ್ಲಿ ಸರಿಯಾದ ಹಿಂದೂ ವ್ಯಾಖ್ಯಾನವನ್ನು ನಾವು ಮಾಡಿದರೆ ಈ ದೇಶದಲ್ಲಿರುವಂತಹ ಹಿಂದೂ-ಮುಸ್ಲಿಂ ಶಬ್ಧ ಪ್ರಯೋಗ ಏನಿದೆ, ಇದು ತಪ್ಪು, ಎಲ್ಲರೂ ಹಿಂದುಗಳೇ ಎನ್ನುವ ಭಾವನೆ ನಿರ್ಮಾಣ ಆಗಬೇಕಾಗುತ್ತದೆ. ನಮ್ಮ ಮನೋಹರ ಪಾರಿಕ್ಕರ್‌ರವರು ಕೇಂದ್ರದ ಸಚಿವರಾಗಿದ್ದಾರೆ. ಅವರು ಇತ್ತೀಚೆಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಒಂದು ದೊಡ್ಡ ಕಾಂಟ್ರೋವರ್ಸಿಯಾದಾಗ ಅವರು ಉತ್ತರ ಕೊಟ್ಟರು ಎಲ್ಲಾ ಆಯಿತು. ಮೆಕ್ಕಾದಲ್ಲಿ ಇಡೀ ಮುಸ್ಲಿಂ ಜನಾಂಗ ಸೇರುತ್ತದೆ. ಅವರು ಮೆಕ್ಕಾ ಮದೀನಾಕ್ಕೆ ಹೋಗುವಂತಹ ನಮ್ಮ ದೇಶದ ಮುಸಲ್ಮಾನರ ಬಗ್ಗೆ ಅವರು ಮಾತನಾಡಬೇಕಾದರೆ ಅಲ್ಲಿ ಈ ರೀತಿ ಹೇಳುತ್ತಾರೆ, 'ತು ಹಿಂದೂ ಹೈ' ಎಂದು ಮಾತನಾಡುತ್ತಾರಂತೆ. ಅದಕ್ಕೆ ಇವರು 'ಹೇ, ಕ್ಯಾ ಬೋಲ್‌ತೇ ಹೋ ತುಮ್, ಮೈ

ಹಿಂದು ನಹೀ, ಮೈ ಮುಸಲ್ಮಾನ್ ಹೂಂ' ಎಂದು ಹೇಳುತ್ತಾರಂತೆ. 'ಭೋಡೋ ಯಾರ್, ತುಮ್ ಹಿಂದೂಸ್ತಾನ್‌ಕೇ ಹೋ ಇಸ್‌ಲಿಯೇ ಹಿಂದೂ ಹೋ' ಎಂದು ಅವರು ಹೇಳುತ್ತಾರಂತೆ. ಈ ರೀತಿಯಾಗಿ ದೇಶದ ಜೊತೆಗೆ ಹಿಂದೂ ಶಬ್ಧವನ್ನು ಜೋಡಿಸುವಂತಹ ಕೆಲಸವನ್ನು ಇಡೀ ಪ್ರಪಂಚ ಮಾಡಿಕೊಂಡು ಬಂದಿದೆ. ಮೆಕ್ಕಾದಲ್ಲಿ ಅದನ್ನೇ ಹೇಳಿರುವುದು. ಅದನ್ನೇ ಮನೋಹರ ಪಾರಿಕ್ಕರ್‌ರವರು ಹೇಳಿರುವುದನ್ನು ನಾನು ನೆನಪು ಮಾಡಿಕೊಂಡು ಹೇಳುತ್ತಿರುವುದು. ಈ ಹಿಂದೂ ಶಬ್ಧವು ಸಿಂಧೂ ಶಬ್ಧದಿಂದ ಬಂದಿದೆ ಎನ್ನುವ ವ್ಯಾಖ್ಯಾನ ಇದೆ. ಸಪ್ತ ಸಿಂಧು ಎನ್ನುವ ಪದ ಇದೆ. ಸಪ್ತ ಎಂದರೆ ಏಳು ದಿನಗಳು, ಅದನ್ನು ಒಂದು ವಾರ ಎಂದು ಹೇಳುತ್ತೇವೆ. ಅದನ್ನೇ ಉರ್ದುನಲ್ಲಿ ಹಫ್ತಾ ಎಂದು ಹೇಳುತ್ತಾರೆ. ಅದನ್ನೇ ನಮ್ಮ ಗೂಂಡಾಗಳು ಹಣ ವಸೂಲಿ ಮಾಡುವುಕ್ಕೆ ಹಫ್ತಾ ಎಂದು ಉಪಯೋಗಿಸಿಕೊಂಡು ಬಿಟ್ಟಿದ್ದಾರೆ. ಹಫ್ತಾ ಮೇ ಏಕ್ ಬಾರ್, ಈ ಹಫ್ತಾ ಎನ್ನುವ ಶಬ್ಧ ಬಂದಿರುವಂಥದ್ದು ವಾರಕ್ಕೆ ಒಂದು ಸಲ ಎನ್ನುವುದು ಸಪ್ತದಿಂದ ಬಂದಿರುವುದು, ಅದನ್ನು ನಾನು ಹೇಳುತ್ತಿರುವುದು. ಈ 'ಸ'ಕಾರದಿಂದ 'ಹ'ಕಾರ ಬಂದಿದೆ. ಸಿಂಧೂ ಹಿಂದೂ ಆಗಿದೆ. ಸಿಂಧೂ ನದಿ ಭಾರತದಲ್ಲಿ ಹುಟ್ಟುತ್ತದೆ, ಪಾಕಿಸ್ತಾನದಲ್ಲಿ ಹರಿಯುತ್ತದೆ, ಸಿಂಧೂ ನದಿ ಎಲ್ಲರಿಗೂ ಪವಿತ್ರವಾಗಿರುವಂಥದ್ದು.

ಮಾನ್ಯ ಸಭಾಪತಿಯವರೇ, ನಾವು ಈ ಹಿನ್ನೆಲೆಯಲ್ಲಿ ಯೋಚನೆ ಮಾಡಿದರೆ ಭೌಗೋಳಿಕ ಹಿನ್ನೆಲೆಯಲ್ಲಿ, ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಮತ್ತು ನಮ್ಮ ದೇಶದ ಪುರಾಣ, ಇತಿಹಾಸ, ಮತ್ತು ಇಕ್ಬಾಲ್ ಕವಿ ಹೇಳಿರುವಂಥ ಹಿನ್ನೆಲೆಯಲ್ಲಿ, ಅವೆಲ್ಲವನ್ನೂ ಹೇಳಿಕೊಂಡರೆ ನಿಜವಾಗಿಯೂ ನನಗನಿಸುತ್ತದೆ, ಹಿಂದೂ ಎನ್ನುವ ಶಬ್ಧ ಈ ದೇಶದ ಅತ್ಯಂತ ಪವಿತ್ರವಾದಂತಹ ರಾಷ್ಟ್ರೀಯತೆಯನ್ನು ಸೂಚಿಸುವಂತಹ ಒಂದು ಶಬ್ಧ. Hindu denotes nationality and it is not a communal word ಎನ್ನುವ ಮಾತನ್ನು ಹೇಳುತ್ತಾ ಇದನ್ನು ನಾವು ನಮ್ಮ ಪಠ್ಯ ಕ್ರಮದಲ್ಲಿ ಸೇರಿಸಿದಾಗ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಇವತ್ತು ಐತಿಹಾಸಿಕ ದಿನ. ಅದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ತಾವು ಇಷ್ಟು ದೊಡ್ಡದಾಂತಹ ರೂಲಿಂಗ್‌ನ್ನು ಕೊಟ್ಟಿದ್ದೀರಿ. ತಮ್ಮ ರೂಲಿಂಗ್‌ನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರ ಒಪ್ಪಿದೆ. ಅದಕ್ಕೋಸ್ಕರ ನಮ್ಮ ಸರ್ಕಾರದ ಸಭಾನಾಯಕರನ್ನು ಮತ್ತು ಇಡೀ ಸರ್ಕಾರವನ್ನು, ಇಡೀ ಕಾಂಗ್ರೆಸ್ ಪಕ್ಷವನ್ನು ನಾನು ಈ ಸಮಯದಲ್ಲಿ ಅಭಿನಂದಿಸುತ್ತೇನೆ. ನಾವು ನೀವೆಲ್ಲರೂ ಸೇರಿ ಈ ವಕ್ಫ್ ಪ್ರಾಪರ್ಟಿಯನ್ನು ಉಳಿಸೋಣ. ಇದು ಪವಿತ್ರವಾದಂತಹ

ವಕ್ಫ್ ಪ್ರಾಪರ್ಟಿ ಎಂದು ಹೇಳುತ್ತಾ, once it is waqf always it is waqf ಎಂದು ಸುಪ್ರೀಮ್‌ಕೋರ್ಟ್ ಜಡ್ಜ್ ಹೇಳಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಮಧುಸೂದನ್‌ರವರೇ, ಕನ್‌ಕ್ಲೂಡ್ ಮಾಡಬೇಡಿ.

**ಸಭಾಪತಿಯವರು:-** ಅವರಿಗೆ ಕೊಟ್ಟಿರುವ ಸಮಯ ಮುಗಿದು ಹೋಗಿದೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನೇನೂ ಮಾತನಾಡುವುದಿಲ್ಲ, ಒಂದೇ ಒಂದು ವಾಕ್ಯ ಹೇಳುತ್ತೇನೆ. ಅವರು ಹೇಳಿರುವುದನ್ನೆಲ್ಲಾ ಒಪ್ಪೋಣ. ಹಾಗೆಯೇ ಹಿಂದೂ ಎನ್ನುವುದು ಒಂದು ಧರ್ಮ ಹೌದೋ ಅಲ್ಲವೋ ಎಂಬುದನ್ನು ಹೇಳಿ.

**ಶ್ರೀ ಗೋ.ಮಧುಸೂದನ್:-** ಹಿಂದೂ ನಮ್ಮ ದೇಶದಲ್ಲಿರುವಂತಹ ಧರ್ಮ. ನಮ್ಮ ದೇಶದಲ್ಲಿ ಅದನ್ನು ಸನಾತನ ಧರ್ಮ ಎಂದು ಹೇಳಿಕೊಂಡು ಬಂದಿದ್ದೇವೆ. ಹಿಂದೂ ಎನ್ನುವಂಥದ್ದು ಈ ದೇಶದಲ್ಲಿರುವಂತಹ ಎಲ್ಲಾ ಜಾತಿಗಳಿಗೆ, ಸಂಪ್ರದಾಯಗಳಿಗೆ ಸೇರಿದೆ ಎಂದು ನಾನು ಹೇಳುತ್ತಿರುವಂಥದ್ದು. ಎಲ್ಲಾ ಸಮಸ್ತವೂ ಈ ದೇಶ. ಈ ದೇಶದ ಜೈನ ಹಿಂದೂ.

**ಶ್ರೀ ಕೃಷ್ಣ ಭೈರೇಗೌಡ:-** ಹಾಗಾದರೆ ಹಿಂದೂ ಎನ್ನುವುದು ಧರ್ಮ ಅಲ್ಲವೆ? ಹಿಂದೂ ಎನ್ನುವುದು ಧರ್ಮ ಅಲ್ಲ ಎಂದು ತಾವು ಹೇಳುತ್ತಿದ್ದೀರಿ.

**ಶ್ರೀ ಆರ್.ವಿ.ವೆಂಕಟೇಶ್:-** ಇವತ್ತು ನಾವು ನಮ್ಮ ದೇಶದಲ್ಲಿದ್ದೇವೆ. ನಮ್ಮ ಧರ್ಮ ಯಾವುದು ಎಂದರೆ ಹಿಂದೂ ಎಂದು ಬರೆಯುತ್ತೇವೆ. Nationality ಯಾವುದು ಎಂದರೆ Indian ಎಂದು ಬರೆಯುತ್ತೇವೆ. ಅದನ್ನು ತಿಳಿದುಕೊಳ್ಳಿ. ಇವತ್ತಿಗೂ ಕೂಡ ನಾವು

ಪರಿಪಾಲಿಸುವುದು ಒಂದು ಧರ್ಮ, ನಾವು ಕೂಡ ಆ ಧರ್ಮಕ್ಕೆ ಸೇರಿದ್ದೇವೆ. Nationality ಯಾವುದು ಎಂದರೆ ಇವತ್ತಿಗೂ ಕೂಡ Indian ಎಂದು ಬರೆಯುತ್ತೇವೆ.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ. ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ತಮ್ಮ ಅಭಿಪ್ರಾಯ ತಾವು ಹೇಳಿದ್ದೀರಿ. ಈಗ ಮಾನ್ಯ ಎಂ.ಡಿ. ಲಕ್ಷ್ಮೀನಾರಾಯಣ್‌ರವರು ಮಾತನಾಡುತ್ತಾರೆ.

SRI V.S.UGRAPPA: Supreme Court in a judgment has held that it is a way of life.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಇವತ್ತು ಐತಿಹಾಸಿಕ ದಿನವಾಗಿದೆ. ಇವತ್ತು 5ನೇ ಮಾರ್ಚ್ ಬರುವಂತಹ ದಿನಗಳಲ್ಲಿ ಇದು ನಮ್ಮ ಕರ್ನಾಟಕದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ದಿನ ಆಗುತ್ತದೆ ಎಂದು ಹೇಳಬಯಸುತ್ತೇನೆ. ಇದಕ್ಕೆ ಕಾರಣರಾಗಿರುವಂಥ ತಮ್ಮೆಲ್ಲರನ್ನು, ಇಡೀ ಸದನವನ್ನು, ಮಾನ್ಯ ಮುಖ್ಯಮಂತ್ರಿಯವರನ್ನು, ಸಭಾನಾಯಕರನ್ನು ಅಭಿನಂದಿಸಿ ನನ್ನ ಮಾತು ಮುಕ್ತಾಯ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇವರೆಲ್ಲಾ ನಮ್ಮ ಸದನದಲ್ಲಿ ಮುಂದುವರೆಯಬೇಕು.

**ಸಭಾಪತಿಯವರು:-** ಅದು ನನ್ನ ಕೈಯಲ್ಲಿ, ನಿಮ್ಮ ಕೈಯಲ್ಲಿ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಅವರನ್ನು ಮುಂದುವರೆಯಿಸಿ.

**ಸಭಾಪತಿಯವರು:-** ನಮ್ಮಿಬ್ಬರ ಕೈಯಲ್ಲಿ ಇಲ್ಲ, ನೋಡೋಣ.

**ಶ್ರೀ ಬಸವರಾಜ ಹೊರಟ್ಟಿ:-** ಇಂಥವರೆಲ್ಲಾ ಸದನದಲ್ಲಿ ಇರಬೇಕು.

**ಸಭಾಪತಿಯವರು:-** ಕಾಂಗ್ರೆಸ್‌ನವರು, ನಾವು ನೀವು ಸೇರಿ ಒಟ್ಟಾಗಿ ತೀರ್ಮಾನ ಮಾಡೋಣ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರ ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ. ಅವರು ಈಗ ಏನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದರೆ, ಈಗ ಅವರು ಬಿಟ್ಟರೆ ಬಾಕಿಯವರೆಲ್ಲಾ ಹಿಂದುಗಳಲ್ಲ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಅವರೇನು ಹಾಗೆ ಹೇಳಲಿಲ್ಲ. ಈಗ ಆ ಚರ್ಚೆ ಏಕೆ ಬೇಕು? He did not say that. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಯಾರು ಹಿಂದಿ ಬಳಸುತ್ತಿದ್ದಾರೆಯೋ, ಯಾರು ಹಿಂದೂಸ್ತಾನದಲ್ಲಿದ್ದಾರೆಯೋ ಅವರೆಲ್ಲರೂ ಹಿಂದುಗಳು ಎಂದು ನಾನು ಹೇಳಬಯಸುತ್ತೇನೆ. ಜಾತಿ ಬೇರೆ ಬೇರೆ ಇರಬಹುದು, ಆದರೆ ಈ ದೇಶದಲ್ಲಿರುವವರೆಲ್ಲರೂ ಹಿಂದುಗಳೇ. ಅದರಲ್ಲಿ ಬೇರೆ ಮಾತೇ ಇಲ್ಲ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಡೀ ಸದನ ಕಳೆದ ಐದು ದಿವಸಗಳಿಂದ ರಾಜ್ಯದ ಜನತೆಯ ಸಮಸ್ಯೆ ಬಗ್ಗೆ ತೀವ್ರತರವಾಗಿರತಕ್ಕಂಥ ಸೇವೆಯನ್ನು ಕೊಡತಕ್ಕಂಥ ದೃಷ್ಟಿಯಲ್ಲಿ ಸರ್ಕಾರದ ಪಾಲು ಜಾಸ್ತಿ ಇರತಕ್ಕಂಥ ಒಂದು ಸಂದರ್ಭದಲ್ಲಿ ವಿರೋಧ ಪಕ್ಷದ ಪಾಲು ಕೂಡ ಅಷ್ಟೆ ಇರಬೇಕು ಎನ್ನತಕ್ಕಂಥದ್ದು ಪ್ರತಿಯೊಬ್ಬರು ಹೇಳತಕ್ಕಂಥ ವಿಚಾರವನ್ನು ತೆಗೆದುಕೊಂಡಾಗ ಸನ್ಮಾನ್ಯ ರಾಜ್ಯಪಾಲರು ಇವತ್ತು ಇಡೀ ರಾಜ್ಯದ ಸಮಸ್ಯೆಗಳನ್ನು ಯಾವ ರೀತಿ ಸಮರ್ಪಕವಾಗಿ ಸರ್ಕಾರ ತೆಗೆದುಕೊಂಡು ಹೋಗುತ್ತಿದೆ ಎನ್ನುವುದರ ಬಗ್ಗೆ ಇವತ್ತು ಸಂಪೂರ್ಣವಾಗಿರುವ ಮಾಹಿತಿಯನ್ನು ಕೊಡತಕ್ಕಂಥದ್ದು.

(ಮುಂದು)

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಮುಂದು. . .)**

ಸನ್ಮಾನ್ಯ ರಾಜ್ಯಪಾಲರು ಇವತ್ತು ಇಡೀ ರಾಜ್ಯದ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಸರ್ಕಾರ ತೆಗೆದುಕೊಂಡು ಹೋಗುತ್ತಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಕೊಟ್ಟಿರುವಂತಹದ್ದಾಗಿದೆ. ಇಂತಹ ದೃಷ್ಟಿಯಲ್ಲಿ ಸ್ವಾತಂತ್ರ್ಯ ಬಂದು 67-68ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಇಂತಹ ಒಂದು ವಿಚಾರವನ್ನು ತೆಗೆದುಕೊಂಡಾಗ ಅನೇಕ ಸಮಸ್ಯೆಗಳನ್ನು ಎದುರಿಸುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಇರುತ್ತದೆ. ಸರ್ಕಾರದ ಮೇಲೆ ಇರುವಂತಹ ವಿಚಾರವನ್ನು ತೆಗೆದುಕೊಂಡಾಗ ಇರತಕ್ಕಂತಹ 30-32 ಇಲಾಖೆಗಳಲ್ಲಿ ಸಂಬಂಧಪಟ್ಟಂತಹ ಸಮುದಾಯಗಳ ಬಗ್ಗೆ ಚರ್ಚೆ ಮಾಡತಕ್ಕಂತಹ ಒಂದು ವಿಚಾರದಲ್ಲಿ ಇವತ್ತು ನೇಕಾರರ ಸಮಾಜದ ಒಬ್ಬ ರಾಜ್ಯಾಧ್ಯಕ್ಷನಾಗಿ, ಮತ್ತು ವಿಧಾನ ಪರಿಷತ್ತಿನ ಸದಸ್ಯನಾಗಿ ಕೆಲಸ ಮಾಡತಕ್ಕಂತಹ ವಿಚಾರವನ್ನು ತೆಗೆದುಕೊಂಡಾಗ ಇಡೀ ರಾಜ್ಯದಲ್ಲಿ ಸುಮಾರು 60 ಲಕ್ಷ ನೇಕಾರ ಸಮಾಜದ ಬಂಧುಗಳು ಇರತಕ್ಕಂತಹ ಒಂದು ವಿಚಾರವನ್ನು ಕೂಡ ತೆಗೆದುಕೊಂಡು ನಾನು ಇವತ್ತು ಮಾತನಾಡಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಏನು ಕೆಳಮನೆಯಲ್ಲಿ 224 ಜನ ಶಾಸಕರುಗಳಿದ್ದಾರೆ, ಮೇಲ್ಮನೆಯಲ್ಲಿ 75 ಜನ ವಿಧಾನ ಪರಿಷತ್ತಿನ ಸದಸ್ಯರು ಇರತಕ್ಕಂತಹ ವಿಚಾರದಲ್ಲಿ ಸುಮಾರು 10%ಗಿಂತ ಹೆಚ್ಚು ಸಂಖ್ಯೆ ಇರತಕ್ಕಂತಹ ಇಷ್ಟೊಂದು ದೊಡ್ಡ ಸಮೂಹದ ಬಗ್ಗೆ ಇವತ್ತು ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕಾಗಿರುವುದು ಸರ್ಕಾರದ ಕರ್ತವ್ಯ ಇದೆ ಎನ್ನುವುದನ್ನು ನಾನಾದರೂ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಂತಹ ಸಂದರ್ಭದಲ್ಲಿ ಕೆಲವೊಮ್ಮೆ ಸರ್ಕಾರ ತಪ್ಪು ಮಾಡಿದಾಗ, ಆ ತಪ್ಪನ್ನು ಕಂಡು ಹಿಡಿದು, ತಿದ್ದುವಂತಹ ಒಂದು ಜವಾಬ್ದಾರಿ ವಿರೋಧ ಪಕ್ಷದ ಮೇಲೆ ಇರುತ್ತದೆ ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತದೆ. ಕೇವಲ ಟೀಕೆಯನ್ನು ತನ್ನ ಗುರಿಯಾಗಿಟ್ಟುಕೊಂಡು ಕೆಲಸವನ್ನು ಹಿಯಾಳಿಸುವಂತಹ ಕೆಲಸ ಕಾರ್ಯದಲ್ಲಿ ಮುಂದಾದರೆ ಖಂಡಿತವಾಗಿಯೂ ಕೂಡ ನಾವು ಜನತೆಗೆ ಅಪಮಾನ ಮಾಡಿದಂತಾಗುತ್ತದೆ. ನನಗೆ ಗೊತ್ತಿರುವ ಹಾಗೆ ರಾಜಕೀಯ ಎನ್ನುವಂತಹ ಒಂದು ಶಬ್ದವನ್ನು ನಾನು ಇಂದು ಕೂಡ ಅನೇಕ ಕಡೆ ಬಳಸಿದ್ದೇನೆ. ರಾಜ್ಯದ, ರಾಷ್ಟ್ರದ ಜನತೆಗೆ ಕೀರ್ತಿ ಮತ್ತು ಯಶಸ್ಸನ್ನು ಕೊಡತಕ್ಕಂತಹ ಒಂದು ವಿಚಾರದಲ್ಲಿ ಜನಪ್ರತಿನಿಧಿಗಳಾದ ನಾವುಗಳೆಲ್ಲರೂ ಸೇವೆಯನ್ನು ಮಾಡಲಿಕ್ಕೆ ಹೊರಟಿರುವಂತಹ ಸಂದರ್ಭದಲ್ಲಿ ಎಲ್ಲವೂ ಕೂಡ ಇವತ್ತು ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಂತಹ ಒಂದು ಪ್ರಸಂಗಗಳನ್ನು ತೆಗೆದುಕೊಂಡು

ನ್ಯಾಯಸಮ್ಮತವಾಗಿ ಅದು ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು, ಆಯಾ ಸರ್ಕಾರಗಳು ತಮ್ಮ ಪಾಲನ್ನು ಕೊಡುವಂತಹ ವಿಚಾರವನ್ನು ತೆಗೆದುಕೊಂಡಾಗ ವ್ಯತ್ಯಾಸಗಳನ್ನು ಅನೇಕ ಕಡೆ ಕಂಡಿರುವುದನ್ನು ನಾವುಗಳು ನೋಡುತ್ತಿದ್ದೇವೆ. ಈ ವಿಚಾರಗಳನ್ನು ತೆಗೆದುಕೊಂಡಾಗ ಹಿಂದೆ ಇದ್ದಂತಹ ಒಂದು ಸಂದರ್ಭದಲ್ಲಿ ನಮ್ಮ ನೇಕಾರರ ಸಮಸ್ಯೆಗಳನ್ನು ಅರಿತು  ಜವಳಿ ಇಲಾಖೆಯಲ್ಲಿ ಆಗಿರುವಂತಹ ಒಂದು ವಿಚಾರವನ್ನು ನಾನು ಈ ಸದನದ ಮುಂದೆ ಇಡಲೇ ಬೇಕಾಗುತ್ತದೆ.  ಏಕೆಂದರೆ, ಎರಡು ಪಾಲಾಗಿರುವಂತಹ ಕೈಮಗ್ಗ ನಿಗಮದಲ್ಲಿ ಕೆಲಸ ಮಾಡತಕ್ಕಂತಹ ನೇಕಾರರು  ಮತ್ತು ವಿದ್ಯುತ್ ಚಾಲಿತ ನಿಗಮಗಳಲ್ಲಿ ಕೆಲಸ ಮಾಡುತ್ತಿರುವಂತಹ ನೇಕಾರರು  ಈ ವಿಚಾರದಲ್ಲಿ ಅನೇಕ ಸಮಸ್ಯೆಗಳನ್ನು ಇವತ್ತು ಕೂಡ ಎದುರಿಸುವುದನ್ನು ನಾನು ನೋಡುತ್ತಿದ್ದೇನೆ. ಹಿಂದೆ ನಾನು ಕೈಮಗ್ಗ ನಿಗಮದ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅಂದಿನ ಸರ್ಕಾರವೂ ಕೂಡ 500 ಕೋಟಿ ರೂಪಾಯಿಗಳನ್ನು ನೇಕಾರರ ಸಮಾಜಕ್ಕೆ ಮೀಸಲಿಟ್ಟಿರುವಂತಹ ಸಂದರ್ಭದಲ್ಲಿ ಅಧಿಕಾರಿಗಳ ಒಂದು ಇಚ್ಛಾಶಕ್ತಿಯ ಕೊರತೆಯಿಂದ ಸುಮಾರು 350 ಕೋಟಿ ರೂಪಾಯಿಗಳನ್ನು ವಾಪಸ್ಸು ಹೋಗುವಂತಹ ಪರಿಸ್ಥಿತಿಯನ್ನು  ನಾನು ಇವತ್ತು ಜ್ಞಾಪಕ ಮಾಡಿಕೊಳ್ಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ.  ಯಾವುದೇ ಒಂದು ಸಮೂಹಕ್ಕೆ ಸರ್ಕಾರ ಕೊಡುವಂತಹ ವಿಚಾರವನ್ನು ತೆಗೆದುಕೊಂಡಾಗ  ಆ ಜವಳಿ ಇಲಾಖೆಯಲ್ಲಿ ಆಗುತ್ತಿರುವಂತಹ ನ್ಯೂನ್ಯತೆಗಳನ್ನು ಯಾವ ರೀತಿಯಲ್ಲಿ ಸರಿಪಡಿಸಿ,  ಆ ಸಮೂಹಕ್ಕೆ ಸಹಾಯ ಮಾಡಬೇಕೆನ್ನುವ ಚಿಂತನೆ ಇಲ್ಲದಿದ್ದರೆ, ಖಂಡಿತವಾಗಿಯೂ ಕೂಡ ಅದು ಆಡಳಿತ ಪಕ್ಷ ಇರಬಹುದು, ವಿರೋಧ ಪಕ್ಷ ಇರಬಹುದು, ಯಾವುದೂ ಕೂಡ ನ್ಯಾಯವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಮಾನ್ಯ ಸದಸ್ಯರಾದ ಶ್ರೀಯುತ ಗೋ.ಮದುಸೂಧನ್‌ರವರು ಮಾತನಾಡುತ್ತಿರುವಂತಹ ವಿಚಾರದಲ್ಲಿ, ಹಿಂದೂ, ಧರ್ಮ  ಇದೇನೇ ಇರಲಿ, ಅದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ.

ಕೊನೆಯಲ್ಲಿ, ಸರ್ಕಾರಕ್ಕೆ  ಮತ್ತು ಕಾಂಗ್ರೆಸ್ ಪಕ್ಷಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎನ್ನುವ ಮಾತನ್ನು ಹೇಳಿದರು.  ನಿಜವಾಗಿಯೂ ಕೂಡ ಇದು ಗೌರವಯುತವಾಗಿರುವಂತಹ ಒಂದು ನಡೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.  ಅದೇ ರೀತಿಯಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಮಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಸನ್ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.  ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ.  ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದಂತಹ ಶ್ರೀಯುತ ನಜೀರ್‌ಸಾಬ್‌ರವರನ್ನು ನೆನಪು ಮಾಡಿಕೊಳ್ಳುತ್ತಿದ್ದೇವೆ. ಏಕೆಂದರೆ, ಆ ಸಮಯದಲ್ಲಿ ಕುಡಿಯುವ

ನೀರಿನ ಸಮಸ್ಯೆ ಇದ್ದು, ಅದನ್ನು ನಿವಾರಣೆ ಮಾಡಿದಂತಹ ಏಕೈಕ ವ್ಯಕ್ತಿ ಎಂದರೆ ಮಂತ್ರಿಗಳಾಗಿ ಕೆಲಸ ನಿರ್ವಹಿಸಿದ್ದಂತಹ ಶ್ರೀಯುತ ನಜೀರ್ ಸಾಬ್‌ರವರು. ಅದೇ ರೀತಿಯಲ್ಲಿ ಇವತ್ತು ಸೃಷ್ಟಿಯಾಗಿರುವಂತಹ ನೀರಿನ ಹಹಾಕಾರದ ಬಗ್ಗೆ ನಮ್ಮ ಮುಖ್ಯಮಂತ್ರಿಗಳಾಗಿರುವಂತಹ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಸನ್ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಗಮನಿಸಬೇಕು. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಸುಮಾರು 8 ಸಾವಿರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹಾಕಬೇಕೆನ್ನುವ ವಿಚಾರವನ್ನು ತೆಗೆದುಕೊಂಡಿರುವಾಗ ಅನೇಕ ಎಡರುತೊಡರುಗಳು, ಬಂದಾಗ್ಯೂ ಸಹ ಇವತ್ತು 1,500 ಶುದ್ಧ ಕುಡಿಯುವ ನೀರಿನ ಘಟಕಗಳಾಗಿವೆ. ಇನ್ನು ಉಳಿದಿರುವ 6,500 ಶುದ್ಧ ಕುಡಿಯುವ ನೀರಿನ ಘಟಕಗಳಾಗಬೇಕಾಗಿದೆ. ನಾನು ಈ ವಿಚಾರವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ವಿಚಾರವನ್ನೂ ಸಹ ಗಮನಿಸಬೇಕಾಗುತ್ತದೆ. ಏಕೆಂದರೆ, ನಾವು ಒಟ್ಟು 300 ಮಂದಿ ಶಾಸಕರುಗಳಿದ್ದೇವೆ. ಕರ್ನಾಟಕದಲ್ಲಿ ಕೆಳಮನೆಯಲ್ಲಿ 224 ಜನರು ಮತ್ತು ಈ ಮೇಲ್ಮನೆಯಲ್ಲಿ 75 ಜನ ಒಟ್ಟು 299 ಜನ ಶಾಸಕರುಗಳಿದ್ದೇವೆ. ನಮಗೂ ಕೂಡ ಪ್ರತಿ ವರ್ಷ 2 ಕೋಟಿ ರೂಪಾಯಿಗಳ ಅನುದಾನ ಬರುತ್ತದೆ. ನಾನು ಈಗಾಗಲೇ ಈ ವಿಚಾರವಾಗಿ ಬೆಳಗಾವಿ ಅಧಿವೇಶನದಲ್ಲಿಯೇ ಘೋಷಣೆ ಮಾಡಿದ್ದೇನೆ. ನಮ್ಮಲ್ಲಿ ಬರುವಂತಹ ಅನುದಾನವನ್ನು, ನಾವು ಪ್ರತಿನಿಧಿಸುವಂತಹ ಕ್ಷೇತ್ರ ಏನಿದೆ, ಅದರ ವ್ಯಾಪ್ತಿಯಲ್ಲಿ 25 ರಿಂದ 30 ಗ್ರಾಮ ಪಂಚಾಯಿತಿಗಳು ಬರುತ್ತವೆ. ಸರ್ಕಾರ ಕೊಡುವಂತಹ 5 ಲಕ್ಷ ರೂಪಾಯಿಗಳ ಗ್ರಾಂಟ್ ಜೊತೆಗೆ ನಾವು ಕೂಡ ನಮ್ಮ ಗ್ರಾಂಟ್‌ನಲ್ಲಿ ತಲಾ 3 ಲಕ್ಷ ರೂಪಾಯಿಗಳಂತೆ ಕೊಟ್ಟರೆ ಇವತ್ತು 8–9 ಸಾವಿರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತೆರೆಯಲಿಕ್ಕೆ ಖಂಡಿತವಾಗಿಯೂ ಕೂಡ ಯಾವುದೇ ಕಾರಣಕ್ಕೂ ತೊಂದರೆಯಾಗುವುದಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಆ ದೃಷ್ಟಿಯಿಂದ ಈಗಾಗಲೇ ವಿಚಾರದಲ್ಲಿ ಘೋಷಣೆ ಮಾಡಿರುವಂತೆ ತುರುವೇಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವಂತಹ ಸುಮಾರು 34 ಗ್ರಾಮ ಪಂಚಾಯಿತಿಗಳಿಗೆ ನನಗೆ ಬರುವಂತಹ 2 ಕೋಟಿ ರೂಪಾಯಿಗಳ ಅನುದಾನದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಸರ್ಕಾರ ಕೊಡುವಂತಹ 5 ಲಕ್ಷ ರೂಪಾಯಿಗಳ ಜೊತೆಗೆ 3 ಲಕ್ಷ ರೂಪಾಯಿಗಳನ್ನು ಜೊತೆ ಮಾಡಿದಾಗ ಇವತ್ತು ಅನೇಕ ಶುದ್ಧ ಕುಡಿಯುವ ನೀರಿನ ಘಟಕಗಳು ಇವತ್ತು ಪ್ರಾರಂಭವಾಗುತ್ತವೆ. ಅಂದರೆ, ಸರ್ಕಾರದ ಜೊತೆಗೆ ನಾವು ಏನು ಶಾಸಕರುಗಳು ಇದ್ದೇವೆ, ನಾವು ಕೂಡ ಒಂದು ಸರ್ಕಾರ. ಒಂದು ತಾಲ್ಲೂಕಿಗೆ, ಒಂದು ಕ್ಷೇತ್ರಕ್ಕೆ ನಾವು ಕೂಡ ಸರ್ಕಾರದ

ಅಧಿಪತಿಯಾಗಿ ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ನಮ್ಮದು ಸಹ ಸಿಂಹಪಾಲು ಇರುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಅನುದಾನಗಳ ಬಗ್ಗೆ ಹೇಳುವುದಾದರೆ, ಇವತ್ತು ಒಂದೂವರೆ ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಏನು ಇವತ್ತು ಸರ್ಕಾರ ಮಂಡನೆ ಮಾಡತಕ್ಕಂತಹ ಸಂದರ್ಭದಲ್ಲೂ ಕೂಡ ಇವತ್ತು 40% ಗೆ ಇನ್ನೂ ಕೂಡ ಹೋಗಿಲ್ಲ, ಖರ್ಚು ಮಾಡಿಲ್ಲವೆನ್ನುವ ಮಾತನ್ನು ವಿರೋಧ ಪಕ್ಷ, ಮತ್ತು ವಿರೋಧ ಪಕ್ಷದ ಶಾಸಕರುಗಳೆಲ್ಲರೂ ಮಾತನಾಡುತ್ತಿರುವುದನ್ನು ನಾವು ಕೇಳಿದ್ದೇವೆ. ಆದರೆ, ನಮ್ಮ ಜವಾಬ್ದಾರಿ ಏನು? ಕ್ಷೇತ್ರದಲ್ಲಿ ನಾವು ಶಾಸಕರುಗಳಾಗಿರುವಂತಹ ಸಂದರ್ಭದಲ್ಲಿ ಅಧಿಕಾರಿಗಳು ನಮ್ಮ ಜೊತೆಯಲ್ಲಿ ಕೆಲಸ ಮಾಡುವಂತಹ ವಿಚಾರವನ್ನು ತೆಗೆದುಕೊಂಡು ನಾವು ಆದೇಶ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಾವು ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಎಲ್ಲೋ ಒಂದು ಕಡೆ ನಮ್ಮದೂ ಸಹ ಒಂದು ಸಣ್ಣ ಸಮಸ್ಯೆಯಾಗಿ ಆ ಕೆಲಸದ ವಿಚಾರದಲ್ಲಿ ಪಾಲು ಇದೆ ಎನ್ನುವಂತಹ ಮಾತನ್ನು ಸಹ ನಾನು ಇಲ್ಲಿ ಹೇಳಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಕೇವಲ ಸರ್ಕಾರವನ್ನು ನಿಂದನೆ ಮಾಡಿಕೊಂಡು ನಾವು ಕೇವಲ ಪ್ರಚಾರಕ್ಕೋಸ್ಕರ ಹೋಗುವಂತಹ ವಿಚಾರವನ್ನು ತೆಗೆದುಕೊಂಡಾಗ ಖಂಡಿತವಾಗಿಯೂ ಸಹ ನಾವು ಜನರಿಗೆ ಯಾವುದೇ ರೀತಿಯಲ್ಲಿ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೆ, ಮೊನ್ನೆ ಅಂದರೆ, ಈ ಅಧಿವೇಶನದ 2ನೇಯ ದಿವಸ ಒಂದು ಪ್ರಶ್ನೆಯನ್ನು ಮಾಡಿದ್ದೆ. ಆದರೆ, ವಿಧಿ 2 ದಿವಸಗಳ ಕಾಲ ನಮ್ಮ ಪರಿಷತ್ತು ಬಲಿಯಾಯಿತು. ಕೇವಲ ಒಂದು ಸಣ್ಣ ವಾಚ್‌ಗೋಸ್ಕರ . . .

(ಗೊಂದಲ)

ಕೈಯಲ್ಲಿ ಕಟ್ಟುವಂತಹ ಒಂದು ಸಣ್ಣ ವಾಚು. ಈ ಶರೀರಕ್ಕೆ. . .

**ಶ್ರೀ ರಘು ಅಚಾರ್:-** ಮನುಷ್ಯನ ಗಾತ್ರಕ್ಕೆ ಲೆಕ್ಕ ಹಾಕಿದರೆ ಅದು ಸಣ್ಣ ವಾಚು.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:-** ಒಂದು ಸಣ್ಣ ವಾಚ್‌ಗೋಸ್ಕರ ಎರಡು ದಿವಸಗಳು ಬಲಿಪಶುವಾಯಿತು ಎನ್ನುವ ನೋವು ನನಗೆ ಇದೆ. ಏಕೆಂದರೆ, ಇವತ್ತು ರಾಜ್ಯದಲ್ಲಿ ಇರಬಹುದು, ರಾಷ್ಟ್ರದಲ್ಲಿ ಇರಬಹುದು, ಅನೇಕ ಸಮಸ್ಯೆಗಳಿವೆ. ಆದರೆ, ಒಂದು ಒಳ್ಳೆಯ ಪ್ರಶ್ನೆಯನ್ನು ಹಾಕಿದ್ದೇನೆ ಎಂದು ನನಗೆ

ಅನಿಸಿತು. ನಮ್ಮ ರಾಜ್ಯದ ಹೆದ್ದಾರಿ ಬಗ್ಗೆ ಚರ್ಚೆ ಮಾಡಲಿಕ್ಕೆ ಪ್ರಶ್ನೆಯನ್ನು ಹಾಕಿದಾಗ ಅದು ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬಂತು. ಆದರೆ, ಆ ಎರಡು ದಿವಸಗಳನ್ನು ಬಲಿ ತೆಗೆದುಕೊಂಡಿದ್ದರಿಂದ ಚರ್ಚೆ ಮಾಡಲಿಕ್ಕೆ ಆಗಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಸುಮಾರು 10200 ಕಿ.ಮೀ ರಸ್ತೆಯನ್ನು ಇವತ್ತು ಏನು ಕೇಂದ್ರ ಸರ್ಕಾರ ಕೊಡತಕ್ಕಂತಹ ಒಂದು ವ್ಯವಸ್ಥೆಯೊಳಗಡೆ ಕಳೆದ ಬಾರಿ 2015-16 ರಲ್ಲಿ ಕೇವಲ ನಮಗೆ ಕೊಟ್ಟಿರುವಂತಹ ಅನುದಾನ 636 ಕೋಟಿ ರೂಪಾಯಿಗಳು. ಈ ನಿಟ್ಟಿನಲ್ಲಿ ನಾನು ಅಧಿವೇಶನಕ್ಕೆ ಬರುವ ಮುನ್ನ ಅದನ್ನು ಗಮನಿಸುವ ಸಲುವಾಗಿ ರಾತ್ರಿ 1-00 ಗಂಟೆಯಾದರೂ ಸಹ ನೋಡುತ್ತಿರುತ್ತೇನೆ. ಬೇರೆ ಬೇರೆ ರಾಜ್ಯಗಳಿಗೆ ಕೊಡುವಂತಹ ಅನುದಾನ ಮತ್ತು ನಮ್ಮ ರಾಜ್ಯಕ್ಕೆ ಕೊಟ್ಟಿರುವಂತಹ ಅನುದಾನವನ್ನು ನೋಡಿದಾಗ ಕೇವಲ 10% ಮಾತ್ರ. 20200 ಕಿ.ಮೀ ರಸ್ತೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಹೊರಟಂತಹ ಸಂದರ್ಭದಲ್ಲಿ 10235 ಕಿ.ಮೀ. ರಸ್ತೆಗಳು, 53 ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಉತ್ತರ ಕೊಟ್ಟಿರುವಂತಹ ವಿಚಾರವನ್ನು ತೆಗೆದುಕೊಂಡಾಗ ಅದೇನೂ ಅಲ್ಲವೇ ಅಲ್ಲ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಾನು ಈ ವಿಚಾರವನ್ನು ಏತಕ್ಕೆ ಪ್ರಶ್ನೆ ಮಾಡುತ್ತೇನೆಂದರೆ, ಕೇವಲ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸುವಂತಹ ವಿಚಾರವಲ್ಲ. ಜನ ಪ್ರತಿನಿಧಿಗಳಾಗಿರುವಂತಹ ನಾವು ಕೇಂದ್ರ ಸರ್ಕಾರ ನಮ್ಮದು ಇದ್ದರೆ, ನಾವು ಕೂಡ ಅಲ್ಲಿ ಮಾತನಾಡಿ ಅನುದಾನವನ್ನು ತರಿಸುವಂತಹ ಜವಾಬ್ದಾರಿ ನಮ್ಮ ಮೇಲೆ ಸಹ ಇದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

**ಮುಂದು**. . .

(ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಮುಂದುವರೆದುದು ...

ಅದರ ಜೊತೆಗೆ ರಾಜ್ಯ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ, ಅದನ್ನು ಯಾವ ರೀತಿ ನಾವು ಜೋಡಿಸಿಕೊಳ್ಳಬೇಕು ಎನ್ನುವಂತಹ ವಿಚಾರವನ್ನು ಕೂಡ ತೆಗೆದುಕೊಂಡು ಹೊರಟಾಗ, ಇವತ್ತು ಮುಂಗಾರು ಅಧಿವೇಶನದಲ್ಲಿ ನಾವು ಮಾತನಾಡುವಂತಹ ಕಾಲದಲ್ಲಿ ಹಿಂದೆ ಸುಮಾರು 3830 ಕೋಟಿ ರೂಪಾಯಿ ಅನುದಾನವನ್ನು ಒದಗಿಸಬೇಕೆನ್ನುವ ಬೇಡಿಕೆಯನ್ನು ನಮ್ಮ ಸರ್ಕಾರ ಮುಂದಿಟ್ಟಿತ್ತು. ಅದರಲ್ಲಿ 2280 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ರೈತರಿಗೆ ಕೊಡಬೇಕೆನ್ನುವ ವಿಚಾರವನ್ನು ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವಂತಹ ಅನುದಾನ ಕೇವಲ 1541 ಕೋಟಿ ರೂಪಾಯಿಗಳು. ಆದರೆ, ಅದೇ ಅನುದಾನವನ್ನು ಮಹಾರಾಷ್ಟ್ರಕ್ಕೆ ಕೊಡುವಂತಹ ವಿಚಾರದಲ್ಲಿ ಅವರು ಕೇಳಿರುವುದು ಕೇವಲ 2950 ಕೋಟಿ, ಆದರೆ ಬಿಡುಗಡೆ ಆಗಿರುವುದು 3000 ಕೋಟಿ ರೂಪಾಯಿಗಳು. ಅದೇರೀತಿ ಮಧ್ಯಪ್ರದೇಶದವರು 1900 ಕೋಟಿ ರೂಪಾಯಿ ಕೇಳಿದ್ದರೆ, 2100 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರುವುದಕ್ಕೆ ಕಾರಣವೆಂದರೆ, ಅನುದಾನದ ಬಿಡುಗಡೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸರಿಸಮಾನವಾಗಿ ನಡೆದುಕೊಳ್ಳುವಂತಹ ವಿಚಾರದಲ್ಲಿ, ಇಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿರುತ್ತದೆ. ಹೀಗಾಗಿ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಇದ್ದು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಕೇವಲ ಯಾವುದೋ ಒಂದು ಕಮ್ಯುನಿಕೇಷನ್ ಕೊರತೆಯಿಂದ ಈ ರೀತಿಯಾದಾಗ ಜನತೆಗೆ ನೋವಾಗುವಂತಹ ಒಂದು ವಿಚಾರವನ್ನು ನಾವು ತೆಗೆದುಕೊಂಡು ಮಾತನಾಡಬೇಕಾಗುತ್ತದೆ. ಆ ದೃಷ್ಟಿಯಿಂದ ರಾಜ್ಯದಲ್ಲಿ ಏನಿವತ್ತು ಶಾಸಕರು ಕೆಲಸ ಮಾಡುವಂತಹ ವಿಚಾರವನ್ನು ತೆಗೆದುಕೊಂಡಾಗ ಖಂಡಿತವಾಗಿಯೂ ಸಹ ವಿರೋಧ ಪಕ್ಷದಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಪ್ರಚಾರ ಬೇಕು, ಆದರೆ ಅಧಿವೇಶನವನ್ನು ಯಾವ ರೀತಿ ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬೇಕು ಎನ್ನುವಂತಹ ವಿಚಾರವನ್ನು ಸಹ ತೆಗೆದುಕೊಂಡು ನಾವು ಮಾತನಾಡಬೇಕಾಗುತ್ತದೆ. ಅದೇರೀತಿ ಜನತೆಗೆ ಕೊಟ್ಟಿರುವಂತಹ ಮಾತನ್ನು ನಾವೇನಾದರೂ ವಿಫಲಗೊಳಿಸಿದರೆ ಮತ್ತೊಮ್ಮೆ ನಾವು ಜನತೆಗೆ ಮುಖವನ್ನು ತೋರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತಾ, ಕೇವಲ ಟೀಕೆ ಒಂದೇ ಅಲ್ಲ, ಉತ್ತಮವಾಗಿರುವಂತಹ ವಿಮರ್ಶೆಗಳನ್ನು ಸಹ ಮಾಡಬೇಕಾಗುತ್ತದೆ.

ಇಂತಹ ಒಂದು ಸಂದರ್ಭದಲ್ಲಿ ಮನಸ್ಸಿಗೆ ನೋವಾಗುವಂತಹ ವಿಚಾರಗಳು, ಇವತ್ತು ಒಂದು ಸರ್ಕಾರ ಆಡಳಿತ ನಡೆಸುತ್ತಿರುವಂತಹ ಸಂದರ್ಭದಲ್ಲಿ ಅನೇಕ ದೂರು–ದುಮ್ಮಾನಗಳು ಬಂದರೂ ಸಹ ಅದನ್ನು ಈ ರೀತಿಯ ಸದನದಲ್ಲಿ ಕುಳಿತು ಚರ್ಚೆ ಮಾಡುವುದರ ಮುಖಾಂತರ ಬಗೆಹರಿಸಿಕೊಳ್ಳುವಂತಹ ಒಂದು ವಿಚಾರವನ್ನು ತೆಗೆದುಕೊಂಡಾಗ, ಇವತ್ತು ಬೆಳಿಗ್ಗೆ ದಿನಪತ್ರಿಕೆಯನ್ನು ಓದುತ್ತಿದ್ದಂತಹ ಸಂದರ್ಭದಲ್ಲಿ ನಮ್ಮ ರಾಜ್ಯದ ಪ್ರಮುಖರು ಮತ್ತು ಮಾಜಿ ಪ್ರಧಾನ ಮಂತ್ರಿಗಳಾಗಿರುವಂತಹ ಸನ್ಮಾನ್ಯ ಹೆಚ್.ಡಿ. ದೇವೇಗೌಡರು ನೆನ್ನೆ ದೆಹಲಿಯಲ್ಲಿ ನಡೆಸಿದ ಪ್ರೆಸ್ ಮೀಟ್‌ನಲ್ಲಿ ಒಂದು ಮಾತನ್ನು ತಿಳಿಸಿದ್ದಾರೆ. ಅದು ಬಹಳ ನೋವಿನ ಮಾತು, 'ಲೂಟಿಕೋರ ಸಿದ್ದರಾಮಯ್ಯ' ಎನ್ನುವಂತಹ ಮಾತು ಇವತ್ತು ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:–** ಆ ವಿಚಾರಗಳನ್ನೆಲ್ಲಾ ಈಗ ಪ್ರಸ್ತಾಪ ಮಾಡಬೇಡಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡುತ್ತಿಲ್ಲ, ಆ ವಿಚಾರ ಪತ್ರಿಕೆಯಲ್ಲಿ ಬಂದಿದ್ದನ್ನು ನೋಡಿ ಪತ್ರಿಕೆಯ ಸಮೇತವಾಗಿ ಬಂದಿದ್ದೇನೆ.

**ಸಭಾಪತಿಯವರು:–** ಆಯಿತು, ಆ ವಿಚಾರವನ್ನು ಅಲ್ಲಿಗೆ ಬಿಟ್ಟುಬಿಡಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಏಕೆಂದರೆ ಅವರು ಹಿರಿಯರಿದ್ದಾರೆ, ಅವರ ಬಗ್ಗೆ ನಮಗೂ ಬಹಳ ಗೌರವವಿದೆ, ಮಾಜಿ ಪ್ರಧಾನಿಗಳು ...

(ಗೊಂದಲ)

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮತ್ತೆ ರಾಜಕೀಯ ಮಾಡುವುದು ಬೇಡ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಮಾಡುತ್ತಿಲ್ಲ. ಪತ್ರಿಕೆಯಲ್ಲಿ ವರದಿಯಾಗಿರುವ ವಿಚಾರವನ್ನಷ್ಟೇ ನಾನು ತಿಳಿಸುತ್ತಿದ್ದೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ವರದಿಯಾಗಿರುವ ವಿಚಾರವನ್ನು ಹೇಳಿದರೆ ಅದು ಹೇಗೆ ರಾಜಕೀಯ ಆಗುತ್ತದೆ? ಅವರು ಹೇಳುತ್ತಿರುವುದು ಸರಿಯಾಗಿದೆ, ಅದರಲ್ಲಿ ತಪ್ಪೇನಿದೆ?

(ಗೊಂದಲ)

**ಸಭಾಪತಿಯವರು:–** ಅಲ್ಲಿಗೆ ಆ ವಿಚಾರ ಸಾಕು, ತಾವು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದುವರೆಸಿ.

(ಗೊಂದಲ)

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗುತ್ತಿಲ್ಲ, ...

**ಶ್ರೀ ಸಂದೇಶ್ ನಾಗರಾಜ್:–** ನೀವು ಮಾತನಾಡುತ್ತಿರುವುದು ತಪ್ಪು.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ವರದಿಯಾಗಿರುವ ವಿಚಾರವನ್ನು ಹೇಳಿದರೆ, ಅದು ತಪ್ಪು ಎನ್ನುವುದಾದರೆ ನಾನು ಸದನದ ಹೊರಗಡೆ ಹೋಗುತ್ತೇನೆ. ಮಾನ್ಯ ಸಭಾಪತಿಯವರು ತಿಳಿಸಿದರೆ ನಾನು ಸದನದ ಹೊರಗಡೆ ಹೋಗುತ್ತೇನೆ.

(ಗೊಂದಲ)

**ಶ್ರೀ ಸಂದೇಶ್ ನಾಗರಾಜ್:–** ನೀವು ಸದನದ ಹೊರಗಡೆ ಹೋಗಿ ಎಂದು ಹೇಳುತ್ತಿಲ್ಲ, ನೀವು ಈ ಸಂದರ್ಭದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿ ಮಾತನಾಡುತ್ತಿರುವುದು ತಪ್ಪು ಎಂದಷ್ಟೇ ನಾನು ಹೇಳುತ್ತಿದ್ದೇನೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, no, I am very sorry.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಬೇರೆಯವರು ಮಾತನಾಡುವಾಗ 'ಅವರಿಗೆ ಮಾತನಾಡಲು ಬಿಡಿ, ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವರಿಗೆ ಅವಕಾಶ ಮಾಡಿಕೊಡಿ' ಎಂದು ಮಾನ್ಯ ಸಂದೇಶ್ ನಾಗರಾಜ್ ಅವರೇ ಹೇಳುತ್ತಾರೆ. ಅದೇರೀತಿ ಮಾನ್ಯ ಲಕ್ಷ್ಮೀನಾರಾಯಣ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಈ ರೀತಿ ಅಡ್ಡಿಪಡಿಸಿದರೆ ಹೇಗೆ? ಅವರಿಗೂ ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಧಿಕಾರ ಇದೆ ಅಲ್ಲವೆ.

(ಗೊಂದಲ)

**ಶ್ರೀ ಸಂದೇಶ್ ನಾಗರಾಜ್:–** ಅವರ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಲಿ. ಆದರೆ, ಅದಕ್ಕೇಕೆ ಗೌರವಾನ್ವಿತರು, ಹಿರಿಯರು ಈ ರೀತಿಯೆಲ್ಲಾ ಹೇಳಬೇಕು?

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮುಂದೆ ಏನು ಹೇಳುತ್ತೇನೆ ಎಂಬುದನ್ನು ತಾವು ಕೇಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಹೋಗಲಿ ಬಿಡಿ, ಅಲ್ಲ ಎನ್ನುವುದಾದರೆ ಬೇಡ ಬಿಡಿ. ಹಿರಿಯರಲ್ಲ, ಗೌರವಾನ್ವಿತರಲ್ಲ ಎಂದು ಅವರೇ ಹೇಳುವುದಾದರೆ ನಾವೇನು ಮಾಡೋಣ. ಅವರು ಬಹಳ ಗೌರವದಿಂದ ಹೇಳುತ್ತಿದ್ದಾರೆ. ಅದನ್ನೇಕೆ ತಾವು ಬೇಡವೆನ್ನುತ್ತೀರಿ?

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಅವರು ಬೇಡವೆನ್ನುವುದಾದರೆ ಆ ಎರಡು ಪದಗಳನ್ನು ವಾಪಸ್ ತೆಗೆದುಕೊಳ್ಳೋಣ ಬಿಡಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಅವರು ಗೌರವದಿಂದ ಆ ಮಾತುಗಳನ್ನು ಹೇಳುತ್ತಿರುವಾಗ ತಾವೇಕೆ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೀರಿ?

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಲಕ್ಷ್ಮೀನಾರಾಯಣ ಅವರೇ, ಸಮಯ ಆಯಿತು, ತಾವು ಇನ್ನು ಒಂದು ನಿಮಿಷದಲ್ಲಿ ತಮ್ಮ ಮಾತುಗಳನ್ನು ಪೂರ್ಣಗೊಳಿಸಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ಇರತಕ್ಕಂತಹ ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಮಾತನಾಡಿದ ರೀತಿಯಿಂದ ಅವರ ಮನಸ್ಸಿಗೆ ಆ ರೀತಿ ನೋವಾಗಿದ್ದರೆ ಅದನ್ನು ಕಡತದಿಂದ ತೆಗೆಸಿ. ನಾನೇನೂ ಅದನ್ನು ಪ್ರಶ್ನೆ ಮಾಡುವುದಿಲ್ಲ, ಆ ಬಗ್ಗೆ ಮತ್ತೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ದಿನಪತ್ರಿಕೆಯಲ್ಲಿ ವರದಿಯಾಗಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡುವುದು ಬೇಡ ಎನ್ನುವುದಾದರೆ ನಾನು ಮಾತನಾಡುವುದಿಲ್ಲ. ನಾವೆಲ್ಲರೂ ಸಹ ಜನಸೇವೆಗೆ ಬಂದಿರುವಂತಹ ಸೇವಕರು ಎನ್ನುವಂತಹ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಎಲ್ಲರೂ ಸಹ ಸೇವೆ ಮಾಡಬೇಕು, ಆದರೆ ಜೊತೆಯಲ್ಲಿದ್ದಂತಹ ಸಂದರ್ಭದಲ್ಲಿ ನಾವೇನೂ ಮಾತನಾಡುವುದಿಲ್ಲ, ಹೊರಗಡೆ ಹೋದಂತಹ ಸಂದರ್ಭದಲ್ಲಿ ನಾವು ಮಾತನಾಡುತ್ತೇವೆ, ಟೀಕೆ ಮಾಡುತ್ತೇವೆ ಎನ್ನುವುದಾದರೆ ವಿರೋಧ ಪಕ್ಷದವರಿಗೆ ಕೇವಲ ಟೀಕೆ ಮಾಡುವುದೊಂದೇ ಗುರಿಯೇ? ಹಾಗಾದರೆ ನಮ್ಮ ಸರ್ಕಾರ ಯಾವುದೇ ಒಳ್ಳೆಯ ಕೆಲಸವನ್ನು ಮಾಡಿಯೇ ಇಲ್ಲವೆ? ಒಂದೂವರೆ ಲಕ್ಷ ಕೋಟಿ ರೂಪಾಯಿಗಳ ಮೊತ್ತದ ಆಯವ್ಯಯವನ್ನು ಕೊಟ್ಟಿರುವಂತಹ ಸರ್ಕಾರಕ್ಕೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದರೆ ತಪ್ಪೇನಾಗುತ್ತದೆ? ಈ ರೀತಿಯಾದಂತಹ ವಿಚಾರಗಳನ್ನು ಮಂಡನೆ ಮಾಡಿ, ಚುನಾವಣೆ ಬಂದಂತಹ ಸಂದರ್ಭದಲ್ಲಿ ನಾವು ಚುನಾವಣೆಗೆ ಮಾಡೋಣ. ಅದು ಬೇರೆ ಪ್ರಶ್ನೆ. ಆದರೆ ಆಡಳಿತ ಮಾಡುವಂತಹ ಒಂದು ಸಂದರ್ಭದಲ್ಲಿ ಸಮರ್ಪಕವಾಗಿ ಸರ್ಕಾರ ಕೊಟ್ಟಂತಹ ವಿಚಾರಗಳನ್ನು ತೆಗೆದುಕೊಂಡು ನಾವು ಅದನ್ನು ಕೂಡ ಶ್ಲಾಘನೆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿರುತ್ತದೆ. ಹಾಗಾದರೆ ನಾವು ಶಾಸಕರುಗಳು ಮುಖ್ಯಮಂತ್ರಿಗಳ ಬಳಿ ಕೆಲಸ ಮಾಡಿಸಿಕೊಳ್ಳುವುದೇ ಇಲ್ಲವೆ? ಇದನ್ನು ನಾವು ಹೇಳಬೇಕಾಗುತ್ತದೆಯಲ್ಲವೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಲಕ್ಷ್ಮೀನಾರಾಯಣ ಅವರೇ, ನಿಮ್ಮ ಸಮಯ ಮುಗಿದಿದೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ಗೌರವಾನ್ವಿತವಾಗಿ ಆಡಳಿತ ನಡೆಸುತ್ತಿರುವಂತಹ ಸಂದರ್ಭದಲ್ಲಿ ಇನ್ನೂ ಮುಂದಿನ 2 ವರ್ಷಗಳಲ್ಲಿ ಜನತೆಗೆ ಅತ್ಯುತ್ತಮವಾಗಿರುವಂತಹ ಸೇವೆಯನ್ನು ಕೊಡುವುದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ. ಅದಕ್ಕಾಗಿ ಸನ್ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂತಹ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಳೆದ 3 ವರ್ಷಗಳಲ್ಲಿ ನನಗೆ ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿರಲಿಲ್ಲ. ಆದರೂ ಸಹ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಸಂಕ್ಷಿಪ್ತವಾಗಿ ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸೀಮಿತವಾಗಿ ಮಾತನಾಡುತ್ತೇನೆ. ಈ ಸದನದಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಚರ್ಚೆಯಾಗಿದೆ, ಎಸ್.ಸಿ./ಎಸ್.ಟಿ. ಒಂದು ಜಾತಿ ಎನ್ನುವಂತಹ ಭಾವನೆ ಸದಸ್ಯರಲ್ಲಿ ಬಂದಿದ್ದು, ಅದಕ್ಕೆ ಒಂದು ಸ್ಪಷ್ಟೀಕರಣವನ್ನು ನೀಡಲು ನಾನು ಬಯಸುತ್ತಿದ್ದೇನೆ. SC/ST is not a caste. It is a schedule of castes. ಎಲ್ಲೂ ಕೂಡ 'caste' ಎಂದು ಇಲ್ಲ, ಅನೇಕ ಜಾತಿಗಳ ಒಂದು schedule ಗೆ Scheduled Castes/Scheduled Tribes ಎಂದು ಹೇಳುತ್ತೇವೆ. ಆದ್ದರಿಂದ ಯಾವುದೋ ಒಂದು ಜಾತಿಗೆ ಸೌಲಭ್ಯವನ್ನು ಕೊಡುತ್ತಿದ್ದಾರೆ, ಆ ರೀತಿಯ ಕಲ್ಪನೆ ಸಲ್ಲುವಂಥದ್ದಲ್ಲ. Thomas Vs. State of Kerala ಪ್ರಕರಣದಲ್ಲಿ 1952ರಲ್ಲಿಯೇ ಈ ಬಗ್ಗೆ ನ್ಯಾ॥ಕೃಷ್ಣ ಅಯ್ಯರ್‌ರವರು ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಎಸ್.ಸಿ./ಎಸ್.ಟಿ.ಯನ್ನು ಯಾವತ್ತೂ 'caste' ಎಂದು ಪರಿಗಣಿಸಬೇಡಿ, ಇದು schedule ನಲ್ಲಿ ಇರುವಂತಹ ನೂರಾರು castes ಗಳು ಎಂಬುದನ್ನು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದ್ದರಿಂದ ದಯಮಾಡಿ ಯಾವುದೋ ಒಂದು caste ಗೆ ಕೊಡುತ್ತಿದ್ದೇವೆ ಎನ್ನುವಂತಹ ಭಾವನೆ ತಪ್ಪು ಎನ್ನುವಂಥದ್ದನ್ನು ನಾನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಮೀಸಲಾತಿ ಕೂಡ ಅಷ್ಟೇ, ಅದು ಯಾರೋ ಕೊಟ್ಟ ಭಿಕ್ಷೆ ಅಲ್ಲ. ಅನೇಕ ವರ್ಷಗಳಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದಂತಹವರನ್ನು, ಒಂದು ವರ್ಗ ಮುಂದೆ ಹೋಗಿಬಿಟ್ಟಿದೆ; ಇನ್ನೊಂದು ವರ್ಗ ಕುಂಟುತ್ತಾ ಸಾಗುತ್ತಿದೆ. ಆ ರೀತಿ ಕುಂಟುತ್ತಾ ಬರುವಂಥವರಿಗೆ ಕೂಡ ಸಮಾನವಾಗಿ ಓಡುವಂತಹ ಒಂದು ವೇಗವನ್ನು ಕೊಡತಕ್ಕಂತಹ ಒಂದು ಅಸ್ತ್ರ ಈ ಮೀಸಲಾತಿ ಆಗಿದೆ. ಆದ್ದರಿಂದ ಇದು ಯಾರೋ ಕೊಡುವಂತಹ ಒಂದು ಭಿಕ್ಷೆ ಅಲ್ಲ, ಇದು ಸಂವಿಧಾನಾತ್ಮಕ ಹಕ್ಕು. ಅದನ್ನು ಯಾವ ಕಾರಣಕ್ಕೆ ಕೊಟ್ಟಿದೆ ಎಂಬುದರ ಬಗ್ಗೆ ಸಂವಿಧಾನ ಸಭೆಯಲ್ಲಿ ನೂರಾರು ದಿವಸಗಳ ಕಾಲ ಚರ್ಚೆಯಾಗಿದೆ. ಸಂವಿಧಾನ ಅದನ್ನು ಒಪ್ಪಿಕೊಂಡಿದೆ, ಇದು ಒಂದು ರೀತಿಯಾಗಿ ಆ ವರ್ಗಕ್ಕೆ ಕೊಟ್ಟಂತಹ ಒಂದು ಹಕ್ಕು ಎನ್ನುವಂತಹ ಭಾವನೆ ನಮಗೆಲ್ಲರಿಗೂ ಬರಬೇಕು. ಸಂವಿಧಾನದ ಮೂಲ to ensure equality. ಎಲ್ಲರೂ ಸಮಾನವಾಗಿ ಹೋಗಬೇಕು, 'Fraternity' - ಭ್ರಾತೃತ್ವದ ಭಾವನೆ ನಮ್ಮಲ್ಲಿ ಬರಬೇಕು, 'Justice' - ಎಲ್ಲರಿಗೂ ನ್ಯಾಯ ಸಿಗಬೇಕು ಎನ್ನುವುದಾಗಿದೆ.

ಇತ್ತೀಚೆಗೆ ಸಾಮಾಜಿಕ ನ್ಯಾಯ, ಸಮಾಜ–ಸಮಾಜಗಳ ಬಗ್ಗೆ ಒಂದು ಅಂತರ ಇದೆ. ಸರ್ವರಿಗೂ ಸಮಪಾಲು ಕೊಡಬೇಕು, ಸರ್ವರೂ ಸಮವಾಗಿ ಬಾಳಬೇಕು ಎನ್ನುವಂತಹ ಒಂದು ಕಲ್ಪನೆಯನ್ನಿಟ್ಟುಕೊಂಡು ಈ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳು ಬಂದಿವೆ. Socialistic pattern of society ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ. Mixed economy ಯನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಎರಡೂ ಯೋಜನೆಗಳ ಮುಖಾಂತರ ಈ ಸಮಾಜವನ್ನು ಮೇಲೆತ್ತುವಂತಹ ಕೆಲಸ ಆಗಬೇಕು ಎನ್ನುವಂಥದ್ದೇ ನಮ್ಮ ಸಂವಿಧಾನದ ಆಶಯವಾಗಿದೆ.

ನಾವು ಒಮ್ಮೆ ಪ್ರಶ್ನೆ ಮಾಡಿಕೊಳ್ಳೋಣ, ಸಂವಿಧಾನದ 'preamble' ನಲ್ಲಿ ಪ್ರಾರಂಭವಾಗುವುದೇ ಸಮಾನತೆ, ನಾವಿನ್ನೂ ಸಮಾನತೆ ಕಂಡಿದ್ದೇವೆಯೇ? ಭ್ರಾತೃತ್ವ, ಬಹುಶಃ ಎಲ್ಲಿಯಾದರೂ ಒಂದು ತೊಟ್ಟು ರಕ್ತ ತೆಗೆದು ಪರೀಕ್ಷಿಸಿದರೆ ಅದು ಕೂಡ ಒಂದು ಜಾತಿಯ ಹೆಸರನ್ನು ಹೇಳುತ್ತದೆ. ಜಾತಿಯ ಕಣಗಳೇ ಮೊದಲು ಬರುತ್ತವೆ! ಆಮೇಲೆ ಬಿಳಿಯ ರಕ್ತ ಕಣ ಮತ್ತು ಕೆಂಪು ರಕ್ತ ಕಣಗಳು ಕಾಣಸಿಗುತ್ತವೆ. ಇನ್ನೂ ಆ ಸಮಾನತೆಯ ಸಮಾಜ ರಕ್ತಕ್ಕೂ ಬರಲಿಲ್ಲ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

(ಮುಂದುವರೆದಿದೆ...

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ವೀರಯ್ಯ(ಮುಂದು):-**

ಇನ್ನೂ ಸಮಾನತೆಯ ಸಮಾಜ ರಕ್ತಕ್ಕೂ ಬರಲಿಲ್ಲ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಈ ರೀತಿ ಇರುವಾಗ ಎಲ್ಲೋ ಒಂದು ಕಡೆ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಳ್ಳದೆ ಮೀಸಲಾತಿಯ ವಿರೋಧಿ ಭಾವನೆಯನ್ನು ವ್ಯಕ್ತ ಪಡಿಸುವಂಥದ್ದು ಅಥವಾ ಆ ವರ್ಗಗಳಿಗೆ ಕೊಡುವಂತಹ ಸೌಲಭ್ಯಗಳನ್ನು ಹದ್ದಿನ ಕಣ್ಣಿನಿಂದ ನೋಡುವಂಥದ್ದು, ಅಸೂಯೆ ಪಡುವಂಥದ್ದು, ಹೊಟ್ಟೆಕಿಚ್ಚು ಪಡುವಂಥದ್ದು ಸಾಧುವಲ್ಲವಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಸವಣ್ಣನವರು ಹೇಳಿದ್ದು ಸಹ ಇದೇ ಮಾತನ್ನೆ. ಅದೇ ರೀತಿ ಡಾ||ಅಂಬೇಡ್ಕರ್‌ರವರು ಹೇಳಿರುವಂತಹ ಮಾತು ಸಹ ಇದನ್ನೆ. ನಾವು ಕೂಡ ಕರ್ನಾಟಕದಲ್ಲಿ ಅನೇಕ ಸಾಮಾಜಿಕ ಚಳುವಳಿಯನ್ನು ಕಂಡಿದ್ದೇವೆ. ದೇವರಾಜ್ ಅರಸ್‌ರವರು ಮೊಟ್ಟಮೊದಲ ಬಾರಿಗೆ ಹಿಂದುಳಿದ ವರ್ಗಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡುವ ಮುಖಾಂತರ ಅವರನ್ನೂ ಸಹ ಮೇಲ್ಪಂಕ್ತಿಗೆ ತರುವಂತಹ ಕೆಲಸವನ್ನು ಮಾಡಿದರು. ಮಾನ್ಯ ಬಸವಲಿಂಗಪ್ಪನವರು 'ಮಲ' ಎತ್ತುವಂತಹ ಪದ್ಧತಿಯನ್ನು ನಿಲ್ಲಿಸುವಂತಹ ಕ್ರಾಂತಿಕಾರಕ ಕಾಯಿದೆಯನ್ನು ತಂದರೂ ಸಹ ಇವತ್ತಿನವರೆಗೂ ಈ ಕೆಲಸ ನಡೆಯುತ್ತಿದೆ. ಆದರೂ ಸಹ ಆ ಒಂದು ದಿಟ್ಟವಾದಂತಹ ಹೆಜ್ಜೆಯನ್ನು ಇಟ್ಟರು. ಈ ರೀತಿ ಅನೇಕ ಸಮಾಜ ಸುಧಾರಣೆಯ ಕಾನೂನುಗಳಾಗಿದೆ. 2013ರಲ್ಲಿ ನಮ್ಮ ಸರ್ಕಾರ ಕಾಯಿದೆಯನ್ನು ರೂಪಿಸಿತು. 2013ರ ನವೆಂಬರ್ ತಿಂಗಳಿನಲ್ಲಿ ನಡೆದಂತಹ ಬೆಳಗಾಂ ಅಧಿವೇಶನದಲ್ಲಿ ಕಾಂಗ್ರೆಸ್ ಸರ್ಕಾರ ಕಾಯಿದೆಯನ್ನು ಜಾರಿಗೆ ತಂದಿತು ಕಾಯಿದೆ ಬಹಳ ದೊಡ್ಡದಾಗಿದೆ. ಬಹುಶಃ ಈ ಕಾಯಿದೆಯನ್ನು ಸರಿಯಾಗಿ ಜಾರಿ ಮಾಡದೆ ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವೆ ಇಲ್ಲ. ಈ ಸಂದರ್ಭದಲ್ಲಿ ಡಾ||ಮನ್‌ಮೋಹನ್ ಸಿಂಗ್ ಅವರನ್ನು ಸಹ ಅಭಿನಂದಿಸುತ್ತೇನೆ. ಅವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದಾಗ ಒಂದು ಕಾನೂನನ್ನು ಜಾರಿಗೆ ತಂದರು. SCP ಮತ್ತು TSP ಯೋಜನೆಗೆ ಮೀಸಲಿಟ್ಟಂತಹ ಹಣ ಜನಸಂಖ್ಯೆ ಆಧಾರದ ಮೇಲೆ ಇರಬೇಕು, ಮೀಸಲಿಟ್ಟ ಹಣವನ್ನು ಆಯಾಯಾ ವರ್ಷ ಖರ್ಚು ಮಾಡಬೇಕು, ಹಣ unspent ಆಗಬಾರದು, ಖರ್ಚು ಮಾಡದೆ ಹಣ ಬಾಕಿ ಉಳಿಯಬಾರದು, ಹಣ carry forward ಆಗಬಾರದು. ಅದೇ ವರ್ಷ ಖರ್ಚಾಗಬೇಕು. ಹಣ ಬೇರೆ ಬಾಬ್ತಿಗೆ ಖರ್ಚಾಗಬಾರದು. ಇದು ಕಟ್ಟುನಿಟ್ಟಾಗಿ Planning Commission ತಂದಂತಹ ಆಜ್ಞೆ. ಅದಾದ ನಂತರ ಕರ್ನಾಟಕದಲ್ಲಿ ಈ ಕಾನೂನು ಜಾರಿಗೆ ಬಂತು. ನಿಮಗೆಲ್ಲರಿಗೂ ತಿಳಿದಿರುವಂತೆ ಯಾವುದೇ ಕಾಯಿದೆ ರೂಲ್ಸ್ ಆಗದೆ ಇದ್ದರೆ ಅದು ಜಾರಿ ಆಗುವುದಿಲ್ಲ. ಆದಕಾರಣ ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುವುದೇನೆಂದರೆ,

ಸರ್ಕಾರ ಯಾವ ಉದ್ದೇಶಕ್ಕೆ ಕಾಯಿದೆಯನ್ನು ತಂದಿತು? ಈ ಎರಡು ವರ್ಷ ಕಾಯಿದೆಯನ್ನು ತರುವುದಕ್ಕೆ ಏಕೆ ವಿಳಂಬ ಮಾಡಿತು? ಒಂದು ಇಲಾಖೆ 3 ಸಾವಿರ ಕೋಟಿ ಹಣವನ್ನು ಹಂಚಿಕೆ ಮಾಡಿದೆ, ಆದರೆ ಆ ಹಣವನ್ನು ಖರ್ಚು ಮಾಡಿಲ್ಲ. ಈ ರೀತಿ ಆದರೆ ಈ ಕಾಯಿದೆ ಬಂದು ಏನು ಪ್ರಯೋಜನ? ಖರ್ಚು ಮಾಡದೆ ಇರುವಂಥವರಿಗೆ ಸರ್ಕಾರ ಶಿಕ್ಷೆ ಕೊಡುವ provision ಇದೂವರೆಗೂ ತಂದಿಲ್ಲ. ಆದಕಾರಣ ನಾನು ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ವಿಳಂಬ ನೀತಿ ಏನು ತೋರಿಸುತ್ತದೆ ಎಂದರೆ ಎಲ್ಲೋ ಒಂದು ಕಡೆ ಈ ವರ್ಗದ ಅಭಿವೃದ್ಧಿಗೆ ಮೂಗಿಗೆ ತುಪ್ಪ ಹೊರೆಸುವಂಥ ಕೆಲಸ ಮಾಡುತ್ತಿದೆ. ನಿಜವಾಗಿಯು ನಿಮಗೆ ಇಚ್ಛಾಶಕ್ತಿ ಇದ್ದರೆ ಈ ಕಾಯಿದೆಗೆ ಕೂಡಲೆ ಕಾನೂನನ್ನು ತನ್ನಿ. ಇದು ನನ್ನ ಮೊದಲ ಆಗ್ರಹ.

2014–15ನೇ ಸಾಲಿನಲ್ಲಿ 3077 ಕೋಟಿ ರೂಪಾಯಿ ಖರ್ಚಾಗದೆ ಉಳಿದಿದೆ. 2015–16ನೇ ಸಾಲಿನಲ್ಲಿ ನವೆಂಬರ್ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಿವ್ಯೂ ಮಾಡುವುದಕ್ಕೋಸ್ಕರ ಎಲ್ಲಾ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಒಂದು ವಿಶೇಷ ಸಭೆಯನ್ನು ಕರೆದರು. ಈ ಕಮಿಟಿಯಲ್ಲಿ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು 30 ಪರ್ಸೆಂಟ್ ಅಷ್ಟು ಹಣವನ್ನೂ ಸಹ ಖರ್ಚು ಮಾಡಿಲ್ಲ, ಇನ್ನುಳಿದ ಅವಧಿಯಲ್ಲಿ ಶೇಕಡ 70ರಷ್ಟು ಹಣ ಏನು ಉಳಿದಿದೆ ಆ ಹಣವನ್ನು ಖರ್ಚು ಮಾಡುವುದು ಯಾವಾಗ ಎನ್ನುವುದನ್ನು ಸಹ ಕೇಳಿದ್ದಾರೆ. ನಾನು ನಿನ್ನೆ ದಿವಸ ನಾನು ಒಂದು ವರದಿಯನ್ನು ತರಿಸಿದೆ, ಆ ವರದಿಯಲ್ಲಿ ಶೇಕಡ 49ರಷ್ಟು ಮಾತ್ರ ಹಣವನ್ನು ಖರ್ಚು ಮಾಡಲಾಗಿದೆ ಎಂದು ಇದೆ. ಹಾಗಾದರೆ ಇನ್ನುಳಿದಿರುವಂತಹ ಹಣವನ್ನು ಕೇವಲ 23 ದಿವಸಗಳಲ್ಲಿ ನೀವು ಹೇಗೆ ಖರ್ಚು ಮಾಡುತ್ತೀರಾ? ಹಾಗಾದರೆ ಈ ಕಾನೂನಾದರು ಏತಕ್ಕೆ ತಂದಿರಿ?

**ಶ್ರೀ ಬಸವರಾಜ ಹೊರಟ್ಟಿ:–** 31ನೇ ತಾರೀಖಿನೊಳಗೆ ಎಲ್ಲಾ ಹಣವನ್ನು ಖರ್ಚು ಮಾಡಿ ಮುಗಿಸುತ್ತಾರೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ಅಂಕಿ–ಅಂಶವನ್ನು ಕೊಡುತ್ತೇನೆ. ಪರಿಶಿಷ್ಟ ವರ್ಗಗಳಿಗೆ 4,578 ಕೋಟಿ ರೂಪಾಯಿಗಳನ್ನು ಮೀಸಲು ಇಡುತ್ತೀರಿ, ಆದರೆ ಬಿಡುಗಡೆ ಆಗಿರುವುದು 3,423 ಕೋಟಿ ರೂಪಾಯಿ. ಖರ್ಚಾಗಿರುವುದು 2,756 ಕೋಟಿ ರೂಪಾಯಿ. ಇನ್ನು ಉಳಿದಿರುವಂತಹ 2,000 ಕೋಟಿ ರೂಪಾಯಿಗಳನ್ನು 23 ದಿವಸದಲ್ಲಿ ಖರ್ಚು ಮಾಡಬೇಕು.

ಇನ್ನು SCP ಗೆ 11,773 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೀರಿ, ಬಿಡುಗಡೆ ಆಗಿರುವುದು 8,696 ಕೋಟಿ ರೂಪಾಯಿಗಳು, ಅದರಲ್ಲಿ ಖರ್ಚಾಗಿರುವುದು 5,872 ಕೋಟಿ ರೂಪಾಯಿಗಳು ಮಾತ್ರ. 11 ಸಾವಿರ ಎಲ್ಲಿ, 5 ಸಾವಿರ ಎಲ್ಲಿ? ಈ ರೀತಿ ನೀವು ಅಲೋಕೇಶನ್ ಬೇರೆ, ರಿಲೀಸ್ ಕಡಿಮೆ, ಖರ್ಚು ಮಾಡುವುದು ಕಡಿಮೆ ಆದರೆ ಕಾಯಿದೆಯನ್ನು ಏಕೆ ತಂದಿರಿ? ಇಷ್ಟು ಹಣವನ್ನು ಏಕೆ ಮೀಸಲು ಇಟ್ಟಿದ್ದೀರಿ? ಈ ವರ್ಗಕ್ಕೆ ಮೋಸ ಮಾಡುವುದಕ್ಕಾ? ಎಲ್ಲರೂ ಪತ್ರಿಕೆಯನ್ನು ನೋಡಿ ತೃಪ್ತಿ ಪಟ್ಟುಕೊಳ್ಳಬೇಕಷ್ಟೆ. ಸರ್ಕಾರ ಈ ವರ್ಗಕ್ಕೆ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದೆ ಎಂದು ತಿಳಿದುಕೊಳ್ಳಬೇಕು. ಆದರೆ ಬಜೆಟ್‌ನ ನಾಲ್ಕನೇ ಒಂದು ಭಾಗದಷ್ಟು ಮಾತ್ರ ಈ ವರ್ಗಕ್ಕೆ ಕೊಡಲಾಗಿದೆ. ಸ್ವಾಮಿ ನಾನು ಸತ್ಯ ಹೇಳುತ್ತೇನೆ. ನಾನು ಹೋರಾಟದಿಂದ ಬಂದಂಥವನು. ಈ ಹಣವನ್ನು ಕಾಲಕಾಲಕ್ಕೆ ಖರ್ಚು ಮಾಡಿದ್ದರೆ ಇವತ್ತು ಈ ವರ್ಗ ನಿಮ್ಮ ಮುಂದೆ ನಿಂತು ನಮ್ಮ ಕಾರ್ಯಕ್ರಮಗಳಿಗೆ ಹಣ ಕೊಡಿ ಎಂದು ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, 8 ಸಾವಿರ ಕೋಟಿ ರೂಪಾಯಿಯಿಂದ ಸುಮಾರು 16 ಸಾವಿರ ಕೋಟಿ ರೂಪಾಯಿಗಳನ್ನು SCP/TSP ನಲ್ಲಿ ಇಟ್ಟಿದ್ದೇವೆ. ಖರ್ಚು ಕಡಿಮೆ ಆಗಿರಬಹುದು, ಕಡಿಮೆ ಆಗಿದೆ ಎಂದರೆ ಲ್ಯಾಪ್ಸ್ ಆಗಿದೆ ಎಂದು ಅರ್ಥವಲ್ಲ. It will be continued. ಹಣ ಖರ್ಚಾಗದೆ ಉಳಿದರೂ ಸಹ ಅದು ಮುಂದಿನ ವರ್ಷಕ್ಕೆ carry forward ಆಗುತ್ತದೆ. ಆ ಹಣವನ್ನು ಇದೇ ವರ್ಗಕ್ಕೆ ಖರ್ಚು ಮಾಡಬೇಕು. ಅಂತಹ ಒಂದು ಶಾಸನ ಇಡೀ ದೇಶದಲ್ಲಿ ಜಾರಿಗೆ ತಂದಿರುವಂತಹ ರಾಜ್ಯವೆಂದರೆ ನಮ್ಮ ರಾಜ್ಯವೇ ಮೊದಲ ರಾಜ್ಯ. ಈ ಜನಾಂಗಕ್ಕೆ ಮೀಸಲಿಟ್ಟಿರುವಂತಹ ಹಣ ಖರ್ಚು ಮಾಡಲಿಲ್ಲವೆಂದರೆ ಅದರ ಮೇಲೆ ಒಂದು ಶಾಸನ ತಂದು ಕಟ್ಟುನಿಟ್ಟಿನ ಒಂದು ಆಜ್ಞೆ ಮಾಡಲಾಗಿದೆ. ಈ ರೀತಿ ಮಾಡಿರುವುದು ಈ ರಾಜ್ಯದ ಇತಿಹಾಸದಲ್ಲಿಯೇ ಇದು ಮೊದಲು. ಮಾನ್ಯ ಸದಸ್ಯರು ಹಣ ಖರ್ಚಾಗಬೇಕೆಂದು ಹೇಳುತ್ತಿದ್ದಾರೆ, ಈ ಮಾತನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಹಣ ಪೂರ್ಣ ಅಲೋಕೇಶನ್ ಆಗಿದ್ದು ಬಿಡುಗಡೆ ಆಗಬೇಕು, ಬಿಡುಗಡೆ ಆದಂತಹ ಹಣ ಖರ್ಚಾಗಬೇಕು. There is no second opinion about it. ಆದರೆ ಉಳಿದಂತಹ ಹಣ ಏನಿದೆ, ಅದು carry forward ಆಗುತ್ತದೆ. ಆ ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಸರ್ಕಾರ ಬಿಡುಗಡೆ ಮಾಡುವುದು ಕಡಿಮೆ, ಖರ್ಚು ಮಾಡುವುದು ಕಡಿಮೆ ಎಂದರೆ ಈ ಕಾಯಿದೆಯನ್ನು ನಿಮ್ಮ ಮೇಲೆಯೇ ಪ್ರಯೋಗಿಸಬೇಕು. ನೀವು ಜೈಲಿಗೆ ಹೋಗಬೇಕಾಗುತ್ತದೆ. ಹಾಗಾದರೆ ಈ ಕಾನೂನನ್ನು ಏಕೆ ತಂದಿರಿ? ಈ ಕಾನೂನಿನಲ್ಲಿ ಏನನ್ನು ಹೇಳಿದ್ದೀರಿ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ. ಹಣವನ್ನು ಯಾವ ರೀತಿ ಖರ್ಚು ಮಾಡುತ್ತಾರೆ ಆ ರೀತಿ ಹಣವನ್ನು ಬಿಡುಗಡೆ ಮಾಡುತ್ತೇವೆ. ನೀವೆ ಹೇಳಿದ್ದೀರಲ್ಲ, ಬಿಡುಗಡೆ ಆದಂತಹ ಹಣಕ್ಕಿಂತ ಕಡಿಮೆ ಖರ್ಚು ಮಾಡುತ್ತಾರೆಂದು. As and when department spends money, money will be released.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಈ ಕಾಯಿದೆಯನ್ನು ಏಕೆ ತರಲಾಯಿತು ಎಂದರೆ, ಆ ಜನಾಂಗಕ್ಕೆ ಇಂತಿಷ್ಟು ಹಣವನ್ನು ಖರ್ಚು ಮಾಡಲೇ ಬೇಕು ಎನ್ನುವುದು ಸಂವಿಧಾನಾತ್ಮಕ ಬದ್ಧತೆ ಇದೆ. ನೀವು ಖರ್ಚು ಮಾಡದಿದ್ದರೆ, ಆ ಹಣ ಮುಂದಿನ ವರ್ಷ ಖರ್ಚಾಗುತ್ತದೆ ಎನ್ನುವುದಾದರೆ ಆ ಕಾಯಿದೆ ಏಕೆ ಬೇಕು? ಈ ವರ್ಷ ಏಕೆ ಹಣ ಖರ್ಚು ಮಾಡಿಲ್ಲ? ಈ ವರ್ಷ ಏಕೆ ಹಣ ಬಿಡುಗಡೆ ಮಾಡಿಲ್ಲ? ಹಣ ಬಿಡುಗಡೆ ಮಾಡಿದ್ದರೂ ಸಹ ಏಕೆ ಖರ್ಚು ಮಾಡಿಲ್ಲ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೆಲವೊಂದು ಅನಿವಾರ್ಯ ಕಾರಣಗಳಿಂದ ಖರ್ಚು ಮಾಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿ ಉದ್ಭವಿಸಿರುವಂತಹ ಸಂದರ್ಭದಲ್ಲಿ ಮೀಸಲಿಟ್ಟಿರುವಂತಹ ಹಣದಲ್ಲಿ ಒಂದು ಪೈಸೆ ಕೂಡ ಲ್ಯಾಪ್ಸ್ ಆಗುವುದಿಲ್ಲ. Every pie will be utilized for the upliftment of downtrodden people. We have got that commitment. ನೀವು 8 ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದಿರಿ, ನಾವು ಸುಮಾರು 16 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

(ಗೊಂದಲ)

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ನಾನು ಕಂಪ್ಲೀಟ್ ಮಾಡುತ್ತೇನೆ. ಅನೇಕ ಸಲ ನಾನು ಕಂಪ್ಲೀಟ್ ಮಾಡುವುದಕ್ಕೆ ಬಿಡುವುದೇ ಇಲ್ಲ. ಅನೇಕ ಸಲ ನಾನು ಅನುಭವಿಸಿರುವಂತಹ ನೋವು ಇದು. ದಯಮಾಡಿ ನಾನು ಕಂಪ್ಲೀಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಕೆ.ಬಿ.ಶಾಣಪ್ಪ:-** ನೀವು ಬಜೆಟ್‌ನಲ್ಲಿ ಇನ್ನೂ ಹೆಚ್ಚಿಗೆ ಹಣ ಸೇರಿಸಬೇಕಾಗುತ್ತದೆ. ಮಾನ್ಯ ಸಭಾ ನಾಯಕರೆ, ಕೊಟ್ಟಿರುವಂತಹ ಹಣವನ್ನೇ ನೀವು ಖರ್ಚು ಮಾಡಿಲ್ಲವೆಂದರೆ ಇನ್ನೇನು ಮಾಡುತ್ತೀರಿ? See it becomes Rs.2500 crores.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 2016-2017ನೇ ಸಾಲಿನ ಬಜೆಟ್‌ನಲ್ಲಿ ಎಷ್ಟು ಹಣ ಇಡಬೇಕು, ಇನ್ನು Plan Outlay ಎಷ್ಟು ಹಣವನ್ನು ಹೆಚ್ಚು ಮಾಡಬೇಕಾಗಿದೆ ಎಂದು ನೋಡಿ ಅದಕ್ಕೆ ಅನುಗುಣವಾಗಿ ಇನ್ನು ಹೆಚ್ಚಿನ ಹಣವನ್ನು ಇಡುತ್ತೇವೆ. We will see that every pie will be utilized for the upliftment of downtrodden people of the State. Government is committed for the upliftment of downtrodden people of the State.

**Sri K.B. SHANAPPA:** The existing amount has not been spent so far. Therefore, it is a problem for you.

**Sri S.R. PATIL:** We will spend every pie. We have brought a legislation.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾ ನಾಯಕರೇ, ಇಂತಹ ಹಾರಿಕೆಯ ಉತ್ತರ ಬೇಡ. 2014-15ನೇ ಸಾಲಿನಲ್ಲಿ 1,077 ಕೋಟಿ ರೂಪಾಯಿ ಖರ್ಚು ಮಾಡಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಹಾರಿಕೆಯ ಉತ್ತರವಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. 2014-15ನೇ ಸಾಲಿನಲ್ಲಿ 1,077 ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಿಲ್ಲ. 2015-16ನೇ ಸಾಲಿನ ಬಜೆಟ್‌ನಲ್ಲಿ ಇಷ್ಟು ಖರ್ಚಾಗಿಲ್ಲ. ಈ ವರ್ಷಕ್ಕೆ ಇಷ್ಟು ಕೊಟ್ಟಿದ್ದೇವೆ. ಇವೆಲ್ಲವನ್ನೂ ಒಟ್ಟು ಸೇರಿಸಿ

ಖರ್ಚು ಮಾಡುತ್ತೇವೆ ಎಂಬ ಕಮಿಟ್‌ಮೆಂಟ್ ಏನಾದರು ಇದೆಯೇ ಸ್ವಾಮಿ? ಕಳೆದ ಸಾಲಿನಲ್ಲಿ **3077** ಕೋಟಿ ರೂಪಾಯಿ ಖರ್ಚು ಮಾಡಿಲ್ಲ. ನೀವು ಖರ್ಚು ಮಾಡದೆ ಇರುವಂತಹ ಹಣವನ್ನು ಮುಂದಿನ ಬಜೆಟ್‌ನಲ್ಲಿ ಬಾಕಿ ಇದ್ದಂತಹ ಹಣವನ್ನು ಸೇರಿಸಿ ಖರ್ಚು ಮಾಡುತ್ತೇವೆಂದು ಬಜೆಟ್‌ನಲ್ಲಿ ಸೇರಿಸಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

(ಮುಂದು)

Sri S.R. PATIL: O.K., we will give in reply. ಮಧ್ಯಾಹ್ನ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಂತಹ ಸಮಯದಲ್ಲಿ ಹೇಳುತ್ತಾರೆ. ನೀವು ಹೇಳಿದಂತಹ ಮಾತುಗಳನ್ನು ನೋಟ್ ಮಾಡಿಕೊಂಡಿದ್ದೇನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದಕ್ಕೆ ಉತ್ತರ ಕೊಡಿಸುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ:-** ಬಾಕಿ ಇರುವಂತಹ ಹಣ ಅದನ್ನು carry forward ಮಾಡುತ್ತೇವೆಂದು ಒಪ್ಪಿಕೊಂಡಮೇಲೆ ಆ ಅಮೌಂಟ್ ಸೇರಿಸಿ ....

**ಶ್ರೀ ಎಸ್.ಆರ್.ಪಾಟೀಲ್:-** ಅದನ್ನು ಮಾಡಲೇ ಬೇಕು. There is no alternative. Otherwise we have to...

**ಶ್ರೀ ಡಿ.ಎಸ್.ವೀರಯ್ಯ:-** ಹಾಗಲ್ಲ ಸರ್, ಅದನ್ನು ನೀವು ನಮೂದಿಸಿಲ್ಲ. 2014-15ನೇ ಸಾಲಿನದು 2015-16ನೇ ಸಾಲಿನಲ್ಲಿ ಸೇರಿಸಬೇಕು. ಏಕೆಂದರೆ, ಈ ಸಮಯದಲ್ಲಿ ನೀವೆ ತಾನೆ ಇದ್ದವರು.

**ಉಪ ಸಭಾಪತಿಯವರು:-** ಮಾನ್ಯ ವೀರಯ್ಯನವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತಾರೆಂದು ಮಾನ್ಯ ಸಭಾ ನಾಯಕರು ಹೇಳುತ್ತಿದ್ದಾರಲ್ಲ, ನಿಮ್ಮ ಸಮಯ ಮುಗಿದಿದೆ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಉತ್ತರ ಕೊಡುವುದಲ್ಲ. ಈ ಅಮೌಂಟನ್ನು ಬಜೆಟ್‌ನಲ್ಲಿ ಸೇರಿಸುತ್ತೀರಾ? ಸೇರಿಸಿ ಘೋಷಣೆ ಮಾಡುತ್ತೀರಾ? ಅದು ನನಗೆ ಮುಖ್ಯ. ಆಗ ನಿಮ್ಮ ಮಾತು, ನಿಮ್ಮ ನಡೆಯ ಬಗ್ಗೆ ನಂಬಿಕೆ ಬರುತ್ತದೆ. ಇಲ್ಲದಿದ್ದರೆ ಇಲ್ಲ. ಏಕೆಂದರೆ ಹಿಂದೆ ಆ ರೀತಿ ಮಾಡಿರುವುದಿಲ್ಲ. 16300 ಕೋಟಿ ರೂಪಾಯಿಗಳನ್ನು ನೀಡಲಾಗುವುದು. ಗ್ರಾಮೀಣಾಭಿವೃದ್ಧಿಗೆ 2170 ಕೋಟಿ, ಅವರ ಸಾಮಾನ್ಯ ಕಾರ್ಯಕ್ರಮಗಳನ್ನು ಹೊರತುಪಡಿಸಿ ಅವರು ಎಸ್‌ಸಿ/ಎಸ್‌ಟಿಗಳಿಗೆ ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ವಿಶೇಷ ಘಟಕ ಯೋಜನೆಯನ್ನು ನೀವು ಸಾಮಾನ್ಯ ಯೋಜನೆಗಳಿಗೆ ಖರ್ಚು ಮಾಡುವಿರಾ? 2170 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ, ಪಂಚಾಯತ್ ರಾಜ್ ರೂ.2308 ಕೋಟಿ, ಭಾರಿ ನೀರಾವರಿ ರೂ.2300 ಕೋಟಿ, ಕಾನೂನು ಸ್ಪಷ್ಟವಾಗಿದೆ, ಸಾಮಾನ್ಯ ಬಜೆಟ್ ಅನ್ನು ಹೊರತುಪಡಿಸಿ ಈ ಹಣವನ್ನು ಅವರಿಗೆ ನೀಡಬೇಕಾಗುತ್ತದೆ. ಅದನ್ನು ಬಿಟ್ಟು ಈ

ಹಣವನ್ನು ಅಣೆಕಟ್ಟು ಕಟ್ಟಲು ಮತ್ತು ಬಸ್‌ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಕಟ್ಟುವುದಕ್ಕೆ ಉಪಯೋಗ ಮಾಡಿಕೊಂಡರೆ ಹೇಗೆ ಸಾಧ್ಯವಾಗುತ್ತದೆ? ಈ 3 ಸೇರಿ, 8000 ಕೋಟಿ ರೂಪಾಯಿಗಳಾಗುತ್ತದೆ. ಸರ್ಕಾರ ನೀಡುವ ರೂ.16300 ಕೋಟಿ ದೊಡ್ಡ ಪ್ರಮಾಣದಂತೆ ಕಂಡರೂ ಸಹ ಸಾಮಾನ್ಯ ಯೋಜನೆಯಲ್ಲಿ ಖರ್ಚು ಮಾಡುವ ಈ 3 ಯೋಜನೆಗಳಿಗೆ 8000 ಕೋಟಿ ರೂಪಾಯಿಗಳು ಹೋಗುತ್ತದೆ. ಆಗ ರೂ. 8000 ಕೋಟಿಯಲ್ಲಿ ರೂ.3000 ಕೋಟಿ ಬಾಕಿಯಾಗುತ್ತದೆ. ಹಾಗದಲ್ಲಿ ಸರ್ಕಾರ ನಿಜವಾಗಿ ಖರ್ಚು ಮಾಡುವುದು ರೂ. 5000 ಕೋಟಿ ಮಾತ್ರ ಅದನ್ನು ಒಪ್ಪಿಕೊಳ್ಳಬೇಕು. ಇದು ಸಹ ಸಮಾಜ ಕಲ್ಯಾಣವನ್ನು ಹೊರತುಪಡಿಸಿ ನಾನು ಹೇಳುತ್ತಿರುವುದು. ಅವರಿಗೆ ಬೇರೆ ರೂ.4000 ಕೋಟಿ ಹೋಗುತ್ತದೆ. ಈ ಬಾರಿ, ಸಮಾಜ ಕಲ್ಯಾಣಕ್ಕೆ ನೀಡಿರುವ ಹಣ ಕೂಡ ಖರ್ಚಾಗಿಲ್ಲ. ದಯಮಾಡಿ ಯಾವ ಇಲಾಖೆಗೆ ಹಣ ನೀಡಿದರೆ ಅದು ನಿಜವಾಗಿ ಅದೇ ಉದ್ದೇಶಕ್ಕೆ ಖರ್ಚು ಮಾಡುತ್ತದೆ ಅಂತಹ ಇಲಾಖೆಗಳಿಗೆ ಹಣ ಕೊಡಿ, ಅದನ್ನು ಬಿಟ್ಟು ಗ್ರಾಮೀಣಾಭಿವೃದ್ಧಿಗೆ ಮೆಟ್ರೋಗೆ ಮತ್ತು ಯೋಜನಾ ಇಲಾಖೆಗಳಿಗೆ ನೀಡಿದರೆ ಕೊಟ್ಟಿದ್ದು ಕೊಟ್ಟ ಹಾಗೆ, ಖರ್ಚು ಮಾಡಿದ್ದು ಖರ್ಚು ಮಾಡಿದ ಹಾಗೆ ಇರುತ್ತದೆ. ಈ ಹಣವನ್ನು ಇತರೆ ಇಲಾಖೆಗಳಿಗೆ ವರ್ಗಾವಣೆ ಮಾಡುವ ಹಾಗಿಲ್ಲ. ಇತ್ತೀಚಿನ ಪ್ರವೃತ್ತಿ ಏನಾಗಿದೆ ಎಂದರೆ ಎಲ್ಲಿ ಹಣ ಇದೆ ಎಂದರೆ SCP/TSP ನಲ್ಲಿದೆ ಎಂದು ಹೇಳುತ್ತಾರೆ. ಅದನ್ನು ತೆಗೆದುಕೊಂಡು ಇತರೆ ಇಲಾಖೆಗಳಿಗೆ ನೀಡುವುದು. ಇಲ್ಲಿ diversion ಇಲ್ಲ. Carry forward ಗೂ ಸಹ ಅವಕಾಶವಿಲ್ಲ. ಈ ಹಣವನ್ನು ಆಯಾ ವರ್ಷಗಳಲ್ಲಿಯೇ ಖರ್ಚು ಮಾಡಬೇಕು. ಈ ಹಣವನ್ನು ಸಾಮಾನ್ಯ ಕಾರ್ಯಕ್ರಮಗಳ ಜೊತೆಯಲ್ಲಿ ಜೋಡಿಸುವ ಹಾಗಿಲ್ಲ. ಖರ್ಚು ಮಾಡಿಲ್ಲ ಎಂದು ಸಹ ಹೇಳುವ ಹಾಗಿಲ್ಲ. ನಾನು ಈ ವಿಚಾರದಲ್ಲಿ ಪ್ರಾಮಾಣಿಕವಾಗಿ ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಈ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸುವಲ್ಲಿ ಎಲ್ಲೋ ಒಂದು ಕಡೆ ತಪ್ಪಾಗಿದೆ. ಅವರ ಸಮಸ್ಯೆಗಳ ಮೂಲಕ್ಕೆ ಹೋಗಿ ನೀವು ಅಭಿವೃದ್ಧಿಯನ್ನು ಮಾಡಬೇಕು. ಆ ರೀತಿಯ ಕಾರ್ಯಕ್ರಮಗಳನ್ನು ಮಾಡಬೇಕಾಗಿದೆ. ಯೋಜನೆಗಳನ್ನು ಜಾರಿ ಮಾಡುವಲ್ಲಿ ಕುಂಠಿತ ಹಾಗೂ ನಿರ್ಲಕ್ಷ್ಯ ಎರಡೂ ಇದೆ. ವಿಳಂಬ ಸಹ ಇದೆ. ಇದನ್ನೆಲ್ಲ ಹೋಗಲಾಡಿಸುವುದಕ್ಕೆ ಜಾರಿ ಸಮಿತಿ ಒಂದು ಕಾವಲು ಸಮಿತಿಯನ್ನು ಸರ್ಕಾರ ರಚನೆ ಮಾಡಬೇಕು. ಮೀಸಲಾತಿಯ ಅನುಷ್ಠಾನ ಸಮಿತಿಯನ್ನು ಮಾಡಿ. ಮೀಸಲಾತಿ ಜಾರಿ ಸಮಿತಿ ಮಾಡಿ, 3 ತಿಂಗಳಿಗೊಮ್ಮೆ review ಮಾಡಿ, ಸರ್ಕಾರಕ್ಕೆ ನಿಜವಾದ ಇಚ್ಛಾಶಕ್ತಿ ಇದ್ದಲ್ಲಿ ಹಾಗೆ ಮಾಡಿದರೆ ಮಾತ್ರ

ಅನುಕೂಲವಾಗುತ್ತದೆ. ಇಲ್ಲದೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಕುಳಿತು ಮಾಡುವುದಲ್ಲ, ಪ್ರತಿ ತಿಂಗಳು ಮಾಡಬೇಕು. ಆಕ್ಟ್‌ನಲ್ಲಿ ಈ ವಿಚಾರ ಕ್ಲಿಯರ್ ಆಗಿ ಇದೆ. ರಾಜ್ಯಮಟ್ಟದ ಅನುಷ್ಠಾನ ಪರಿಷತ್ತು ಎಂದು ಮಾಡಬೇಕು. ರಾಜ್ಯದಲ್ಲಿಯೂ ಇಲ್ಲ. ಒಂದೇ ಸಲ ಮಾತ್ರ ಮುಖ್ಯಮಂತ್ರಿಗಳು ಭೇಟಿಯನ್ನು ನೀಡಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಕಮಿಟಿಯನ್ನು ಮಾಡಬೇಕೆನ್ನುವುದು ನಿಮ್ಮ ಕಾನೂನಿನಲ್ಲಿದೆ. ಇದು ಯಾವ ಜಿಲ್ಲೆಯಲ್ಲಿದೆ ಎನ್ನುವುದನ್ನು ಹೇಳಿ. ಈ ಇಲಾಖೆಯವರಿಗೆ ನಿರ್ಲಕ್ಷ್ಯ ಮತ್ತು ನಿರಾಸಕ್ತಿ ಇದೆ. ಇದನ್ನೆಲ್ಲ ಮಾಡಬಾರದು ಎನ್ನುವ ಒಂದು ವಿರೋಧ ಭಾವನೆ ಇದೆ. ದಯಮಾಡಿ ಇದಕ್ಕೆ ಕಾನೂನನ್ನು ತಂದು ಶಿಕ್ಷೆಯ ಪ್ರಾವಿಷನ್ ಅನ್ನು ಅಳವಡಿಸಿ ಆಗ ಮಾತ್ರ ಈ ವರ್ಗದ ಜನರಿಗೆ ಇಟ್ಟಿರುವಂತಹ ಹಣ ಬಳಕೆಯಾಗಿ ಈ ವರ್ಗದ ನಿಜವಾದ ಅಭಿವೃದ್ಧಿಯನ್ನು ಮಾಡಬಹುದು. ಮತ್ತೆ ಈ ಹಂದಿ, ಕೋಳಿ, ಹಸುಗಳನ್ನು ನೀಡುವಂತಹ ಕಳಪೆ ಕಾರ್ಯಕ್ರಮಗಳನ್ನು ದಯವಿಟ್ಟು ನಿಲ್ಲಿಸಿ. ಖಾಯಂ ಪುನಶ್ಚೇತನ ಮನೆಗಳನ್ನು ನೀಡುವುದು ಇದನ್ನೆಲ್ಲ ಮಾಡಬೇಕು. ಏಕೆಂದರೆ ವಸತಿ ಇಲಾಖೆಯವರಿಗೆ ಸುಮಾರು 2500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಬಸವ ಮತ್ತು ಅಂಬೇಡ್ಕರ್ ಈ ಎರಡು ಯೋಜನೆಗಳನ್ನು ಬಿಟ್ಟು ಇತರೆ ಯಾವ ವಸತಿ ಯೋಜನೆ ಇದೆ? ಈ ರೂ. 2000 ಕೋಟಿ ರೂಪಾಯಿಗಳನ್ನು ಏಕೆ ನೀಡಲಾಗುತ್ತಿದೆ? ಆ ಹಣವನ್ನು ಖರ್ಚು ಮಾಡಲಾಗಿದೆಯೇ? ದಯಮಾಡಿ ಈ ಜನಾಂಗದ ಮೂಲ ಸಮಸ್ಯೆಗಳಿಗೆ ಹೋಗಿ ನೋಡಬೇಕು. ಹೋಬಳಿಗೊಂದು ಶಾಲೆಯನ್ನು ಮಾಡುತ್ತೀನಿ ಎಂದು ಹೇಳಿದಿರಿ. ಆದರೆ 26 ಶಾಲೆಗಳನ್ನು ಮಾತ್ರ ಮಾಡಲಾಗಿದೆ ಎಂದು ನನಗೆ ಉತ್ತರವನ್ನು ನೀಡಿದ್ದೀರಿ. ಈ ರೀತಿಯ ಒಂದು ಕಾಳಜಿ ಎಲ್ಲೋ ಒಂದು ಕಡೆ ಅಭಿವೃದ್ಧಿ ಆದ ಹಾಗೂ ಮತ್ತು ಆಗದ ಹಾಗೂ ಸಹ ಇರಬೇಕು, ಅವರ ಯಥಾಸ್ಥಿತಿ ಮುಂದುವರೆಯಬೇಕು, ನಾವು ಕೊಡುತ್ತಿರಬೇಕು, ಅವರು ಪಡೆಯುತ್ತಿರಬೇಕು. ದಯಮಾಡಿ ಬಸವಣ್ಣನವರು, ಗಾಂಧೀಜಿಯವರು ಮತ್ತು ಅಂಬೇಡ್ಕರ್‌ರವರು ಈ ಕನಸ್ಸನ್ನು ಕಂಡಿರಲಿಲ್ಲ. ಈ ವರ್ಗ ಸಮಾಜದ ಮುಖ್ಯವಾಹಿನಿಗೆ ಬರಬೇಕು ಆಗ ಮಾತ್ರ preamble ನ equality, brotherhood, ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ಬರಿ ಘೋಷಣೆಗಳನ್ನು ಮಾಡುವುದನ್ನು ಬಿಟ್ಟು, ಜಿಲ್ಲಾಮಟ್ಟದಲ್ಲಿ ಒಂದು ಜಾರಿಸಮಿತಿಯನ್ನು ರಚಿಸಬೇಕು. ರಾಜ್ಯಮಟ್ಟದಲ್ಲಿ ಜಾರಿ ಸಮಿತಿಯಾಗಬೇಕು, ಪುಟ್ಟಸ್ವಾಮಿಯವರು ಹೇಳಿದ ಹಾಗೆ ತಿಂಗಳಿಗೊಮ್ಮೆ review ಆಗಬೇಕು. ನಿಮ್ಮ ಹಣವನ್ನು ಬಳಕೆ ಮಾಡಿದ್ದೇವೆ ಎಂದು ಎದೆ ತಟ್ಟಿಕೊಂಡು ಹೇಳಬೇಕು. ಆ ರೀತಿಯ ವಾತಾವರಣವನ್ನು ನಿರ್ಮಾಣ ಮಾಡಿದಾಗ ಮಾತ್ರ ನಿಮ್ಮ

ಮಾತು ಮತ್ತು ಕೃತಿಗೂ ಸಹ ಅರ್ಥ ಬರುತ್ತದೆ. ಇಲ್ಲದಿದ್ದರೆ ನಿಮ್ಮ ಮಾತು ಮತ್ತು ಕೃತಿಗೆ ಅರ್ಥ ಇರುವುದಿಲ್ಲ. ದಯಮಾಡಿ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಮಾಡಬೇಡಿ ಎನ್ನುವ ಮಾತನ್ನು ಹೇಳಿ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ, ನನ್ನ ಭಾಷಣವನ್ನು ಮುಗಿಸುತ್ತೇನೆ.

**ಶ್ರೀ ಆರ್. ಧರ್ಮಸೇನಾ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಮಾಡಿದ ರಾಜ್ಯಪಾಲರ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ರೈತರಿಗಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ, ಜನವರಿ 2016ರವರೆಗೆ 16 ಲಕ್ಷ ರೈತರಿಗೆ ರೂ.7800 ಕೋಟಿ ರೂಪಾಯಿಗಳ ಕೃಷಿ ಸಾಲವನ್ನು ವಿತರಣೆ ಮಾಡಿರುವುದಾಗಿ ಹೇಳಿದ್ದಾರೆ. 13ನೇ ಮಾಚ 2016ರೊಳಗೆ ಕೃಷಿ ಸಾಲವನ್ನು ಮರುಪಾವತಿ ಮಾಡಿದಲ್ಲಿ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಹೇಳಿ, ಇದರಿಂದ 2 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದು ಹೇಳಿದ್ದಾರೆ. ಬೆಳೆ ವೈಫಲ್ಯ ಮತ್ತು ಸಾಲದ ಹೊರೆಯಿಂದ ಜೀವನವನ್ನು ಸಮಾಪ್ತಿ ಮಾಡಿಕೊಳ್ಳುವ ಕುಟುಂಬದವರ ಸಂಕಷ್ಟವನ್ನು ನಿವಾರಿಸಲು ಮೃತ ರೈತರ ಕುಟುಂಬದವರಿಗೆ ನೀಡುವ ಪರಿಹಾರ ಧನವನ್ನು 2 ಲಕ್ಷ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳಿಗೆ ಏರಿಕೆಯನ್ನು ಮಾಡಿದ್ದಾರೆ. ರೈತರ ವಿಧವಾ ಪತ್ನಿಯರಿಗೆ ನೀಡುವ ಮಾಸಿಕ ಪಿಂಚಣಿಯನ್ನು ರೂ.500 ರಿಂದ ರೂ.2000 ಗಳಿಗೆ ಏರಿಕೆ ಮಾಡಲಾಗಿದೆ. ಈ ಎಲ್ಲಾ ಕ್ರಮಗಳನ್ನು ಅನ್ನದಾತ ರೈತನ ಬಗೆಗೆ ಸರ್ಕಾರಕ್ಕಿರುವ ಕಳಕಳಿ ಮತ್ತು ಕಾಳಜಿಯನ್ನು ತೋರಿಸುತ್ತದೆ. ಮಾನ್ಯ ಸಭಾಪತಿಯವರೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಪ್ರೋತ್ಸಾಹಿಸಲು ಸರ್ಕಾರದ ಮೂಲ ಧ್ಯೇಯಗಳಲ್ಲಿ ಒಂದಾಗಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಒಂದು ಜನಾಂಗದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಶಿಕ್ಷಣ ಅವಶ್ಯ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳನ್ನು ಒದಗಿಸುವ ಮೂಲಕ ಶಿಕ್ಷಣಕ್ಕೆ ಬೆಂಬಲ ನೀಡಲಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಲ್ಲದೇ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಬಂಜಾರ ತಾಂಡಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು, ಚರ್ಮ ಕುಶಲಕರ್ಮಿಗಳಿಗೆ ಹಣಕಾಸಿನ ನೆರವು, ವಾಸದ ಮತ್ತು ಕೆಲಸದ ಶೆಡ್‌ಗಳ ಸೌಲಭ್ಯ ಒದಗಿಸುವುದು, ಮೆಟ್ರಿಕ್ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳನ್ನು ನೀಡುವುದರ

ಮೂಲಕ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದ ಬಗಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ಈ ಸರ್ಕಾರಕ್ಕಿರುವ ಅಸ್ಥೆಯನ್ನು ತೋರಿಸುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ಈ ವರ್ಗದ ಜನರಿಗೆ ಉದ್ಯೋಗಕಾವಕಾಶವನ್ನು ನೀಡಲಾಗುವುದು ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಹಾತ್ಮಗಾಂಧೀಜಿಯವರು ಕಂಡ ಗ್ರಾಮಸ್ವರಾಜ್ ಕನಸ್ಸನ್ನು ಮತ್ತಷ್ಟು ಬಲಗೊಳಿಸುವ ದೃಷ್ಟಿಯಿಂದ ಗ್ರಾಮಪಂಚಾಯಿತಿಯ ಬಗ್ಗೆ ಸರ್ಕಾರ ನಂಜಯ್ಯನಮಠ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಹಾಗೂ ವಿಧಾನಸಭೆಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು ಈ ಸಮಿತಿಗಳ ಶಿಫಾರಸ್ಸಿನ ಮೇಲೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ಕೆಲವು ತಿದ್ದುಪಡಿಗಳನ್ನು ತರಲಾಗಿದೆ. ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಧ್ಯೇಯವಾಗಿದ್ದು ಈಗಾಗಲೇ 55 ಲಕ್ಷ ಕುಟುಂಬಗಳಿಗೆ ವೈಯುಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

(ಮುಂದು)

**ಶ್ರೀ ಆರ್.ಧರ್ಮಸೇನಾ (ಮುಂದು):–**ಪ್ರಸ್ತುತ ವರ್ಷದಲ್ಲಿ 21 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗುವುದೆಂದು ಹೇಳಿದ್ದಾರೆ., ಹಾಗೆಯೇ ಗ್ರಾಮಗಳಲ್ಲಿ 7000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸುವುದಾಗಿ ಹೇಳಿದ್ದಾರೆ. ಇದೆಲ್ಲ ಗಾಂಧೀಜಿಯವರ ಕನಸ್ಸನ್ನು ನನಸು ಮಾಡುವ ನಮ್ಮ ಸರ್ಕಾರದ ಕಾರ್ಯಕ್ರಮಗಳು ಎಂದು ಇವುಗಳನ್ನು ನಾನು ಸ್ವಾಗತ ಮಾಡುತ್ತೇನೆ.

ನಗರೀಕರಣ ಮುಂದುವರೆಯುತ್ತಿರುವ ಫಲವಾಗಿ ಈ ವರ್ಷ 38 ಗ್ರಾಮಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ, 18 ಪಟ್ಟಣಪಂಚಾಯಿತಿಗಳನ್ನಾಗಿ ಪುರಸಭೆಗಳಾಗಿ ಮತ್ತು ಒಂದು ಗ್ರಾಮಪಂಚಾಯಿತಿಯನ್ನು ನಗರಸಭೆಯಾಗಿ ಉನ್ನರೀಕರಿಸಲಾಗಿದೆ. ಇದು ಸ್ವಾಗತಾರ್ಹವಾದುದು. ಆದರೆ ಗ್ರಾಮಪಂಚಾಯಿತಿಗಳನ್ನು ಪುರಸಭೆಯನ್ನಾಗಿ ಉನ್ನತೀಕರಿಸಿದ ಮೇಲೆ ಅಲ್ಲಿನ ನೌಕರರ ವೇತನ ನಿಗಧಿ ಮತ್ತು ಸೇವಾಭದ್ರತೆಯ ಬಗ್ಗೆ ಸರ್ಕಾರದ ಆದೇಶ ಆಗಿರುವುದರಿಂದ ನೌಕರರಿಗೆ ಬಹಳ ತಿಂಗಳುಗಳಿಂದ ಸಂಬಳ ಸಿಗದೆ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ಗಮನಹರಿಸಿ, ಆದಷ್ಟು ಬೇಗ ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಹಾಗೆಯೇ ಇಂದಿನ ದಿನಪತ್ರಿಕೆಯಲ್ಲಿ ಗ್ರಾಮಪಂಚಾಯಿತಿಯ ಅಧ್ಯಕ್ಷರ ಗೌರವಧನವನ್ನು ಆಯಾ ತಿಂಗಳೇ ನೀಡುವುದಾಗಿ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿರುವುದು ವರದಿಯಾಗಿದೆ. ಇದು ತುಂಬಾ ಸಂತೋಷವಾದ ವಿಚಾರ.

ಆರೋಗ್ಯ ಭಾಗ್ಯ ಜನರಿಗೆ ಬಹಳ ಮುಖ್ಯವಾದುದು. ಈ ದೃಷ್ಟಿಯಲ್ಲಿ 60 ಡಯಾಲಿಸೀಸ್ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸುವುದು ವೆಂಟಿಲೇಟರ್ ಸೌಲಭ್ಯಗಳನ್ನು ಐಸಿಯುಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಮತ್ತು 25 ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗುವುದು. ಇದು ಕೂಡ ಸ್ವಾಗತಾರ್ಹವಾದ ಕ್ರಮವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರು ಹಿಂಜರಿಯುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಹೀಗಾಗಿ ಗ್ರಾಮೀಣ ಭಾಗದ ಜನರು ವೈದ್ಯಕೀಯ ಸೌಲಭ್ಯಗಳಿಂದ

ವಂಚಿತರಾಗುತ್ತಿದ್ದಾರೆ. ಈ ದೃಷ್ಟಿಯಿಂದ ಎಂಬಿಬಿಎಸ್, ಬಿಡಿಎಸ್ ಮತ್ತು ಸ್ನಾತಕೋತ್ತರ ಪದವಿಗಳನ್ನು ಮುಗಿಸಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸಿರುವುದು ಸ್ತುತ್ಯಾರ್ಹವಾಗಿದೆ ಎನ್ನುವ ಶ್ಲಾಘನೆಯನ್ನು ಮಾಡುತ್ತೇನೆ.

ಈ ದೇಶದಲ್ಲಿ 91% ದಲಿತರೂ ಈಗಲೂ ಸಹ ಸ್ವಾತಂತ್ರ ಪೂರ್ವದಲ್ಲಿ ಇದ್ದಂತಹ ಸ್ಥಿತಿಯಲ್ಲಿಯೇ ಇದ್ದಾರೆ ಎನ್ನುವ ಒಂದು ವರದಿ ಇದೆ. ಅವರ ಒಂದು ಉನ್ನತೀಕರಣ ನಮ್ಮ ಕರ್ನಾಟಕ ರಾಜ್ಯದಿಂದ ಆಗಬೇಕೆಂದು ನನ್ನ ಒಂದು ವಿಚಾರವನ್ನು ಮಂಡಿಸುತ್ತಿದ್ದೇನೆ. ಹಾಗೆಯೇ ಸರ್ಕಾರದ ಸವಲತ್ತುಗಳು ಇವರಿಗೆ ತಲುಪಬೇಕು. ಉದಾಹರಣೆಗೆ ಕೃಷಿ ಇಲಾಖೆಯಿಂದ ನೀಡತಕ್ಕ ಟಿಲ್ಲರ್‌ಗಳು ಮುಂತಾದ ವಾಹನಗಳಿಗೆ ನೋಂದಣಿಯನ್ನು ಮಾಡಿಕೊಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಎಷ್ಟೋ ಜನ ಪರಿಶಿಷ್ಟ ಜಾತಿ ಮತ್ತು ವರ್ಗದವರು ಆ ಸವಲತ್ತುಗಳನ್ನು ಪಡೆದ ಕ್ಷಣದಲ್ಲಿಯೇ ಅದನ್ನು ಬೇರೆಯವರಿಗೆ ನೀಡುವುದನ್ನು ಸಾಮಾನ್ಯವಾಗಿ ನಮ್ಮ ಹಳ್ಳಿಗಳಲ್ಲಿ ಕಾಣುತ್ತಿದ್ದೇವೆ. ಈ ಸವಲತ್ತುಗಳನ್ನು ನೀಡಿದ ನಂತರ ಅದನ್ನು ಇಟ್ಟುಕೊಂಡಿದ್ದಾರಾ ಇಲ್ಲವೋ ಸರ್ಕಾರದವರು ಅದರ ಬಗ್ಗೆ ಗಮನವನ್ನು ಹರಿಸಬೇಕು. ಅಧಿಕಾರಿಗಳು ಸಹ ಇದರ ಬಗ್ಗೆ ಸೂಕ್ತ ಗಮನವನ್ನು ಹರಿಸಬೇಕು.

ಅದೇ ರೀತಿ ಮದ್ಯಪಾನದ ವಿಚಾರದ ಬಗ್ಗೆ ಹೇಳುವುದಾದರೆ ಗ್ರಾಮೀಣ ಪ್ರದೇಶದಲ್ಲಿ ಇವತ್ತು 24 ಗಂಟೆಗಳ ಕಾಲ ಮದ್ಯ ಸಿಗುತ್ತದೆ. ಇದರ ಬಗ್ಗೆ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಮನೆಮನೆಗಳಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಇದಕ್ಕೆ ಒಂದು ಸಮಯವನ್ನು ನಿಗದಿ ಮಾಡದೇ ಹೋದರೆ ಇದರಿಂದಲೇ ನಮ್ಮ ಗ್ರಾಮಗಳು ನಶಿಸಿಹೋಗುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ಜನರಿಗೆ ಯಾವುದೇ ರೀತಿಯಲ್ಲಿ ಸುಲಭವಾಗಿ ಮದ್ಯ ಕೈಗೆ ಎಟಕದಂತೆ ಸರ್ಕಾರ ತನ್ನ ಗಮನವನ್ನು ಹರಿಸಬೇಕಾಗುತ್ತದೆ. ಇದರ ಮೂಲಕ ಸಹ ನಾವು ಗ್ರಾಮೀಣ ಅಭಿವೃದ್ಧಿಯನ್ನು ಕಾಣಲಿಕ್ಕೆ ಸಾಧ್ಯ ಎನ್ನುವ ಮಾತುಗಳನ್ನು ಹೇಳುತ್ತಾ ಇಂತಹ ಒಂದು ಸಂದರ್ಭದಲ್ಲಿ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ತಾರಾನೂರಾಧ(ನಾಮ ನಿರ್ದೇಶಿತರು):-** ಮಾನ್ಯ ಸನ್ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯಪಾಲರ ಭಾಷಣದ ಬಗ್ಗೆ 3 ವರ್ಷದ ವರದಿಗಳನ್ನು ತಂದು ಓದಿದಾಗ ಒಬ್ಬ ಮಹಿಳೆಯಾಗಿ ನನಗೆ ಸಂತೋಷ ಎನಿಸಿದ್ದು 2014ರಲ್ಲಿ ರಾಜ್ಯಪಾಲರು ಮಾತನಾಡುತ್ತಾ ರಾಜ್ಯದಲ್ಲಿ ಮಹಿಳೆಯರ ಮೀಸಲಾತಿಯನ್ನು 30% ನಿಂದ 33% ಗೆ ಏರಿಸಿದ್ದೇವೆ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಂಡಾಗ ಒಬ್ಬ ಮಹಿಳೆಯಾಗಿ ನನಗೂ ಸಹ ಬಹಳ ಸಂತೋಷ ಎನಿಸಿತ್ತು. ಆದರೆ ಇಲ್ಲಿಯವರೆಗೆ ಯಾವ ಇಲಾಖೆಯಲ್ಲಿಯೂ ಸಹ ಶೇಕಡ 5ರಿಂದ 10 ಏರಲಿಲ್ಲ ಎನ್ನುವುದು ಬಹಳ ಶೋಚನೀಯವಾದ ಒಂದು ವಿಚಾರ. ಇತ್ತೀಚೆಗೆ ಹೆಣ್ಣುಮಕ್ಕಳೇ ಹೆಚ್ಚು ವಿದ್ಯಾವಂತರಾಗುತ್ತಿದ್ದಾರೆ, ಅದರಲ್ಲಿಯೂ ರ್‍ಯಾಂಕ್ ಪಡೆಯುವುದರಲ್ಲಿ ಪುರುಷರಿಗಿಂತ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಇಂತಹ ಹೆಣ್ಣುಮಕ್ಕಳಿಗೆ ಸರ್ಕಾರ ಯಾವುದಾದರೂ ಕಾರ್ಯಕ್ರಮವನ್ನಾಗಲೀ ಯೋಜನೆಗಳಾಗಲೀ ಹಾಕಿಕೊಂಡಿಲ್ಲ ಎನ್ನುವುದು ಒಂದು ಬೇಸರದ ಸಂಗತಿ. ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ನೋಡಿದ ಹಾಗೆ ಕೂಲಿ ಕೆಲಸ ಮಾಡುವ ಒಬ್ಬ ಹೆಣ್ಣುಮಗಳು ಚಿನ್ನದಪದಕ ಪಡೆದಿದ್ದಾಳೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿತ್ತು. ಅವರ ತಂದೆತಾಯಿಗಳೊಂದಿಗೆ ಆಕೆಯ ಪೋಟೋ ಬಂದಿತ್ತು. ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿದ್ದರೂ ಸಹ ವಿದ್ಯೆಯಲ್ಲಿ ಮುಂದೆ ಬಂದಿರುವುದು ಬಹಳ ಸಂತಸದ ವಿಚಾರ. ಆದರೆ ಅಂತಹ ಹೆಣ್ಣುಮಕ್ಕಳಿಗೆ ಸರ್ಕಾರ ಯಾವ ಯೋಜನೆಗಳನ್ನು ಹಾಕಿಕೊಂಡಿದೆ? ಎನ್ನುವುದರ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲಿಲ್ಲ. ಇನ್ನು ವಿಧವೆಯರಿಗೆ 2000 ರೂಪಾಯಿಗಳ ಪಿಂಚಣಿಯನ್ನು ನೀಡುವ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ, ಆದರೆ ಎಷ್ಟೋ ಜನ ವಿಧವೆಯರಿಗೆ ಪಿಂಚಣಿ ಸಿಗುತ್ತಿಲ್ಲ ಎನ್ನುವ ಅಳಲು ನಮಗೆಲ್ಲರಿಗೂ ಸಹ ತಿಳಿದಿದೆ. ಇದು ಸರ್ಕಾರಕ್ಕೂ ಗೊತ್ತಿದೆ ಎನ್ನುವುದು ನನ್ನ ಭಾವನೆ.

ಇನ್ನು ಅಂಗನವಾಡಿ ಮಕ್ಕಳಿಗೆ ನೀಡುತ್ತಿರುವ ಆಹಾರಧಾನ್ಯಗಳನ್ನು ನೋಡಿದರೆ ಹುಳ ಬಿದ್ದಿರುವ ಕಾಳುಗಳು ಹಾಲು, ಅವರು ಮಲಗುವ ಜಾಗ ನೋಡಿದರೆ

ಅಯ್ಯೋ ಅನಿಸುತ್ತದೆ. 3 ಮೀಟರಿನ ಜಮಖಾನವನ್ನು ಮಲಗಲು ನೀಡುತ್ತಾರೆ. ಅದರಲ್ಲಿ 4-5 ಮಕ್ಕಳನ್ನು ಮಲಗಿಸುತ್ತಾರೆ. ಅಂಗನವಾಡಿ ಕೇಂದ್ರಕ್ಕೆ ದಯಮಾಡಿ ಎಲ್ಲರೂ ಹೋಗಿ ನೋಡಬೇಕು. ಅಂಗನವಾಡಿಯಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ವರ್ಷಕ್ಕೆ ನೀಡುವುದು ಎರಡೇ ಸೀರೆ. ಅದೇ ಸಮವಸ್ತ್ರವನ್ನು ಹಾಕಿಕೊಂಡು ಅವರು ಬರಬೇಕು. ಶಾಲೆಗೆ ಮಾತ್ರವಲ್ಲದೇ ಅಂಗನವಾಡಿಯ ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಸಹ ಆ ಹೆಣ್ಣುಮಕ್ಕಳು ಅದೇ ಸೀರೆಯನ್ನು ಹುಟ್ಟಿಕೊಂಡು ಬರಬೇಕು. ಇದು ಬಹಳ ಶೋಚನೀಯವಾದ ವಿಚಾರ. ಇದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಅಂಗನವಾಡಿ ಮಕ್ಕಳಿಗೆ ಪೋಷಕಾಂಶಗಳ ಆಹಾರವನ್ನು ನೀಡಬೇಕು, ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಪ್ರಸ್ತಾಪ ಇಲ್ಲ.

ಇನ್ನು ಕಂದಾಯ ಇಲಾಖೆಯಲ್ಲಿ ಜಮೀನು ಬಗ್ಗೆಯಾಗಲೀ ವಾಸ ಇರುವ ಮನೆಯ ಬಗ್ಗೆಯಾಗಲಿ ರಾಜ್ಯದಲ್ಲಿ ಲಕ್ಷಾಂತರ ಪೋಡಿ ಅರ್ಜಿಗಳು ಬಾಕಿಯಿವೆ. ಈ ಪೋಡಿಗಳನ್ನು ಆಂದೋಲನದ ಮೂಲಕ ಆಗಲಿ ಮಾಡುತ್ತೇವೆ ಎನ್ನುವ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದಿಲ್ಲ.

ಇನ್ನು ದಲಿತರ ಬಗ್ಗೆ ನಮ್ಮ ಹಿರಿಯ ಸದಸ್ಯರಾದ ವೀರಯ್ಯನವರು ಬಹಳ ಚೆನ್ನಾಗಿ ಮಾತನಾಡಿದರು. ದಲಿತರ ಮಕ್ಕಳು ಕೂಡ ಈಗ ಉನ್ನತ ವ್ಯಾಸಂಗಗಳನ್ನು ಮಾಡುತ್ತಿದ್ದಾರೆ. ನಾವು ಇತ್ತೀಚಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಹಾಸ್ಟೆಲ್‌ಗೆ ಭೇಟಿಯನ್ನು ನೀಡಿದ್ದೆವು. ಆ ಹಾಸ್ಟೆಲ್‌ನ ದುಸ್ಥಿತಿಯನ್ನು ನೋಡಿದರೆ ಕಣ್ಣೀರಲ್ಲ, ರಕ್ತವಲ್ಲ, ಬೇರೆ ಏನು ಬರುತ್ತದೆಯೇ ಗೊತ್ತಿಲ್ಲ. ಅಲ್ಲಿ ಬಾತ್‌ರೂಮ್‌ಗಳಿಗೆ ಬಾಗಿಲುಗಳಿಲ್ಲ. ಶೌಚಾಲಯಗಳಲ್ಲಿ ನೀರಿನ ವ್ಯವಸ್ಥೆಗಳಿಲ್ಲ. ಶೌಚಾಲಯದಲ್ಲಿ ಕಮೋಡ್‌ಗಳು ಸಹ ಇಲ್ಲ. ಸರಿಯಾದ ಹಾಸಿಗೆ ಇಲ್ಲ, ಎಲ್ಲ ಕಿತ್ತು ಹೋಗಿವೆ, ತಿಗಣೆಕಾಟ, ಒಂದು ಮಂಚದಲ್ಲಿ ಹಾಸಿಗೆ ಇದ್ದರೆ ಮತ್ತೊಂದರಲ್ಲಿ ಇಲ್ಲ. ಕಿತ್ತು ಹೋಗಿರುವ ಚಾಪೆ, 16000 ಕೋಟಿ ರೂಪಾಯಿಗಳನ್ನು ಈ ವರ್ಗಕ್ಕೆ ಇಟ್ಟಿದ್ದೇವೆ ಎನ್ನುವ ಸರ್ಕಾರ ಇದಕ್ಕೆಲ್ಲ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲವೇ? ವ್ಯಾಸಂಗ ಮಾಡುವ ದಲಿತ

ಮಕ್ಕಳಿಗೆ ಹಾಸ್ಟೆಲ್ ಸರಿಯಿಲ್ಲ ಎಂದರೆ ಇನ್ನು ಎಲ್ಲಿಂದ ವ್ಯಾಸಂಗವನ್ನು ಮಾಡುತ್ತಾರೆ? ಆದ್ದರಿಂದ ಅನುದಾನದ ಸರಿಯಾದ ಸದ್ಬಳಕೆ ಆಗಬೇಕು. ಇನ್ನು ಸುಳ್ಳು ಪ್ರಮಾಣ ಪತ್ರಗಳನ್ನು ನೀಡಿ ಅಧಿಕಾರದಲ್ಲಿ ಮುಂದುವರೆಯುತ್ತಿರುವ ಅಧಿಕಾರಿಗಳು ಇನ್ನು ಇದ್ದಾರೆ. ಅದರ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಇತ್ತೀಚೆಗೆ ಜಾತಿ ಸಮೀಕ್ಷೆಯನ್ನು ಸರ್ಕಾರ ನಡೆಸಿತು. ಅದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿತು. ಆ ಸಮೀಕ್ಷೆ ಎಲ್ಲಿಗೆ ಬಂದಿದೆ, ಏನಾಗಿದೆ ಎನ್ನುವ ಯಾವುದೇ ವಿವರ ನಮಗೆ ತಿಳಿದಿಲ್ಲ. ಈ ಜಾತಿ ಸಮೀಕ್ಷೆಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರು ಬರುತ್ತಿದ್ದರು, ಅವರ ಅಳಲುಗಳನ್ನು ಅವರು ತೋಡಿಕೊಳ್ಳುತ್ತಿದ್ದರು, ಎಷ್ಟೋ ಮನೆಗಳವರು ಬಾಗಿಲುಗಳನ್ನು ತೆರೆಯುತ್ತಿರಲಿಲ್ಲ, ಸಮೀಕ್ಷೆಗೆ ಸಹಕಾರ ನೀಡುತ್ತಿರಲಿಲ್ಲ, ಅಂತಹವರನ್ನು ನಮ್ಮ ರಾಜ್ಯದಲ್ಲಿ ಉಳಿಯುವುದಕ್ಕೆ ಬಿಡಬಾರದು. ಯಾರು ಸರ್ಕಾರದ ಯೋಜನೆಗಳಿಗೆ ಅಡ್ಡಿ ಬರುತ್ತಾರೆ, ಅವರಿಗೆ ನಮ್ಮ ರಾಜ್ಯದಲ್ಲಿರಲು ನಿಮಗೆ ಯೋಗ್ಯತೆ ಇಲ್ಲ ನೀವು ಹೋಗಿ ಎಂದು ಹೇಳಬೇಕು. ಈ ಸಮೀಕ್ಷೆಯ ವಿವರಗಳೇನು ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ.

ಇನ್ನು ಪ್ರವಾಸೋದ್ಯಮಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡಲಾಗಿದೆ. ನಾನೇ ಈ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದೆನು. ಬಂಡವಾಳಶಾಹಿಗಳನ್ನು ಆಕರ್ಷಿಸುವುದಕ್ಕೆ ಒಂದು ದೊಡ್ಡ ಸಮಾವೇಶವನ್ನು ರಾಜ್ಯದಲ್ಲಿ ಮಾಡಲಾಯಿತು. ಬಹಳ ಆಕರ್ಷಣೀಯವಾಗಿ ಬಹಳ ಚೆನ್ನಾಗಿ ಮಾಡಿದರು. ನನಗೆ ಇರುವ ಒಂದು ಸಂದೇಹ ಏನೆಂದರೆ ಅಷ್ಟೊಂದು ಬಂಡವಾಳಶಾಹಿಗಳನ್ನು ಕರೆದು ಸ್ವಾಗತಿಸಿದಾಗ ಅಷ್ಟು ಜನರಿಗೆ ಎಲ್ಲಿಂದ ಮೂಲಭೂತ ಸೌಕರ್ಯಗಳನ್ನು ಕೊಡಲು ಸಾಧ್ಯವಾಗುತ್ತದೆ? ಜನಸಾಮಾನ್ಯರಿಗೆ ಮೂಲಭೂತ ಸೌಕರ್ಯಗಳು ಇಲ್ಲದಿರುವಾಗ ಹೊರ ದೇಶಗಳಿಂದ ಬರುವ ಅಂತರರಾಷ್ಟ್ರೀಯ ಕಂಪನಿಗಳಿಗೆ ಯಾವ ಸೌಕರ್ಯಗಳನ್ನು ನಾವು ಕೊಡುತ್ತೇವೆ? ಇನ್ನು ಕೇಂದ್ರ ಸರ್ಕಾರ ಉಪನಗರ ರೈಲು ಯೋಜನೆಯನ್ನು ಘೋಷಣೆ ಮಾಡಿತ್ತು, ಬೆಂಗಳೂರಿನಲ್ಲಿ ಅದಕ್ಕಾಗಿ ಜಾಗವನ್ನು ತೋರಿಸಬೇಕೆಂದು ಕೇಳಲಾಗಿತ್ತು.

(ಮುಂದು)

**ಶ್ರೀಮತಿ ತಾರಾ ಅನೂರಾಧ (ಮುಂದು)**

ಟ್ರಾಫಿಕ್ ಜಾಮ್ ಕಡಿಮೆ ಮಾಡಲು ಮಾಡುತ್ತೇವೆ ಎಂದು ಹೇಳಿದ್ದರೂ, ಇದುವರೆಗೂ ರಾಜ್ಯ ಸರ್ಕಾರವು ಭೂಮಿಯನ್ನು ಗುರುತಿಸುವ ಅಥವಾ ಕೊಡುವ ಕೆಲಸ ಮಾಡಲಿಲ್ಲ. ಇನ್ನು ರಾಜ್ಯದಲ್ಲಿ ಮಹಾನಗರ ಪಾಲಿಕೆಗಳ ಗತಿ ಅಧೋಗತಿಯಾಗಿದ್ದು, ಯಾವ ಮೂಲಭೂತ ಸೌಕರ್ಯಗಳನ್ನಾಗಲೀ ಅಥವಾ ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಅಥವ ಅಭಿವೃದ್ಧಿಪಡಿಸುವ ಯಾವುದೇ ವಿಷಯಗಳನ್ನು ರಾಜ್ಯಪಾಲರು ಭಾಷಣದಲ್ಲಿ ಇಲ್ಲ. ಸರ್ಕಾರದಲ್ಲಿ ಅಂತಹ ಕನಸುಗಳು ಇಲ್ಲ ಎಂದು ನನ್ನ ಭಾವನೆ. ಈಗಷ್ಟೇ ಒಂದು ರೀತಿ ಸಾಂದರ್ಭಿಕವಾಗಿ ಹೇಳುವಾಗ ರೈತರ ಬಗ್ಗೆ ಮಾತನಾಡಬೇಕೆಂದರೆ ನಿಜವಾಗಲೂ ಬೇಜಾರಾಗುತ್ತದೆ. ಯಾವ ಹಳ್ಳಿಗಳಿಗೆ ಹೋದರೂ ರೈತರು ಕಾಣುತ್ತಿಲ್ಲ, ಅಲ್ಲಿ ಕೆಲಸ ಮಾಡಲು ನೀರು ಇಲ್ಲ. ಎಲ್ಲರೂ ವಲಸೆ ಹೋಗಿದ್ದಾರೆ. ನಮಗೆ ಹಸಿವಾದಾಗ ಮೂರು ಹೊತ್ತು ಅನ್ನ ಜ್ಞಾಪಕಕ್ಕೆ ಬರುತ್ತದೆ. ಆದರೆ ಅನ್ನವನ್ನು ಕೊಡುವ ರೈತನ ಬಗ್ಗೆ ಯಾರಿಗೂ ಜ್ಞಾಪಕ ಬರುವುದಿಲ್ಲ. ಅನ್ನದಾತ ಜ್ಞಾಪಕಕ್ಕೆ ಬರುವುದಿಲ್ಲ. ನಮ್ಮ ದೇಶದಲ್ಲಿ 30 ವರ್ಷಗಳಿಂದ ಎಷ್ಟೋ ನದಿ, ಕೆರೆ, ಹಳ್ಳ-ಕೊಳ್ಳಗಳು ಮುಚ್ಚಿಹೋಗಿದ್ದು, ಅವುಗಳನ್ನು ತುಂಬಿಸುವ ಕೆಲಸವನ್ನು ದೇವರಾಣೆಗೂ ಮಾಡಲಿಲ್ಲ. ನದಿ-ಕೆರೆ ಮುಚ್ಚಿಹೋದರೆ ರಿಯಲ್ ಎಸ್ಟೇಟ್ ಮಾಡು, ಸೈಟ್ ಮಾಡು ಕಟ್ಟಡ ಕಟ್ಟು ಎನ್ನುವ ಕೆಲಸಗಳೇ ನಡೆಯುತ್ತವೆ. ಬೆಂಗಳೂರಿನ ಸುತ್ತಮುತ್ತ ಯಾವುದಾದರೂ ಹಳ್ಳಿಗಳು ಇದ್ದರೆ ಅವು ಸೈಟ್‌ಗಳಾಗುತ್ತವೆ. ಅವರನ್ನು ಉಳಿಸುವ ಬೆಳೆಸುವ ನೆಲೆಸುವ ಕೆಲಸವನ್ನು ಯಾವತ್ತೂ ಯೋಚನೆ ಮಾಡಲಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತಿದ್ದು, ಮೈಸೂರು ರಸ್ತೆಯಲ್ಲಿ ಟೊರಿನೋ ಕೂಲ್ ಡ್ರಿಂಕ್ಸ್ ಫ್ಯಾಕ್ಟರಿಯನ್ನು ನಮಗೆ ಶೂಟಿಂಗ್‌ಗೆ ಕೊಡುತ್ತಿದ್ದರು. ನನಗೂ ಆ ಫ್ಯಾಕ್ಟರಿಯಲ್ಲಿ ಹೇಗೆ ಕೂಲ್ ಡ್ರಿಂಕ್ಸ್ ತಯಾರಿಸುತ್ತಾರೆಂದು ನೋಡಬೇಕೆಂಬ ಆಸೆ ಇತ್ತು. ಅಲ್ಲಿ ದಿನಕ್ಕೆ 9 ಲಕ್ಷ ಲೀಟರ್ ನೀರನ್ನು ಕೂಲ್‌ಡ್ರಿಂಕ್ಸ್ ಫ್ಯಾಕ್ಟರಿಗೆ ಬಳಸುತ್ತಾರೆ. 9 ಲಕ್ಷ ಲೀಟರ್ ಕಾರ್ಖಾನೆಗೆ ಹೋದರೆ ಅಕ್ಕ-ಪಕ್ಕದ ಜಮೀನುಗಳಿಗೆ ನೀರನ್ನು ಎಲ್ಲಿಂದ ತರುತ್ತಾರೆ? ರೈತ ಆತ್ಮಹತ್ಯೆ ಮಾಡಿಕೊಳ್ಳದೇ ಇನ್ನೇನು ಮಾಡುತ್ತಾನೆ. ರೈತ ಭಿಕ್ಷೆ ಬೇಡುತ್ತಿಲ್ಲ. ಮೊದಲು ನನ್ನ ಭೂಮಿ, ನಾನು ಓನರ್, ನಾನು ಅನ್ನ ಕೊಡುತ್ತೇನೆ ಎಂಬ ಗರ್ವ ಇತ್ತು. ಅವರು ವಂಶಪಾರಂಪಾರ್ಯವಾಗಿ ನಮಗೆ ಅನ್ನ ಕೊಟ್ಟ ಜನ. ಆದರೆ ನಾವು ಅವರಿಗೆ ವಾಪಸ್ಸು ಅನ್ನವನ್ನು ಕೊಡುತ್ತಿದ್ದೇವೆಯೇ? ಖಂಡಿತವಾಗಿಯೂ ಇಲ್ಲ. 2000 ವರ್ಷಗಳಿಗಿಂತ

ಹಿಂದೆಯಿಂದಲೂ ಬಹುಶ: 10 ಲಕ್ಷಕ್ಕೂ ಹೆಚ್ಚು ರೈತ ಮಕ್ಕಳು ರೈತನ ಕೆಲಸವೇ ಬೇಡ, ರೈತನಾಗುವುದೇ ಬೇಡ ಎಂದು ರೈತ ಕೆಲಸ ಬಿಟ್ಟು ನಗರ ಮತ್ತು ಜಿಲ್ಲೆಗಳಿಗೆ ಹೋಗುತ್ತಾರೆ. ಮಾನ್ಯ ಬಸವರಾಜ ಹೊರಟ್ಟಿಯವರು ಮೊನ್ನೆ ಜೀನ್ಸ್ ಫ್ಯಾಂಟ್ ತೊಟ್ಟಿರುವ ಬಗ್ಗೆ ಹೇಳುತ್ತಿದ್ದರು. ಅವರು ಜೀನ್ಸ್ ಫ್ಯಾಂಟ್ ತೊಡದೇ ಏನು ಮಾಡುತ್ತಾರೆ? ನಗರಕ್ಕೆ ಬಂದು ಬಾರ್‌ಗಳಲ್ಲಿ ಕೆಲಸ ಮಾಡುತ್ತಾರೆ, ಕಸ ಗುಡಿಸುವ ಕೆಲಸ ಮಾಡುತ್ತಾರೆ. ಬಿಬಿಎಂಪಿಯಲ್ಲಿ ಚರಂಡಿಗಳನ್ನು ಕ್ಲೀನ್ ಮಾಡುವ ಕೆಲಸ ಮಾಡುತ್ತಾರೆ. ಆಟೋ ಓಡಿಸುತ್ತಾರೆ, ಹೆಣ್ಣುಮಕ್ಕಳು ಗಾರ್ಮೆಂಟ್ಸ್‌ಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ, ಇಂತಹ ಕೂಲಿ ಕೆಲಸಗಳನ್ನು ರೈತ ಮಕ್ಕಳು ಮಾಡುತ್ತಿದ್ದಾರೆ. ಅವರು ಮಹಾರಾಜರುಗಳಾಗಿ ಅನ್ನ ಹಾಕುತ್ತಿದ್ದರು ಎಂಬುದನ್ನು ಮರತೇ ಹೋದರು. ಇಂತಹ ಕೂಲಿ ಕೆಲಸವನ್ನು ಜೀನ್ಸ್ ಫ್ಯಾಂಟ್ ಹಾಕಿ ನಗರಗಳಲ್ಲಿಯೇ ಮಾಡುತ್ತಿದ್ದಾರೆ. ಆ ಹೆಣ್ಣುಮಕ್ಕಳಿಗೆ ಕೆಲಸ ಇಲ್ಲ. ಒಂದು ಕಡೆ ಸರ್ವೆ ಮರ ಮತ್ತು ನೀಲಗಿರಿ ಮರಗಳನ್ನು ನೆಡುತ್ತಾರೆ. ಅದು ಭೂಮಿಯಲ್ಲಿರುವ ಸಾರ ಮತ್ತು ನೀರನ್ನು ಹೀರಿಕೊಳ್ಳುತ್ತವೆ. ಮುಂದೆ ಅಲ್ಲಿ ಏನೂ ಬೆಳೆಸುವುದಕ್ಕೆ ಆಗುವುದಿಲ್ಲ. ರೂ.5,000 ಸಾವಿರ ಕೋಟಿ ಸಾಲ ಪಡೆದ ಒಬ್ಬ ಮದ್ಯದ ದೊರೆ ಸಾಲ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಕೈ ಎತ್ತಿ ನಿಂತುಕೊಳ್ಳುತ್ತಾನೆ. ಆದರೆ ಆ ಮದ್ಯದ ದೊರೆ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ, ಅವನಿಗೆ ಸಾಲ ಕೊಟ್ಟ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಆದರೆ ರೂ.5,000 ರೂಪಾಯಿಗಳ ಸಾಲ ಪಡೆದ ರೈತ ಅದನ್ನು ಕಟ್ಟುವುದಕ್ಕೆ ಆಗದೇ ಬಡ್ಡಿ ಮೇಲೆ ಬಡ್ಡಿ ಮತ್ತು ಚಕ್ರಬಡ್ಡಿ ಬೆಳೆದು ಕೊನೆಗೆ ಹುಳುಗಳಿಗೆ ಹಾಕುವ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆದರೆ ಇದರ ಬಗ್ಗೆ ಯೋಚನೆ ಮಾಡಲು ನಮಗ್ಯಾರಿಗೂ ಟೈಮ್ ಇಲ್ಲ. ಮೂರು ಸಮಯವೂ ಊಟ ಮಾಡುತ್ತೇವೆ.

**ಶ್ರೀ ಬಿ.ಜೆ ಪುಟ್ಟಸ್ವಾಮಿ:-** ಈಗ ಜೀರೋ ಪರ್ಸೆಂಟ್ ಬಡ್ಡಿ ಇದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ರೈತರಿಗೆ ಏನೇನು ಕಾರ್ಯಕ್ರಮಗಳು ಇವೆ ಎಂದು ಮಾನ್ಯ ಸದಸ್ಯರಿಗೆ ಅನುಭವವೇ ಇಲ್ಲ. ರೈತರಿಗೆ ರೂ. 3 ಲಕ್ಷಗಳವರೆಗೆ ಶೂನ್ಯ ಬಡ್ಡಿದರಲ್ಲಿ ಸಾಲ ಕೊಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಬಡ್ಡಿ-ಚಕ್ರಬಡ್ಡಿ ಎಂದು ಹೇಳುತ್ತಿದ್ದಾರೆ. ರೂ. 10 ಲಕ್ಷಗಳವರೆಗೆ ಪ್ರತಿಶತ 3ರ ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ. ಮಾನ್ಯ

ಸದಸ್ಯರು ರೈತರಿಗೆ ಏನೇನು ಕೊಡುತ್ತಾರೆ ಎಂದು ಸ್ವಲ್ಪ ವಿಸ್ತೃತವಾಗಿ ಅಧ್ಯಯನ ಮಾಡಿದರೆ ಈ ರೀತಿ ಮಾತನಾಡುತ್ತಿರಲಿಲ್ಲ.

**ಶ್ರೀಮತಿ ತಾರಾ ಅನೂರಾಧ:–** ಸರ್ಕಾರದಿಂದ ಕೊಡುವ ಸಾಲದಿಂದಲೇ ರೈತ ಬದುಕುತ್ತಿಲ್ಲ, ಬೇರೆ ಕಡೆ ಸಹ ಸಾಲ ಮಾಡುತ್ತಿದ್ದಾನೆ. ಅದರ ಬಗ್ಗೆ ನಾನು ಯೋಚನೆ ಮಾಡುತ್ತಿದ್ದೇನೆ. ಸರ್ಕಾರ ಬಡ್ಡಿ ಹಾಕುತ್ತಿದೆ ಎಂದು ಹೇಳುತ್ತಿಲ್ಲ. ಬೇರೆ ಕಡೆ ಕೂಡ ಬಡ್ಡಿಗೆ ಸಾಲ ತೆಗೆದುಕೊಂಡು ಆತನ ಪರಿಸ್ಥಿತಿ ಏನಾಗಿದೆ ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ರೂ. 5,000 ಸಾಲ ಮಾಡಿದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದಾಗ ರೈತನಿಗೆ will-power ಇಲ್ಲ ಎನ್ನುವ ಸಂದೇಶ ಹೋಗಬಾರದು. ಸಣ್ಣಪುಟ್ಟ ಸಾಲ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎನ್ನುವುದು ಸರಿಯಲ್ಲ. ರೈತರಿಗೆ ಅತ್ಯಧಿಕ will-power ಇದೆ. ಬಿಸಿಲು, ಮಳೆ, ಚಳಿ ಗಾಳಿ ಎನ್ನದಂತೆ ಹಗಲು ರಾತ್ರಿ ನಿರಂತರವಾಗಿ ಜಮೀನುಗಳಲ್ಲಿ ಗಂಡ–ಹೆಂಡತಿ–ಮಕ್ಕಳು ಕೆಲಸ ಮಾಡಿ ದೇಶದ 120 ಕೋಟಿ ಜನತೆಗೆ ಅನ್ನ ನೀಡುವ ರೈತರಿಗೆ ಆತ್ಮಸ್ಥೈರ್ಯವೂ ಇದೆ. Will-power ಕೂಡ ಇದೆ. ರೂ.5,000ಗಳ ಜುಜುಬಿ ಸಾಲಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದಾಗ ಒಳ್ಳೆಯ ಸಂದೇಶ ಹೋಗುವುದಿಲ್ಲ. ಮಾನ್ಯ ಸದಸ್ಯರಿಗೆ ಇದನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರೈತರು ಬಹಳ ಸ್ವಾಭಿಮಾನಿಗಳು. ಅವರಿಗೆ ಆತ್ಮಸ್ಥೈರ್ಯ ಮತ್ತು ಆತ್ಮವಿಶ್ವಾಸ ಉಳಿದೆಲ್ಲ ವರ್ಗಗಳಿಗಿಂತ ಹೆಚ್ಚಿದೆ ಎಂದು ನಾನು ಭಾವಿಸುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸದಸ್ಯರು ರೈತರ ಸಮಸ್ಯೆಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದು, 1036 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬರೆದುಕೊಟ್ಟಿದ್ದಾರೆ. ಅವರು ಅದರ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಅದಕ್ಕೆ ಪರಿಹಾರ ಏನು? ನೋಡಿ ರೂ.5,000ಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದರೆ ಅವರ ಜೀವ ಅಷ್ಟು ಜುಜುಬಿ ಅಲ್ಲ. ಎಲ್ಲರಿಗೂ ಅನ್ನ ಹಾಕುವವರು ರೈತರು. ನಮ್ಮೆಲ್ಲರಿಗಿಂತ ಹೆಚ್ಚು ಕಷ್ಟ ಪಡುವವರಿಗೆ ಆತ್ಮಸ್ಥೈರ್ಯ ಇದೆ. ಅವರಿಗೆ ಹೆಚ್ಚಿನ ಮನೋಬಲ ಇದೆ.

(ಗೊಂದಲ)

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾನಾಯಕರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು ಮೊನ್ನೆ ಒಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರವೂ ಬಂತು. ನಾನು ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ರೈತರಿಗೆ ಮತ್ತು ಅವರ ಬೆಳೆಗಳಿಗೆ ಯೋಜನಗಳನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವೂ ಯೋಜನೆಗಳನ್ನು ಕೊಟ್ಟಿದೆ. ನಾನು ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ಆತನ ಪರಿಸ್ಥಿತಿ ಹೇಳುತ್ತಿದ್ದೇನೆ. ಆತನ ಮಕ್ಕಳು ಬೀದಿಗೆ ಬರುತ್ತಾರೆ. ನಾವು ಏಕೆ ಹೋರಾಟ ಮಾಡಿ ಜೋರಾಗಿ ಮಾತನಾಡುತ್ತೇನೆ ಎಂಬುದನ್ನು ಹೇಳಿ. ನನಗೆ ಅವಕಾಶ ಕೊಟ್ಟರೆ ನಾನು ಮತ್ತಗೆ ಮಾತನಾಡುತ್ತೇನೆ. ನನ್ನ ಸಮಸ್ಯೆಗಳನ್ನು ಕೇಳುವುದಾದರೆ ನಾನು ನಿಧಾನವಾಗಿ ಮಾತನಾಡುತ್ತೇನೆ. ನನ್ನ ಸಮಸ್ಯೆಗಳನ್ನು ಕೇಳುವುದಿಲ್ಲ ಎಂದಾಗ ಹೋರಾಟ ಮಾಡುತ್ತೇನೆ ಮತ್ತು ಜೋರು ಮಾಡುತ್ತೇನೆ. ರೈತರ ಸಮಸ್ಯೆಗಳು ಹಾಗೂ ಇನ್ನಿತರರ ಸಮಸ್ಯೆಗಳನ್ನು ಕುಳಿತು ಕೇಳುವ ಸಂಯಮ ಇರಬೇಕು. ಆದರೆ ಅದು ಇಲ್ಲ. ಇಲ್ಲದೇ ಇರುವುದರಿಂದ ರೈತರು ಹೋರಾಟ ಮಾಡಿ ಏಟುಗಳನ್ನು ತಿನ್ನುತ್ತಿದ್ದಾರೆ. ಬೀದಿಗೆ ಬಂದು ಕಷ್ಟಗಳ ಬಗ್ಗೆ ಹೇಳುತ್ತಿದ್ದಾರೆ. ಇನ್ನುವರೆಗೂ ಅದು ಕೊಡುತ್ತೇವೆ, ಇದು ಕೊಡುತ್ತೇವೆ ಎನ್ನವುದಲ್ಲ. ಎಲ್ಲವನ್ನು ಕೊಟ್ಟರೂ ಎರಡೂವರೆ ವರ್ಷಗಳಿಂದ ಸಾವಿರಕ್ಕಿಂತ ಹೆಚ್ಚು ರೈತರು ಏಕೆ ಆತ್ಮಹತ್ಯೆ ಮಾಡಿಕೊಂಡರು? ಅದಕ್ಕೆ ಉತ್ತರ ಹೇಳಲಿ. ಇದರ ಬಗ್ಗೆ ಯಾವ ಉಲ್ಲೇಖವೂ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಇಲ್ಲದ ಕನಸುಗಳು ಹಾಗೂ ಮಾಡಬಹುದಾದ ಮಾರ್ಗಸೂಚಿಗಳನ್ನು ಸರ್ಕಾರವು ರಾಜ್ಯಪಾಲರ ಭಾಷಣದಲ್ಲಿ ಮಾಡಿಸಿಲ್ಲ ಎನ್ನುವುದೇ ನನ್ನ ಅಭಿಪ್ರಾಯ, ನಮಸ್ಕಾರ.

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಮಂಡಿಸಿದ ಭಾಷಣಕ್ಕೆ ಈ ಸದನದ ಮೂಲಕ ಕೃತಜ್ಞತೆ ಸಲ್ಲಿಸಲು ನನಗೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

(ಮುಂದು)

(125) 05-03-2016 12.00 HV (MD)-VK

**ಡಾ॥ ಜೈಮಾಲಾ ರಾಮಚಂದ್ರ (ಮುಂದು):-**

ಮಾನ್ಯ ಸಭಾಪತಿಯವರೆ, ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅನೇಕ ಜನಪರವಾದಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ನಾಡಿನಲ್ಲಿ ರೈತರ ಪರವಾಗಿ, ನಿರ್ಲಕ್ಷ್ಯಕ್ಕೆ ಒಳಪಟ್ಟವರ ಪರವಾಗಿ, ಶ್ರಮಿಕರ ಪರವಾಗಿ, ಬಡವರ ಪರವಾಗಿ, ಮಹಿಳೆಯರ ಪರವಾಗಿ ಅನೇಕ ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾಗಿದೆ. ಮಹಾತ್ಮ ಗಾಂಧೀಜಿಯವರ ಕನಸು ನನಸು ಮಾಡುವಲ್ಲಿ ನಮ್ಮ ಸರ್ಕಾರ ಮುಂದಾಗಿದೆ. ರಾಜ್ಯದ ಎಲ್ಲಾ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು ಮತ್ತು ನೈರ್ಮಲ್ಯವನ್ನು ಪ್ರೋತ್ಸಾಹಿಸುವುದು ನಮ್ಮ ಸರ್ಕಾರದ ಮೂಲ ಧ್ಯೇಯವಾಗಿದೆ. ಇವತ್ತು 55 ಲಕ್ಷ ಕುಟುಂಬಗಳಿಗೆ ವೈಯಕ್ತಿಕವಾದ ಶೌಚಾಲಯವನ್ನು ಒದಗಿಸಿ ಕೊಟ್ಟಿದೆ. ನಾನು ಈ ಸಂದರ್ಭದಲ್ಲಿ ನಾನು ಕಣ್ಣಲ್ಲಿ ಕಂಡಂಥ 'ಗೌರವ ಘಟಕ'ದ ಬಗ್ಗೆ ಒಂದು ವಿಚಾರವಾಗಿ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಇದೇ ಗದಗದಲ್ಲಿ 60" X 40" ನಿವೇಶನದಲ್ಲಿ 'ಗೌರವ ಘಟಕ' ಎಂದು ಹೆಣ್ಣುಮಕ್ಕಳಿಗೆ ಅತ್ಯಂತ ಸುಸಜ್ಜಿತವಾದಂಥ 5 ಸ್ನಾನದ ಶವರ್‌ಗಳನ್ನು, 5 ಶೌಚಾಲಯಗಳನ್ನು ನಿರ್ಮಾಣ ಮಾಡಿ ಕೊಟ್ಟಿರುವಂಥಾದ್ದು ಮತ್ತು ಅದರ ಜೊತೆಯಲ್ಲಿ ಒಂದು ಹೇರ್ ಡ್ರೈಯರ್‌ನ್ನು ಕೊಟ್ಟಿರತಕ್ಕಂಥಾದ್ದು ಹಾಗೆಯೇ ಪ್ರತ್ಯೇಕವಾಗಿ ಯಾರೇ ಬಂದು 10 ಕೆ.ಜಿ. ಬಟ್ಟೆಗೆ 5 ರೂಪಾಯಿ ಕೊಟ್ಟರೆ ಆ ಬಟ್ಟೆಗಳನ್ನು 10 ನಿಮಿಷಗಳಲ್ಲಿ ಒಗೆದು ಒಣಗಿಸಿ ಕೊಡುವಂಥಾ ಕೆಲಸವನ್ನು ಮೂರು ಘಟಕಗಳಲ್ಲಿ ಮಾಡುತ್ತಿದ್ದಾರೆ. ಈ ಘಟಕಗಳನ್ನು ಯಾರಿಗೋಸ್ಕರ ಮಾಡಿದ್ದಾರೆ? ಈ ಸೌಕರ್ಯವನ್ನು ಶ್ರೀಮಂತರಿಗೋಸ್ಕರ ಮಾಡಿಲ್ಲ. ಜೀವನದಲ್ಲಿ ಕಣ್ಣಲ್ಲಿ ಕಾಣದೇ ಇರುವ ನೂರು ಕನಸುಗಳನ್ನು ಕಟ್ಟಿಕೊಂಡು ರೈತರು, ಶ್ರಮಿಕ ವರ್ಗದವರು ದಿನವೆಲ್ಲಾ ಹೊಲ-ಗದ್ದೆಗಳಲ್ಲಿ, ಸಿಮೆಂಟಿನ ಮಧ್ಯದಲ್ಲಿ ಕೆಲಸ ಮಾಡಿ ವಾರಗಟ್ಟಲೆ ಸ್ನಾನ ಮಾಡುವುದಕ್ಕಾಗದೇ, ಬಟ್ಟೆಯನ್ನು ಒಗೆಯುವುದಕ್ಕಾಗದೇ ಇರುವ ಸ್ಥಿತಿಯಲ್ಲಿರುತ್ತಾರೆ. ಅವರು ಕೆರೆ, ಹೊಳೆಗಳಲ್ಲಿ ಬಟ್ಟೆ ಒಗೆಯಲು ಹೋಗಿ ಕಾಲು ಜಾರಿದರೆ ನೀರಿನಲ್ಲಿ ಕೊಚ್ಚಿಕೊಂಡು ಹೋಗುವಂಥ ಒಂದು ಪರಿಸ್ಥಿತಿ. ಇಂತಹ ಹೆಣ್ಣುಮಕ್ಕಳಿಗೆ ನಮ್ಮ ಸರ್ಕಾರ ಕೆಲವೊಂದು ಸೌಕರ್ಯಗಳನ್ನು ಒದಗಿಸಿದೆ. ಗೌರವ ಘಟಕದಲ್ಲಿ ಹೆಣ್ಣುಮಕ್ಕಳಿಗೆ ಒಂದು ವಿಂಗ್ ಮತ್ತು ಗಂಡು ಮಕ್ಕಳಿಗೆ ಒಂದು ವಿಂಗ್‌ನ್ನು ಸ್ಥಾಪನೆ ಮಾಡಿದ್ದಾರೆ. ಈ ಕಾರ್ಯವನ್ನು ನಮ್ಮ ಸರ್ಕಾರ ಬಡವರಿಗಾಗಿ ಮತ್ತು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವಂಥ ಕೆಳ ವರ್ಗದವರಿಗೆ ಮಾಡಿರತಕ್ಕಂಥಾದ್ದು. ಈ ಘಟಕಗಳು ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸೀಮಿತ ಎನ್ನುವಂಥ ಮಾತನ್ನು ಹೇಳಿದ್ದಾರೆ. ಈ ಸೌಕರ್ಯ ನಗರಗಳಲ್ಲಿಯೂ ಸಹ ಸಿಗಬೇಕು. ವಲಸೆ ಬಂದಿರತಕ್ಕಂಥ ಕಾರ್ಮಿಕರು, ಪೇಯ್ಟಿಂಗ್ ಕೆಲಸ ಮಾಡುವ ಹಾಗೂ ಇನ್ನಿತರ ಅನೇಕ ಜನ

ಕೂಲಿಕಾರ್ಮಿಕರು ನಗರಗಳಿಗೆ ಬರುತ್ತಾರೆ. ನಗರಗಳಲ್ಲಿ ಈ ಸೌಲಭ್ಯದ ಅವಶ್ಯಕತೆ ಹೆಚ್ಚಾಗಿರುವುದರಿಂದ ಇದನ್ನು ನಗರ ಪ್ರದೇಶಗಳಿಗೂ ಸಹ ವಿಸ್ತರಣೆ ಮಾಡಬೇಕೆಂದು ನಾನು ಸರ್ಕಾರವನ್ನು ಕೋರಿಕೊಳ್ಳುತ್ತೇನೆ.

ಹಾಗೆಯೇ ಸಮಾಜಿಕ ನ್ಯಾಯವನ್ನು, ಸಮಾನತೆಯನ್ನು ಪ್ರೋತ್ಸಾಹಿಸುವುದು ನಮ್ಮ ಸರ್ಕಾರದ ಮೂಲ ಧ್ಯೇಯ ಎನ್ನುವುದನ್ನು ಇಲ್ಲಿ ಹೇಳುತ್ತಿದ್ದಾರೆ.

ಇನ್ನು ಕಂದಾಯ ಗ್ರಾಮಗಳನ್ನು ಮಾಡಬೇಕೆಂದು ಈ ಸದನದಲ್ಲಿ ನಾವು ಬೇಕಾದಷ್ಟು ಸಾರಿ ಪ್ರಶ್ನೆಗಳನ್ನು ಕೇಳಿದ್ದೇವೆ. ಇವತ್ತು ಕಂದಾಯ ಗ್ರಾಮಗಳನ್ನಾಗಿ ಮಾಡಲು 3,350 ತಾಂಡಗಳನ್ನು ಗುರುತಿಸಿದೆ. ನಮ್ಮ ಸರ್ಕಾರ ಸುಮ್ಮನೆ ಕುಳಿತಿಲ್ಲ. ಕಂದಾಯ ಗ್ರಾಮಗಳ ತಾಂಡಾಗಳಿಗೆ ಈಗಾಗಲೇ ತಜ್ಞರ ಸಮಿತಿಯನ್ನು ರಚಿಸಿ ಅದು ಅತ್ಯಂತ ಸೂಕ್ತವಾದ ಒಂದು ವರದಿಯನ್ನು ನೀಡಿದೆ. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಹೋಗಿ ಸುಮಾರು 60 ರಿಂದ 70 ವರ್ಷಗಳಾದರೂ ಸಹ ಇವತ್ತು ಅವರು ನಮ್ಮಿಂದ ಬೇರೆಯಾಗಿ ಕಂದಾಯವನ್ನು ಕಟ್ಟುತ್ತಾರೆ, ಆದರೆ ಖಾತೆ ಅವರ ಹೆಸರಿನಲ್ಲಿ ಇರುವುದಿಲ್ಲ. ಅವರುಗಳು ಅರಣ್ಯದಲ್ಲಿದ್ದಾರೆ, ಆದರೆ ಅವರನ್ನು ಅರಣ್ಯದಿಂದ ಹೊರಗಡೆಗೆ ಹಾಕಿ ಎನ್ನುತ್ತಾರೆ. ಇದಕ್ಕೆ ಕಾನೂನು ಏನು ಹೇಳುತ್ತದೆ? ಅವರು ಸ್ಮಶಾನದಲ್ಲಿ ತಾಂಡಾಗಳನ್ನು, ಹಟ್ಟಿಗಳನ್ನು ಕಟ್ಟಿಕೊಂಡಿದ್ದಾರೆ. ಸ್ಮಶಾನದಲ್ಲಿ, ಗೋಮಾಳದಲ್ಲಿ ಯಾರ್ಯಾರು ಎಲ್ಲೆಲ್ಲಿ ನಿರ್ಮಾಣ ಮಾಡಿದ್ದಾರೆ, ಅವರಿಗೆ ಸೂಕ್ತವಾದಂಥ ಪರಿಹಾರವನ್ನು ಕೊಡಬೇಕು. ಅದನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಿಕ್ಕೆ ಏನು ಮಾಡಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮ ಇದೆಯಲ್ಲಾ, ಇದು ಜಾರಿಗೆ ಬರಬೇಕೆಂಬುದನ್ನು ನಾವೆಲ್ಲರೂ ಮೊದಲು ಯೋಚನೆ ಮಾಡಬೇಕು. ಗಟ್ಟಿಯಾಗಿ ನಿಂತು ಇದನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ನಾವು ಕೆಲಸವನ್ನು ಮಾಡಬೇಕು. ನನ್ನ ಸಹೋದರ ತಾರಾರವರು ಪೋಡಿಯನ್ನು ಮಾಡಿಲ್ಲವೆಂದು ಈಗ ತಾನೆ ಮಾತನಾಡಿದರು. ಸುಮಾರು 3 ಲಕ್ಷ ಪೋಡಿಗಳನ್ನು ಮಾಡಿರತಕ್ಕಂಥಾದ್ದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಲಾಗಿದೆ. ಇವತ್ತು ಪೋಡಿಯನ್ನು ಮಾಡುವುದು ಅತ್ಯಂತ ಅವಶ್ಯಕವಾಗಿದೆ. 3 ಲಕ್ಷ ಪೋಡಿಗಳನ್ನು ಮಾಡಿದ್ದಾರೆ, ಆದರೆ ಇನ್ನು ಪೋಡಿಗಳನ್ನು ಮಾಡಬೇಕಾಗಿದೆ. ಎಷ್ಟೆಷ್ಟೋ ಕುಟುಂಬಗಳು ದಾಯಾದಿಗಳ ರೀತಿಯಲ್ಲಿ ಹೋರಾಟವನ್ನು ಮಾಡುತ್ತಿದ್ದಾರೆ. ಇವತ್ತು ಅವರು ಸಂಘರ್ಷಕ್ಕೊಳಗಾಗಿದ್ದಾರೆ. ಈ ಹೋರಾಟದಲ್ಲಿ ತಮ್ಮ ಚಪ್ಪಲಿಗಳನ್ನು ಸವೆಸಿಕೊಂಡಿದ್ದಾರೆ. ಬೇರೆ ಬೇರೆ ಹಳ್ಳಿಗಳಿಂದ ಬಂದು ತಾಲ್ಲೂಕು ಕಛೇರಿ ಹಾಗೂ ವಿಧಾನ ಸೌಧಕ್ಕೆ ಅಲೆಯುತ್ತಿದ್ದಾರೆ. ಜನರು ಈ ರೀತಿ ಅಲೆಯುವುದು ಬೇಡವೆಂದು 3 ಲಕ್ಷ

ಪೋಡಿಗಳನ್ನು ಮಾಡಿರುವಂಥಾದ್ದು ನಮ್ಮ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ನಮ್ಮಲ್ಲಿ ಅನಿಷ್ಟ ಪದ್ಧತಿಗಳು ಜಾರಿಯಲ್ಲಿವೆ. ಕಂದಾಯ ಗ್ರಾಮಗಳನ್ನು ಅತ್ಯವಶ್ಯಕವಾಗಿ ಮಾಡಬೇಕಾಗಿದೆ. ಅರಸೀಕೆರೆ ತಾಲ್ಲೂಕಿನಲ್ಲಿ ಇರತಕ್ಕಂಥ 8 ತಾಂಡಾಗಳಲ್ಲಿ 20 ರಿಂದ 40 ವರ್ಷ ವಯೋಮಾನದ ಸುಮಾರು 288 ಮಹಿಳೆಯರು ಇವತ್ತು ಮಕ್ಕಳೇ ಬೇಡವೆಂದು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡುಬಿಟ್ಟಿದ್ದಾರೆ. ಅವರಿಗೆ ಇವತ್ತು ಆ ಮೌಢ್ಯದಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಅವರನ್ನು ಈ ಮೌಢ್ಯದಿಂದ ಹೊರತರಲು ನಾವೆಲ್ಲರೂ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಈ ಬಗ್ಗೆ ಎಷ್ಟು ಜಾಗೃತಿಯನ್ನು ಮೂಡಿಸಿದರೂ ಸಹ ಸಾಲದು. ಅವರನ್ನು ಅಲ್ಲಿಂದ ಹೊರತರುವಂಥ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕು. ಇದನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಗೊಲ್ಲರಹಟ್ಟಿಯಲ್ಲಿ ನಡೆಯತಕ್ಕಂಥ ಇಂತಹ ಅನಿಷ್ಟ ಪದ್ಧತಿಯಿಂದ ಅವರನ್ನು ಹೊರತರಲು ನಾವೆಲ್ಲರೂ ಕಷ್ಟಪಡುಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮಗೆ ವಿದ್ಯುಚ್ಛಕ್ತಿ ಅವಶ್ಯಕವಾಗಿ ಬೇಕಾಗಿದೆ. ಸೋಲಾರ ಅಳವಡಿಸುವ ಯೋಜನೆ ಬಹಳ ದೊಡ್ಡ ಯೋಜನೆಯಾಗಿದೆ. ಸೋಲಾರ್‌ನ್ನು ಅಳವಡಿಸಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಮಾನ್ಯ ಸಚಿವರು ಅದಕ್ಕೆ ಕುರಿತಂತೆ ಬೇಕಾದಷ್ಟು ಸೋಲಾರ್ ಸಿಸ್ಟಂನ್ನು ಅಳವಡಿಸಿಕೊಳ್ಳಿ ಎಂದು ರೈತರಿಗೂ ಸಹ 9 ರೂ. 56 ಪೈಸೆಯನ್ನು ಕೊಡುತ್ತೇವೆ. ನೀವೆಲ್ಲರೂ ನಿಮ್ಮ ಜಮೀನಿನಲ್ಲಿ ಇದನ್ನು ಅಳವಡಿಸಿಕೊಂಡು ಇದರ ಸವಲತ್ತನ್ನು ಪಡೆದುಕೊಳ್ಳಿ ಎಂದು ಹೇಳಿದ್ದಾರೆ. ಇವತ್ತು ಪಾವಗಡದಲ್ಲಿ ಸುಮಾರು 11,500 ಎಕರೆ ಸರ್ಕಾರಿ ಜಮೀನನ್ನು ಯಾವುದೇ ಕಾರಣಕ್ಕೂ ಸಹ ಸ್ವಾಧೀನ ಪಡಿಸಿಕೊಳ್ಳಿಲಿಲ್ಲ. ಅದು ರೈತರ ಜಮೀನು. ರೈತರಿಗೆ source of income ಸುಮಾರು 25 ವರ್ಷಗಳ ಕಾಲ ಕೊಡುತ್ತಾರೆ. ಇದು ಒಂದು ಒಳ್ಳೆಯ ಯೋಜನೆಯಲ್ಲವೇ? 25 ವರ್ಷಗಳ ಕಾಲ 2 ರೂಪಾಯಿಯನ್ನು ಕೊಟ್ಟರೂ ಸಹ ರೈತನಿಗೆ ಅದು ಬಹಳ ದೊಡ್ಡ ಮೊತ್ತವಾಗುತ್ತದೆ. ಸುಮಾರು 21,000 ಎಕರೆ ಪ್ರದೇಶಕ್ಕೆ ಕೊಡುತ್ತಿರತಕ್ಕಂಥಾದ್ದು. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಇದರ ಪರವಾಗಿ ಇಲ್ಲಿ ಮೂಲಭೂತವಾಗಿ ಚರ್ಚೆ ಮಾಡಬೇಕಾದುದು, ಚಿಂತನೆ ಮಾಡಬೇಕಾದುದು ನಾವು ಸೌರಶಕ್ತಿಯನ್ನು ಬಳಸಿಕೊಳ್ಳುವಾಗ ಈ ಗ್ರಿಡ್‌ನ್ ಮೂಲಕ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆವಿಗೂ ಮಾತ್ರ ಸೌರಶಕ್ತಿಯನ್ನು ನಾವು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಬಂದಿರತಕ್ಕಂಥ ಸೌರಶಕ್ತಿಯನ್ನು ಹಿಡಿದಿಟ್ಟುಕೊಳ್ಳಲಿಕ್ಕೆ ಆಗುವುದಿಲ್ಲ. ಅದು ಹೋಗಲಿಕ್ಕೆ

ಅದಕ್ಕೆ power station ಬೇಕಾಗುತ್ತದೆ. ನಮಗೆ 'ನಿರಂತರ ಜ್ಯೋತಿ' ಕಾರ್ಯಕ್ರಮಕ್ಕೂ ಸಹ ವಿದ್ಯುಚ್ಛಕ್ತಿ ಇರುವುದಿಲ್ಲ. ಈ ಸಮಸ್ಯೆಯ ಬಗ್ಗೆ ಸದನದಲ್ಲಿ ಚರ್ಚೆಯಾಗಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನನ್ನ ಸಹೋದರಿ ಮಾತನಾಡುತ್ತಾ ಅನ್ನದಾತರು ನಿಮಗೆ ಜ್ಞಾಪಕಕ್ಕೆ ಬರಲಿಲ್ಲವೇ ಎನ್ನುವ ಮಾತನ್ನು ಹೇಳಿದರು. ಅವರಿಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನಾ ಕಾರಣಗಳಿಂದ ರೈತಾಪಿ ವರ್ಗದವರು ಆತ್ಮಹತ್ಯೆಯನ್ನು ಮಾಡಿಕೊಂಡಾಗ ನಮ್ಮ ಸರ್ಕಾರ ಇವರಿಗೆ ಹೆಗಲು ಕೊಡುವಂಥ ಕೆಲಸವನ್ನು ಎಲ್ಲಿ ಮಾಡಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆತ್ಮಹತ್ಯೆ ಮಾಡಿಕೊಂಡು ರೈತನ ಕುಟುಂಬಕ್ಕೆ ಪರಿಹಾರದ ಮೊತ್ತ 2 ಲಕ್ಷ ರೂಪಾಯಿ ಇರುವುದನ್ನು 5 ಲಕ್ಷ ರೂಪಾಯಿಗಳಿಗೆ ಏರಿಸಿದ್ದಾರೆ. ಇದು ಈ ಸರ್ಕಾರಕ್ಕೆ ರೈತರ ಪರವಾಗಿ ಇರತಕ್ಕಂಥ ಒಂದು concern ಅಲ್ಲವೇ? ಅದಷ್ಟೇ ಅಲ್ಲ, ಅದರ ಜೊತೆಯಲ್ಲಿ ರೈತರ ವಿಧವಾ ಪತ್ನಿಯರಿಗೆ ವೇತನ ಮಾಸಿಕ 500 ರೂಪಾಯಿಯನ್ನು ಕೊಡುತ್ತಿದ್ದರು. ಈಗ ಇದನ್ನು 2000 ರೂಪಾಯಿಗೆ ಏರಿಸಿದ್ದಾರೆ. ಅವರ ಮಕ್ಕಳು ಒಂದು ವೇಳೆ ಹಾಸ್ಟೆಲ್‌ನಲ್ಲಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದರೆ ಅವರಿಗೆ ಉಚಿತವಾಗಿ ವಿದ್ಯಾಭ್ಯಾಸವನ್ನು ಕೊಡಲಾಗುವುದು ಎನ್ನುವ ಮಾತನ್ನು ಹೇಳಿದ್ದಾರೆ. ಅಷ್ಟೇ ಅಲ್ಲ, ಮೃತ ರೈತನ ಮಕ್ಕಳಿಗೆ ಸ್ನಾತಕ್ಕೋತ್ತರ ಪದವಿಯವರೆವಿಗೂ ಸರ್ಕಾರವೇ ಅವರಿಗೆ ಉಚಿತವಾಗಿ ವಿದ್ಯಾಭ್ಯಾಸವನ್ನು ಕೊಡಿಸುತ್ತದೆ ಎಂದು ಹೇಳಿರತಕ್ಕಂಥಾದ್ದು, ರೈತರ ಪರವಾಗಿ ಹೆಗಲು ಕೊಟ್ಟಿರತಕ್ಕಂಥ ಈ ಸರ್ಕಾರವನ್ನು ನಾನು ಅತ್ಯಂತ ಗೌರವಪೂರ್ವಕವಾಗಿ ಧನ್ಯವಾದವನ್ನು ಅರ್ಪಿಸುತ್ತೇನೆ. ಮೃತರ ಕುಟುಂಬದವರಿಗೆ 7 ಗಂಭೀರ ಖಾಯಿಲೆಗಳು ಬಂದರೆ ಅದಕ್ಕೆ ಚಿಕಿತ್ಸೆಯನ್ನು ಕೊಡಿಸಲು ನಮ್ಮ ಸರ್ಕಾರ ಸ್ಪಂದಿಸಿದೆ. ಅದು ರೈತರು ಇರಬಹುದು ಅಥವಾ ಮಹಿಳೆಯರು ಇರಬಹುದು. ಎಲ್ಲಾ ರೈತರ ಸಾಲ ಮನ್ನಾ ಮಾಡುವ ಮೂಲಕ ಹಲವಾರು ಜನಪರ ಯೋಜನೆಗಳ ಮೂಲಕ ನಮ್ಮ ಸರ್ಕಾರ ಇವತ್ತು ಕರ್ನಾಟಕದ ಜನತೆಗೆ ಬೇಕಾದಷ್ಟು ಸವಲತ್ತುಗಳನ್ನು ಮಾಡಿಕೊಟ್ಟು ಸಹಕರಿಸಿದೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ನೀಡಿದ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣವನ್ನು ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ಸುಮಾರು 31 ಪುಟಗಳಿವೆ, 60 ವಿಷಯಗಳು ಅಡಕವಾಗಿವೆ. ತನ್ನ ಸರ್ಕಾರದ ಸಾಧನೆಯನ್ನು ಅವರು ಹೆಮ್ಮೆಯಿಂದ ಉಲ್ಲೇಖ ಮಾಡಿದ್ದಾರೆ. ರಾಜ್ಯಪಲಾರ ಭಾಷಣದಲ್ಲಿ ಅವರು *"ನನ್ನ ಸರ್ಕಾರ ಸಮಾಜದ ಎಲ್ಲಾ ವರ್ಗಗಳ ಏಳಿಗೆಯನ್ನು ಸುನಿಶ್ಚಿತಗೊಳಿಸಲು ಬದ್ಧವಾಗಿದೆ. ಕಳೆದ 03 ವರ್ಷಗಳಲ್ಲಿ ರಾಜ್ಯದ ಸಮಸ್ತ ನಾಗರಿಕರಿಗೆ ಪಾರದರ್ಶಕ, ಸ್ಪಂದನಾತ್ಮಕ ಮತ್ತು ಉತ್ತರದಾಯಿತ್ವದ ಆಡಳಿತವನ್ನು ನೀಡುವುದಕ್ಕಾಗಿ ನನ್ನ ಸರ್ಕಾರ ನಿಶ್ಚಿತ ಗುರಿಯತ್ತ ಸಾಗುತ್ತಿದೆ."* ಎನ್ನುವ ಮಾತುಗಳನ್ನು ಹೇಳುತ್ತಾ ಮುಂದುವರೆದು *"ಪ್ರಜಾಪ್ರಭುತ್ವವನ್ನು ತಳಮಟ್ಟದಿಂದ ಬಲಪಡಿಸಲು ನನ್ನ ಸರ್ಕಾರ ಬದ್ಧವಾಗಿದೆ ಹಾಗೂ ಭಾರತದ ಸಂವಿಧಾನಕ್ಕೆ 73ನೇ ಮತ್ತು 74ನೇ ತಿದ್ದುಪಡಿಗಳನ್ನು ತರುವಲ್ಲಿ ಕಾರಣೀಭೂತರಾಗಿದ್ದಂಥ ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರ ಕನಸನ್ನು ನನಸಾಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ."* ಎಂದಿದೆ. ಅವರ ಕನಸಿನ ಯೋಜನೆಯನ್ನು ಅನುಷ್ಠಾನಗೊಳಿಸಲು ಅನೇಕ ಯೋಜನೆಗಳನ್ನು, ಗ್ರಾಮಾಭಿವೃದ್ಧಿಗಳನ್ನು ನನ್ನ ಸರ್ಕಾರ ಇಟ್ಟುಕೊಂಡಿದೆ ಎನ್ನುವಂಥ ಮಾತುಗಳನ್ನು ಹೇಳುತ್ತಾರೆ. ನಾವು ಗ್ರಾಮ ಪಂಚಾಯ್ತಿ ಚುನಾವಣೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದೇವೆ. ಅದೇ ರೀತಿ ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಯನ್ನು ಸಹ ನಡೆಸಿದ್ದೇವೆ. ಹೊಸ ಪ್ರತಿನಿಧಿಗಳು ಬಡವರ ಸೇವೆಯನ್ನು ಮಾಡಲಿ, ಅಭಿವೃದ್ಧಿಯ ಕಡೆಗೆ ಗಮನ ಕೊಡಲಿ ಎಂದು ಹಾರೈಸುವುದಾಗಿ ಗೌರವಾನ್ವಿತ ರಾಜ್ಯಪಾಲರು ಹೇಳುವುದನ್ನು ನಾನು ಕಂಡೆ.

ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿಯಲ್ಲಿ 4,995 ಮಂದಿ ಸದಸ್ಯರು ಜನಮತವನ್ನು ಪಡೆದು ಆಯ್ಕೆಯಾಗಿ ಬಂದಿದ್ದಾರೆ. ಗ್ರಾಮ ಪಂಚಾಯ್ತಿಗಳಲ್ಲಿ ಸುಮಾರು ಒಂದು ಲಕ್ಷ ಜನ ಸದಸ್ಯರಿದ್ದಾರೆ. ಹೆಚ್ಚು-ಕಡಿಮೆ ಒಂದು ಲಕ್ಷಕ್ಕೂ ಹೆಚ್ಚಿನ ಜನ ಸ್ಥಳೀಯ ಆಡಳಿತ ಸಂಸ್ಥೆಯ ಪ್ರತಿನಿಧಿಗಳಿಗೆ ಹೊಸ ಸಂದೇಶವನ್ನು ಮಾನ್ಯ ರಾಜ್ಯಪಾಲರು ನೀಡಿದ್ದಾರೆ ಎಂಬುದನ್ನು ನಾನು ಭಾವಿಸುವಾಗ ನನಗೆ ನೆನಪಾಗುವಂಥಾ ಒಂದು ವಿಚಾರವೆಂದರೆ, ಕರ್ನಾಟಕ ರಾಜ್ಯದಲ್ಲಿರುವ ಸುಮಾರು 6020 ಗ್ರಾಮ ಪಂಚಾಯ್ತಿಗಳಲ್ಲಿ 440 ಹೊಸ ಗ್ರಾಮ ಪಂಚಾಯ್ತಿಗಳ ರಚನೆಯಾಗಿದೆ. ಸರ್ಕಾರ ಪಂಚಾಯ್ತಿಗಳ ಪುನರ್ ವಿಂಗಡನೆಗೆ ಕೈ ಹಾಕಿ ಅದನ್ನು ಯಶಸ್ವಿಗೊಳಿಸಿತ್ತು. ನನಗೆ ಅನ್ನಿಸುವುದೇನೆಂದರೆ, ಯಾವ ಪುಣ್ಯಾತ್ಮ ಈ

ಕೆಲಸಕ್ಕೆ ಅನುಮೋದನೆಯನ್ನು ಕೊಟ್ಟರೋ ಅವರನ್ನು ದೇವರೇ ಕಾಪಾಡಬೇಕು. ಏಕೆಂದರೆ ಅತ್ಯಂತ ಸಣ್ಣ ಗ್ರಾಮ ಒಂದಿದ್ದರೆ, ಸಣ್ಣ ಪಂಚಾಯ್ತಿ ಇದ್ದರೆ 13 ಜನ ಸದಸ್ಯರಿರುವಂಥ ಒಂದು ಸಣ್ಣ ಪಂಚಾಯ್ತಿಯನ್ನು ವಿಂಗಡಿಸಿ ಒಂದನ್ನು 6 ಜನ ಸದಸ್ಯರು ಮತ್ತೊಂದನ್ನು 7 ಜನ ಸದಸ್ಯರು ಇರುವಂತೆ ಮಾಡಿದ್ದಾರೆ. ಆದರೆ 61 ಜನ ಸದಸ್ಯರಿರುವಂಥ ಸೋಮೇಶ್ವರ ಪಂಚಾಯ್ತಿಯನ್ನು ಮುಟ್ಟುವಂಥ ಪರಿಸ್ಥಿತಿಗೆ ಹೋಗಿಲ್ಲ. 20,000ಕಿಂತ ಹೆಚ್ಚಿನ ಜನಸಂಖ್ಯೆ ಇದ್ದು 61 ಜನ ಗ್ರಾಮ ಪಂಚಾಯ್ತಿ ಸದಸ್ಯರು ಕುಳಿತುಕೊಳ್ಳಬೇಕಾದಂಥ ಸದನ, ಇದ್ಯಾವ ಪರಿಸ್ಥಿತಿಯೂ ಸಹ ಅಲ್ಲಿ ಇಲ್ಲ. ಆದರೆ 13 ಜನ ಸದಸ್ಯರಿರುವ ಗ್ರಾಮ ಪಂಚಾಯ್ತಿ ವಿಂಗಡನೆಯಾಗಿದೆ. 61 ಜನ ಇರುವ ಗ್ರಾಮ ಪಂಚಾಯ್ತಿಯನ್ನು ಮುಟ್ಟುವ ಪರಿಸ್ಥಿತಿಗೆ ಹೋಗಿಲ್ಲ. ಅದೇ ರೀತಿ ಪಡುಬಿದ್ರೆಯಲ್ಲಿ 38 ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ ಹಾಗೂ ಶಿರೂರಿನಲ್ಲಿ 44 ಜನ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಆದರೆ ಇದನ್ನು ಸಹ ಮುಟ್ಟುವ ಪರಿಸ್ಥಿತಿಗೆ ಹೋಗಿಲ್ಲ. ಅದಾಗಿಯೂ 449 ಹೊಸ ಗ್ರಾಮ ಪಂಚಾಯ್ತಿಗಳ ರಚನೆಯಾಗಿ ಹೆಚ್ಚು-ಕಡಿಮೆ ಒಂದು ವರ್ಷವಾಗಿದೆ. ಈಗ ಗ್ರಾಮ ಪಂಚಾಯ್ತಿಗಳ ಚುನಾವಣೆಯಾಗಿ ಸುಮಾರು 8 ತಿಂಗಳುಗಳಾಗಿವೆ. ಆ ಎಲ್ಲಾ ಗ್ರಾಮ ಪಂಚಾಯ್ತಿಗಳು ಇವತ್ತು ಅಂಗನವಾಡಿಯಲ್ಲಿ, ಶಾಲೆಗಳಲ್ಲಿ, ದೇವಸ್ಥಾನದ ಜಗಲಿಯಲ್ಲಿ ಗ್ರಾಮ ಪಂಚಾಯ್ತಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಮಾನ್ಯ ಸಭಾನಾಯಕರು ಒಂದು ಅಂಶವನ್ನು ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. ಅವರು ಈ ಕಡೆ ಕುಳಿತುಕೊಂಡು ವಿರೋಧ ಪಕ್ಷದ ಮುಖಂಡರಾಗಿದ್ದಾಗ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಮತ್ತು ಉಗ್ರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ನಾನು ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದೆ. ಆಗ ಅವರೇನು ಹೇಳುತ್ತಿದ್ದರೆಂದರೆ, ಆಳುವ ಸರ್ಕಾರ ಹೇಳಿದ ಪ್ರತಿಯೊಂದನ್ನು ಅರ್ಥ ಮಾಡಿಕೊಳ್ಳಬೇಕು, ಅದನ್ನು ವ್ಯವಸ್ಥಿತವಾಗಿ ಅನುಷ್ಠಾನ ಮಾಡಬೇಕು. ಇದನ್ನು ಪ್ರತಿಪಕ್ಷದ ಜವಾಬ್ದಾರಿಯಾಗಿ ನಾವು ನಿರ್ವಹಿಸುತ್ತೇವೆನ್ನುವಂಥ ಮಾತುಗಳನ್ನು ಕಠೋರವಾಗಿ ಹೇಳುತ್ತಿದ್ದರು. ಆದರೆ ಅವರು ಆಡಳಿತ ಪಕ್ಷದ ಕಡೆಗೆ ಹೋದ ನಂತರ ಈಗ ಅವರ ಮಾತುಗಳಲ್ಲಿ ಆ ತನ್ಮಯತೆ ಇಲ್ಲವೇನೋ ಎನ್ನುವಂಥ ಆತಂಕ ನನಗೆ ಕಾಡುತ್ತದೆ. ಅವರು ತಪ್ಪು ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ ಆತಂಕ ನನಗೆ ಕಾಡುತ್ತದೆ ಎನ್ನುವ ಮಾತುಗಳನ್ನು ನಾನು ಹೇಳಲೇಬೇಕಾಗುತ್ತದೆ. 449 ಹೊಸ ಗ್ರಾಮ ಪಂಚಾಯ್ತಿಗಳಲ್ಲಿ ಪೀಠೋಪಕರಣಕ್ಕೆ 12 ಲಕ್ಷ ರೂಪಾಯಿಯನ್ನು, ಹೊಸ ಗ್ರಾಮ ಪಂಚಾಯ್ತಿಗಳಿಗೆ ಅಭಿವೃದ್ಧಿ ನಿಧಿ ಎಂದು 20 ಲಕ್ಷ ರೂಪಾಯಿಯನ್ನು ಕೊಡುತ್ತೇವೆ ಎನ್ನುವ ಮಾತುಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಮತ್ತು ಸರ್ಕಾರ ಇದನ್ನು ವಿಂಗಡಣೆ ಮಾಡುವಂಥ ಸಂದರ್ಭದಲ್ಲಿ

ಬಜೆಟ್‌ನಲ್ಲಿ ಹೇಳಿತ್ತು. ಈಗ ಒಂದು ವರ್ಷವಾದರೂ ಸಹ 12 ಲಕ್ಷ, 20 ಲಕ್ಷ ರೂಪಾಯಿ ಬಿಡಿ, ಇದುವರೆವಿಗೂ ಒಂದು ರೂಪಾಯಿಯನ್ನು ಸಹ ಕೊಟ್ಟಿಲ್ಲ. ಆ ಗ್ರಾಮ ಪಂಚಾಯ್ತಿಗಳಲ್ಲಿ ಕುರ್ಚಿ–ಟೇಬಲ್‌ಗಳಿಲ್ಲ, ಕಂಪ್ಯೂಟರ್‌ಗಳಿಲ್ಲ. ಹೊಸದಾಗಿ ವಿಂಗಡಣೆಯಾದುದಕ್ಕೆ ಸಿಬ್ಬಂದಿಗಳು ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ತೆರಿಗೆಯನ್ನು ವಸೂಲು ಮಾಡಲಿಕ್ಕೆ ಆ ಪಂಚತಂತ್ರದಲ್ಲಿ ಅಳವಡಿಕೆಗಳು ಸಹ ಆಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀವು ಗ್ರಾಮಾಭಿವೃದ್ಧಿ ಬಗ್ಗೆ ಮಾತನಾಡುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಒಂದು ವಿಚಾರವೇನೆಂದರೆ, ಒಂದು ರೂಪಾಯಿಯನ್ನು ಹೊಸ ಗ್ರಾಮ ಪಂಚಾಯ್ತಿಗಳಿಗೆ ಕೊಟ್ಟಿಲ್ಲ, ಶಾಸನಬದ್ಧ ಅನುದಾನವನ್ನು ಸಹ ಕೊಟ್ಟಿಲ್ಲ. ಯಾವುದೇ ರೀತಿಯಲ್ಲಿ ಅಲ್ಲಿ ಮೇಜು–ಕುರ್ಚಿಗಳಿಲ್ಲ, ಕಛೇರಿಗಳು ಲಭ್ಯವಿಲ್ಲ, ಸಿಬ್ಬಂದಿಗಳನ್ನು ಹಾಕಿಲ್ಲ. ಇವರು ರಾಜೀವ್ ಗಾಂಧೀಯವರ ಕನಸುಗಳನ್ನು ನನಸು ಮಾಡುತ್ತೇವೆಂದು ಹೇಳುತ್ತಾರಲ್ಲಾ, ಇದನ್ನು ಯಾವ ಆಧಾರದಲ್ಲಿ ಹೇಳುತ್ತಿದ್ದಾರೆ? ಸರ್ಕಾರ ಇದಕ್ಕೆ ಉತ್ತರವನ್ನು ಕೊಡಬಹುದು ಎಂದುಕೊಂಡಿದ್ದೇನೆ. ನನ್ನ ಒಂದು ಆಗ್ರಹ ಇರುವಂಥಾದ್ದು, ದಯವಿಟ್ಟು ಇವರು ಇಲ್ಲಿ ಕಥೆಯನ್ನು ಹೇಳುವುದು ಬೇಡ. ಹಣವನ್ನು ಬಿಡುಗಡೆ ಮಾಡಲಿಕ್ಕೆ ಯೋಜನೆಗಳನ್ನು ಮಾಡಲಿ. ತಕ್ಷಣವೇ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಸರ್ಕಾರದ ಉತ್ತರದಲ್ಲಿ ಬರಬೇಕು. ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ನೀವು ಸಭಾನಾಯಕರು ಅವರಿಗೆ ಇಂತಹ ಕಡೆ ತಪ್ಪಾಗಿದೆ, ಕಟ್ಟಡಕ್ಕೆ 20 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ, 12 ಲಕ್ಷ ರೂಪಾಯಿ ಅಭಿವೃದ್ಧಿ ನಿಧಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ ಮತ್ತು ಹೊಸ ಸಿಬ್ಬಂದಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಯಾವುದಕ್ಕೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಪಂಚತಂತ್ರದಲ್ಲಿ ರಶೀದಿಯನ್ನು ಮಾಡಲಿಕ್ಕೂ ಸಹ ಅವಕಾಶಗಳನ್ನು ಕೊಟ್ಟಿಲ್ಲ. ಮನೆ–ಮಠಗಳನ್ನು ಕೊಡಲಿಕ್ಕೆ, ಶೌಚಾಲಯಗಳನ್ನು ಕೊಡಲಿಕ್ಕೆ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಆ ಕಾರಣಕ್ಕೋಸ್ಕರ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ಉತ್ತರವನ್ನು ಕೊಡುವಾಗ ಈ ಎಲ್ಲಾ ಯೋಜನೆಗಳಿಗೆ ತಕ್ಷಣವೇ ಹಣವನ್ನು ಬಿಡುಗಡೆ ಮಾಡಿಸುತ್ತೇವೆನ್ನುವ ಉತ್ತರವನ್ನು ಕೊಡಿಸುವಂಥ ಜವಾಬ್ದಾರಿ ಮಾನ್ಯ ಸಭಾನಾಯಕರು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಯೋಜನೆ ಅಲ್ಲ, ಗ್ರಾಮ ಪಂಚಾಯ್ತಿಗೆ ಹಣಕಾಸನ್ನು ಬಿಡುಗಡೆ ಮಾಡಿಲ್ಲ, ಸಿಬ್ಬಂದಿಗಳನ್ನು ಒದಗಿಸಿಲ್ಲ, ಪಂಚತಂತ್ರದಲ್ಲಿ ಅಳವಡಿಕೆಯನ್ನು ಮಾಡಿಕೊಂಡಿಲ್ಲ.

**ಶ್ರೀ ಗೋ.ಮಧುಸೂದನ್:-** ಅದಕ್ಕೋಸ್ಕರ ಯೋಜನೆಗಳನ್ನೇ ಬಿಡುಗಡೆ ಮಾಡುತ್ತೇವೆನ್ನುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಅವರು ತಪ್ಪು ಹೇಳಿದರು. ಹಣಕಾಸನ್ನು ಬಿಡುಗಡೆ ಮಾಡಿ ಎನ್ನುವುದಕ್ಕೆ ಯೋಜನೆಗಳನ್ನು.....

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರಿಗೆ ಗುರುತರವಾದ ಜವಾಬ್ದಾರಿಗಳಿವೆ. ಮೊನ್ನೆಯಷ್ಟೇ ಅವರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಬಹುಮತದಿಂದ ಆಯ್ಕೆಯಾಗಿ ಬಂದಿದ್ದಾರೆ. ನಮಗೆ ಅವರ ಬಗ್ಗೆ ಬಹಳ ಹೆಮ್ಮೆ ಇದೆ. ನಮ್ಮ ಸ್ಥಳೀಯ ಆಡಳಿತ ಸಂಸ್ಥೆಯಿಂದ ಆಯ್ಕೆಯಾಗಿರುವವರು ಖಾಯಂ ಸಭಾನಾಯಕರಾಗಿದ್ದಾರೆಂದು ನಾವು ಬಹಳ ಖುಷಿ ಪಟ್ಟವರು. ಈ ಎಲ್ಲಾ ವಿಚಾರಗಳನ್ನು ಅದನ್ನು ತಾವು ತಲುಪಿಸುತ್ತೀರಿ ಮತ್ತು ಅದನ್ನು ಅನುಷ್ಠಾನ ಮಾಡುತ್ತೀರಿ ಎನ್ನುವಂಥ ವಿಚಾರದಲ್ಲಿ ನಮಗೆ ವಿಶ್ವಾಸವಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಮುಂದುವರೆದು ಹೇಳುವುದಾದರೆ, ಪ್ಯಾರಾ 31ರಲ್ಲಿ ಮಾನ್ಯ ರಾಜ್ಯಪಾಲರು ಒಂದು ಮಾತನ್ನು ಹೇಳುತ್ತಾರೆ. "ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ನ್ಯಾಯವನ್ನೊದಗಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಕೊಡುವಂಥ ಭರವಸೆಗಳಿವೆ. ಅತ್ಯಂತ ವ್ಯವಸ್ಥಿತವಾಗಿ ಈ ಯೋಜನೆಯನ್ನು ರೂಪಿಸಿದ್ದೇವೆ." ಎನ್ನುವಂಥ ಮಾತುಗಳನ್ನು ಹೇಳುತ್ತಾರೆ. ಕಳೆದ ಅಧಿವೇಶನದಲ್ಲಿ ನಡೆದ ಘಟನೆಯನ್ನು ನಾನು ಮಾನ್ಯ ಸಭಾನಾಯಕರ ಗಮನಕ್ಕೆ ತರಬೇಕು. ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಕರ್ನಾಟಕ ರಾಜ್ಯದಲ್ಲಿ ಸುಮಾರು 3,000ಕ್ಕಿಂತ ಹೆಚ್ಚಿನ ಹಾಸ್ಟೆಲ್‌ಗಳಿವೆ. ಸುಮಾರು 2 ಲಕ್ಷಕ್ಕಿಂತ ಹೆಚ್ಚಿನ ಜನ ವಿದ್ಯಾರ್ಥಿಗಳು ಈ ಹಾಸ್ಟೆಲ್‌ಗಳಲ್ಲಿದ್ದಾರೆ. ಈ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಊಟವನ್ನು ಒದಗಿಸಿಲ್ಲ, ಸರಿಯಾದ ವಸತಿ ವ್ಯವಸ್ಥೆ ಇಲ್ಲ, ಶೌಚಾಲಯಗಳಿಲ್ಲ, ಸ್ನಾನದ ಗೃಹಗಳಿಗೆ ಬಾಗಿಲುಗಳಿಲ್ಲ. ಆ ಮಕ್ಕಳಿಗೆ ಬೂಟ್ಸ್ ಕೊಟ್ಟಿಲ್ಲ, ತಟ್ಟೆ-ಲೋಟಗಳನ್ನು ಕೊಟ್ಟಿಲ್ಲ ಎನ್ನುವಂಥ ವಿಚಾರಗಳನ್ನು ನಾವು ಸರ್ಕಾರದ ಮುಂದಿಟ್ಟೆವು. ಈ ಸದನದಲ್ಲಿ ಸಮಾಜ ಕಲ್ಯಾಣ ಸಚಿವರಾದ ಶ್ರೀ ಆಂಜನೇಯರವರು ಅದಕ್ಕೆ ಉತ್ತರವನ್ನು ಕೊಡುತ್ತಾ "ನಿಮ್ಮ ಆರೋಪಗಳು ಸರಿ ಇದೆ. 19 ಕೋಟಿ ರೂಪಾಯಿ ಹಾಸಿಗೆ ಮತ್ತು ದಿಂಬುಗಳ ಖರೀದಿಯಲ್ಲಿ ದುರುಪಯೋಗವಾಗಿದೆ, ವಂಚನೆಯಾಗಿದೆ, ಭ್ರಷ್ಟಾಚಾರವಾಗಿದೆ ಎಂದು ಇದೇ ಸದನದಲ್ಲಿ ಒಪ್ಪಿಕೊಂಡರು.

ನಾವು ಬಾವಿಗಿಳಿದು  ಇದನ್ನು ಸಮಗ್ರವಾಗಿ ತನಿಖೆ ಮಾಡಿ ಎನ್ನುವ ಮಾತನ್ನು ಹೇಳಿದೆವು.  ಕಡೆಗೆ ಖಾಸಗಿಯಾಗಿ ಮಾತನಾಡುತ್ತಾ ಈಗ ಒಂದು ತನಿಖಾ ಸಮಿತಿಯನ್ನು ಮಾಡಿ, ಆ ಸಮಿತಿಗೆ ನಮ್ಮ ಉಗ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ಹೇಳಿದೆವು.  ಏಕೆಂದರೆ ಮಾನ್ಯ ಉಗ್ರಪ್ಪನವರು ಇಡೀ ರಾಜ್ಯದಲ್ಲಿ ಓಡಾಟವನ್ನು ಮಾಡಿ ಒಂದು ರೀತಿಯ ಬಿರುಸಿನ ಚಟುವಟಿಕೆಯನ್ನು ಮಾಡುವುದರ ಮೂಲಕ ಈ ಹಾಸ್ಟೆಲ್‌ಗಳಿಗೆ ಹೊಸ ಕಾಯಕಲ್ಪವನ್ನು ಕೊಡಬಹುದು ಎನ್ನುವ ಆಸೆ ನಮಗಿದೆ.  ಅವರಿಗೆ ನಮ್ಮ ಮೇಲೆ ಪ್ರೀತಿ ಇಲ್ಲ ಎನ್ನುವಂಥಾದ್ದು ಗೊತ್ತಿದ್ದರೂ ಸಹ ಅವರ ಮೇಲೆ ನಮಗೆ ವಿಶ್ವಾಸ ಉಂಟು ಎನ್ನುವುದನ್ನು ಹೇಳುವುದಕ್ಕೋಸ್ಕರ ಈ ಮಾತುಗಳನ್ನು ಹೇಳಬೇಕಾಯಿತು.  ಇಂತಹ ವ್ಯವಸ್ಥೆಗಳ ನಡುವೆ ನಮಗೆ ಅನ್ನಿಸಿದ್ದು ಏನೆಂದರೆ, ಸರ್ಕಾರ ತಕ್ಷಣವೇ ಇದಕ್ಕೊಂದು ಸಮಿತಿಯನ್ನು ಮಾಡುತ್ತಾರೆ.  ಅಹಿಂದ ಸರ್ಕಾರ ಬಡವರ ಮಕ್ಕಳ ಬಗ್ಗೆ ಯೋಚನೆಯನ್ನು ಮಾಡುತ್ತಾರೆ, ದುರ್ಬಲ ಮಕ್ಕಳ ಬಗ್ಗೆ ವಿಶ್ವಾಸವಿದೆ ಎನ್ನುವ ಕಾರಣಕ್ಕೋಸ್ಕರ....

**ಶ್ರೀ ವಿ.ಎಸ್.ಉಗ್ರಪ್ಪ:–** ನಿಮ್ಮ ಮೇಲೆ ಪ್ರೀತಿ ಇಲ್ಲವೆಂದು ನೀವೇಕೆ ತಿಳಿದುಕೊಳ್ಳುತ್ತೀರಿ?

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಆ ರೀತಿ ಹೇಳಲಿಲ್ಲ. ನಮ್ಮ ಅನುಭವವೇನೆಂದರೆ, ಮಧ್ಯದಲ್ಲಿ ನಾವು ಮಾತನಾಡುವಾಗ ಮಾನ್ಯ ಉಗ್ರಪ್ಪನವರು ಅಡ್ಡ ಬರುವುದನ್ನು ನೋಡಿದರೆ ಅವರಿಗೆ ನಮ್ಮ ಮೇಲೆ ಪ್ರೀತಿ ಕಡಿಮೆ ಇದೆಯೇನೋ ಎಂದು ನಮಗೆ ಅನ್ನಿಸಿತ್ತು. ಅಷ್ಟಾಗಿಯೂ ಅವರ ಮೇಲೆ ನಮಗೆ ವಿಶೇಷವಾದ ಗೌರವವಿದೆ ಎನ್ನುವುದನ್ನು ನೆನಪು ಮಾಡಿಕೊಂಡೆ. ಇದು ತಪ್ಪಲ್ಲ, ಸತ್ಯ ಹೇಳಿದ್ದೇನೆ.

ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಬಹುದು. 19 ಕೋಟಿ ರೂಪಾಯಿ ಭ್ರಷ್ಟಾಚಾರವನ್ನು ಸರ್ಕಾರ ಬಯಲಿಗೆಳೆಯಬಹುದು, ಅವರಿಗೆ ಶಿಕ್ಷೆಯನ್ನು ಕೊಡಬಹುದು.  ಧ್ವನಿ ಇಲ್ಲದೇ ಇರುವಂಥ ಮಕ್ಕಳಿಗೆ ಸರ್ಕಾರ ಅವಕಾಶ ಮಾಡಿಕೊಡಬಹುದೆಂದು ಹೇಳಿದರೆ, ನೀವು ಖಾಯಂ ಬಾವಿಯಲ್ಲಿಯೇ ಕುಳಿತುಕೊಳ್ಳಿ. ನಾವಿದನ್ನು ಮಾಡುವುದಿಲ್ಲವೆಂದು ಸರ್ಕಾರ ಪಟ್ಟು ಹಿಡಿಯಿತು.  ಇದು ಅಹಿಂದ ಸರ್ಕಾರ.  ಸರ್ಕಾರದ ನಿಲುವು ಅದೇ ಆಗಿದ್ದರೆ ನಾವು ಪ್ರಶ್ನೆ ಮಾಡಿಲಿಕ್ಕಿಲ್ಲ.  ನಾವಿದನ್ನು ಜನರ ಮುಂದೆ ಹೇಳುತ್ತೇವೆಂದು ವಾಪಸ್ ಬಂದೆವು.  ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ, ಮಾನ್ಯ

ಈಶ್ವರಪ್ಪನವರು ನೀವಿದನ್ನು ಅಧ್ಯಯನ ಮಾಡುತ್ತಿಲ್ಲ. ಇದನ್ನು ನಮ್ಮ ಪಕ್ಷದಿಂದ ನಾವು ಅಧ್ಯಯನ ಮಾಡುತ್ತೇವೆಂದು ಹೇಳಿದರು. 30 ಜಿಲ್ಲೆಯ 178 ತಾಲ್ಲೂಕುಗಳಲ್ಲಿ ನಾವು ಅಧ್ಯಯನ ಮಾಡಿದೆವು. ಎಂತಹ ಒಂದು ದುರಂತ ಪರಿಸ್ಥಿತಿ ಎಂದರೆ, ಅಲ್ಲಿರುವಂಥ ಶೌಚಾಲಯಕ್ಕೆ ಹೋಗಲಿಕ್ಕೆ ಸಾಧ್ಯವೇ ಇಲ್ಲ. ಆ ಮಕ್ಕಳಿಗೆ ಸ್ನಾನ ಮಾಡಲಿಕ್ಕೆ ನೀರಿಲ್ಲ, ತಟ್ಟೆ-ಲೋಟಗಳಿಲ್ಲ, ಬಟ್ಟೆಯನ್ನು ಕೊಟ್ಟಿಲ್ಲ. ಯಾರ್‍ಯಾರದ್ದೋ ಒಂದು ರೀತಿಯ ದವಲತ್ತಿನಲ್ಲಿ ಆ ಕಾಲೇಜುಗಳು ನಡೆಯುತ್ತಿವೆ. ಮಾನ್ಯ ಉಗ್ರಪ್ಪನವರು ಒಂದು ಅಂಶವನ್ನು ಗಮನಿಸಬೇಕು. ನಾನು 178 ತಾಲ್ಲೂಕುಗಳು ಎಂದು ಹೇಳಿದೆ. ಆದರೆ 176 ತಾಲ್ಲೂಕುಗಳು ಎಂದಾಗಬೇಕು. ನಾನು ಹಿಂದುಳಿದ ವರ್ಗದವನು ಮಾತನಾಡುವಾಗ ಒಂದೆರಡು ತಾಲ್ಲೂಕುಗಳು ಹೆಚ್ಚು-ಕಡಿಮೆಯಾಗಿರಬಹುದು. ನನ್ನ ಮನಸ್ಸಿನಲ್ಲಿ ಏನಿತ್ತು ಎಂದರೆ, ನಮ್ಮ ಸರ್ಕಾರ ಇರುವಾಗ 43 ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದೆವು. ಅದನ್ನು ಅನುಷ್ಠಾನಕ್ಕೆ ತರುತ್ತೇವೆಂದು ಈ ಸರ್ಕಾರ ಹೇಳಿ ಮೂರು ವರ್ಷಗಳಾಗುತ್ತಾ ಬಂತು. ಈ ಮಧ್ಯದಲ್ಲಿ ಕಿತ್ತೂರು ಸೇರಿದಂತೆ 2 ತಾಲ್ಲೂಕುಗಳನ್ನು ನಮ್ಮ ಸರ್ಕಾರ ಘೋಷಣೆ ಮಾಡಿಬಿಟ್ಟಿತ್ತು. ಅವೆರಡು ತಾಲ್ಲೂಕುಗಳು ಸೇರಿದಂತೆ ನಮ್ಮ ಲೆಕ್ಕದಲ್ಲಿ 178 ತಾಲ್ಲೂಕುಗಳು. ಅದನ್ನು ಮಾನ್ಯ ಸದಸ್ಯರು ಸರಿಪಡಿಸಿದ್ದಾರೆ. ಅವರ ಆಡಳಿತಾವಧಿಯ ಇನ್ನೆರಡು ವರ್ಷಗಳಲ್ಲಿ ಅವರು 43 ತಾಲ್ಲೂಕುಗಳ ಬಗ್ಗೆ ಹೇಳುವುದು ಬಿಟ್ಟರೆ ಅದನ್ನು ಮಾಡುವುದಿಲ್ಲ ಎಂದು ಖಚಿತವಾದ ವಿಶ್ವಾಸ ನಮಗಿರುವುದರಿಂದ ನನ್ನ ಅಂಕಿ-ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾದರೆ ಕ್ಷಮಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

(ಮುಂದು)

(ಪೀಠದಲ್ಲಿ ಉಪಸಭಾಪತಿಗಳ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್:–** ಕಿತ್ತೂರು 176ನೇ ತಾಲ್ಲೂಕು. . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** 43 ತಾಲ್ಲೂಕುಗಳನ್ನು ರಚನೆ ಮಾಡುತ್ತೇವೆ ಎಂದು ಈ ಸದನದಲ್ಲಿ ಮುಖ್ಯಮಂತ್ರಿಗಳ ಸಹಿತ, ಕಂದಾಯ ಮಂತ್ರಿಗಳ ಸಹಿತ ಭರವಸೆ ಕೊಟ್ಟು 3 ವರ್ಷವಾಗುತ್ತಾ ಬಂತು. ಸರ್ಕಾರಕ್ಕೆ ಇನ್ನು 2 ವರ್ಷ ಮಾತ್ರ ಉಳಿದಿದೆ. ಈ 2 ವರ್ಷದಲ್ಲಿ ನೀವು ಮಾಡುವುದಿಲ್ಲ ಎಂದು . . .

**ಶ್ರೀ ವಿ.ಎಸ್.ಉಗ್ರಪ್ಪ:–**ತಾಲ್ಲೂಕಿನ ಸಂಖ್ಯೆಗಳ ಬಗ್ಗೆ ನೀವು ಹೇಳುವಾಗ, 178 ತಾಲ್ಲೂಕುಗಳಿಗೆ ಹೋಗಿ ಅಧ್ಯಯನ ಮಾಡಿಕೊಂಡು ಬಂದೆವು ಎಂದು ಹೇಳಿದಿರಿ, ಅದಕ್ಕೋಸ್ಕರ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಂಖ್ಯೆ ಹೇಳುವುದರಲ್ಲಿ ಹೆಚ್ಚು–ಕಡಿಮೆಯಾಯಿತು. ನಮ್ಮ ದೃಷ್ಟಿಯಲ್ಲಿ, ಕಿತ್ತೂರು ಸೇರಿದಂತೆ 43 ತಾಲ್ಲೂಕುಗಳನ್ನು ನಾವು ಮಾಡಿದ್ದರಿಂದ, ಎರಡು ತಾಲ್ಲೂಕುಗಳಿಗೆ ವಿಶೇಷವಾದ ಪ್ರಸ್ತಾವ ಕೊಟ್ಟಿದ್ದರಿಂದ 178 ತಾಲ್ಲೂಕುಗಳೆಂದು ಲೆಕ್ಕ ಮಾಡಿದೆ. ತಪ್ಪು ಹುಡುಕುವುದರಲ್ಲಿ ಮಾನ್ಯ ಉಗ್ರಪ್ಪನವರು ಬುದ್ಧಿವಂತರು ಎನ್ನುವುದು ನಮಗೆ ಗೊತ್ತು. ತಪ್ಪಾಗಿದ್ದರೆ ಅದನ್ನು ಮರೆತುಬಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಉಗ್ರಪ್ಪನವರೇ ನೀವು ಯಾವಾಗಲೂ, ದಲಿತರ ಬಗ್ಗೆ, ಬಡವರ ಬಗ್ಗೆ, ದುರ್ಬಲರ ಬಗ್ಗೆ, ಅಸಹಾಯಕರ ಬಗ್ಗೆ, ನೊಂದವರ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತೀರಿ. . .

**ಶ್ರೀ ಐವನ್ ಡಿ'ಸೋಜಾ:–** ಅಲ್ಪಸಂಖ್ಯಾತರ ಬಗ್ಗೆ ಹೇಳಲಿಲ್ಲ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಐವನ್‌ರವರು ಇನ್ನೂ ಅಲ್ಪಸಂಖ್ಯಾತರು–ಬಹುಸಂಖ್ಯಾತರು ಎಂದು ಬದಲಾವಣೆ ಮಾಡುವುದರಲ್ಲೇ ಇದ್ದಾರೆ. ನನ್ನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎನ್ನುವ ಕಾರಣಕ್ಕೆ ಅಲ್ಪಸಂಖ್ಯಾತರು ಎಂದು ಹೇಳಲಿಲ್ಲ. ಅಲ್ಪಸಂಖ್ಯಾತರು ಬೇರೆ ಎಂದು ನೀವು

ತಿಳಿದುಕೊಳ್ಳಲೇ ಬೇಡಿ. ಮಾನ್ಯ ಸಭಾಪತಿಗಳೆ, ಅಸ್ಪೃಶ್ಯ ಮಕ್ಕಳಿಗೆ ಸರ್ಕಾರ ಸಾಮಾಜಿಕ ನ್ಯಾಯ ಕೊಡಬೇಕು ಎನ್ನುವ ಮನಸ್ಸು ಇದ್ದರೆ . . .

**ಉಪಸಭಾಪತಿಗಳು:–** ಮಾನ್ಯ ಪೂಜರಿಯವರೇ, ನಿಮ್ಮ ಸಮಯ ಮುಗಿಯುತ್ತಿದೆ. 12.11 ಗಂಟೆಗೆ ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತುತ್ತು ಊಟ ಮಾಡುವ ಆ ಮಕ್ಕಳಿಗೆ ಸಾಮಾಜಿಕ ನ್ಯಾಯ ಕೊಡಬೇಕು ಎಂದು ಸರ್ಕಾರದ ಮನಸ್ಸಿನಲ್ಲಿದ್ದರೆ, ಒಂದು ಸಮಿತಿಯನ್ನು ರಚನೆ ಮಾಡಿದಿದ್ದರೆ, ಇಷ್ಟು ಹೊತ್ತಿಗೆ ಆ 3 ಸಾವಿರ ಹಾಸ್ಟೆಲ್‌ಗಳು ಒಂದು ಸುಸ್ಥಿತಿಗೆ ಬರುತ್ತಿತ್ತು. ಆ ಪರಿಸ್ಥಿತಿ ನೀವು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಉಗ್ರಪ್ಪನವರು ಮಾತನಾಡುವಾಗ ಬೇರೆ ಬೇರೆ ಕತೆಗಳನ್ನು ಹೇಳುತ್ತಾರೆ. ನನಗೂ ಒಂದು ಕತೆ ಜ್ಞಾಪಕಕ್ಕೆ ಬರುತ್ತಿದೆ. ಏಕಲವ್ಯ ಬಿಲ್ವಿದೆ ಕಲಿಯಬೇಕೆಂದು ದ್ರೋಣಾಚಾರ್ಯರ ಹತ್ತಿರ ವಿನಂತಿ ಮಾಡುತ್ತಾನೆ. ಆತನನ್ನು ನೋಡಿದ ದ್ರೋಣಚಾರ್ಯರು, ನೀನು ಅಸ್ಪೃಶ್ಯ ಆ ಕಾರಣಕ್ಕೋಸ್ಕರ ವಿದ್ಯೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆಗ ಏಕಲವ್ಯ ಅವರ ಒಂದು ಪ್ರತಿಮೆಯನ್ನು ಮಾಡಿ, ಅದನ್ನು ನೋಡಿಯೇ ಬಿಲ್ವಿದ್ಯೆ ಕಲಿತು ಪಾರಂಗತನಾದ. ಆ ಸಂದರ್ಭದಲ್ಲಿ ಆ ಬೇಡನ ಹುಡುಗನನ್ನು ನಿಯಂತ್ರಣ ಮಾಡಬೇಕಿತ್ತು. ದ್ರೋಣಾಚಾರ್ಯರು ಕಾಡಿಗೆ ಬಂದು ಏಕಲವ್ಯನನ್ನು ಕುರಿತು, ನೀನು ನನ್ನನ್ನು ಗುರು ಎಂದು ಸ್ವೀಕಾರ ಮಾಡಿದ್ದಿ, ಗುರುದಕ್ಷಿಣೆ ಕೊಡಬೇಕು ಎಂದು ಆತನ ಹೆಬ್ಬೆಟ್ಟನ್ನೇ ಕೇಳಿದರಂತೆ. ಏಕೆಂದರೆ ಆತ ಬಿಲ್ವಿದ್ವೆ ಪ್ರದರ್ಶನ ಮಾಡಬಾರದು ಎನ್ನುವುದು ಉದ್ದೇಶವಾಗಿತ್ತು. ಆ ಕಾಡಿನಲ್ಲಿರುವ ಒಂದು ಕೋಣ, ವಿದ್ಯೆಯನ್ನು ಕೊಡಲಿಲ್ಲ, ಹೆಬ್ಬೆರಳನ್ನು ಬಿಡಲಿಲ್ಲ, ಹೇಳು ದ್ರೋಣ, ನಾಡಿನ ನ್ಯಾಯ ಇದೇ ಏನು? ಎಂದು ಹೇಳುತ್ತದೆಯಂತೆ. ಇವತ್ತಿನ ಪರಿಸ್ಥಿತಿಯಲ್ಲಿ ಸಿದ್ಧರಾಮಯ್ಯನವರು ಎಲ್ಲಿಯಾದರೂ ಆ ಬಡವರ ಮಕ್ಕಳಿಗೆ, ಅನಾಥ ಮಕ್ಕಳಿಗೆ ಸಿಕ್ಕಿದರೆ ಅವರು, ಊಟ–ಬಟ್ಟೆಯನ್ನು ಕೊಡಲಿಲ್ಲ, ಭ್ರಷ್ಟಾಚಾರ–ಲಂಚಗುಳಿತನವನ್ನು ಬಿಡಲಿಲ್ಲ, ಹೇಳು ಸಿದ್ಧರಾಮಣ್ಣ, ಸರ್ಕಾರದ ಸಾಮಾಜಿಕ ನ್ಯಾಯ ಇದೇ ಏನು? ಎಂದು ಹಾಲುಗಲ್ಲದ ಮಕ್ಕಳು ಕೇಳುವಂತಹ ಪರಿಸ್ಥಿತಿಗೆ ಸರ್ಕಾರ ನಿಂತುಬಿಟ್ಟಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಆ ರೀತಿ ನಿಮ್ಮನ್ನು ಕೇಳಿರಬೇಕು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿಮ್ಮನ್ನು ಕೇಳುತ್ತಾರೆ ಎಂದು ಹೇಳುತ್ತಿದ್ದೇನೆ. ನೀವು ಅಲ್ಲಿ ಹೋಗಿ ಗೊತ್ತಾಗುತ್ತದೆ. ಸಾಮಾಜಿಕ ನ್ಯಾಯಕ್ಕೆ ಬದ್ಧವಾದ ಸರ್ಕಾರ ಎಂದು ಹೇಳುತ್ತೀರಿ, ಆದರೆ ಒಂದು ಸಮಿತಿಯನ್ನು ರಚನೆ ಮಾಡಲಿಲ್ಲ. ಬಡವರ ಬಗ್ಗೆ, ದುರ್ಬಲರ ಬಗ್ಗೆ, ನೊಂದವರ ಬಗ್ಗೆ ಧ್ವನಿ ಎತ್ತುತ್ತೇವೆ ಎಂದು ಹೇಳುವ ಸರ್ಕಾರ ನಿಮ್ಮದು. ವಿರೋಧ ಪಕ್ಷವಾಗಿ ನಾವು, ಒಂದು ಸಮಿತಿ ಮಾಡಿ ಎಂದು ಆಗ್ರಹ ಪಡಿಸದೆವು. ಆ ಸಮಿತಿ ಎಲ್ಲಾ ಹಾಸ್ಟೆಲ್‌ಗಳಿಗೆ ಹೋಗಲಿ, ಆ ಮಕ್ಕಳ ದುಸ್ಥಿತಿಯನ್ನು ನೋಡಲಿ, ತುತ್ತು ಅನ್ನಕ್ಕಾಗಿ ಕಷ್ಟಪಡುವ ವ್ಯವಸ್ಥೆಗಳನ್ನು ನೋಡಿ . . .ನಿನ್ನೆ ಒಂದು ಮಾಧ್ಯಮದಲ್ಲಿ, ಸುಮಾರು 20 ಅಂಗವಿಕಲ ಮಕ್ಕಳು, ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ, ನಮಗೆ ಊಟ ಕೊಡುತ್ತಿಲ್ಲ ಎಂದು ಹೇಳಿದ್ದು ಬಂತು. ಇದನ್ನು ನೋಡಿದರೆ ಜೀವ ಇಲ್ಲದ ಸರ್ಕಾರ ಇದು ಎಂದು ಹೇಳಬೇಕಾಗುತ್ತದೆ. ಇಂಥದ್ದನ್ನು ಸರ್ಕಾರ ಸವಾಲಾಗಿ ತೆಗೆದುಕೊಳ್ಳಬೇಕಾಗಿತ್ತು, ಸಮಿತಿಯನ್ನು ರಚನೆ ಮಾಡಬೇಕಾಗಿತ್ತು. ಬೇಕಾದ ಯೋಜನೆಗಳನ್ನು ರೂಪಿಸಬೇಕಾಗಿತ್ತು. ನಮಗೆ, ನೀವು ಈ ರೀತಿ ಹೇಳಿದ್ದೀರಿ, ನಾವು ಅದನ್ನು ಯಶಸ್ವಿ ಮಾಡಿದ್ದೇವೆ, ಯಾರು ತೊಂದರೆ ಕೊಡುತ್ತಾರೆ ಅವರನ್ನು ತಹಬಂದಿಗೆ ತಂದಿದ್ದೇವೆ, ಯಶಸ್ವಿ ಆಡಳಿತ ಮಾಡುತ್ತಿದ್ದೇವೆ, ನಮ್ಮದು ಅಹಿಂದ ಸರ್ಕಾರ ಎಂದು ಹೇಳಬೇಕಾಗಿತ್ತು. ಆದರೆ ಈಗ ನಿಮ್ಮದು ಅಹಿಂದ ಸರ್ಕಾರವಲ್ಲ, ಹಿಂದೆ ಬಿದ್ದ ಸರ್ಕಾರ.

ಮಾನ್ಯ ಸಭಾಪತಿಗಳೆ, ಅನೇಕ ವಿಚಾರಗಳ ಬಗ್ಗೆ ರಾಜ್ಯಪಾಲರು ಉಲ್ಲೇಖ ಮಾಡುತ್ತಾರೆ. ಮಾನ್ಯ ಮತ್ತಿಕಟ್ಟಿಯವರೇ ಈಕಡೆ ಇದ್ದಾಗ ನೀವು, ರಾಜ್ಯ ಸರ್ಕಾರ ಇರಲಿ, ಕೇಂದ್ರ ಸರ್ಕಾರ ಇರಲಿ, ಒಳ್ಳೆಯದು ಮಾಡಿದರೆ ಒಳ್ಳೆಯದು ಎಂದು ಹೇಳಬೇಕು ಎಂದು ಹೇಳುತ್ತಿದ್ದಿರಿ. ಒಪ್ಪಿಕೊಂಡೆವು, ನಿಮ್ಮ ಹಿರಿತನಕ್ಕೆ ಗೌರವ ಕೊಟ್ಟೆವು. ಸಕಾಲ ಯೋಜನೆಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ ರಾಜ್ಯಕ್ಕೆ ಅತ್ಯುತ್ತಮವಾದ ಸರ್ಕಾರದ ವ್ಯವಸ್ಥೆ ಎಂದು ಪ್ರಶಸ್ತಿ ಕೊಟ್ಟಿದೆ ಎಂದು ದಾಖಲು ಮಾಡುವಾಗ, ಅದನ್ನು ಬಿಜೆಪಿ ಸರ್ಕಾರ ಮಾಡಿದ್ದು ಎಂಬುದನ್ನು ಮರೆತುಬಿಟ್ಟರೋ ಅಥವಾ ಮರೆತು ಹೋಯಿತೋ ನನಗೆ ಗೊತ್ತಿಲ್ಲ. ನೀವು ಮರೆಯದೇ ಇದ್ದರೆ ಸರ್ಕಾರಕ್ಕೆ ಹೆಚ್ಚು ಗೌರವ ಬರುತ್ತಿತ್ತು. ಅನೇಕ ಸಂದರ್ಭಗಳಲ್ಲಿ, ಪಂಚಾಯಿತಿ ವ್ಯವಸ್ಥೆಯನ್ನು ಸಬಲೀಕರಣ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ ಅನೇಕ ಯೋಜನೆಗಳನ್ನು ರೂಪಿಸಬೇಕು ಎಂದು ಮಾನ್ಯ ಹೆಚ್.ಕೆ.ಪಾಟೀಲರ ಮನಸ್ಸಿನಲ್ಲಿ ಇದೆ. ಆದರೆ ಅದಕ್ಕೆ ಹಣ ಬಿಡುಗಡೆ ಮಾಡಬೇಕು. 88 ವಿಷಯಗಳ ಬಗ್ಗೆ ಸರ್ಕಾರಕ್ಕೆ ಹೇಳಿದೆ. ನಿಮಗೇನಾದರೂ ತಾಕತ್ತು ಇದ್ದರೆ, ಶಕ್ತಿ ಇದ್ದರೆ,

ಸಾಮರ್ಥ್ಯ ಇದ್ದರೆ ರಮೇಶ್‌ಕುಮಾರ್‌ರವರ ವರದಿಯನ್ನು ಯಥಾವತ್ತಾಗಿ ಸದನದಲ್ಲಿ ಮಂಡಿಸಿ, ನಾವು ಅದಕ್ಕೆ ಬೆಂಬಲ ಕೊಡುತ್ತೇವೆ ಎಂದು ಹೇಳಿದೆ. ಬಹಳ ದಿನಗಳ ನಂತರ ಸರ್ಕಾರ ಅದನ್ನು ಮಂಡಿಸಿತು. 88 ವಿಚಾರದಲ್ಲಿ 67 ವಿಚಾರಗಳನ್ನು ನೀವು ಅನುಷ್ಠಾನಕ್ಕೆ ತಂದಿರಿ. ಆರ್ಥಿಕ ಸ್ಥಿತಿಯ ಬಗ್ಗೆ ಇನ್ನೂ ಕೂಡ ಅಸ್ಪಷ್ಟತೆ ಇದೆ. ರಮೇಶ್‌ಕುಮಾರ್ ವರದಿಯಲ್ಲಿನ ಅಂಶಗಳನ್ನು ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಆಗುವುದಕ್ಕೆ ಮುಂಚೆ ತಂದಿದ್ದರೆ ಕರ್ನಾಟಕ ರಾಜ್ಯದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆ ಆಗುತ್ತಿತ್ತು. ಆದರೆ ಇವತ್ತು ಚುನಾವಣೆ ಆದನಂತರ ರಮೇಶ್‌ಕುಮಾರ್ ವರದಿಯನ್ನು ಜಾರಿಗೆ ತಂದಿದ್ದೇವೆ ಎಂದು ಮೊನ್ನೆ 25ನೇ ತಾರೀಖಿನಂದು ಆದೇಶ ಹೊರಡಿಸಿದ್ದೀರಿ. ಇನ್ನು 5 ವರ್ಷಗಳ ನಂತರ ಅದು ಬದಲಾವಣೆ ಆಗುತ್ತದೆ. ಈ ಎಲ್ಲಾ ಸಮಗ್ರ ಬದಲಾವಣೆ ಮಾಡುವ ಅವಕಾಶಗಳಿದ್ದರೂ ಸರ್ಕಾರ ಅದನ್ನು ಕೈಬಿಟ್ಟಿತೇನೋ ಎಂದು ನನಗನಿಸುತ್ತಿದೆ. ಒಟ್ಟಾರೆ, ಇಡೀ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಏನು ಹೇಳಲಿಕ್ಕೆ ಹೊರಟಿದೆ ಎಂದರೆ, ಯುದ್ಧವನ್ನು ಗೆಲ್ಲುವುದಕ್ಕೋಸ್ಕರ ಧರ್ಮರಾಯನ ಬಾಯಲ್ಲಿ, ಅಶ್ವತ್ಥಾಮ ಹತಃ ಕುಂಜರಃ ಎಂದು ಹೇಳಿಸಿದ ಹಾಗೆ ಮಾಡಿದೆ. ರಾಜ್ಯಪಾಲರು ನಿಜವಾಗಿ ಧರ್ಮರಾಯರಂಥವರು. ಅವರ ಬಾಯಲ್ಲಿ, ಅತ್ಯುತ್ತಮವಾದ ಸರ್ಕಾರ, ಪ್ರಾಮಾಣಿಕ ಸರ್ಕಾರ, ದಕ್ಷ ಸರ್ಕಾರ, ಯೋಗ್ಯತೆಯುಳ್ಳ ಸರ್ಕಾರ ಎಂದು ಹೇಳಿಸುವುದರ ಮೂಲಕ ಹೊಸ ಕನಸನ್ನು ಬಿತ್ತಲ್ಲಿಕೆ ಹೊರಟ್ಟಿದ್ದೀರಿ. ಏನೇ ಆದರೂ ಕೂಡ ನೀವು ರಾಜ್ಯಪಾಲರ ಭಾಷಣವನ್ನು ಮಂಡಿಸಿದ್ದೀರಿ. ಇಲ್ಲಿನ ವಿಚಾರಗಳಿಗಲ್ಲ, ವಿಷಯಕ್ಕೆ ಸಹಮತ ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಜಿ.ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಕಳೆದ 3 ವರ್ಷಗಳಿಂದ ನಮ್ಮ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರ, ನಮ್ಮ ಮುಖ್ಯಮಂತ್ರಿಗಳ ಸರ್ಕಾರ ಭ್ರಷ್ಟಾಚಾರರಹಿತ, ಜನಸ್ನೇಹಿಯಾಗಿದೆ. ಎಲ್ಲಾ ಸಂಪುಟ ಸಹೋದ್ಯೋಗಿಗಳನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರ ಮುಖ್ಯಮಂತ್ರಿ ಎಂಬ ಮಾತುಗಳನ್ನು ಅನೇಕ ಜನ ಸದಸ್ಯರು ಹೇಳಿದರು. ಆದರೆ ಅವರು ಇಡೀ ರಾಜ್ಯದ ಮುಖ್ಯಮಂತ್ರಿಗಳು. ಯಾತ್ತೂ ಒಂದೇ ವರ್ಗಕ್ಕೆ ಸೀಮಿತರಾದವರಲ್ಲ. ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಯೋಜನೆಯನ್ನು ಕೊಟ್ಟಾಗ . . .

**ಶ್ರೀ ಬಸವರಾಜ ಹೊರಟ್ಟಿ:–**ಹಿಂದುಳಿದ ಜನಾಂಗದವರ ಮುಖ್ಯಮಂತ್ರಿಗಳೆಂದು ನಾವು ಹೇಳಿಲ್ಲ, ನೀವೇ ಹೇಳಿಕೊಂಡಿದ್ದು. ಅಹಿಂದ ಸರ್ಕಾರ ಎಂದು ನೀವೇ ಹೇಳಿಕೊಂಡಿದ್ದೀರಿ.

**ಶ್ರೀ ಜಿ.ರಘು ಆಚಾರ್:–** ಈಗ ತಾನೇ ನನ್ನ ಸ್ನೇಹಿತರು ಹೇಳಿದರು, ಅದನ್ನು ನಾನು ಕ್ಲ್ಯಾರಿಫೈ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಎಲ್ಲಾ ಸಮುದಾಯಗಳಿಗೋಸ್ಕರ ಜನಪ್ರಿಯ ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದ್ದಾರೆ. ಉದಾಹರಣೆಗೆ, ಅನ್ನಭಾಗ್ಯ ಒಂದೇ ಸಮುದಾಯಕ್ಕೆ ಕೊಟ್ಟಿಲ್ಲ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಪಾರದರ್ಶಕತೆ ಎಂದು ಬಂದಾಗ, ಅಲ್ಪಸಂಖ್ಯಾತರಿಗೆ ಏನು ವಿದ್ಯಾರ್ಥಿ ವೇತನ ಕೊಡುತ್ತಿದ್ದರೋ ಆ ಹಣ ನೇರವಾಗಿ ಅವರ ಅಕೌಂಟ್‌ಗೆ ಹೋಗುವ ಹಾಗೆ ಮಾಡುತ್ತಿದ್ದಾರೆ. ಕಳೆದ 3 ವರ್ಷಗಳ ನಮ್ಮ ಸರ್ಕಾರದ ಸಾಧನೆಗಳಿಗೆ ಕನ್ನಡಿ ಹಿಡಿದ ಹಾಗೆ ಮಾನ್ಯ ನರೇಂದ್ರಮೋದಿಯವರ ಸರ್ಕಾರ ಚಿತ್ರದುರ್ಗಾ ಜಿಲ್ಲೆಗೆ ನರೇಗಾ ಅನುಷ್ಠಾನಕ್ಕೆ ಬೆಸ್ಟ್ ಅವಾರ್ಡ್ ಕೊಟ್ಟಿದೆ. ಮೊದಲನೆದಾಗಿ ಈ ಸದನದ ಮೂಲಕ ನಾನು ಚಿತ್ರದುರ್ಗದ ಜನಕ್ಕೆ, ಸಹಕರಿಸಿದ ಎಲ್ಲಾ ಶಾಸಕರಿಗೂ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ಸ್ವಚ್ಛ ನಗರದ ಪ್ರಶಸ್ತಿ ಎರಡು ಸಲ ಮೈಸೂರು ನಗರಕ್ಕೆ ಬಂದಿದೆ. ಆರ್‌ಡಿಪಿಆರ್‌ಗೆ ಸಂಬಂಧಪಟ್ಟಂತೆ, ಬೆಸ್ಟ್ ಅಡ್ಮಿನಿಸ್ಟ್ರೇಷನ್ ಅವಾರ್ಡ್ ಬಂದಿದೆ.

(ಮುಂದು . . .)

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಜಿ.ರಘು ಆಚಾರ್ (ಮುಂದು):-**

ಇದನ್ನು ನಾವು ಕೊಟ್ಟಿರುವಂಥಾದ್ದಲ್ಲ ಅಥವಾ ಬೇರೆಯವರು ಕೊಟ್ಟಿರುವಂಥಾದ್ದಲ್ಲ. ಮಾನ್ಯ ಮುಖ್ಯಮಂತ್ರಿಗಳು best administration ಕೊಟ್ಟು ಜನರನ್ನು ಜೊತೆಗೆ ತೆಗೆದುಕೊಂಡ ಹೋದ ಕಾರಣ, ಇತ್ತೀಚೆಗೆ ನಡೆದ ಗ್ರಾಮ ಪಂಚಾಯ್ತಿ ಚುನಾವಣೆ ಇರಬಹುದು, ಜಿಲ್ಲಾ ಪಂಚಾಯ್ತಿ ಚುನಾವಣೆ ಇರಬಹುದು. ಎಲ್ಲಾ ಚುನಾವಣೆಯಲ್ಲಿ ನಾವೇ ಬಹುಮತ ಬಂದಿದ್ದೇವೆ. ಏಕೆಂದರೆ ಕಳೆದ ಮೂರು ವರ್ಷಗಳ ಹಿಂದೆ iron ore mining scam ನಲ್ಲಿ ಎಲ್ಲಿ ಸಿಕ್ಕಿ ಹಾಕಿಕೊಂಡರೋ, ಅದರ ಫಲವಾಗಿ ಡಾ|| ಜಿ.ಪರಮೇಶ್ವರ್‌ರವರು ಆಗಬಹುದು, ಮಾನ್ಯ ಸಿದ್ದರಾಮಯ್ಯನವರು ಆಗಬಹುದು ಕಾಂಗ್ರೆಸ್ ಪಕ್ಷದಲ್ಲಿರುವ ಎಲ್ಲರ ಹೋರಾಟ, ಪರಿಶ್ರಮದಿಂದಾಗಿ ಜನರು ನಮಗೆ mandate ಕೊಟ್ಟರು. ಅದರ ಪ್ರತಿಫಲವಾಗಿ ಇವತ್ತಿನವರೆವಿಗೂ ಮೂರು ವರ್ಷಗಳ ಕಾಲ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದೇ ಇವತ್ತು ಜನರಿಗೆ ನಾವು ಹಲವಾರು ಕಾರ್ಯಕ್ರಮಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ ಕಳೆದ 5 ವರ್ಷಗಳಿಂದ ಮೆಡಿಕಲ್ ಕಾಲೇಜುಗಳ ಬಗ್ಗೆ ಬಜೆಟ್ ಪುಸ್ತಕದಲ್ಲಿ ಬರುತ್ತಿತ್ತು. ಈಗ ಕೊಪ್ಪಳ, ಗದಗ, ಕಲ್ಬುರ್ಗಿ ಜಿಲ್ಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಮೆಡಿಕಲ್ ಕಾಲೇಜುಗಳು ಪ್ರಾರಂಭವಾಗುತ್ತಿವೆ. ಇದರಿಂದ ಸುಮಾರು 450 ಎಂಬಿಬಿಎಸ್ ಸೀಟ್‌ಗಳು ಹೆಚ್ಚುವರಿಯಾಗಿ ದೊರೆಯುತ್ತವೆ. ಯಾವಾಗ ಮೆಡಿಕಲ್ ಕಾಲೇಜುಗಳು ಬರುತ್ತವೆಯೋ ತಂತಾನೆ ಆಸ್ಪತ್ರೆಗಳು ಸಹ ಬರುತ್ತವೆ. ಇದರಿಂದ ಎಲ್ಲಾ ಜನರಿಗೂ ಸಹ ಅನುಕೂಲವಾಗುತ್ತದೆ. ಮೊದಲನೆಯದಾಗಿ ಅತ್ಯವಶ್ಯಕವಾಗಿ ಮನುಷ್ಯನಿಗೆ ಆರೋಗ್ಯ, ಕುಡಿಯುವ ನೀರು ಮತ್ತು revenue increase ಮಾಡುವುದಕ್ಕೆ ಕೈಗಾರಿಕೆಗಳು ಈ ಮೂರನ್ನು simultaneously ತೆಗೆದುಕೊಂಡು ಹೋಗುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳ ನೇತೃತ್ವದ ಸರ್ಕಾರದಲ್ಲಿ land acquisition ಗೆ ಸಮಸ್ಯೆಯಾಗಿ ಕೈಗಾರಿಕೆ ಸ್ಥಾಪನೆಯಾಗುವುದು ತಡವಾಗಬಹುದು ಎನ್ನುವ ಒಂದೇ ಒಂದು ಕಾರಣಕ್ಕಾಗಿ ಸರ್ಕಾರ ಕೆಐಎಡಿಬಿಗೆ 12,000 ಎಕರೆ ಪ್ರದೇಶವನ್ನು ವರ್ಗಾವಣೆ ಮಾಡಿದ್ದೇವೆ. ಏಕೆಂದರೆ ಯಾವುದೇ ಉದ್ದಿಮೆಗಳು ಬಂದರೂ ಸಹ, ಹಿಂದಿನ ಸರ್ಕಾರಗಳಲ್ಲಿ ಉದ್ದಿಮೆದಾರರು ಉದ್ದಿಮೆಯನ್ನು ಸ್ಥಾಪಿಸಲು ಮುಂದೆ ಬಂದರೂ ಸಹ ನಾವು ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗದೇ ಅವರು ವಾಪಸ್ ಹೋಗಿಬಿಡುತ್ತಿದ್ದರು. ಆ ರೀತಿಯ ಆಗಬಾರದು ಕೈಗಾರಿಕೆಗಳು ಸ್ಥಾಪನೆಯಾಗಬೇಕೆನ್ನುವ

ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಸಮಾಲೋಚನೆಯನ್ನು ಮಾಡಿ ಸುಮಾರು 12,000 ಎಕರೆ ಸರ್ಕಾರಿ ಭೂಮಿಯನ್ನು ಕೆಐಎಡಿಬಿ ಗೆ ವರ್ಗಾವಣೆ ಮಾಡಿದ್ದೇವೆ. ಕಳೆದ 10 ವರ್ಷಗಳಿಂದ ವಿದ್ಯುಚ್ಛಕ್ತಿಯ ವಿಚಾರವನ್ನು ತೆಗೆದುಕೊಂಡರೆ, ಎಲ್ಲಾದರೂ production increase ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆಯೇ? ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪಾವಗಡದಲ್ಲಿ ರೈತರ ಮನವೊಲಿಸಿ 11,500 ಎಕರೆ ಪ್ರದೇಶವನ್ನು ಗುತ್ತಿಗೆಗೆ ತೆಗೆದುಕೊಂಡು ಸೋಲಾರ್ ಪಾರ್ಕ್ ಮಾಡುತ್ತಿದ್ದೇವೆ ಹಾಗೂ ಕೆಲಸ ಪ್ರಾರಂಭವಾಗಿದೆ. ಅಂದರೆ ನಮ್ಮ ಸರ್ಕಾರ ಎಲ್ಲರ ಪರವಾದ ಸರ್ಕಾರವಾಗಿದೆ. ಮೊನ್ನೆ ಮಾತನಾಡುತ್ತಾ ಬಡವರಿಗಾಗಿ ಇರುವ ಸ್ಕೀಂ ನ ಹಣವನ್ನು ದೊಡ್ಡವರು ತಿನ್ನುತ್ತಿದ್ದಾರೆ ಎಂದರು. ದೊಡ್ಡವರು ಈ ಹಣವನ್ನು ತಿನ್ನುವುದು ಬೇಡವೆಂದು ಪ್ರಪ್ರಥಮವಾಗಿ ರಾಜ್ಯದಲ್ಲಿ socio economic survey ಮಾಡಿಸಿದ್ದೇವೆ. ಇನ್ನೇನು ಏಪ್ರಿಲ್-ಮೇ ತಿಂಗಳಿನಲ್ಲಿ ಆ ವರದಿ ಬರುತ್ತದೆ. ಆಗ ಎಲ್ಲರಿಗೂ ಸಮಪಾಲು, ಸಮಬಾಳು ಎನ್ನುವುದು ಆಗುತ್ತದೆಂದು ನಾನು ಭಾವಿಸಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ 3,500 ಬೋರ್‌ವೆಲ್‌ಗಳನ್ನು ಪುನಃಶ್ಚೇತನಗೊಳಿಸಿ ಅದರಲ್ಲಿ 1,500 ಬೋರ್‌ವೆಲ್‌ಗಳ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಬಳಸುತ್ತಿದ್ದೇವೆ. ಅದೇ ರೀತಿ ಸರ್ಕಾರ ನಮ್ಮ ಚಿತ್ರದುರ್ಗ ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜ್‌ನ್ನು ಕೊಟ್ಟಿತು. ಇದರಿಂದ ಜನರಿಗೆ ಬಹಳ ಅನುಕೂಲವಾಗುತ್ತದೆಂದು ನಾನು ಭಾವಿಸಿದ್ದೇನೆ. ಇನ್ನೊಂದು ವಿಚಾರವೆಂದರೆ, linguistic minority and general medical colleges ಎಂದು ಎರಡು ಮೆಡಿಕಲ್ ಕಾಲೇಜುಗಳಿವೆ. linguistic minority colleges ನಲ್ಲಿ ವೈದೇಹಿ ಕಾಲೇಜು ಇರಬಹುದು, ಸಪ್ತಗಿರಿ ಕಾಲೇಜು ಇರಬಹುದು ಈ ತರಹ 5 ಕಾಲೇಜುಗಳಿವೆ. ಈ 5 ಕಾಲೇಜುಗಳವರಿಗೆ ಜನರಿಗೆ ಸೇವೆ ಮಾಡುವುದು ಎಂತಹದ್ದು ಇರುವುದಿಲ್ಲ. ಅವರಿಗೆ ಶೇಕಡ 20ರಷ್ಟನ್ನು ಸಿಇಟಿ ಗೆ ಕೊಟ್ಟು, ಶೇಕಡಾ 55ರಷ್ಟು ಸೀಟುಗಳು ಅಲ್ಪಸಂಖ್ಯಾತರಿಗೆ ಮತ್ತು ಶೇಕಡ 20ರಷ್ಟು ಸೀಟ್‌ಗಳು ಮ್ಯಾನೇಜ್ಮೆಂಟ್‌ಗೆ ಎಂದರೆ ಒಟ್ಟಾರೆ ಅವರಿಗೆ ಸುಮಾರು ಶೇಕಡ 80ರಷ್ಟು ಸೀಟುಗಳು ಹೋಗುತ್ತವೆ. ಅಂದರೆ ಒಂದು ಕಾಲೇಜಿನಲ್ಲಿ 150 ಸೀಟುಗಳಿದ್ದರೆ ಅದರಲ್ಲಿ ಶೇಕಡ 80ರಷ್ಟು ಎಂದರೆ 120 ಸೀಟುಗಳಾಗುತ್ತವೆ. ಸರಾಸರಿ ಒಂದು ಸೀಟಿಗೆ 80 ಲಕ್ಷ ರೂಪಾಯಿಯಿಂದು ಒಂದು ಕೋಟಿ ರೂಪಾಯಿ ಎಂದಿಟ್ಟುಕೊಂಡರೂ ಸಹ ಅವರಿಗೆ ಸುಮಾರು 100 ರಿಂದ 110 ಕೋಟಿ ರೂಪಾಯಿ ರೆವಿನ್ಯೂ ಬರುತ್ತದೆ. ರೆಗ್ಯುಲರ್ ಕಾಲೇಜಿನಲ್ಲಿ ಅವರಿಗೆ ಮ್ಯಾನೇಜ್ಮೆಂಟ್ ಕೋಟಾ

ಶೇಕಡ 20ರಷ್ಟು ಬರುತ್ತದೆ. ಆದ್ದರಿಂದ ಸರ್ಕಾರಕ್ಕೆ ಸರ್ಕಾರಿ ಮೆಡಿಕಲ್ ಕಾಲೇಜ್‌ನ್ನು ಸ್ಥಾಪನೆ ಮಾಡುವುದಕ್ಕಾಗಲಿಲ್ಲವೆಂದರೆ, ಕಳೆದ 5 ವರ್ಷಗಳಿಂದ ಪ್ರಯತ್ನ ಪಟ್ಟು ಕೊಪ್ಪಳ, ಗದಗ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಕೇವಲ 3 ಮೆಡಿಕಲ್ ಕಾಲೇಜ್‌ಗಳನ್ನು ಸ್ಥಾಪನೆ ಮಾಡಿದ್ದಾರೆ. ಇನ್ನೊಂದು ವಿಚಾರವೆಂದರೆ, ಯಾರು linguistic minority, ಎಲ್ಲಾ ಕಮ್ಯೂನಿಟಿಯವರಿಗೆ ಮಾಡುತ್ತೇವೆ, ನೀವು ಮಾಡಿಕೊಳ್ಳಿ ಎಂದರೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಮೆಡಿಕಲ್ ಕಾಲೇಜ್‌ನ್ನು ಮಾಡುತ್ತಾರೆ. ಉದಾಹರಣೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಎರಡು ವರ್ಷಗಳಿಂದ ಕೇಳುತ್ತಿದ್ದೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ನಾನೇ ಹಣ ಹೂಡಿ ಮೆಡಿಕಲ್ ಕಾಲೇಜ್‌ನ್ನು ಮಾಡಿಕೊಳ್ಳುತ್ತೇನೆ. ನನಗೆ linguistic minority ಅಡಿಯಲ್ಲಿ ಕಾಲೇಜ್‌ನ್ನು ಮಂಜೂರು ಮಾಡಿ ಎಂದರೆ ನನಗೆ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸರ್ಕಾರವನ್ನು ನಾನೇನು ಕೇಳುತ್ತೇನೆಂದರೆ, ಮೆಡಿಕಲ್ ಕಾಲೇಜ್‌ನ್ನು ಸ್ಥಾಪನೆ ಮಾಡಲಿಕ್ಕೆ ಬಹಳಷ್ಟು ಜನರಿದ್ದಾರೆ. ಏಕೆಂದರೆ ಮೆಡಿಕಲ್ ಕಾಲೇಜುಗಳಿಂದ ನಮಗೆ ರೆವಿನ್ಯೂ ಬಂದರೆ, ಅಟೋಮೆಟಿಕ್ ಆಗಿ 700 ಹಾಸಿಗೆಗಳ ಆಸ್ಪತ್ರೆಯನ್ನು ಒದಗಿಸಬೇಕಾಗುತ್ತದೆ. 700 ಹಾಸಿಗೆಗಳನ್ನು ನಾವು ಉಚಿತವಾಗಿ ಮಾಡಬೇಕಾಗುತ್ತದೆ. ಈ ರೀತಿ ಮಾಡಿದರೆ ಆಸ್ಪತ್ರೆಯನ್ನು ಒದಗಿಸಬೇಕೆನ್ನುವ ಸಮಸ್ಯೆ ನಿವಾರಣೆಯಾಗುತ್ತದೆ. ಸರ್ಕಾರದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಜಿಲ್ಲೆಯಲ್ಲಿ ಆ ತರಹ ಯಾರಾದರೂ ಮೆಡಿಕಲ್ ಕಾಲೇಜ್‌ನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ, ಅವರಿಗೇನಾದರೂ facilitate ಮಾಡುವ ಹಾಗಿದ್ದರೆ, ಎಲ್ಲಾ ಜಿಲ್ಲೆಯಲ್ಲಿಯೂ ಒಂದೊಂದು ಮೆಡಿಕಲ್ ಕಾಲೇಜು ಸ್ಥಾಪನೆಯಾಗುತ್ತದೆ. ಎಲ್ಲಾ ಜಿಲ್ಲೆಯಲ್ಲಿಯೂ ಸಹ ಎಂಬಿಬಿಎಸ್ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ. ನಾನು ಇನ್ನೊಂದು ಶ್ಲಾಘನೆ ಮಾಡಬೇಕಾದ ವಿಚಾರವೇನೆಂದರೆ, ವೈದ್ಯಕೀಯ ಶಿಕ್ಷಣ ಸಚಿವರಾದ ಶ್ರೀ ಶರಣ ಪ್ರಕಾಶ್ ಪಾಟೀಲ್‌ರವರನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ ನಮ್ಮಲ್ಲಿ ವೈದ್ಯರ ಕೊರತೆ ಇತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈಗ ಎಂಬಿಬಿಎಸ್ ಮುಗಿಸಿದವರು ಕಡ್ಡಾಯವಾಗಿ ಒಂದು ವರ್ಷ ಕಾಲ ಗ್ರಾಮೀಣ ಪ್ರದೇಶಕ್ಕೆ ಹೋಗಿ ಸೇವೆಯನ್ನು ಸಲ್ಲಿಸಲೇಬೇಕೆಂದು ಮಾಡಿದ್ದಾರೆ. ಹಾಗಾಗಿ ನಮಗೀಗ ವೈದ್ಯರುಗಳ ಸಮಸ್ಯೆ ನಿವಾರಣೆಯಾಗುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಸ್ನೇಹಿ ಸರ್ಕಾರವಾಗಿ ನಾಲ್ಕಾರು ಜನರಿಗೆ ಸಹಾಯವನ್ನು ಮಾಡುವ ನಿಟ್ಟಿನಲ್ಲಿ ನಾವು ಕೆಲಸವನ್ನು ಮಾಡಿಕೊಂಡು ಬಂದಿದ್ದೇವೆ. ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ. ಒಂದೊಂದು ಜಿಲ್ಲೆಗೆ ಒಬ್ಬೊಬ್ಬರು ಕಾರ್ಯದರ್ಶಿಗಳನ್ನು ನೇಮಿಸಿದ್ದಾರೆ. ಎರಡು ವರ್ಷಗಳ ಹಿಂದೆ ನಾನು ಮೊದಲು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಾಗ ಐಎಎಸ್ ಅಧಿಕಾರಿಗಳು, ಕಾರ್ಯದರ್ಶಿಗಳು ಎಲ್ಲೆಲ್ಲಿ ಪ್ರವಾಸವನ್ನು ಕೈಗೊಂಡಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದೆ.

ಆಗ ನನಗೆ ಉತ್ತರ ಸಿಕ್ಕಿದ್ದು ಏನೆಂದರೆ, ಮೂರು ತಿಂಗಳಿನಲ್ಲಿ ಉತ್ತರವನ್ನು ಒದಗಿಸಿ ಕೊಡುತ್ತೇನೆಂದು ಹೇಳಿದ್ದರು. ಅಧಿಕಾರಿಗಳು ಎಲ್ಲಿಗೆ ಹೋಗಿದ್ದಾರೆ? ಅವರು ವಿಧಾನ ಸೌಧ ಮತ್ತು ವಿಕಾಸ ಸೌಧದಲ್ಲಿಯೇ ಕುಳಿತುಕೊಳ್ಳುವುದಕ್ಕಾಗಿ ಇದ್ದಾರೆಯೇ ಅಥವಾ ಎಲ್ಲಾದರೂ ಜಿಲ್ಲೆಗೆ ಹೋಗಿ ಒಂದು ದಿನ ರಿವ್ಯೂ ಮಾಡಿದ್ದಾರೆಯೇ? ಯಾರಾದರೂ ಒಬ್ಬರು ಕಾರ್ಯದರ್ಶಿ ಅಥವಾ ಒಬ್ಬ ಕೆಎಎಸ್, ಐಎಎಸ್ ಅಧಿಕಾರಿಗಳು ಜಿಲ್ಲೆಗೆ ಭೇಟಿ ನೀಡಿರುವ ಬಗ್ಗೆ ಅಲ್ಲಿನ ಎಂಎಲ್ಎ ರವರು ಹೇಳಿದರೆ ಸಾರ್ಥಕವಾಗುತ್ತದೆ. ಇದು ಕೇವಲ ನನ್ನೊಬ್ಬನ ವಿಚಾರವಲ್ಲ. ಇದು ಕರ್ನಾಟಕ ರಾಜ್ಯದ ವಿಚಾರ. ರಾಜಕಾರಣಿಗಳು ಜಿಲ್ಲಾ ಮಂತ್ರಿಗಳಾಗಬಹುದು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ರಘು ಆಚಾರ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಅವರು ಕಾರ್ಯದರ್ಶಿಗಳಾಗಿರುವ ಐಎಎಸ್ ಅಧಿಕಾರಿಗಳ ಬಗ್ಗೆ ಮಾತನಾಡುತ್ತಿದ್ದಾರೆ. ಸದನದಲ್ಲಿಯೂ ಸಹ ಯಾವುದೇ ಅಧಿಕಾರಿಗಳು ಇಲ್ಲ. ಅವರು ಹೇಳಿದಂತೆ ಕಾರ್ಯದರ್ಶಿಗಳು ಅಲ್ಲಿಯೂ ಸಹ ಇಲ್ಲ, ಇಲ್ಲಿಯೂ ಸಹ ಇಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಅಧಿಕಾರಿಗಳಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಸರ್ಕಾರವನ್ನು ಇಷ್ಟು ವಹಿಸಿಕೊಂಡು ಹೇಳುವುದು ಬೇಡ. ಸಂಬಂಧಪಟ್ಟ ಅಧಿಕಾರಿಗಳು ಸದನದಲ್ಲಿ ಕಡ್ಡಾಯವಾಗಿ ಕುಳಿತುಕೊಳ್ಳಬೇಕಾದುದು ಅವರ ಕರ್ತವ್ಯವಾಗಿದೆ. ಮಾನ್ಯ ಮತ್ತಿಕಟ್ಟಿಯವರು ಏಕೆ ಅವರ ಪರವಾಗಿ ಮಾತನಾಡುತ್ತಾರೆ? ಯಾರಾದರೂ ಮಾತನಾಡಲಿ ಅದನ್ನು ಕೇಳುವುದಕ್ಕೆ ಅಧಿಕಾರಿಗಳು ಇರಬೇಕಲ್ಲವೇ?

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಹೊಸ ಸದಸ್ಯರು ಮಾತನಾಡುವಾಗ ಯಾರಾದರೂ ಒಬ್ಬರು ಬರೆದುಕೊಳ್ಳಬೇಕಲ್ಲವೇ? ಇರುವ ಅಧಿಕಾರಿಗಳನ್ನು ಕಳುಹಿಸಿಬಿಡಿ, ಇಲ್ಲಿರುವವರು ಬರೆದುಕೊಳ್ಳುತ್ತಾರೆ. ಸರ್ಕಾರಕ್ಕೆ ಮಾನ-ಮರ್ಯಾದೆ ಇಲ್ಲವೇ? ಇಂದು ಸದನದಲ್ಲಿ ಯಾವ ಅಧಿಕಾರಿಗಳು ಹಾಜರಿರಬೇಕೆಂದು ದಯಮಾಡಿ ತಾವು ತಿಳಿಸಿ. ಹೇಳುವವರು, ಕೇಳುವವರು ಯಾರು ಇಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಉಪಸ್ಥಿತರಿರಬೇಕಾದ ಅಧಿಕಾರಿಗಳ ಪಟ್ಟಿ...

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ,...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ಸದನವನ್ನು ಇಷ್ಟು ಹಗುರವಾಗಿ ತೆಗೆದುಕೊಂಡು ನಡೆಸಿದರೆ ನಾವೆಲ್ಲರೂ ಏಕೆ ಬರಬೇಕು ಹೇಳಿ. ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ, ಅಧಿಕಾರಿಗಳು ಇರುವುದಿಲ್ಲ. ನಾವು ಏತಕ್ಕೋಸ್ಕರ ಬರಬೇಕು? ಶ್ರೀ ಸುಭಾಷ್‌ಚಂದ್ರ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರು ಸದನದಲ್ಲಿ ಇಲ್ಲ. ಶ್ರೀ ಪ್ರಭಾಕರ ಹೆಚ್.ಚೆನ್ನಿ, ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರು ಸಹ ಸದನದಲ್ಲಿ ಹಾಜರಿದ್ದಾರೆ. ಶ್ರೀಮತಿ ಫೈರೋಜ಼ಾ ಖಾನಂ, ಸರ್ಕಾರದ ವಿಶೇಷ ಕಾರ್ಯದರ್ಶಿ, ಇವರು ಸದನದಲ್ಲಿ ಹಾಜರಿದ್ದಾರೆ. ಶ್ರೀ ಎಸ್.ಪಿ.ವಾಸುದೇವ್, ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಉಪ ಕಾರ್ಯದರ್ಶಿ, ಇವರು ಸದನದಲ್ಲಿ ಹಾಜರಿಲ್ಲ, ಶ್ರೀ ಎಸ್.ಎನ್.ಚಂದ್ರಶೇಖರ್, ಸದನದಲ್ಲಿ ಹಾಜರಿದ್ದಾರೆ, ಶ್ರೀ ಹೆಚ್.ಕೆ.ರವಿಮೂರ್ತಿ, ಸರ್ಕಾರದ ಜಂಟಿ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ಇವರು ಸದನದಲ್ಲಿ ಹಾಜರಿಲ್ಲ. ಅಂದರೆ 6 ಜನ ಅಧಿಕಾರಿಗಳಲ್ಲಿ 3 ಜನ ಅಧಿಕಾರಿಗಳು ಸದನದಲ್ಲಿ ಹಾಜರಿದ್ದಾರೆ. ಇದು ಈಗಿರುವಂಥ ಒಂದು ಪರಿಸ್ಥಿತಿಯಾಗಿದೆ. ಇವತ್ತು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಂತ್ರಿಗಳ ಪಟ್ಟಿಯನ್ನು ಕೊಡಿ. ಮೊದಲನೆಯದಾಗಿ ಶ್ರೀ ಎಸ್.ಆರ್.ಪಾಟೀಲ್‌ರವರು ಈಗ ಸದನದಲ್ಲಿಲ್ಲ, ಶ್ರೀ ಖಮರುಲ್ ಇಸ್ಲಾಂ – ಇಲ್ಲ, ಶ್ರೀ ರಾಮಲಿಂಗಾರೆಡ್ಡಿ – ಇಲ್ಲ, ಶ್ರೀ ಅಂಬರೀಶ್ – ಇಲ್ಲ, ಶ್ರೀ ವಿನಯ್‌ಕುಮಾರ್ ಸೊರಕೆ – ಇದ್ದಾರೆ, ಶ್ರೀ ಯು.ಟಿ.ಖಾದರ್, ಶ್ರೀ ಸತೀಶ್ ಜಾರಕಿಹೊಳಿ, ಶ್ರೀ ಹೆಚ್.ಆಂಜನೇಯ, ಶ್ರೀ ರೋಷನ್ ಬೇಗ್, ಶ್ರೀಮತಿ ಉಮಾಶ್ರೀ, ಶ್ರೀ ಕೃಷ್ಣ ಭೈರೇಗೌಡ, ಶ್ರೀ ದಿನೇಶ್ ಗುಂಡೂರಾವ್, ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಕಿಮ್ಮನೆ ರತ್ನಾಕರ್‌ರವರು, ಶ್ರೀ ಎ.ಮಂಜುರವರುಗಳು ಸದನದಲ್ಲಿ ಈಗ ಹಾಜರಿಲ್ಲ. ಶ್ರೀ ವಿನಯ್ ಕುಲಕರ್ಣಿಯವರು ಸದನದಲ್ಲಿ ಹಾಜರಿದ್ದಾರೆ. ಇದು ಈಗಿರುವ ಪರಿಸ್ಥಿತಿ, ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**(ಈ ಹಂತದಲ್ಲಿ ಶ್ರೀ ಎಸ್.ಆರ್.ಪಾಟೀಲ್‌ರವರು ಸದನಕ್ಕೆ ಆಗಮಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಎಲ್ಲರೂ ಇಲ್ಲಿಯೇ ಇದ್ದರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅಧಿಕಾರಿಗಳು ಇದ್ದರು, ನೀವು ಇದ್ದಿರಿ, ಎಲ್ಲರೂ ಇಲ್ಲಿಯೇ ಇದ್ದರು. ಎಲ್ಲರೂ ಈ ಭೂಮಿಯ ಮೇಲೆಯೇ ಇದ್ದಾರೆ. ನಾನು ಇಲ್ಲವೆಂದು ಹೇಳಿಲ್ಲ. ಆದರೆ ಈಗ ಸದನದಲ್ಲಿ ಇಲ್ಲವೆಂದು ಹೇಳುತ್ತಿದ್ದೇನೆ. ಸದನದಲ್ಲಿ ಅಧಿಕಾರಿಗಳು ಮತ್ತು ಮಂತ್ರಿಗಳು ಎಷ್ಟು ಜನರಿದ್ದಾರೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. 'ಬಂಡತನದ ಸರ್ಕಾರ' 'ಜವಾಬ್ದಾರಿ ಇಲ್ಲದ ಸರ್ಕಾರ' ಎನ್ನುವ ಪದಗಳನ್ನು ನಾವು ಬಳಸಿದಿರೆ ಇವರಿಗೆ ಸಿಟ್ಟು ಬರುತ್ತದೆ. ಇನ್ಯಾವ ರೀತಿಯ ಪದಗಳನ್ನು ಬಳಸಬೇಕೆಂದು ನಮ್ಮ ಹತ್ತಿರ ಇನ್ನು ಪದಗಳು ಉಳಿದಿಲ್ಲ. ಇದು ನಮ್ಮ ಪರಿಸ್ಥಿತಿ. ಮುಂದೆ ಯಾವ ರೀತಿಯಾಗಿ ಮಾಡಬೇಕೋ ದಯವಿಟ್ಟು ಮಾಡಿ.

(ಮುಂದು)

**ಉಪ ಸಭಾಪತಿಯವರು:–** ಸದಸ್ಯರುಗಳ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ಸಚಿವರುಗಳಾದ ಶ್ರೀಯುತ ದಿನೇಶ್ ಗುಂಡೂರಾವ್ ರವರು ಮತ್ತು ಶ್ರೀಮತಿ ಉಮಾಶ್ರೀಯವರು ಸದನಕ್ಕೆ ಹಾಜರಾಗಲು ಸಾಧ್ಯವಾಗದಿರುವುದಕ್ಕೆ ಅನುಮತಿಯನ್ನು ಪಡೆದುಕೊಂಡಿದ್ದಾರೆ. ಅನ್ಯ ಕಾರ್ಯ ನಿಮಿತ್ತ ಸಭಾಪತಿಯವರಿಂದ ಅನುಮತಿಯನ್ನು ಪಡೆದುಕೊಂಡಿದ್ದಾರೆ. ಆದರೆ, 7 ಮಂದಿ ಅಧಿಕಾರಿಗಳಲ್ಲಿ 4 ಮಂದಿ ಅಧಿಕಾರಿಗಳು ಮಾತ್ರ ಸದನದಲ್ಲಿ ಹಾಜರಿದ್ದು, ಇನ್ನುಳಿದ 3 ಮಂದಿ ಗೈರು ಹಾಜರಾಗಿರುತ್ತಾರೆ. ಮಂತ್ರಿಗಳಲ್ಲೂ ಕೂಡ ಕೆಲವರು ಗೈರು ಹಾಜರಿದ್ದಾರೆ. ಈ ರೀತಿಯಾದರೆ ಸರಿ ಹೋಗುವುದಿಲ್ಲ. ದಯಮಾಡಿ, ಸಭಾನಾಯಕರು, ಯಾರು ಇಲ್ಲಿ ಗೈರು ಹಾಜರಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕು, ಈ ಸದನದ ಗೌರವ–ಘನತೆಯನ್ನು, ಶಿಸ್ತನ್ನು ಕಾಪಾಡಬೇಕು. ಈ ರೀತಿ ಮಾಡಬಾರದು. ಆದ್ದರಿಂದ, ಸರ್ಕಾರದ ವತಿಯಿಂದ ಇಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಈ ವಿಚಾರವನ್ನು ಸಭಾನಾಯಕರು ಗಮನಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ತಾವು ಹೇಳಿದಂತಹ ವಿಷಯವಾಗಿ ಗಮನಿಸಿದ್ದೇನೆ. ಏನು ಲೋಪದೋಷಗಳಾಗಿವೆ, ಅವುಗಳನ್ನು ಸರಿಮಾಡುತ್ತೇವೆ. ಯಾರು ಅಧಿಕಾರಿಗಳು ಹಾಜರಾಗಿರುವುದಿಲ್ಲ. . .

**ಶ್ರೀ ಬಸವರಾಜ ಹೊರಟ್ಟಿ:–** ತಮಗೆ ಕೇಳಿ, ಕೇಳಿ ಬೇಸರವಾಗಿರಬಹುದು.

**ಉಪ ಸಭಾಪತಿಯವರು:–** ಶ್ರೀಯುತ ಹೊರಟ್ಟಿಯವರೆ, ಈಗ ಸಮಯ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ನಾವು ಅವರ ಪರವಾಗಿ ಹೇಳಿದರೆ ಈ ರೀತಿಯಲ್ಲಿ ಇವರು ಮಾತನಾಡುತ್ತಾರೆ. ತಾವು ಏನು ಸೂಚನೆಯನ್ನು ನೀಡಿದ್ದೀರಿ, ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ನಾವು ಪಾಲನೆ ಮಾಡುತ್ತೇವೆ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ಸಭಾಪತಿಯವರೆ, ಒಬ್ಬ ಅಧಿಕಾರಿ ಕೂಡ ಒಂದು ಜಿಲ್ಲೆಗೂ ಸಹಿತ ನನ್ನ ಹಿಂದಿನ ಎರಡೂವರೆ ವರ್ಷಗಳ ಕಾಲದ ಅವಧಿಯಲ್ಲಿ ಭೇಟಿಯನ್ನೂ ಕೊಟ್ಟಿಲ್ಲ, ಸೌಜನ್ಯಕ್ಕಾದರೂ ಒಬ್ಬ ಐಎಎಸ್ ಅಧಿಕಾರಿಯೂ ಸಹ ಇವರು ಶಾಸಕರು ಎಂದು ಬೆಲೆ ಕೊಡುವಂತಹದ್ದನ್ನು ಕಲಿತಿಲ್ಲ. ಅವರಿಗೆ ನಾವು ಕಾರು ಕೊಟ್ಟಿದ್ದೇವೆ, ಇನ್ನಿತರ ಸೌಲಭ್ಯಗಳನ್ನು ಕೊಟ್ಟಿದ್ದೇವೆ, ಅವರು ಬೆಳಿಗ್ಗೆ

ಕಚೇರಿಗೆ ಬರುತ್ತಾರೆ, ಸಾಯಂಕಾಲ ಹೋಗುತ್ತಾರೆ. ಒಬ್ಬ ಮಂತ್ರಿಗಾಗಲಿ, ಶಾಸಕರಿಗಾಗಲಿ, ಅವರದ್ದೇ ಆದಂತಹ ಕೆಲಸ ಕಾರ್ಯಗಳಿರುತ್ತವೆ, ಉದಾಹರಣೆಗೆ ಯಾರಾದರೂ ಸತ್ತಲ್ಲಿ ಅಲ್ಲಿಗೆ ಹೋಗಬೇಕು, ಮದುವೆಗೆ ಹೋಗಬೇಕು, ನಮ್ಮದೇನೋ ಕಷ್ಟ-ಸುಖ ಇರುತ್ತದೆ. 5 ವರ್ಷಗಳಿಗೊಮ್ಮೆ ನಾವು ಪರೀಕ್ಷೆ ಬರೆಯುತ್ತೇವೆ. ಆಫೀಸರ್‌ಗಳು ಏನು ಬರೆಯುತ್ತಾರೆ? ಅವರು ಒಂದು ಬಾರಿ ಪಾಸ್ ಆದ ಮೇಲೆ ಅವರು ನಿವೃತ್ತಿಯಾಗುವ ತನಕ ಕಾರಿನಲ್ಲಿ ಓಡಾಡಿಕೊಂಡು, ವಿಧಾನಸೌಧ, ವಿಕಾಸಸೌಧದಲ್ಲಿ ಕುಳಿತಿರುತ್ತಾರೆ. ಅವರನ್ನು ಯಾರು ಕೇಳುವವರಿದ್ದಾರೆ? ರಾಜಕಾರಣದಲ್ಲಿ ಅಧಿಕಾರ ಇವತ್ತು ಇರುತ್ತದೆ, ನಾಳೆ ಹೋಗುತ್ತದೆ. ಇದು ನಿಂತ ನೀರಲ್ಲ. ಇವತ್ತು ನಾವು ನೀವು ಇರುತ್ತೇವೆ, ನಾಳೆ ಬೇರೆ ಯಾರೋ ಬರುತ್ತಾರೋ ಎಂದು ಹೇಳಿ, ನಾವು ಕೆಲಸ ಮಾಡುವುದು ಉತ್ತಮವೆಂದು ಮಾಡುತ್ತೇವೆ.

ಏಕೆಂದರೆ, ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಧೀಮಂತ ನಾಯಕರು, ಬಡವರ ಬಗ್ಗೆ ಕಾಳಜಿ ಇಟ್ಟಂತವರು ಇವತ್ತು ಇಷ್ಟೊಂದು ಸ್ಕೀಂ ಕೊಟ್ಟರೂ ಸಹ ಅದು ಜಾರಿಯಾಗದೇ ಇರುವುದಕ್ಕೆ ಕಾರಣ ಏನೆಂದರೆ, because of these bureaucrats- ಎಲ್ಲರನ್ನೂ ನಾನು ಬೆಟ್ ಮಾಡಿ ತೋರಿಸಲಿಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ಒಳ್ಳೆಯ ಅಧಿಕಾರಿಗಳು ಸಹ ಇದ್ದಾರೆ. ಏಕೆಂದರೆ, ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀಮತಿ ಮಂಜುಳ ಎನ್ನುವವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅದಕ್ಕೆ ನಮಗೆ ಅವಾರ್ಡ್ ಬಂದಿದೆ. ಇನ್ನು ಬೆಂಗಳೂರು ಸಿಟಿಯಲ್ಲಿ ಇಲ್ಲಿ ಕುಮಾರ್‌ನಾಯಕ್ ಎನ್ನುವರೊಬ್ಬರು ನಮ್ಮ ಕಮಿಷನರ್ ಇದ್ದಾರೆ. ಅವರು ಬೆಂಗಳೂರು ಸಿಟಿಯಲ್ಲಿರುವ ಯಾವ ಶಾಸಕರ ಪೋನ್ ತೆಗೆದುಕೊಳ್ಳುವುದಿಲ್ಲ. ನಾವು ಮನೆ ಕಟ್ಟುವಾಗ ನಾವು ಮೊದಲು ಏನು ಮಾಡುತ್ತೇವೆಂದರೆ ಸೀಲಿಂಗ್ ಆದ ಮೇಲೆ ಮೊದಲು ವೈರಿಂಗ್ ಎಲ್ಲವನ್ನೂ ಮಾಡಿ . . .

**ಉಪ ಸಭಾಪತಿಯವರು:-** ಶ್ರೀಯುತ ರಘು ಅವರೆ, ತಮ್ಮ ಸಮಯ ಆಯಿತು.

**ಶ್ರೀ ಜಿ. ರಘು ಆಚಾರ್:-** ಆಯಿತು, ಸಭಾಪತಿಯವರೆ, ನಾನು ಮೊದಲ ಬಾರಿಗೆ ಮಾತನಾಡುತ್ತಿದ್ದೇನೆ. ಹೀಗಾಗಿ ಈ ರೀತಿ ಆಗುತ್ತಿದೆ. ಸಣ್ಣವನು ಎಂದು ಹೇಳಿ ಸ್ವಲ್ಪ ಡಿಸ್ಕೌಂಟ್ ಕೊಡಿ. ಎಲ್ಲವನ್ನೂ ಮಾಡಿದ ಮೇಲೆ ಎಲೆಕ್ಟ್ರಿಲ್ ಲೈನ್ ಮಾಡಬೇಕೆಂದು ಹೋಗುತ್ತಾರೆ. ಮೊದಲಿಗೆ ಟಾರ್ ಹಾಕುತ್ತಾರೆ, ಅಮೇಲೆ ಬಿಡಬ್ಲ್ಯೂಎಸ್‌ಎಸ್‌ಬಿನವರು ಬಂದು ರೋಡ್ ಅನ್ನು ಅಗೆಯುತ್ತಾರೆ. ಮತ್ತೆ ಬಿಲ್ ಮಾಡುತ್ತಾರೆ. ನಮ್ಮ ಹಣವಾದರೆ ಈ ರೀತಿ ಮಾಡುತ್ತೇವೆಯೇ? ಐಎಎಸ್ ಆಫೀಸರ್‌ಗಳಿಗೆ ಜಂಟಿ ಆಯುಕ್ತರುಗಳಿದ್ದಾರೆ, ಆಫೀಸರ್ಸ್‌ಗಳಿದ್ದಾರೆ, ಆದರೆ, ಇದಕ್ಕೆ ಯಾರು ಜವಾಬ್ದಾರರು? ನಮ್ಮ

ಮುಖ್ಯಮಂತ್ರಿಗಳನ್ನು ನಾನು ಇವತ್ತು ಅಭಿನಂದಿಸಲಿಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ಸಿಟಿ ಬಹಳ ಚೆನ್ನಾಗಿರಲೆಂದು ಹೇಳಿ, ಶ್ರೀಯುತ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾದ ನಂತರ ಬೆಂಗಳೂರು ಸಿಟಿ ಬಗ್ಗೆ ಬಹಳ ಕಾಳಜಿಯನ್ನು ತೆಗೆದುಕೊಂಡು ಬೆಂಗಳೂರು ಸಿಟಿ ಡೆವಲಪ್‌ಮೆಂಟ್‌ಗೆ ಒಬ್ಬರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಮಂತ್ರಿಗಳಾಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿರುವಂತಹ ಶ್ರೀಯುತ ಕೆ.ಜೆ.ಜಾರ್ಜ್‌ರವರನ್ನು ನಾನು ಅಭಿನಂದಿಸಲಿಕ್ಕೆ ಇಚ್ಚೆಪಡುತ್ತೇನೆ. ಆದರೆ, ಈ ಅಧಿಕಾರಿಗಳು ಮಾಡುತ್ತಿರುವಂತಹ ನೀತಿ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಬೇರೆ ಕಡೆಯ ವಿಷಯವನ್ನು ಬಿಡಿ. ಒಬ್ಬ ಬಡವ ಬೆಂಗಳೂರಿನಲ್ಲಿ 30x40 ಅಳತೆಯ ನಿವೇಶನದಲ್ಲಿ ಒಂದು ಮನೆಯನ್ನು ಕಟ್ಟಿಸಿಕೊಳ್ಳುತ್ತಾನೆ, ಒಂದು ಫ್ಲೋರ್ ಅನ್ನು ಹೆಚ್ಚುವರಿಯಾಗಿ ಕಟ್ಟುತ್ತಾನೆ. ಕಾರ್ಪೋರೇಷನ್ ಆಫೀಸ್‌ನಿಂದ, ವಾರ್ಡ್ ಆಫೀಸ್‌ನಿಂದ ಒಂದು 500 ಮೀಟರ್ ಲೆಕ್ಕದಲ್ಲಿ ನೋಡಿದರೆ ಕಮರ್ಷಿಯಲ್ ಬಿಲ್ಡಿಂಗ್ ಅನ್ನೇ ಸೆಟ್‌ಬ್ಯಾಕ್ ಬಿಡದೇ 4/4 ಅಂತಸ್ತುಗಳನ್ನು ಕಟ್ಟಿರುತ್ತಾರೆ. ಅಲ್ಲಿ ಇರುವಂತಹ ಆಫೀಸರ್‌ಗಳು ಏನು ಮಾಡುತ್ತಾರೆ, ಅಲ್ಲಿ ಜಂಟಿ ಆಯುಕ್ತರುಗಳು ಇರುವುದಿಲ್ಲವೇ? ಅಲ್ಲಿ ಎಇಇ ಇದ್ದಾರೆ, ಎಇ.ಇದ್ದಾರೆ. ಅಲ್ಲಿ ಯಾರಾದರೂ ಒಬ್ಬರಾದರೂ ನೋಡಬೇಕಲ್ಲವೇ? 5 ವರ್ಷಗಳ ಅವಧಿಗೆ ಪರೀಕ್ಷೆ ಪಾಸ್ ಮಾಡಿರುವ ನಮ್ಮನ್ನು ನಾವು ತಪ್ಪು ಮಾಡಿದರೆ ನಮ್ಮನ್ನು ಜನರು ಸೋಲಿಸುತ್ತಾರೆ. ಇವರಿಗೆ ಯಾರಿಗಾದರೂ ನಾವು ಸಸ್ಪೆಂಡ್ ಮಾಡಿದ್ದೇವೆಯೇ? ನಾನು ಆ ಪಕ್ಷ, ಈ ಪಕ್ಷವೆಂದು ಹೇಳಲಿಕ್ಕೆ ಹೋಗುವುದಿಲ್ಲ. ಅನೇಕ ಶಾಸಕರುಗಳು ಬೆಂಗಳೂರು ಸಿಟಿಯಲ್ಲಿಯೇ ವಾಸವಾಗಿದ್ದೇವೆ. chain snatch ಮಾಡಿಕೊಂಡು ಕಳ್ಳ ಹೋದಂತಹ ದಿವಸ ಪಬ್ಲಿಕ್‌ನವರು 100 ಗೆ ಫೋನ್ ಮಾಡುತ್ತಾರೆ. ಹೀಗೆ ಕಳ್ಳ ಕದ್ದುಕೊಂಡು ಹೋಗಿದ್ದಾನೆಂದು ಹೇಳುತ್ತಾನೆ. ನಾವು ಯಾರಾದರೂ ದಾರಿಯಲ್ಲಿ ಬರುವಾಗ ಈ ರೀತಿಯಲ್ಲಿ ಸೆಟ್‌ಬ್ಯಾಕ್ ಬಿಡದೇ ಮನೆಯನ್ನು ಕಟ್ಟಿರುವುದು, ಮತ್ತೊಂದನ್ನು ಬಿಟ್ಟು ಮನೆ ಕಟ್ಟಿದಾಗ ನಾವು ಫೋನ್ ಮಾಡುತ್ತಿದ್ದೇವೆಯೇ? ಈ ಕೆಲಸವನ್ನು ಯಾರೂ ಸಹ ಮಾಡುವುದಿಲ್ಲ. ಇದು ಅವನ ಕ್ಷೇತ್ರ ಇದೆ, ನಮಗೆ ಏತಕ್ಕೆ ಬಿಡಪ್ಪಾ ಎಂದು ಸುಮ್ಮನಾಗುತ್ತೇವೆ.

ಆದ್ದರಿಂದ, ತಮ್ಮೆಲ್ಲರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಇದು ನಮ್ಮದಾಗಿದ್ದು, ನಾನು ಚಿತ್ರದುರ್ಗ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರೂ ನಾನು ಕರ್ನಾಟಕ ರಾಜ್ಯಕ್ಕೆ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೇನೆ. ನಾನು ಕೇವಲ ಚಿತ್ರದುರ್ಗ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಅಧಿಕಾರಿಗಳು ಎಲ್ಲಿದ್ದಾರೆ?

ಮಾನ್ಯ ಸಭಾಪತಿಯವರೆ, ಇನ್ನೊಂದು ವಿಷಯ ಏನೆಂದರೆ, ರೈತರ ಆತ್ಮಹತ್ಯೆ ಜಾಸ್ತಿಯಾಗುತ್ತಿದೆ. ಇದು ಬಹಳ ಪ್ರಮುಖವಾದ ವಿಚಾರ. ರೈತರು ಇದ್ದರೆ, ನಾವೆಲ್ಲರೂ ಇದ್ದ ಹಾಗೆ. ರೈತರ ಆತ್ಮಹತ್ಯೆ ಇಷ್ಟೊಂದು ಆಗುತ್ತಿರಬೇಕಾದರೆ, ಅವರ ಕುಟುಂಬಕ್ಕೆ ಪರಿಹಾರವಾಗಿ 2 ಲಕ್ಷ ರೂಪಾಯಿಗಳಿಂದ, 5 ಲಕ್ಷ ರೂಪಾಯಿಗಳಿಗೆ ನಮ್ಮ ಮುಖ್ಯಮಂತ್ರಿಗಳು ಹೆಚ್ಚು ಮಾಡಿದರು. ಮತ್ತೆ ಅವರಿಗೆ ಕೆಲಸ ಕೊಡುವುದನ್ನೆಲ್ಲಾ ಮಾಡಿದೆವು. ಅದು ಒಂದೇ ಆದರೆ ಸಾಕಾಗುವುದಿಲ್ಲ. ಏಕೆಂದರೆ, ಹಳೆಯ ಸರ್ಕಾರಗಳು ಇದ್ದಂತಹ ಸಂದರ್ಭದಲ್ಲಿ ರೈತರುಗಳ ಸಾಲವನ್ನೇ ಮನ್ನಾ ಮಾಡಿದರು. ಸಾಲ ಮನ್ನಾ ಮಾಡಿದ ತಕ್ಷಣ ರೈತರ ಆತ್ಮಹತ್ಯೆ ನಿಲ್ಲಲಿಲ್ಲ. ನಾವು ಅವರಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟ ತಕ್ಷಣ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ. ಈಗ ನಮ್ಮ ಕೃಷಿ ನೀತಿಯನ್ನು ರಾಜ್ಯದಲ್ಲಿ ಆಳವಡಿಸಿಕೊಳ್ಳುವಂತಹ ರೀತಿಯಲ್ಲಿ ನಾವು ತಂದಿದ್ದೇವೆ. ಅದರೂ ಸಹ ಎಲ್ಲೋ ಒಂದು ಕಡೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಿನ್ನ ಬಸವರಾಜ ಹೊರಟ್ಟಿಯವರು ಮಾತನಾಡುವಾಗ ಕಬ್ಬು ಬೆಳೆಗಾರರ ಕತೆಯನ್ನು ಹೇಳುತ್ತಿದ್ದರು. ಕಬ್ಬು ಬೆಳೆಗಾರರ ವಿಷಯ ಇನ್ನೆರಡು–ಮೂರು ತಿಂಗಳಲ್ಲಿ ಪ್ರಾರಂಭವಾಗುತ್ತದೆ. ಕಬ್ಬು ಇನ್ನು 2–3 ತಿಂಗಳಿನಲ್ಲಿ ಕಟಾವು ಆಗುತ್ತದೆ. ಅವರು ಪ್ರತಿ ವರ್ಷ ಬಂದು ಗಲಾಟೆ ಮಾಡುತ್ತಾರೆ, ಆಗ ನಾವು ಸರ್ಕಾರದ ವತಿಯಿಂದ 300 ರೂಪಾಯಿಗಳನ್ನು ಕೊಡುತ್ತೇವೆ, ಜೊತೆಗೆ ಹಣವನ್ನು ವಸೂಲಿ ಮಾಡಿಕೊಡುತ್ತೇವೆಂದು ನಾವು ಸಹ ಭಾಷಣ ಮಾಡುತ್ತೇವೆ, ಅಲ್ಲಿ ಇರುವವರು ಭಾಷಣ ಮಾಡುತ್ತಾರೆ. ಮತ್ತೆ ರೈತರು ಹೋಗಿ ಮತ್ತೆ ಧರಣಿ ಮಾಡುತ್ತಾರೆ. ನಾವು ಈ ಬಗ್ಗೆ ಏತಕ್ಕೆ ಯೋಚನೆ ಮಾಡಿಲ್ಲ. ಇದಕ್ಕೆ ಏನು ತೊಂದರೆ? ಈಗ ನಾವು ಚೈನಾದಿಂದ ಸಕ್ಕರೆಯನ್ನು ಆಮದು ಮಾಡಿಕೊಂಡು open market ನಲ್ಲಿ ನಾವು ಮಾರುತ್ತಿದ್ದೇವೆಂದರೆ ಎಲ್ಲಿದೆ ನಮ್ಮ ಲ್ಯಾಪ್ಸ್? Technology lapse ಆಗಿದೆಯೇ ಎನ್ನುವುದನ್ನು ನಾವು ಚೆಕ್ ಮಾಡುತ್ತಿದ್ದೇವೆಯೇ?

ನಮ್ಮ ಮನೆಯಲ್ಲಿ ನಮ್ಮ ತಂದೆ ಯಾವಾಗಲೂ ಹೇಳುತ್ತಿದ್ದರು. ಒಂದು ಗಾಧೆ ಇದೆ, ನಾನು ಅದನ್ನು ಹೇಳಬಹುದೋ ಇಲ್ಲವೋ ಗೊತ್ತಿಲ್ಲ.

“ನೋಡೋ ಮರಿ, ನಿನಗೆ ಒಂದು ದಿನ ಮೀನು ಕೊಟ್ಟರೆ ಸಾಕಾಗುವುದಿಲ್ಲ, ನಿನಗೆ ಮೀನು ಹಿಡಿಯುವದನ್ನೇ ಕಲಿಸಿದರೆ ದಿನಾ ನಾಲ್ಕು ಮೀನುಗಳನ್ನು ಹಿಡಿದುಕೊಳ್ಳುತ್ತೀಯಾ, ಮೂರು ಮೀನುಗಳನ್ನು ಮಾರಿಕೊಂಡು ಸಾಂಬಾರ್ ಪುಡಿ, ಇತ್ಯಾದಿಯಾಗಿ ತಂದು ಒಂದು ಮೀನನನ್ನು ಸಾರು ಮಾಡಿಕೊಳ್ಳುತ್ತೀಯಾ” ಎಂದು ಹೇಳುತ್ತಿದ್ದರು. ಆದ್ದರಿಂದ, ರೈತರ ವಿಚಾರವಾಗಿ ಒಂದು ಕಾಯಂ ಪರಿಹಾರವನ್ನು ಹುಡುಕಬೇಕಲ್ಲವೇ? ಬಹುತೇಕ ಜನ ರೈತರು ಇದ್ದಾರೆ. ನಮ್ಮ ತಾತ ರೈತರಾಗಿದ್ದರು.

ಆದರೆ, ನಾನು ನಮ್ಮ ಅಪ್ಪ ರೈತರಿಲ್ಲ ಬಿಡಿ. ಆದರೆ, ಬಹುತೇಕ ಮಂದಿ ಇಲ್ಲಿ ರೈತರಿದ್ದು, ಒಂದು ದಿವಸದಲ್ಲಿ ದುಡ್ಡು ಕೊಟ್ಟು ಈ ಸಮಸ್ಯೆ ಪರಿಹಾರವಾದರೆ, ರೈತರಿಗೆ 5 ಲಕ್ಷ ಕೊಟ್ಟೆವು, ಕೆಲಸ ಕೊಟ್ಟೆವು ಎಂದು ಹೇಳಿ ಸುಮ್ಮನಾಗಲಿಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಇವತ್ತು ರೈತರ ವಿಚಾರದಲ್ಲಿ ಎಷ್ಟು ಕಾಳಜಿ ಇದೆ ಎಂದರೆ ಇಂಡಿಯಾದಲ್ಲಿ ಎಲ್ಲಿಯಾದರೂ Socio-Economic Survey ಮಾಡಿಸಿದ್ದರೆ ಆ ಹೆಗ್ಗಳಿಕೆ ಶ್ರೀಮಾನ್ ಸಿದ್ದರಾಮಯ್ಯನವರಿಗೆ ಹೋಗುತ್ತದೆ. ಅವರು ಬಂದ ಕೂಡಲೇ. . . ಒಬ್ಬ ಗೃಹ ಮಂತ್ರಿ ಲಾಠಿ ಚಾರ್ಜ್ ಆಗುವ ಮುಂಚೆಯೇ ರೀಚ್ ಆಗೋಣವೆಂದು ಅಲ್ಲಿಗೆ ಹೋದರು. ಅಂತಹ ಒಬ್ಬ ಗೃಹ ಮಂತ್ರಿಯನ್ನು ಕೊಟ್ಟಿದ್ದಾರೆ. ಬೇರೆ ಸರ್ಕಾರವನ್ನು ಹೋಲಿಕೆ ಮಾಡಿ ನೋಡಿದಾಗ ಈ ಸರ್ಕಾರದ ಎಲ್ಲಾ ಸಚಿವರುಗಳ ಮೇಲೆ ಒಂದೇ ಒಂದು ಅಲಿಗೇಷನ್ಸ್ ಇರುವುದಿಲ್ಲ.

(ಗೊಂದಲ)

**ಉಪ ಸಭಾಪತಿಯವರು:-** ಶ್ರೀಯುತ ರಘು ಅವರೇ ದಯವಿಟ್ಟು ಬೇಗ ಮುಗಿಸಿ.

**ಶ್ರೀ ಜಿ. ರಘುಆಚಾರ್:-** ಮಾನ್ಯ ಸಭಾಪತಿಯವರೆ, ಇಲ್ಲಿ ನಮ್ಮದು, ನಿಮ್ಮದು ಎನ್ನುವ ಪ್ರಶ್ನೆಯಿಲ್ಲ, ಎಲ್ಲರಿಗೂ ಸಮಾನವಾಗಿ ನಾವು ಅಧಿಕಾರಿಗಳ ಮೇಲೆ ನಾವು ಹತೋಟಿಯನ್ನು ತೆಗೆದುಕೊಳ್ಳದೇ ಹೋದರೆ, ಅಧಿಕಾರಿಗಳನ್ನು ಹೀಗೆಯೇ ಬಿಟ್ಟರೆ ನಾವು ಶಾಸಕರಾಗಿ ಇರುವುದರ ಬದಲು ನಾವು ಇಲ್ಲಿಗೆ ಬರುವುದೇ ಬೇಡ. ಚುನಾವಣೆಗೆ ನಿಲ್ಲವುದೇ ಬೇಡ. ನಾವು ಇಲ್ಲಿ ಬಂದು ಸುಮ್ಮನೆ ಭಾಷಣ ಮಾಡಿ, ಇಲ್ಲಿ ಆಶ್ವಾಸನೆಯನ್ನು ಕೊಟ್ಟು ಹೋಗುತ್ತೇವೆ. ಆದರೆ, ಅಧಿಕಾರಿಗಳು ಇದರ ಬಗ್ಗೆ ಗಮನಹರಿಸುವುದೇ ಇಲ್ಲ. ನೀವು ವಿಕಾಸಸೌಧಕ್ಕೆ ಹೋಗಿ ನೋಡಿ. ಐಎಎಸ್.ಅಧಿಕಾರಿಗಳಿಗೆ ಹೇಳಿದರೆ, ಅವರು ಕೇಳಿಕೊಳ್ಳುತ್ತಾರೆ, ಹೋಗುತ್ತಾರೆ ಅಷ್ಟೆ. ಇಲ್ಲಿ ನನ್ನ ಒಬ್ಬನ ಸಮಸ್ಯೆ ಅಲ್ಲ. ಎಲ್ಲರದ್ದು ಈ ವಿಚಾರವಾಗಿ ಸಮಸ್ಯೆ ಇದೆ. ನಮ್ಮ ಮಾತನ್ನೇ ಕೇಳದವರು, ಜನರ ಮಾತನ್ನು ಹೇಗೆ ಕೇಳುತ್ತಾರೆ?

(ಗೊಂದಲ)

**ಉಪ ಸಭಾಪತಿಯವರು:-** ಶ್ರೀಯುತ ರಘು ಅವರೆ, ದಯವಿಟ್ಟು ಮುಗಿಸಿ.

**ಶ್ರೀ ಜಿ. ರಘು ಆಚಾರ್:-** ಮಾನ್ಯ ಸಭಾಪತಿಯವರೆ, ನಾನು ನನ್ನ ಭಾಷಣವನ್ನು ಕನ್‌ಕ್ಲೂಡ್ ಮಾಡುತ್ತೇನೆ. ಸಂವಿಧಾನಕ್ಕೆ 73-74ನೇ ತಿದ್ದುಪಡಿಯನ್ನು ತಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಬಲ ತುಂಬಿದಂತಹ ಶ್ರೀಯುತ ರಾಜೀವ್ ಗಾಂಧಿಯವರ ಫೋಟೋವನ್ನು

ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಹಾಕಬೇಕೆಂದು ತಮ್ಮ ಮೂಲಕ ಕೇಳಿಕೊಂಡು, ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಶ್ರೀಯುತ ರಘು ಆಚಾರ್‌ರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ, ಅವರಿಗೆ ತಮ್ಮೆಲ್ಲರ ಪರವಾಗಿ, ನನ್ನ ಪರವಾಗಿ ಅವರಿಗೆ ಅಭಿನಂದನೆಗಳು.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಸಿ.ಹೆಚ್.ವಿಜಯಶಂಕರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಂತಹ ಅವಕಾಶವನ್ನು ತಾವು ಕೊಟ್ಟಿದ್ದೀರಿ. ಆದರೆ, ನಾನು ಮಾತನಾಡುವುದಕ್ಕಿಂತ ಮೊದಲು ಈ ಸದನದ ಒಬ್ಬ ಸದಸ್ಯನಾಗಿ, ಈ ಸದನವನ್ನು ನಾನು ಸೂಕ್ಷ್ಮವಾಗಿ ಅವಲೋಕನ ಮಾಡಿಕೊಂಡು ಬರುತ್ತಿದ್ದೇನೆ. ಇಲ್ಲಿ ಏನಾಗಿದೆ ಎಂದರೆ ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿರುವಂತಹ ಒಂದು ವರ್ಗ ಇದೆ. ಅದು ತಪ್ಪು ಎಂದು ಹೇಳುವುದಿಲ್ಲ. ಸ್ಥಳೀಯ ಸಂಸ್ಥೆಗೆ ಅವರು ಮಹತ್ವ ಕೊಡಬೇಕು, ಮಾನ್ಯತೆ ಕೊಡಬೇಕು, ಆದ್ಯತೆಯನ್ನು ಕೊಡಬೇಕು, ಅದರ ಮೇಲೆ ಅವರು ಚರ್ಚೆಯನ್ನು ಮಾಡಬೇಕು. 2ನೆಯದಾಗಿ, ಇಲ್ಲಿಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ ಒಂದು ವರ್ಗ ಇದೆ.

**ಮುಂದು**. . .

(ಉಪಸಭಾಪತಿಯವರ ಉಪಸ್ಥಿತಿ)

ಶ್ರೀ ಸಿ.ಹೆಚ್.ವಿಜಯಶಂಕರ(ಮುಂದುವರೆದುದು ...

ಅವರು ಆ ಕ್ಷೇತ್ರದ ಬಗ್ಗೆ ವಿಶೇಷವಾದ ಮಾನ್ಯತೆಯನ್ನು ಕೊಟ್ಟು ಚರ್ಚೆಯನ್ನು ಮಾಡುತ್ತಾರೆ. ಅದೇರೀತಿ ಪದವೀಧರರ ಕ್ಷೇತ್ರದಿಂದ ಕೆಲವು ಸದಸ್ಯರೇನು ಆಯ್ಕೆಯಾಗಿ ಬಂದಿದ್ದಾರೆ, ಅವರು ಆ ಕ್ಷೇತ್ರದ ಬಗ್ಗೆ ವಿಶೇಷವಾದ ಮಾನ್ಯತೆಯನ್ನು ಕೊಟ್ಟು ಚರ್ಚೆ ಮಾಡುತ್ತಾರೆ. ಆದರೆ ನಾನು ಹೇಳಬಯಸುತ್ತಿರುವುದೇನೆಂದರೆ, ಒಮ್ಮೆ ಈ ಸದನದ ಸದಸ್ಯರಾಗಿ ಆಯ್ಕೆಯಾಗಿ ಬಂದ ಮೇಲೆ ನಾನು ಇಡೀ ಸದನವನ್ನು ಪ್ರತಿನಿಧಿಸುತ್ತಿದ್ದೇನೆ, ಇಡೀ ಸಮಾಜವನ್ನು ಪ್ರತಿನಿಧಿಸುತ್ತಿದ್ದೇನೆ, ಇಡೀ ಸಮಾಜಮುಖಿಯಾಗಿ ನಾನು ಚಿಂತನೆಯನ್ನು ಮಾಡುತ್ತೇನೆ ಎನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನು ಸೂಕ್ಷ್ಮವಾಗಿ ಗಮನಿಸಿರುವ ಪ್ರಕಾರ ಇಲ್ಲಿ ನೀರಾವರಿ ಬಗ್ಗೆ ಆಗಲಿ, ಕೃಷಿ ಬಗ್ಗೆ ಆಗಲಿ, ಕಾರ್ಮಿಕರ ಸಮಸ್ಯೆ ಬಗ್ಗೆ ಆಗಲಿ, ಆರೋಗ್ಯದ ಸಮಸ್ಯೆ ಬಗ್ಗೆ ಆಗಲಿ, ವಿಜ್ಞಾನ ಮತ್ತು ತಂತ್ರಜ್ಞಾನದ ಸಮಸ್ಯೆಗಳ ಬಗ್ಗೆ ಆಗಲಿ, ಸಾಹಿತ್ಯದ ಬಗ್ಗೆ ಚರ್ಚೆ ಆಗುವುದಾಗಲಿ ಅಥವಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ಅಂದರೆ, ಯುವಕರ ಬಗ್ಗೆ ಚರ್ಚೆ ಆಗುವುದಾಗಲಿ ಏನು ಈ ಸದನ ಒಂದು ರಾಜ್ಯದ ಸರ್ವಾಂಗೀಣ ಪ್ರಗತಿ ಮತ್ತು ಬೆಳವಣಿಗೆಯ ಹಿನ್ನೆಲೆಯಲ್ಲಿ ಯಾವ ಯಾವ ಕ್ಷೇತ್ರಗಳಿಗೆ ಸರ್ಕಾರ ಗಮನವನ್ನು ಕೊಟ್ಟು ಯಾವ ಯಾವ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಅನುಷ್ಠಾನ ಮಾಡಬೇಕಾಗಿದೆ ಎನ್ನುವುದ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಒಂದು ಸರ್ಕಾರದ ಜವಾಬ್ದಾರಿಯ ಹಿನ್ನೆಲೆಯಲ್ಲಿ ಅದನ್ನು ಎಚ್ಚರಿಸುವಂತಹ ಹಿನ್ನೆಲೆಯಲ್ಲಿ ಈ ಸದನ ತನ್ನ ಗಮನವನ್ನಿಟ್ಟು ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ನಾನು ಬಹಳ ನೋವಿನಿಂದ ಹೇಳಬಯಸುತ್ತಿದ್ದೇನೆ. ಒಂದೊಂದು ವರ್ಗಗಳು ಒಂದೊಂದು ವ್ಯವಸ್ಥೆಗೆ ಮಾತ್ರ ಸೀಮಿತವಾಗಿ, ಆ ವಿಷಯಗಳಿಗೆ ಮಾತ್ರ ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿದಾಗ ಯಾವುದೇ ವ್ಯವಸ್ಥೆ ಸರ್ವಾಂಗೀಣ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ.

ನನ್ನ ಅನುಭವದ ಪ್ರಕಾರ ಕಳೆದ ಐದೂವರೆ ವರ್ಷದ ದಾಖಲಾತಿಗಳನ್ನು ತೆಗೆದುನೋಡಿದಾಗ ಯಾವ ಯಾವ ಇಲಾಖೆಯ ಬಗ್ಗೆ ಎಷ್ಟೆಷ್ಟು ಸಮಯ ಚರ್ಚೆಯಾಗಿದೆ, ಯಾವ ಯಾವ ಕ್ಷೇತ್ರಗಳಿಗೆ ನಾವು ಎಷ್ಟೆಷ್ಟು ಆದ್ಯತೆಯನ್ನು ಕೊಟ್ಟಿದ್ದೇವೆ, ಕೃಷಿ ಮತ್ತು ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಹಿತ್ಯ ಕ್ಷೇತ್ರದ ಬಗ್ಗೆ ನಾವು ಎಷ್ಟು ಸಮಯವನ್ನು ಕೊಟ್ಟಿದ್ದೇವೆ? ಯುವಜನಸೇವಾ ಇಲಾಖೆಯ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬೇಕಾದ ತೀರ್ಮಾನಗಳ ಬಗ್ಗೆ, ಪಶು ಸಂಗೋಪನೆ ಇಲಾಖೆಯ ಬಗ್ಗೆ ತೆಗೆದುಕೊಳ್ಳಬೇಕಾದ ತೀರ್ಮಾನಗಳ ಬಗ್ಗೆ, ಕಾರ್ಮಿಕರ ಬಗ್ಗೆ ಒಂದೇ ಒಂದು ದಿನ ಇಲ್ಲಿ ಚರ್ಚೆಯಾಗಿರುವುದನ್ನು ನಾವು

ಕಾಣಲಿಕ್ಕೆ ಸಾಧ್ಯವಾಗಿಲ್ಲ. ಈ ವಿಚಾರವನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಹೀಗಾಗಿ ಈ ಸದನ ಪಕ್ಷಪಾತಿಯಾಗಬಾರದು, ಈ ಸದನ ಯಾವುದೋ ಒಂದು ವ್ಯವಸ್ಥೆಗೆ ಸೀಮಿತವಾಗಬಾರದು. ಮೇಲ್ಮನೆ ಎಂದರೆ, ಅದು ಎಲ್ಲ ವಿಷಯಗಳಲ್ಲಿ ಸಹ ಮೇಲ್ಪಂಕ್ತಿಯಾಗಬೇಕು. ಕೆಳಮನೆಯಲ್ಲಿ ಯಾವ ಚರ್ಚೆಗಳಿಗೆ ಅವಕಾಶವಾಗುವುದಿಲ್ಲವೋ ಆ ಚರ್ಚೆಗೆ ಇಲ್ಲಿ ಅವಕಾಶ ಸಿಗಬೇಕು. ಸಾಹಿತ್ಯ, ಸಂಗೀತ, ಕ್ರೀಡೆ ಈ ರೀತಿ ಸಮಾಜದ ಯಾವ ಯಾವ ವರ್ಗಗಳು ಧ್ವನಿ ಎತ್ತುವುದಕ್ಕೆ ಸಾಧ್ಯವಿಲ್ಲ, ಆ ವರ್ಗಗಳ ಪರವಾಗಿ ಧ್ವನಿ ಎತ್ತುವಂತಹ ಕೆಲಸವನ್ನು ಈ ಸದನ ಮಾಡಬೇಕು. ಯಾವ ಕ್ಷೇತ್ರ ಕಡೆಗಣನೆಗೆ ಒಳಗಾಗುತ್ತದೆ, ಆ ವಿಷಯಗಳಿಗೆ ಆದ್ಯತೆಯನ್ನು ಕೊಟ್ಟು ಚರ್ಚೆ ಮಾಡುವಂತಹ ಅವಕಾಶ ಲಭ್ಯವಾಗಬೇಕು. ನಮಗೆ ಎಲ್ಲ ಹಂತದಲ್ಲಿಯೂ ಅವಕಾಶಗಳು ಲಭ್ಯವಾಗುವುದಿಲ್ಲ; ಸಿಕ್ಕಂತಹವರು ಎಲ್ಲ ವಿಷಯಗಳ ಬಗ್ಗೆ ಕೂಡ ಗಮನ ಕೊಡುವುದಕ್ಕೆ ತಯಾರಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಿಯೋ ಒಂದು ಹಂತದಲ್ಲಿ ಸದನ ದಿಕ್ಕುತಪ್ಪುತ್ತಿದೆ, ದಾರಿ ತಪ್ಪುತ್ತಿದೆ. ಸದನವನ್ನು ಸರಿ ದಾರಿಗೆ ತರುವಂತಹ ಹಿನ್ನೆಲೆಯಲ್ಲಿ ಪ್ರಾಮಾಣಿಕವಾದ ಚಿಂತನೆ ಕೂಡ ನಡೆಯಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತಿದ್ದೇನೆ.

ಎರಡನೆಯದಾಗಿ ಈಗಾಗಲೇ ಮಾನ್ಯ ಹೊರಟ್ಟಿಯವರು ಮತ್ತು ಮಾನ್ಯ ಕೆ.ಎಸ್.ಈಶ್ವರಪ್ಪನವರು ಪ್ರಸ್ತಾಪ ಮಾಡಿರುವಂತೆ ನಾನು ಕಳೆದ ಸುಮಾರು 20 – 22 ವರ್ಷಗಳಿಂದ ಕೆಳಮನೆಯ ಸದಸ್ಯನಾಗಿ ಬಂದಿದ್ದೇನೆ. ಎರಡು ಅವಧಿಗೆ ಲೋಕಸಭೆಯ ಸದಸ್ಯನಾಗಿ ಕೆಲಸ ನಿರ್ವಹಿಸಿದ್ದೇನೆ. ಮಂತ್ರಿಯಾಗಿ ಕೂಡ ಕಾರ್ಯನಿರ್ವಹಿಸಿರುವ ನಾನು ಸೂಕ್ಷ್ಮವಾಗಿ ಹೇಳಬಯಸುತ್ತಿರುವುದೇನೆಂದರೆ, ಈ ಸದನದ ಹಿರಿಯ ಸದಸ್ಯರು ಈಗಾಗಲೇ ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಆ ವಿಷಯದ ಬಗ್ಗೆ ಕೂಡ ಈ ಸದನ ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಅಧಿವೇಶನ ಪ್ರಾರಂಭವಾಗುತ್ತದೆ ಎನ್ನುತ್ತಿದ್ದಂತೆಯೇ ಇಡೀ ಸದನದಲ್ಲಿ ಒಂದು ಸಂಚಲನ ಪ್ರಾರಂಭವಾಗುತ್ತಿತ್ತು, ಅಧಿಕಾರಿ ವರ್ಗದಲ್ಲಿ ನಾನು ಆ ಸಂಚಲನವನ್ನು ಕಾಣುತ್ತಿದ್ದೆ. ಸಾಮಾನ್ಯ ವ್ಯಕ್ತಿಗಳ ಮಾತುಗಳಲ್ಲಿ ಕೂಡ ಅಧಿವೇಶನ ಪ್ರಾರಂಭವಾಗುತ್ತಿದೆ ಎಂದು ಚರ್ಚೆ ಮಾಡುವಂಥದ್ದನ್ನು ನಾನು ಕಂಡಿದ್ದೆ. ಇವತ್ತು ಅಧಿವೇಶನ ಪ್ರಾರಂಭವಾಗುತ್ತಿದೆ ಎಂದರೆ, ಸದನದ ಹೊರಗಿರಲಿ, ಸಮಾಜದಲ್ಲಿರಲಿ, ಅಧಿಕಾರಿ ವರ್ಗದಲ್ಲಿರಲಿ, ಸದನದ ಒಳಗೆ ಕೂಡ ಇವತ್ತು ಆ ಸಂಚಲನ ಇಲ್ಲವಾಗಿದೆ. ಒಂದು ರೀತಿಯ ನಿಷ್ಕ್ರಿಯತೆ, ಒಂದು ರೀತಿಯ ನಿರ್ಜೀವ ವ್ಯವಸ್ಥೆ, ಸತ್ತು ಹೋಗಿರುವಂತಹ ವ್ಯವಸ್ಥೆ, ಬಾಡಿ ಹೋಗಿರುವಂತಹ ವ್ಯವಸ್ಥೆ, ಭವಿಷ್ಯವೇ ಇಲ್ಲವೇನೋ ಎನ್ನುವಂತಹ ಒಂದು ಮಾನಸಿಕ ವ್ಯವಸ್ಥೆಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇವತ್ತು ಸದನದ ಐದನೆಯ ದಿವಸ, ಸದನದ ಅಧಿಕಾರಿಗಳ ಗ್ಯಾಲರಿ ಖಾಲಿ–ಖಾಲಿ, ಮುಂದಿನ ಕುರ್ಚಿಗಳು ಖಾಲಿ–ಖಾಲಿ. ಸದನ ನಡೆಯುತ್ತಿದೆ ಎಂದರೆ, ಸದನ

ತುಂಬಿರಬೇಕು. ಇಲ್ಲಿ ಮುಕ್ತ ಚರ್ಚೆಗಳಾಗಬೇಕು. ಯಾರಿಗೆ ಆ ರೀತಿಯ ಸಮಯ ಕೊಡಲಿಕ್ಕೆ ಸಾಧ್ಯವಿಲ್ಲ ಅವರೇಕೆ ಇಲ್ಲಿಗೆ ಬರಬೇಕು? ಯಾರು ಆ ರೀತಿ ಅಧ್ಯಯನ ಮಾಡುವುದಕ್ಕೆ ಸಾಧ್ಯವಿಲ್ಲ ಅವರಿಗೆ ಆ ಜವಾಬ್ದಾರಿ ಏಕೆ ಬೇಕು? ಈ ಹಿನ್ನೆಲೆಯಲ್ಲಿ ಹಿರಿಯರು ಕುಳಿತು ವ್ಯವಸ್ಥಿತವಾಗಿ ಚಿಂತನೆ ಮಾಡದೆ ಹೋದರೆ ನಿಜಕ್ಕೂ ಬಹಳ ಸಮಸ್ಯೆಗಳಾಗುತ್ತವೆ.

ನಾವು ಇಲ್ಲಿ ಡಾ:ಎಂ.ಆರ್.ತಂಗಾ ಅವರನ್ನು ಕಂಡಿದ್ದೇವೆ, ಮಾನ್ಯ ಕೆ.ನರಹರಿಯವರನ್ನು ಕಂಡಿದ್ದೇವೆ, ಕರಂಬಳ್ಳಿ ಸಂಜೀವನಿಯವರನ್ನು ಕಂಡಿದ್ದೇವೆ, ಡಾ:ವಿ.ಎಸ್.ಆಚಾರ್ಯ ಅವರನ್ನು ಕಂಡಿದ್ದೇವೆ. ಬಿ.ಆರ್.ಕೃಷ್ಣಮೂರ್ತಿಯವರನ್ನು, ಎಲ್.ಜೆ.ಹಾವನೂರ ಅವರನ್ನು ಕಂಡಿದ್ದೇವೆ. ಶ್ರೀಯುತ ಎಂ.ಸಿ.ನಾಣಯ್ಯನವರನ್ನು, ಶ್ರೀಯುತ ಎ.ಕೆ.ಸುಬ್ಬಯ್ಯನವರನ್ನು ಕಂಡಿದ್ದೇವೆ. ಯಾವ ಹಂತಕ್ಕೆ ಹೋದಂತಹ ಸದನ ಇದು, ಯಾವ ಎತ್ತರಕ್ಕೆ ಹೋದಂತಹ ವ್ಯವಸ್ಥೆ ಇದು ಎಂಬುದನ್ನು ಗಮನಿಸಿದಾಗ ಯಾವ ಹಂತದಿಂದ ಈಗ ಎಲ್ಲಿಗೆ ಬಂದು ನಿಂತಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿಯಲ್ಲಿದ್ದೇವೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತಿದ್ದೇನೆ. ಅತ್ಯಂತ ಹೆಚ್ಚಿನ ಸಮಯ ಗಲಾಟೆ–ಗದ್ದಲಗಳು, ಬೇಡವಾದಂತಹ ವಿಚಾರಗಳು, ಬೇಡವಾದಂತಹ ವಿಚಾರಗಳ ಬಗ್ಗೆ ಚರ್ಚೆಗಳು ಇದನ್ನೆಲ್ಲಾ ಗಮನಿಸಿದಾಗ ಎಲ್ಲಿಯೋ ಒಂದು ಕಡೆಯಲ್ಲಿ ಗುಣಮಟ್ಟದ ವಿಚಾರದಲ್ಲಿ ನಾವು ರಾಜಿಯಾಗುತ್ತಿದ್ದೇವೆ ಎನ್ನುವಂತಹ ಅಂಶ ಸ್ಪಷ್ಟವಾಗುತ್ತಿದೆ. ಈ ಗುಣಮಟ್ಟದ ವಿಚಾರದಲ್ಲಿ ಕೂಡ ನಾವು ಗಮನ ಹರಿಸಬೇಕಾದಂತಹ ಅಗತ್ಯತೆ ನಮ್ಮೆಲ್ಲರ ಮೇಲಿದೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯರು ನಮಗೆ ಒಂದು ಪರಂಪರೆಯನ್ನು ಕೊಟ್ಟು ಹೋಗಿದ್ದಾರೆ. ಈ ಪರಂಪರೆಗೆ ನಾವೇನು ಕೊಡುಗೆಯಾಗಿ ಕೊಡುತ್ತೇವೆ ಎನ್ನುವುದಕ್ಕಿಂತ ಹೆಚ್ಚಾಗಿ ಮುಂದಿನ ಪೀಳಿಗೆಗೆ ನಾವೇನು ಬಿಟ್ಟು ಹೋಗುತ್ತೇವೆ, ನಮ್ಮ ಆದರ್ಶಗಳೇನು, ನಮ್ಮ ಚಿಂತನೆಗಳೇನು, ಸಮಾಜಕ್ಕೆ ಗಟ್ಟಿಯಾಗಿ ಕೊಡುವಂತಹ ವಿಚಾರಗಳಲ್ಲಿ ನಮ್ಮಲ್ಲೇನಿದೆ ಎನ್ನುವ ಹಿನ್ನೆಲೆಯಲ್ಲಿ ನಾವು ಚಿಂತನೆ ಮಾಡದಿದ್ದರೆ ಎಲ್ಲಿಯೋ ಒಂದು ಕಡೆಗೆ ನಾವು ಇಲ್ಲಿ ಕುಳಿತು ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಜವಾಬ್ದಾರಿಯಿಂದ ಹೇಳಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೆ, ನಾನು ಬೇರೆ ಬೇರೆ ವಿಷಯಗಳಿಗೆ ಹೋಗುವುದಿಲ್ಲ, ಕೇವಲ 5 ರಿಂದ 10 ನಿಮಿಷಗಳಲ್ಲಿ ಕೃಷಿಗೆ ಸಂಬಂಧಿಸಿದ ಎರಡು–ಮೂರು ವಿಚಾರಗಳನ್ನು ಸದನದ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೃಷಿ ವಿಚಾರವಾಗಿ ಅದರಲ್ಲಿಯೂ ಸಾವಯವ ಕೃಷಿಯ ಬಗ್ಗೆ ಎರಡು ಸಾಲಿನಲ್ಲಿ ತಿಳಿಸಿದ್ದಾರೆ. ನಾನು ಈ ಸ್ಥಾನದಲ್ಲಿ ನಿಂತು ಅತ್ಯಂತ ಜವಾಬ್ದಾರಿಯಿಂದ ಹೇಳಬಯಸುತ್ತಿರುವುದೇನೆಂದರೆ, ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರ ಸಂಪುಟದಲ್ಲಿ ಮಂತ್ರಿಯಾಗಿ ಕೆಲಸ ಮಾಡುವಂತಹ ಅವಕಾಶ ನನಗೆ ಲಭ್ಯವಾಗಿತ್ತು. ತಾವು ದಯವಿಟ್ಟು ದಾಖಲಾತಿಗಳನ್ನು ತೆಗೆದುನೋಡಿ. ಸಾವಯವ ಕೃಷಿಯ ಹಿನ್ನೆಲೆಯಲ್ಲಿ ಗ್ರಾಮ ವಾಸ್ತವ್ಯ ಪ್ರಾರಂಭವಾಯಿತು. ಸ್ವತಃ ಒಬ್ಬ ಮುಖ್ಯಮಂತ್ರಿಯಾಗಿ ಗ್ರಾಮದಲ್ಲಿ ಹೋಗಿ ಉಳಿಯುವಂತಹ ವ್ಯವಸ್ಥೆ, ಹಿಂದಿನ ಕೃಷಿ ಪದ್ಧತಿಗೆ ಬರಲಿಕ್ಕೆ ಇರುವಂತಹ ಸಮಸ್ಯೆಗಳೇನು ಎಂಬುದರ ಬಗ್ಗೆ ಗ್ರಾಮದಲ್ಲಿ ಕುಳಿತು ಚರ್ಚೆ ಮಾಡುವಂತಹ ವ್ಯವಸ್ಥೆ, ಇಡೀ ಗ್ರಾಮವನ್ನು ಸಾವಯವ ಕೃಷಿಯ ಹಿನ್ನೆಲೆಯಲ್ಲಿ ಮಾನಸಿಕ ಪರಿವರ್ತನೆ ಮಾಡುವಂತಹ ಒಂದು ಪ್ರಯತ್ನ, ಸಾವಯವ ಕೃಷಿಗೆ ಕೇಂದ್ರ ಸರ್ಕಾರ ಕೊಟ್ಟಂತಹ ಆದ್ಯತೆ, ಆ ಸಂದರ್ಭದಲ್ಲಿ ರಾಜ್ಯ ಸರ್ಕಾರ ಕೊಟ್ಟಂತಹ ಆದ್ಯತೆ, ಅದಕ್ಕೆ ತೆಗೆದುಕೊಂಡಂತಹ ಕ್ರಮಗಳು, ನೀಡಿದಂತಹ ಪ್ರೋತ್ಸಾಹ ಇವುಗಳ ಬಗ್ಗೆ ದಯವಿಟ್ಟು ತಾವು ದಾಖಲಾತಿಗಳನ್ನು ತೆಗೆದು ನೋಡಿ.

ಈ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷಗಳಾದ ನಂತರ ನಾನು ಈ ಸರ್ಕಾರವನ್ನು ಕೇಳಬಯಸುತ್ತಿರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ, ಇಲ್ಲಿರುವಂತಹ ಮಂತ್ರಿಮಂಡಲದ ಎಲ್ಲ ಸದಸ್ಯರಾದಿಯಾಗಿ, ಸಾವಯವ ಕೃಷಿಯ ಹಿನ್ನೆಲೆಯಲ್ಲಿ ನಾವು ಗ್ರಾಮ ವಾಸ್ತವ್ಯವನ್ನು ಮಾಡಿದ್ದೇವೆ ಎಂದು ಒಬ್ಬರು ಹೇಳಲಿ, ಸಾವಯವ ಕೃಷಿಗೆ ಸಂಬಂಧಿಸಿದಂತೆ ನಾವು ಪ್ರತ್ಯೇಕ ಸಭೆಯನ್ನು ಮಾಡಿದ್ದೇವೆ, ಕೃಷಿ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ, ಈ ಒಕ್ಕೂಟದ ಹಿನ್ನೆಲೆಯಲ್ಲಿ ಯಾವ ರೈತ ಸಂಘಗಳು ಕೆಲಸ ಮಾಡುತ್ತವೆ, ರೈತರ ಭವಿಷ್ಯದ ಬಗ್ಗೆ ಸಮಾಜಮುಖಿಯಾಗಿ ಚಿಂತನೆಯನ್ನು ಮಾಡುತ್ತವೆ ಅವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿದ್ದೇವೆ, ಅವರ ಕಷ್ಟ–ಸುಖಗಳನ್ನು ಕೇಳಿದ್ದೇವೆ, ಇದಕ್ಕೆ ಬೇಕಾದಂತಹ ಪರಿಹಾರ ಮತ್ತು ಆದ್ಯತೆಯನ್ನು ನಾವು ಕೊಟ್ಟಿದ್ದೇವೆ ಎಂಬುದನ್ನು ದಯವಿಟ್ಟು ಯಾರಾದರೂ ಒಬ್ಬರು ಸಚಿವರು ಹೇಳಲಿ, ನೋಡೋಣ.

ಸಾವಯವ ಕೃಷಿಗೆ ಇವತ್ತು ಇಡೀ ಜಗತ್ತು ಆದ್ಯತೆಯನ್ನು ಕೊಡುತ್ತಿದೆ. ಏಕೆಂದರೆ, ತಿನ್ನುವ ಅನ್ನ ವಿಷವಾಗುತ್ತಿದೆ, ಈ ವಿಷದಿಂದ ಸಮಾಜವನ್ನು ಮುಕ್ತಗೊಳಿಸುವುದು ಹೇಗೆ? ತಿನ್ನುವ ಅನ್ನ ಮತ್ತೆ ಅಮೃತವಾಗುವುದು ಹೇಗೆ? ಈ ದಿಕ್ಕಿನಲ್ಲಿ ಇಡೀ ಜಗತ್ತು ಯೋಚನೆ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರ ಆ ರೀತಿ ಆದ್ಯತೆ ಕೊಟ್ಟಂತಹ ಒಂದು ಪರಂಪರೆ ಇರುವಂತಹ ವ್ಯವಸ್ಥೆಯಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾವಯವ ಕೃಷಿಗೆ ಕೊಟ್ಟಂತಹ ಆದ್ಯತೆ ಏನು, ಅದಕ್ಕೆ ನೀಡಿರುವಂತಹ ಮಾನ್ಯತೆ ಏನು, ಆ ಹಿನ್ನೆಲೆಯಲ್ಲಿ ತೆಗೆದುಕೊಂಡಂತಹ ಕ್ರಮಗಳೇನು? ಸಮಾಜದ ಬೇಡಿಕೆ ಏನಿದೆ ಆ ಬೇಡಿಕೆಗಳನ್ನು ಪೂರೈಸುವುದು ನಮ್ಮ ಕರ್ತವ್ಯವಲ್ಲವೆ? ದೇಶದ ಬೇಡಿಕೆ ಏನಿದೆ, ಆ ಬೇಡಿಕೆಯನ್ನು ಪೂರೈಸುವ ಹಿನ್ನೆಲೆಯಲ್ಲಿ ನಾವು ಜಾಗೃತವಾಗಿರುವುದು ನಮ್ಮ ಜವಾಬ್ದಾರಿ ಅಲ್ಲವೆ? ಜಾಗತಿಕ ಬೇಡಿಕೆ ಏನಿದೆ, ಆ ಬೇಡಿಕೆಗೆ ತಕ್ಕಂತೆ ನಮ್ಮ ರೈತ ಎದ್ದು ನಿಲ್ಲುವಂತೆ ನೋಡಿಕೊಳ್ಳುವುದು ನಮ್ಮ ಹೊಣೆಗಾರಿಕೆಯಲ್ಲವೆ? ಈ ಜವಾಬ್ದಾರಿ ಯಾರದು? ಇದು ಕೇವಲ ರೈತನ ಹೋರಾಟವೆ? ಇದರಲ್ಲಿ ನಮ್ಮ ಜವಾಬ್ದಾರಿ ಮತ್ತು ಕರ್ತವ್ಯ ಇಲ್ಲವೆ? ಆ ಹಿನ್ನೆಲೆಯಲ್ಲಿ ಈ ಸರ್ಕಾರ ಸಂಪೂರ್ಣವಾಗಿ ಎಡವಿದೆ, ಕಣ್ಣುಮುಚ್ಚಿ ಕುಳಿತಿದೆ. ಸಾವಯವ ಕೃಷಿಗೆ ಕೊಡಬೇಕಾದಂತಹ ಮಾನ್ಯತೆ ನಗಣ್ಯವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ಜವಾಬ್ದಾರಿಯಿಂದ ಹೇಳಬಯಸುತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಮ್ಮ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಮೊನ್ನೆ ಮೂರು ದಿವಸಗಳ ಕಾಲ **'ಸಾವಯವ ಕೃಷಿ ಮೇಳ'** ಒಂದನ್ನು ಆಯೋಜಿಸಲಾಗಿತ್ತು. ಅದು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾಡಿರುವಂಥದ್ದಾಗಿದೆ. ಪ್ರಥಮ ಬಾರಿಗೆ ಸಾವಯವ ಕೃಷಿಯ ಬಗ್ಗೆಯೇ ಆ ಕೃಷಿ ಮೇಳ ಮಾಡುವಂತಹ ಕೆಲಸ ಆಗಿದೆ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಸನ್ಮಾನ್ಯ ಸಭಾಪತಿಯವರೇ, ನಾನು ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಕೃಷಿ ಕ್ಷೇತ್ರದಲ್ಲಿರುವ ಯುವಕರಲ್ಲಿ ಅರಿವನ್ನು ಮೂಡಿಸುವ ಉದ್ದೇಶದಿಂದ **"ಕೃಷಿಯ ಕಡೆಗೆ ನಡಿಗೆ"** ಎನ್ನುವಂತಹ ಒಂದು ಕಾರ್ಯಕ್ರಮವನ್ನು ಸಹ ಅದರಲ್ಲಿ ನಡೆಸಲಾಯಿತು.

(ಮುಂದುವರದಿದೆ ...

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ್ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಯುವಕರನ್ನು "ಕೃಷಿಯ ಕಡೆ ನಡೆಗೆ" ಎನ್ನುವಂತಹ ಕಾರ್ಯಕ್ರಮವನ್ನು ಸಹ ಮಾಡಿದ್ದೆವು. ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಯುವಕರನ್ನು ಕೃಷಿಯ ಕಡೆಗೆ ತರುವಂತಹ ಕೆಲಸವನ್ನೂ ಸಹ ನಮ್ಮ ಸರ್ಕಾರ ಮಾಡಿದೆ.

**ಶ್ರೀ ಸಿ.ಹೆಚ್.ವಿಜಯಶಂಕರ್:-** ಮಾನ್ಯ ಸಭಾಪತಿಯವರೇ, ನಾನು ಈ ಸದನದ ಸದಸ್ಯ. ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರು ಈ ಸದನದ ಸದಸ್ಯರು. ನಾವು ಸದನದ ಪರವಾಗಿ ಏನು ಬೇಕಾದರು ಮಾತನಾಡಬಹುದು. ಆದರೆ ಸರ್ಕಾರದ ಪರವಾಗಿ ಏನು ಮಾತನಾಡುವುದಕ್ಕೂ ಆಗುವುದಿಲ್ಲ. ನಾನು ಪ್ರಶ್ನೆ ಮಾಡುತ್ತಿರುವುದು ಸರ್ಕಾರವನ್ನು. ಸರ್ಕಾರ ಎಂದರೆ ಮಂತ್ರಿಗಳು. ಮಂತ್ರಿಗಳು ಇದಕ್ಕೆ ಕೊಡಬೇಕಾಗಿರುವಂತಹ ಆದ್ಯತೆಯನ್ನು ಕೊಟ್ಟಿದ್ದಾರೆಯೇ? ಸರ್ಕಾರದ ಭಾಗವಾಗಿ ಈ ಕಡೆಗೆ ಚಿಂತನೆಯನ್ನು ಮಾಡುತ್ತಿದ್ದಾರಾ? ಇದಕ್ಕೆ ಕೊಡಬೇಕಾದಂತಹ ಉತ್ತೇಜನವನ್ನು ಕೊಡುವಂತಹ ಹಿನ್ನಲೆಯಲ್ಲಿ ಪ್ರಾಮಾಣಿಕವಾದ ಕಾಳಜಿ, ಬದ್ಧತೆ ಅವರಲ್ಲಿದೆಯೇ ಎಂದು ನಾನು ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ ವಿನಃ ಈ ಸದನದ ಸದಸ್ಯರನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಹಿಂದಿಯಲ್ಲಿ ಒಂದು ನಾನ್ನುಡಿ ಇದೆ. "ಜೈಸೆ ಅನ್ನ್, ವೈ ಸೆ ಮನ್" ಎಂದು ಇದೆ. ಅಂದರೆ ನಾವು ಯಾವ ರೀತಿ ಆಹಾರವನ್ನು ಸ್ವೀಕಾರ ಮಾಡುತ್ತೇವೆ, ಆ ರೀತಿ ಭಾವನೆ ಮತ್ತು ಬದುಕು ನಮ್ಮದಾಗುತ್ತದೆ ಎಂದು ಅರ್ಥ. ವಿಷಾಯುಕ್ತ ಆಹಾರವನ್ನು ನಾವು ಸೇವನೆ ಮಾಡುವುದಾದರೆ ನಮ್ಮ ಮನಸ್ಸು ಶುದ್ಧವಾಗುವುದಕ್ಕೆ ಸಾಧ್ಯವಿಲ್ಲ. ಆರೋಗ್ಯವಾದ ಬದುಕು ನಮ್ಮದಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಹಿನ್ನಲೆಯಲ್ಲಿ ನಮ್ಮ ಹಿಂದಿನವರು ಕೃಷಿಗೆ ಬಹಳ ವಿಶೇಷವಾದಂತಹ ಸಂಸ್ಕಾರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ 'ಸಾವಯವ ಕೃಷಿ' ಎಂದರೆ ಬೇರೇನು ಅಲ್ಲ, ಕಳೆದ ನಲವತ್ತು, ಐವತ್ತು ವರ್ಷದ ಹಿಂದೆ ನಾವು ಗ್ರಾಮಗಳಲ್ಲಿ ಕೃಷಿಯನ್ನು ಕಾಣುತ್ತಿದ್ದೆವು, ನಮ್ಮ ಗ್ರಾಮೀಣ ಪ್ರದೇಶದ ಕೃಷಿ ಪದ್ಧತಿ ಏನಿತ್ತು, ಆ ಕೃಷಿಗೆ ವಾಪಸ್ಸು ಹೋಗುವಂಥದ್ದು. ಕಾಲಚಕ್ರ ಉರುಳಿ ಪುನಃ ಹಿಂದಕ್ಕೆ ಹೋಗುತ್ತದೆ. ಈ ಮೊದಲು ನಾವು ಬೀಜದಲ್ಲಿ ಮುಕ್ತವಾಗಿದ್ದೆವು. ಅಂದರೆ ನಾವು ಬೀಜವನ್ನು ಪೇಟೆಗೆ ಹೋಗಿ ಕೊಳ್ಳುತ್ತಿರಲಿಲ್ಲ. ಗೊಬ್ಬರವನ್ನು ಪೇಟೆಗೆ ಹೋಗಿ ಕೊಳ್ಳುತ್ತಿರಲಿಲ್ಲ, ಉಳುವಂತಹ ಪದಾರ್ಥಗಳನ್ನು ನಾವು ಪೇಟೆಗೆ ಹೋಗಿ ಕೊಳ್ಳುತ್ತಿರಲಿಲ್ಲ. ಎಲ್ಲವೂ ಕೂಡ

ಸ್ಥಳೀಯವಾಗಿಯೇ ಲಭ್ಯವಾಗುತ್ತಿತ್ತು. ಆ ವ್ಯವಸ್ಥೆಯನ್ನು ಪುನಃ ಕಾಪಾಡಿಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡಬೇಕು.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸಾವಯವ ಕೃಷಿಯ ಬಗ್ಗೆ ಕೆಲವೊಂದು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸಾವಯವ ಕೃಷಿಯ ಉದ್ದೇಶವೇನು? ಮಾನ್ಯ ಸಭಾನಾಯಕರು ಬೇಕಾದರೆ ಉತ್ತರ ಕೊಡುವಂತಹ ಸಮಯದಲ್ಲಿ ದಾಖಲಾತಿಗಳನ್ನು ತೆಗೆದು ನೋಡಿ ಹೇಳಲಿ. ರೈತರ ಆತ್ಮಹತ್ಯೆಯ ಬಗ್ಗೆ ಇಲ್ಲಿ ಚರ್ಚೆ ಆಗುತ್ತಿದೆ. ಯಾರ್‍ಯಾರು ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ ಆ ರೈತರ ದಾಖಲಾತಿಗಳನ್ನು ತೆಗೆದು ನೋಡಿ. ಸಾವಯವ ಕೃಷಿಯನ್ನು ಅಳವಡಿಸಿಕೊಂಡಿರುವಂತಹ ಒಬ್ಬನೇ ಒಬ್ಬ ರೈತ ಆತ್ಮಹತ್ಯೆಯನ್ನು ಮಾಡಿಕೊಂಡಿಲ್ಲ. ಸಾವಯವ ಕೃಷಿಯ ಮುಖ್ಯ ಉದ್ದೇಶವಾದರು ಏನು? ಸಾವಯವ ಕೃಷಿ ನೀತಿಯ ಮುಖ್ಯವಾದ ಉದ್ದೇಶವೇನೆಂದರೆ, ಮೊದಲು ರೈತ ಸ್ವಾವಲಂಭಿ ಆಗಬೇಕು. ಹಿಂದೆ ಗ್ರಾಮಗಳು ಸ್ವಾವಲಂಭಿಯಾಗಿದ್ದವರು. ನಗರಗಳು ಪರಾವಲಂಭಿಯಾಗಿದ್ದವು. ಆದರೆ ಇವತ್ತು ನಗರಗಳು ಸ್ವಾವಲಂಭಿಯಾಗಿವೆ, ಗ್ರಾಮಗಳು ಪರಾವಲಂಭಿಯಾಗಿವೆ. ಆ ಹಿನ್ನಲೆಯಲ್ಲಿ ಗ್ರಾಮಗಳು ಪುನಃ ಸ್ವಾವಲಂಭಿಯಾಗಬೇಕು. ರೈತ ಸ್ವಾವಲಂಭಿಯಾಗಬೇಕು. ಸಾವಯವ ಕೃಷಿಯ ಮೂಲ ಉದ್ದೇಶವೆ ಇದು.

ಎರಡನೆಯದು, ರೈತನ ಬದುಕಿನ ಜೀವಾಳ ಭೂಮಿ. ನಮ್ಮೆಲ್ಲರ ಬದುಕಿನ ಜೀವಾಳ ಭೂಮಿ. ಆ ಭೂಮಿ ಯಾವುದೇ ಕಾರಣಕ್ಕೂ ಬರಡಾಗಬಾರದು, ಅದು ತನ್ನ ಫಲವತ್ತತೆಯನ್ನು ಯಾತಾವತ್ತಾಗಿ ಕಾಪಾಡಿಕೊಳ್ಳಬೇಕು. ನಮ್ಮ ರೈತನಲ್ಲಿ ಒಂದು ಸಾಮಾನ್ಯವಾದ ಜ್ಞಾನ ಇತ್ತು. ಅಂದರೆ, ಮೊದಲನೆ ಹಂತದಲ್ಲಿ ಏಕದಳ ಧಾನ್ಯವನ್ನು ಬೆಳೆಯುತ್ತಿದ್ದರು. ಎರಡನೇ ಹಂತದಲ್ಲಿ ದ್ವಿದಳ ದಳ ಧಾನ್ಯವನ್ನು ಬೆಳೆಯುತ್ತಿದ್ದರು. ಆ ರೀತಿ ಬೆಳೆಯುವುದರಿಂದ ಭೂಮಿಯ ಫಲವತ್ತತೆಯನ್ನು ಯಥಾವತ್ತಾಗಿ ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಇವತ್ತಿನ ದಿವಸ ಏಕರೂಪದ ಕೃಷಿಯನ್ನೇ ಬೆಳೆಯುತ್ತಿದ್ದಾರೆ. ಅಂದರೆ, ಕಬ್ಬು ಬೆಳೆಯುವವರು ಕಬ್ಬನ್ನೇ ಬೆಳೆಯುತ್ತಿದ್ದಾರೆ. ಭತ್ತ ಬೆಳೆಯುವವರು ಪೂರ್ಣವಾಗಿ ಭತ್ತವನ್ನೇ ಬೆಳೆಯುತ್ತಿದ್ದಾನೆ. ಯಾವುದು ಲಾಭದಾಯಕವಾದಂತಹ ಬೆಳೆ ಇದೆ ಅದನ್ನು ನಿರಂತರವಾಗಿ ಬೆಳೆಯುವಂಥದ್ದು ಮಾಡುತ್ತಿದ್ದಾನೆ. ಈಗಾಗಿ ಭೂಮಿ ತನ್ನ ಸಹಜ ಫಲವತ್ತತೆಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಬದಲಾದ ಕೃಷಿ ನೀತಿ. ನಮ್ಮಲ್ಲಿ ಬದಲಾದ ಕೃಷಿ ಪದ್ಧತಿ, ಲಾಭದಾಯಕವಾದಂತಹ ಹಿನ್ನಲೆಯಲ್ಲಿ ತೆಗೆದುಕೊಂಡಂತಹ ಕ್ರಮಗಳು, ಬಳಸಿದಂತಹ ರಾಸಾಯಿನಿಕ

ವ್ಯವಸ್ಥೆ, ಅದೆಲ್ಲದರ ಪರಿಣಾಮ ಏನಾಯಿತು ಎಂದರೆ ಸಂಪೂರ್ಣವಾಗಿ ಸ್ವಾವಲಂಬಿಯಾಗಿದ್ದಂತಹ ರೈತ ಇವತ್ತಿನ ದಿವಸ ಸಂಪೂರ್ಣವಾಗಿ ತನ್ನ ಸ್ವಾವಲಂಬನೆಯನ್ನು ಕಳೆದುಕೊಂಡಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಆದಕಾರಣ ಪುನಃ ರೈತನನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು, ಭೂಮಿ ಬರಡಾಗಬಾರದು ಎನ್ನುವಂತಹ ಸದುದ್ದೇಶದ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಜಾರಿಗೆ ತಂದಂತಹ ಕಾರ್ಯಕ್ರಮವೇ 'ಸಾವಯವ ಕೃಷಿ'.

'ಸಾವಯವ ಕೃಷಿ'ಯ ಮೊದಲನೆಯ ಉದ್ದೇಶವೆ ರೈತ ಸ್ವಾವಲಂಬಿಯಾಗಬೇಕು. ಎರಡನೆಯದು, ನಮ್ಮೆಲ್ಲರ ಬದುಕಿನ ಜೀವಾಳ ಭೂಮಿ ಬರಡಾಗಬಾರದು, ಮೂರನೆಯದು ರೈತ ಬೆಳೆಯುವಂತಹ ಅನ್ನ ಅಮೃತವಾಗಬೇಕೆ ವಿನಃ ಯಾವುದೇ ಕಾರಣಕ್ಕೂ ಮನುಕುಲಕ್ಕೆ ವಿಷವಾಗಬಾರದು. ಆ ವಿಷವನ್ನು ಮುಕ್ತ ಮಾಡಿ, ಪರಿಶುದ್ಧವಾದಂತಹ ಆಹಾರವನ್ನು ಮನುಕುಲಕ್ಕೆ ನೀಡಬೇಕು. ಇದು ಸಾವಯವ ಕೃಷಿಯ ಮೂರನೇ ಉದ್ದೇಶ. ನಾಲ್ಕನೆಯ ಉದ್ದೇಶ ಪರಿಸರ ರಕ್ಷಣೆ. ಮಾಲೀನ್ಯ ಮುಕ್ತ ಸಮಾಜವನ್ನು ಕಾಣುವಂಥದ್ದು, ಪ್ರಾಣಿ ಪಕ್ಷಿಕಗಳಿಗೆ ರಕ್ಷಣೆಯನ್ನು ಕೊಡುವಂಥದ್ದು. ನಾವು ಕ್ರಿಮಿನಾಶಕವನ್ನು ಏನು ಬಳಸುತ್ತೇವೆ, ಅದು ನಮ್ಮ ವಿಜ್ಞಾನಿಗಳ ಕೊಡುಗೆ ಇರಬಹುದು. ಆದರೆ ಅದರಿಂದ ಆದಂತಹ ಪರಿಣಾಮಗಳು, ದುಷ್ಪರಿಣಾಮಗಳನ್ನು ನೋಡಿದರೆ ನಿಜವಾಗಿಯು ನಮಗೆ ಆಘಾತವಾಗುತ್ತದೆ. ಈ ರೀತಿ ಸಾಮಾಜಿಕ ಬದ್ಧತೆಯ ಹಿನ್ನಲೆಯಲ್ಲಿ ....

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ವಿಜಯ್‌ಶಂಕರ್‌ವರೇ, ತಮ್ಮ ಪ್ರಕಾರ ಸಾವಯವ ಕೃಷಿಯನ್ನು ಮಾತ್ರ ಅಳವಡಿಸಿಕೊಳ್ಳಬೇಕು, ಯಾವುದೇ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರಗಳನ್ನಾಗಲಿ, ಕ್ರಿಮಿನಾಶಕಗಳನ್ನಾಗಲಿ ಉಪಯೋಗ ಮಾಡಲೇ ಬಾರದು ಎಂದು ಪ್ರತಿಪಾಧನೆ ಮಾಡುತ್ತಿದ್ದೀರಾ? ಇದರ ಬಗ್ಗೆ ತಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾನಾಯಕರೆ, ಈ ಹಿಂದೆ ರಸ ಗೊಬ್ಬರ ಎಂಬುದು ಯಾವುದು ಇರುತ್ತಿರಲಿಲ್ಲ. ನಾವು ವಡ್ಡಿನಲ್ಲಿ ನೀರನ್ನು ಕುಡಿಯುತ್ತಿದ್ದೆವು. ಆಗ ಯಾವುದೇ ತೊಂದರೆ ಇರುತ್ತಿರಲಿಲ್ಲ. ಈಗೇನು ನಾವು ರಾಸಾಯಿನಿಕ ಸಿಂಪಡಿಸುತ್ತೇವೆ ಅದರಿಂದಾಗಿ ನಮ್ಮ ತಿಪ್ಪೆಗಳಲ್ಲಿ ಇರುವಂತಹ ಹುಳುಗಳೆಲ್ಲವೂ ಸತ್ತು ಹೋಗುತ್ತಿವೆ. ಹಾಗಾಗಿ ಸರ್ಕಾರ ಸಾವಯವ ಕೃಷಿ ನೀತಿಯನ್ನು ಅಳವಡಿಸಬೇಕೆಂದು ಹೇಳುತ್ತಿದ್ದೇವೆ. **ಆದರೆ** ಈಗ ರಾಸಾಯಿನಿಕವನ್ನು ಸಿಂಪಡಿಸದಿದ್ದರೆ ಬೆಳೆ ಬರುವುದಿಲ್ಲ. ಸುಧಾರಣೆ ಮಾಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿಗೆ ಬಂದ ಕಾರಣ ಅನಿವಾರ್ಯವಾಗಿ

ರಾಸಾಯಿನಿಕವನ್ನು ಸಿಂಪಡಿಸಿ ರಸ ಗೊಬ್ಬರವನ್ನು ಹಾಕುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ಆದರೆ ಇದ್ಯಾವುದನ್ನು ಹಾಕಬಾರದು, ಸಿಂಪಡಿಸಬಾರದು ಎಂದು ಹೇಳುವುದಾದರೆ ಯಾವ ಬೆಳೆಯೇ ಬರುವುದಿಲ್ಲ. ಅಂತಹ ಸ್ಥಿತಿಯಲ್ಲಿದ್ದೇವೆ. "ಉಗುಳುವುದಕ್ಕೂ ಆಗದೆ, ನುಂಗುವುದಕ್ಕೂ ಆಗದೆ" ಇರುವಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದಕಾರಣ ನಾವು ಕ್ರಮೇಣವಾಗಿ ಸಾವಯವ ಕೃಷಿಯನ್ನು ಅಳವಡಿಸುತ್ತಾ ಹೋಗಬೇಕು. ಒಂದೇ ಸಲಕ್ಕೆ ಯಾವ ಸರ್ಕಾರವು ಮಾಡುವುದಕ್ಕೆ ಆಗುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕ್ರಿಮಿನಾಶಕ ಮತ್ತು ಕೀಟನಾಶಕವನ್ನು ಉಪಯೋಗ ಮಾಡುತ್ತಾರೆ ಎಂಬುದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷಕ್ಕೆ ಅಧಿಕೃತವಾಗಿ ಒಂದೂವರೆ ಸಾವಿರ ಟನ್ ಕ್ರಿಮಿನಾಶಕ ಮತ್ತು ಕೀಟನಾಶಕವನ್ನು ಉಪಯೋಗ ಮಾಡುತ್ತಾರೆ ಎಂದು ಉತ್ತರ ಬಂದಿತ್ತು. ಅಂದರೆ ಈ ಕ್ರಿಮಿನಾಶಕ ಮತ್ತು ಕೀಟನಾಶಕ ಎಲ್ಲಿಗೆ ಹೋಗುತ್ತದೆ? ನಮ್ಮ ನೀರಿಗೆ ಹೋಗಬೇಕು, ನಮ್ಮ ಮಣ್ಣಿಗೆ ಹೋಗಬೇಕು. ಮಾನ್ಯ ಸದಸ್ಯರು ಅನ್ನ ವಿಷವಾಗಿದೆ ಎಂದು ಹೇಳಿದರು. ಅಂದರೆ ನಮ್ಮ ಮಣ್ಣು ಮತ್ತು ನೀರು ಇವೆರಡು ವಿಷವಾಗಿದೆ. ಹಾಗಾಗಿ ಮಾನ್ಯ ಸದಸ್ಯರು 'ಸಾವಯವ ಕೃಷಿ'ಯ ಬಗ್ಗೆ ಏಕೆ ಹೇಳಿದರು ಎಂದರೆ, ನಾವು ಕ್ರಿಮಿನಾಶಕ, ಕೀಟನಾಶಕ ಮತ್ತು ರಾಸಾಯಿನಿಕವನ್ನು ಬಳಸುವಾಗ ಎಷ್ಟು ಜಾಗ್ರತೆಯನ್ನು ವಹಿಸಬೇಕು ಎಂಬುದರ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನೇ ಸ್ವತಃ ವ್ಯವಸಾಯ ಮಾಡಿದ್ದೇನೆ. ನನಗೆ ಪ್ರತಿಯೊಂದು ವಿಷಯವು ಅರ್ಥವಾಗಿದೆ. ಈಗ ಸಧ್ಯದ ಮಟ್ಟಿಗೆ ಸಾವಯವ ಕೃಷಿ ಪದ್ಧತಿ ಏನಿದೆ, ಅದನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ಎಂಬುದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಹೇಳಿದೆ. ರಾಸಾಯಿನಿಕ ಗೊಬ್ಬರದ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡಬೇಕು, ಕೀಟನಾಶಕ ಮತ್ತು ಕ್ರಿಮಿನಾಶಕವನ್ನು ಯಾವುದೇ ಸಂದರ್ಭದಲ್ಲಿಯೂ ಸಿಂಪಡಿಸಬಾರದು, ಇವೆಲ್ಲವನ್ನೂ ಹೊರತುಪಡಿಸಿ ಸಾವಯುವ ಕೃಷಿಯನ್ನೇ ಅವಲಂಭಿಸಿ ಈ ದೇಶದ ರೈತ ವ್ಯವಸಾಯವನ್ನು ಪ್ರಾರಂಭ ಮಾಡಿದರೆ ಅದರ ಸಾಧಕ-ಭಾದಕಳೇನು? ಇದು ಸಾಧ್ಯವೆ? ಸಾಧ್ಯವಿದೆಯೇ ಇಲ್ಲವೆ ಎಂಬುದರ ಬಗ್ಗೆ ದಯಮಾಡಿ ಬೆಳಕು ಚೆಲ್ಲಬೇಕು. ಏಕೆಂದರೆ ಮಾನ್ಯ ಸದಸ್ಯರಿಗೆ ಅನುಭವ ಇದೆ. ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆ ವಿಚಾರವಾಗಿ ನಾನು ಕೇಳಿದರೆ. ಏಕೆಂದರೆ ಈಗ ನಾವು ಕವಲು ದಾರಿಯಲ್ಲಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ವಿಜಯ್ ಶಂಕರ್‌ರವರೇ, ತಾವು ಬಹಳ ಅತ್ಯಂತ ಪ್ರಮುಖವಾದಂತಹ ವಿಚಾರದ ಬಗ್ಗೆ ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ಸಮಯದ ಅಭಾವವಿದೆ. ದಯವಿಟ್ಟು ಬೇಗ ಮುಗಿಸಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಯಾವಾಗಲು ಸಮಯದ ಅಭಾವ ಇದೆ ಎಂದು ಹೇಳುತ್ತಿರುತ್ತೀರಿ, ಮಾನ್ಯ ಸದಸ್ಯರು ಒಳ್ಳೆಯ ವಿಷಯಗಳನ್ನು ಹೇಳುತ್ತಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಉಪ ಸಭಾಪತಿಯವರು:-** ತಾವು ಹೇಳಿದ ರೀತಿಯಲ್ಲಿ ಮಾಡುವುದಾದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಮಾನ್ಯ ಹೊರಟ್ಟಿಯವರೇ, ತಾವು ಹಿರಿಯ ಸದಸ್ಯರು. ದಯವಿಟ್ಟು ತಾವು ಸಹಕರಿಸಬೇಕು. ಮಾನ್ಯ ವಿಜಯಶಂಕರ್‌ರವರೇ, ದಯವಿಟ್ಟು ತಾವು ಬೇಗ ಮುಗಿಸಿ.

**ಶ್ರೀ ಸಿ.ಹೆಚ್.ವಿಜಯಶಂಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಕೇಳಿದಂತಹ ಪ್ರಶ್ನೆ ಏನೆಂದರೆ, ನಾವು ರಾಸಾಯಿನಿಕ ಗೊಬ್ಬರದ ಬಳಕೆಯನ್ನು ಸಂಪೂರ್ಣವಾಗಿ ಬಳಸಬಾರದೆ? ಕೀಟನಾಶಕ ಮತ್ತು ಕ್ರಿಮಿನಾಶಕವನ್ನು ಯಾವುದೇ ಸಂದರ್ಭದಲ್ಲಿಯೂ ಸಿಂಪಡಿಸಬಾರದೆ ಎಂಬ ಮಾತನ್ನು ಅವರು ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಅದಕ್ಕೆ ಇತಿಮಿತಿ ಇರಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಸಿ.ಹೆಚ್.ವಿಜಯಶಂಕರ್:-** ಮಾನ್ಯ ಸಭಾಪತಿಯವರೇ, ನಾನು ಕೃಷಿಕ ಕುಟುಂಬದಿಂದ ಬಂದಂಥವನು. ಹಿಂದೆ ನಾವು ಒಂದು ಸಲ ಜಮೀನಿನಲ್ಲಿ ಉಳುಮೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಸಾವಿರಾರು ಎರೆಹುಳುಗಳನ್ನು ಕಾಣುತ್ತಿದ್ದೆವು. ಆದರೆ ಇವತ್ತಿನ ಒಂದೇ ಒಂದು ಎರೆಹುಳು ಸಹ ನಮಗೆ ಕಾಣುವುದಿಲ್ಲ. ಹಾಗಾಗಿ ಭೂಮಿಯ ಗುಣ ಅವತ್ತೇ ಸತ್ತು ಹೋಯಿತು.

ಎರಡನೆಯದಾಗಿ, ಇವತ್ತಿನ ದಿವಸ ಕರ್ನಾಟಕದ ಗಡಿ ಭಾಗವಾದ ಕಾಸರಗೂಡಿನಲ್ಲಿ ಎನ್‌ಡೋಸಲ್ಫಾನ್ ಬಳಸುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಅಲ್ಲಿ ಎರೆಹುಳು ಸಾಯುವುದಿರಲಿ, ಇವತ್ತು ಮನುಷ್ಯನೇ ಜೀವಂತವಾಗಿ ಸಾಯುತ್ತಿದ್ದಾನೆ. ಇವತ್ತಿನ ದಿವಸ ಜೀವಂತವಾಗಿರುವಂತಹ ಮನುಷ್ಯನನ್ನೇ ನಿರ್ಜೀವವನ್ನಾಗಿ ಮಾಡುವಂತಹ, ಭೂಮಿಯ ಗುಣಮಟ್ಟವನ್ನು ನಿರ್ಜೀವ ಮಾಡುವಂತಹ ಹಂತಕ್ಕೆ ನಾವು ಹೊರಟುಹೋದರೆ ಹೇಗೆ? ಹಾಗಾಗಿ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳಬೇಕು, ಮನುಷ್ಯನ

ಆರೋಗ್ಯಕ್ಕೆ ಯಾವುದೇ ಕಾರಣಕ್ಕೂ ಹಾನಿಕಾರಕವಾಗಬಾರದು, ಪರಿಸರಕ್ಕೆ ಹಾನಿಯಾಗಬಾರದು. ಈ ಹಿನ್ನಲೆಯಲ್ಲಿ ಎಚ್ಚರಿಕೆಯನ್ನು ವಹಿಸದೆ ನಾವು ಹೆಜ್ಜೆ ಹಾಕಿದ್ದೇ ಆದರೆ ನಾವೇನು ಲಾಭ ಮಾಡಿಕೊಳ್ಳಬೇಕು, ಅನುಕೂಲ ಮಾಡಿಕೊಳ್ಳಬೇಕು ಎಂದು ಹೆಜ್ಜೆ ಹಾಕುತ್ತೇವೆ ಅದರಿಂದಾಗುವಂತಹ ಅನಾನುಕೂಲಗಳಿಗೆ, ಅನಾಹುತಗಳಿಗೆ ಯಾರು ಜವಾಬ್ದಾರರು? ಈ ಹಿನ್ನಲೆಯಲ್ಲಿ ನಾನು ಎಚ್ಚರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದು ತಮ್ಮ ಮೂಲಕ ಮಾನ್ಯ ಸಭಾ ನಾಯಕರಿಗೆ ಹೇಳಬಯಸುತ್ತೇನೆ.

(ಮುಂದು)

**(132) 1:10 05-03-2016 ಸಿಎಸ್:ಜಿಆರ್**

**ಶ್ರೀ ಸಿ.ಹೆಚ್.ವಿಜಯಶಂಕರ್(ಮುಂದು):-**

ಸಾವಯವ ಕೃಷಿಯ ಹಿನ್ನಲೆಯಲ್ಲಿ ಕೆಲವು ಯೋಜನಾನೀತಿಗಳನ್ನು ರೂಪಿಸಲಾಗುತ್ತಿದೆ. ಇದಕ್ಕೆ ಇದಕ್ಕೆ ಪ್ರಾದೇಶಿಕವಾದ ಲೆಕ್ಕಾಚಾರಗಳೇನು ಇಲ್ಲ. ಈ ಯೋಜನೆಗಳನ್ನು ರೂಪಿಸುವ ಹಿನ್ನೆಲೆಯಲ್ಲಿ ದೊಡ್ಡ ಅನಾಹುತಗಳೇನಾಗುತ್ತಿವೆ ಎಂದರೆ ಸಾಮೂಹಿಕವಾಗಿ ರಚನೆ ಮಾಡಲಾಗುತ್ತಿದೆ. ಬಯಲುಸೀಮೆಗೆ ಯಾವ ರೀತಿಯ ಬೆಳೆ ಬೇಕು, ಕರಾವಳಿಗೆ , ಗುಡ್ಡಗಾಡು ಪ್ರದೇಶಕ್ಕೆ ಯಾವ ರೀತಿಯ ಬೆಳೆ,. ಮಲೆನಾಡಿನಲ್ಲಿ ಯಾವ ಬೆಳೆ, ಅಲ್ಲಿಗೆ ಯಾವ ರೀತಿಯ ಯೋಜನೆಗಳು ಬೇಕು ಆ ರೀತಿ ಮಾಡದೇ ಎಲ್ಲಾ ಕಡೆಗಳಿಗೂ ಒಂದೇ ಯೋಜನೆಗಳನ್ನು ಮಾಡಲಾಗಿದೆ. ಎಲ್ಲಾ ಕಡೆಗಳಿಗೂ ಒಂದೇ ರೀತಿಯ ಸಾಮೂಹಿಕ ನೀತಿಗಳನ್ನು ಮಾಡಲಾಗಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಹೇಳಬಯಸುವುದೇನೆಂದರೆ ಸರ್ಕಾರ ರೂಪಿಸತಕ್ಕ ಸಾವಯವ ಕೃಷಿ ಆಯಾ ಭಾಗಗಳಿಗೆ ತಕ್ಕ ಹಾಗೆ ವೈಜ್ಞಾನಿಕವಾಗಿ ರೂಪಿಸಬೇಕು. ಹೀಗಿರುವ ಸಾಮೂಹಿಕ ಪದ್ಧತಿಯನ್ನು ಕೈಬಿಡಬೇಕು. ಆ ಭಾಗದದಲ್ಲಿ ಬೆಳೆಯುವ ಬೆಳೆ ಆ ಭಾಗದಲ್ಲಿರುವ ಹವಾಮಾನ, ಆ ಭಾಗದ ಕೃಷಿ ಪದ್ಧತಿ ತಕ್ಕ ಹಾಗೆ ನಮ್ಮ ಯೋಜನೆಗಳನ್ನು ನಾವು ರೂಪಿಸಿಕೊಳ್ಳಬೇಕು ವಿನಃ ಸಾಮಾಹಿಕವಾಗಿ ಯೋಜನೆಗಳನ್ನು ರೂಪಿಸುವುದರಿಂದ ಯಾವುದೇ ಕಾರಣಕ್ಕೂ ಇದರ ಅನುಕೂಲ ಯಾರಿಗೂ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಎರಡನೆಯದಾಗಿ ಸಾವಯುವ ಕೃಷಿಕರಿಗೆ ನೋಂದಣಿಗೆ ಅವಕಾಶವನ್ನು ನೀಡಲಾಗಿರುವುದು ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿದೆ. ಒಂದು ಸಲ ರೈತನು ನೋಂದಣಿಯನ್ನು ಮಾಡಿಕೊಂಡಲ್ಲಿ ಆತ ತಾನು ಬೆಳೆದಂತಹ ಬೆಳೆಯನ್ನು ರಾಷ್ಟ್ರಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡುವಂತಹ ಅವಕಾಶ ಅವನಿಗೆ ಆಗಬೇಕು. ಈಗ ನೋಂದಣಿ ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತ ಆಗುತ್ತಿದೆ. ಒಂದು ಸಲ ರೈತ ತಾನು ಸಾವಯುವ ಕೃಷಿಕ ಎಂದು ನೋಂದಣಿಯನ್ನು ಮಾಡಿಕೊಂಡ ನಂತರ ಅದು ರಾಷ್ಟ್ರ ಮಟ್ಟಕ್ಕೆ ಮತ್ತು ಅಂತರರಾಷ್ಟ್ರ ಮಟ್ಟಕ್ಕೂ ಕೂಡ ಅನ್ವಯವಾಗಬೇಕು.

ಆ ಹಿನ್ನಲೆಯಲ್ಲಿ ರೈತರ ಹಿತರಕ್ಷಣೆಗಾಗಿ ನಾವು ಏನು ಕ್ರಮಗಳನ್ನು ಕೈಗೊಳ್ಳಬೇಕು ಅದನ್ನೆಲ್ಲ ಕೈಗೊಳ್ಳಬೇಕು ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ಮೂರನೆಯದಾಗಿ ಮಾನ್ಯ ಸಭಾನಾಯಕರು ಸಾವಯವ ಕೃಷಿಯ ಬಗ್ಗೆ ಮಾತನಾಡುತ್ತಾ ಸಾವಯುವ ಕೃಷಿಯ ಹಿನ್ನಲೆಯಲ್ಲಿ ಆಗುತ್ತಿರುವ ಅನಾಹುತಗಳನ್ನು ತಡೆಗಟ್ಟಲು ರಸಗೊಬ್ಬರಗಳನ್ನು ಬೆಳೆಸಬಾರದೇ ಕೇವಲ ಸಾವಯುವ ಕೃಷಿಗೆ ಸೀಮಿತ ಆಗಬೇಕು ಎನ್ನುವುದನ್ನು ಹೇಳಿದರು. ಆದರೆ ಕೃಷಿ ಬೆಳವಣಿಗೆಯ ಹಿನ್ನಲೆಯಲ್ಲಿ ವೈಜ್ಞನಿಕವಾಗಿ ಏನು ಮಾನ್ಯತೆಯನ್ನು ನೀಡಲಾಗುತ್ತಿದೇ ಅದೇ ಮಾನ್ಯತೆಯನ್ನು ಸಾವಯವ ಕೃಷಿ ಹಿನ್ನಲೆಯಲ್ಲಿಯೂ ಕೂಡ ನೀಡಬೇಕಾಗುತ್ತದೆ. ಸಂಶೋಧನೆಗಳನ್ನು ಮಾಡಿ, ರೈತ ಬಳಸಬೇಕಾದಂತಹ ಬೀಜ, ಪದಾರ್ಥಗಳು, ಅವನಿಗೆ ನೀಡಬೇಕಾದ ಪರಿಕರಗಳು ಅದರ ಹಿನ್ನೆಲೆಯಲ್ಲಿ ಆಗಬೇಕಾದ ಸಂಶೋಧನೆಗಳಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಾವು ವಿಶೇಷವಾದ ಮಾನ್ಯತೆಯನ್ನು ನೀಡುತ್ತಿಲ್ಲ. ಅದಕ್ಕೆ ವಿಶೇಷವಾದ ಅನುದಾನವನ್ನು ನೀಡುತ್ತಿಲ್ಲ. ಆದರೆ ಇದಕ್ಕಾಗಿಯೇ ಸರ್ಕಾರ ವಿಶೇಷವಾದ ಬಜೆಟ್ ಅನ್ನು ಮಾಡಬೇಕು. ಪ್ರತಿವರ್ಷ ಸಾವಯವ ಕೃಷಿಗಾಗಿ 40 ಕೋಟಿ ರೂಪಾಯಿಗಳನ್ನು ಕಾಯ್ದಿರಸಲಾಗುತ್ತಿದೆ. ಇಷ್ಟು ಹಣದಲ್ಲಿ ಇಡೀ ರಾಜ್ಯದಲ್ಲಿರುವ ರೈತರ ಹಿತವನ್ನು ಕಾಪಾಡಲು ಸಾಧ್ಯವಾಗುತ್ತದೆಯೇ? ರಾಜ್ಯದಲ್ಲಿ ಸಾವಯವ ಕೃಷಿಕರು 50,000 ಇದ್ದಾರೆ ಎನ್ನುವ ಅಂಕಸಂಖ್ಯೆಯನ್ನು ಸರ್ಕಾರ ನೀಡಿದೆ. ಈ ರೈತರಿಗೆ ನ್ಯಾಯ ಕೊಡುವಂತಹವರು ಯಾರು? ಅವರನ್ನು ಈ ಒಕ್ಕೂಟದ ಅಡಿಯಲ್ಲಿ ತರುವಂತಹ ಪ್ರಯತ್ನವನ್ನು ಮಾಡುವವರು ಯಾರು? ಅವರನ್ನು ಕೂಡ ಸಾವಯವ ಕೃಷಿಕರು ಎಂದು ಪರಿಗಣಿಸಿ ಅವರ ಭವಿಷ್ಯವನ್ನು ಬೆಳೆಗಿಸುವ ಜವಾಬ್ದಾರಿ ಯಾರಿಗಿದೆ? ಕೃಷಿ ಬಿಟ್ಟು ಹೋಗುವ ರೈತರನ್ನು ಹಿಂದರೆ ತರುವ ಪ್ರಯತ್ನ ಆಗಬೇಕು. ಆ ಹಿನ್ನಲೆಯಲ್ಲಿ ಬೇಡಿಕೆಗೆ ತಕ್ಕ ಹಾಗೆ ಪರಿಕರಗಳನ್ನು ನೀಡಬೇಕು. ಸೀಮಿತವಾಗಿ ಕೆಲವು ರೈತರಿಗೆ ಮಾತ್ರ ಈ ಪರಿಕರಗಳು ದೊರೆಯುತ್ತಿವೆ, ಇದು ಎಲ್ಲಾ ಸಾವಯವ ಕೃಷಿಕರಿಗೂ ಸಿಗುವಂತಹ ವ್ಯವಸ್ಥೆ ಆಗಬೇಕು.

ಆ ಹಿನ್ನಲೆಯಲ್ಲಿ ಸರ್ಕಾರ ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲ. ಅದನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ವಿಜಯಶಂಕರ್‌ರವರು ಹೆಚ್ಚಿನ ಹಣವನ್ನು ಸಾವಯವ ಕೃಷಿಗೆ ನೀಡಬೇಕೆನ್ನುವ ಬಹಳ ಉತ್ತಮವಾದ ಸಲಹೆಯನ್ನು ನೀಡುತ್ತಿದ್ದಾರೆ. ನನ್ನ ಅನಿಸಿಕೆ ಏನೆಂದರೆ ಇವತ್ತು ಕೃಷಿ ವಿಶ್ವವಿದ್ಯಾನಿಲಯಗಳಿವೆ, ತೋಟಗಾರಿಕೆಯ ವಿಶ್ವವಿದ್ಯಾನಿಲಯಗಳಿವೆ, ವಿಜ್ಞಾನಿಗಳು ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಾರೆ. ಹೊಸ ಹೊಸ ಬೀಜ ಮತ್ತು ತಳಿಗಳನ್ನು ಕಂಡು ಹಿಡಿಯುತ್ತಾರೆ. ಯಾವುದೇ ಒಂದು ಬೀಜದ ಹೊಸ ಸಂಶೋಧನೆಯನ್ನು ಮಾಡಿದ ನಂತರ ರೈತ ಆ ಬೀಜವನ್ನು ತನ್ನ ಭೂಮಿಯಲ್ಲಿ ಬಿತ್ತಿದ ನಂತರ ಅದಕ್ಕೆ ಬೇಕಾದ Nitrogen, Phosphorous and Potassium (NPK) percentage ಭೂಮಿಯಲ್ಲಿ ಇರುವುದಿಲ್ಲ. ನಮ್ಮ ಸಾವಯವ ತಿಪ್ಪೆ ಗೊಬ್ಬರದಲ್ಲಿ NPK percentage ಕಡಿಮೆ ಇರುತ್ತದೆ. ಲಘು ಪೋಷಕಾಂಶಗಳಂತು ಇರುವುದೇ ಇಲ್ಲ. ಈ ಲಘು ಪೋಷಕಾಂಶಗಳನ್ನು ನೀಡಬೇಕು. Micro nutrients ಅದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ NPK ಯನ್ನು ಕೊಡುವಂತಹ ರಾಸಾಯನಿಕ ಗೊಬ್ಬರಗಳನ್ನು ಸೇರಿಸಿದಾಗ ಸಂಶೋಧನೆಗೊಂಡ ಬೀಜಕ್ಕೆ ಹೆಚ್ಚಿನ yield ಕೊಡುವ ಸಾಧ್ಯತೆ ಇದೆ. 120 ಕೋಟಿ ಜನಸಂಖ್ಯೆ ಇರುವ ಈ ಭಾರತದೇಶದಲ್ಲಿ ನಾವು ಸಾವಯವ ಕೃಷಿಯನ್ನೇ ಸಂಪೂರ್ಣವಾಗಿ ಅವಲಂಬಿಸಿದರೆ 120 ಕೋಟಿ ಜನಸಂಖ್ಯೆಗೆ ನಮ್ಮ ಅನ್ನದಾತರಾದ ರೈತರು ಅನ್ನ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕೂಡ ಈ ರೀತಿಯ ಜಿಜ್ಞಾಸೆಯಲ್ಲಿಯೇ ಇದ್ದೇನೆ. ಈ ಸದನದಲ್ಲಿ ಈ ವಿಚಾರದ ಬಗ್ಗೆ ಬೆಳಕು ಚೆಲ್ಲುವ ಸಲುವಾಗಿ ಈ ವಿಚಾರಗಳನ್ನು ನಾನು ಹೇಳಿದೆನು.

ಶ್ರೀ ಸಿ.ಹೆಚ್.ವಿಜಯಶಂಕರ್:- ಒಂದು ಸಲ ಸರ್ಕಾರ ಸಾವಯವ ಕೃಷಿ ಗ್ರಾಮ ಎಂದು ಘೋಷಣೆಯನ್ನು ಮಾಡಿದ ಮೇಲೆ ಅದಕ್ಕೆ ಮೂರು ವರ್ಷಗಳ ಅವಧಿಯನ್ನು

ನೀಡಲಾಗಿದೆ. ಈಗ ಕನ್‌ವರ್ಷನ್‌ಗೆ ಇರುವಂತಹದಕ್ಕೆ ಆತ ಏನು ರಸಗೊಬ್ಬರಗಳನ್ನು ಉಪಯೋಗಿಸಿ ವ್ಯವಸಾಯ ಮಾಡುತ್ತಿದ್ದಾನೆ. ಅದರಿಂದ ಆ ಭೂಮಿ ಮತ್ತು ರೈತ ಸಾವಯವ ಕೃಷಿಗೆ ಬಂದು ನಿಲ್ಲುವುದಕ್ಕೆ 3 ವರ್ಷಗಳ ಸಮಯ ಬೇಕಾಗುತ್ತದೆ. ಈ ವರ್ಷಗಳ ನಂತರ ಇನ್ನು ಒಂದೆರಡು ವರ್ಷಗಳ ಕಾಲ ಅದನ್ನು ಮುಂದುವರೆಸದೇ ಹೋದರೆ ಸರ್ಕಾರ ಸಾವಯವ ಕೃಷಿಯ ವ್ಯವಸ್ಥೆಯನ್ನು ರೈತರಿಗೂ ನೀಡದರೂ ಸಹ ಉಪಯೋಗ ಆಗುವುದಿಲ್ಲ. ಆ ಹಿನ್ನಲೆಯಲ್ಲಿ ಸರ್ಕಾರ ಇದನ್ನು ಮುಂದುವರೆಸಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ 3 ವರ್ಷಗಳ ನಂತರ ಈ ಗ್ರಾಮ ಯೋಜನೆಯನ್ನು ಕೈಬಿಟ್ಟಲ್ಲಿ ಅಲ್ಲಿ ಒಂದು ಒಕ್ಕೂಟವನ್ನು ಮಾಡಿ ಅದನ್ನು ಮುಂದುವರೆಸಿಕೊಂಡು ಹೋಗುವಂತಹ ಪ್ರಯತ್ನವನ್ನು ಮಾಡುತ್ತೀರಾ? ಅದಕ್ಕೆ ಸ್ಥಳೀಯವಾದ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆಯೇ? ರೈತ ಸಾವಯುವ ಕೃಷಿಯನ್ನು ತಾನಾಗಿಯೇ ಮುಂದುವರೆಸಿಕೊಂಡು ಹೋಗುವಂತಹ ವ್ಯವಸ್ಥೆಯನ್ನು ನೀವು ಮಾಡದೇ ಹೋದರೆ ಸಾವಯುವ ಕೃಷಿಯನ್ನು ಅಳವಡಿಸಿಕೊಳ್ಳಬೇಕೆಂದು ರೈತನಿಗೆ ಮತ್ತು ಗ್ರಾಮಕ್ಕೆ ನೀಡುತ್ತಿರುವ ಉತ್ತೇಜನ ಸಾಫಲ್ಯ ಆಗುವುದಿಲ್ಲ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ಹೇಳಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇನ್ನು ಎ.ಪಿ.ಎಂ.ಸಿ., ಗಳಲ್ಲಿ ಸಾವಯವ ಕೃಷಿಗೆ ವಿಶೇಷವಾದ ಮಳಿಗೆಗಳನ್ನು ಮಾಡಬಹುದಲ್ಲವೇ? ಸಹಜ ಕೃಷಿಯ ಉತ್ಪನ್ನಗಳ ಕೋಲ್ಡ್ ಸ್ಟೋರೇಜಿನಲ್ಲಿ ಈ ಸಾವಯವ ಕೃಷಿಯ ಉತ್ಪನ್ನಗಳನ್ನು ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾವಯವ ಕೃಷಿ ಉತ್ಪನ್ನಗಳಿಗೆ ಪ್ರತ್ಯೇಕ ಕೋಲ್ಡ್ ಸ್ಟೋರೇಜುಗಳನ್ನು ಮಾಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಕೂಡ ಸರ್ಕಾರ ಪ್ರತ್ಯೇಕವಾದ ಕೋಲ್ಡ್ ಸ್ಟೋರೇಜುಗಳನ್ನು ತೆರೆಯಬೇಕು. ಎ.ಪಿ.ಎಂ.ಸಿ., ಯಲ್ಲಿ ಪ್ರತ್ಯೇಕವಾದ ಮಾರಾಟ ಮಳಿಗೆಯ ವ್ಯವಸ್ಥೆಯನ್ನು ತಾವು ಮಾಡಬೇಕು.

ಇನ್ನು ರಾಸಾಯನಿಕ ಪದಾರ್ಥಗಳ ಆಹಾರ ಸೇವನೆಯಿಂದ ಮನುಷ್ಯ ಎದುರಿಸುವತ್ತಿರುವ ಮಾರಾಣಾಂತಿಕ ಕಾಯಿಲೆಗಳ ಬಗ್ಗೆ ಅರಿವು ಮೂಡಿಸತಕ್ಕ ಕ್ರಮಗಳನ್ನು ಸರ್ಕಾರ

ಕೈಗೊಳ್ಳಬೇಕು. ಪಠ್ಯಕ್ರಮದಲ್ಲಿಯೂ ಇದನ್ನು ಅಳವಡಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ನಾನು ಕೊನೆಯದಾಗಿ ಹೇಳುವುದೇನೆಂದರೆ ನಮ್ಮ ಸರ್ಕಾರ ಇದ್ದಾಗ ಈ ಸಾವಯವ ಕೃಷಿಯನ್ನು ಒಂದು ಆಂದೋಲವನ್ನಾಗಿ ತೆಗೆದುಕೊಂಡಿತ್ತು. ಈ ಸರ್ಕಾರ ಕೂಡ ಸಾವಯವ ಕೃಷಿಯನ್ನು ಒಂದು ಆಂದೋಲವನ್ನಾಗಿ ಪರಿಗಣಿಸಬೇಕು. ಈ ರೀತಿ ಸಾವಯವ ವ್ಯವಸಾಯದಲ್ಲಿ ತನ್ನ ಕೃಷಿಯನ್ನು ಮುಂದುವರೆಸಬೇಕೆನ್ನುವ ಕೃಷಿಕರಿಗೆ ಸರ್ಕಾರ ವಿಶೇಷವಾದ ಮಾನ್ಯತೆಯನ್ನು ನೀಡಬೇಕು. ಜಾಗತೀಕ ಬೇಡಿಕೆಯನ್ನು ಪೂರೈಸತಕ್ಕ ಹಿನ್ನಲೆಯಲ್ಲಿ ನಮ್ಮ ರೈತನ ಪ್ರಯತ್ನಗಳಿಗೆ ವಿಶೇಷವಾದ ಉತ್ತೇಜನವನ್ನು ನೀಡಬೇಕು. ಜಾಗತೀಕ ಮಾರುಕಟ್ಟೆಯ ಪರಿಚಯವನ್ನು ನಮ್ಮ ರೈತನಿಗೆ ಮಾಡಿಕೊಡಬೇಕು. ರಾಜ್ಯದ ಹೊರಗೂ ಸಹ ದೇಶದ ವ್ಯಾಪ್ತಿಯಲ್ಲಿ ಜಾಗತೀಕ ಮತ್ತು ರಾಷ್ಟ್ರ ಮಟ್ಟದ ಬೇಡಿಕೆ ಇದೆ ಅದಕ್ಕೆ ತಕ್ಕ ಹಾಗೆ ನಮ್ಮ ರೈತ ಎದ್ದು ನಿಲ್ಲುವುದಕ್ಕೆ ಬೇಕಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು. ಸಾವಯವ ಕೃಷಿಗೆ ಸರ್ಕಾರ ವಿಶೇಷ ಗಮನವನ್ನು ನೀಡಬೇಕು. ನಮ್ಮ ರಾಜ್ಯದ ಮತ್ತು ರೈತರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಬೇಕೆನ್ನುವ ಮಾತನ್ನು ಹೇಳಿ ಅವಕಾಶ ನೀಡಿದ ತಮಗೆ ಮತ್ತು ಸದನಕ್ಕೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**(132) 1:10 05-03-2016 ಸಿಎಸ್:ಜಿಆರ್**

**ಶ್ರೀ ಶರಣಪ್ಪ ಮಟ್ಟೂರ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಸನ್ಮಾನ್ಯ ಘನವೆತ್ತ ರಾಜ್ಯಪಾಲರ ಮಂಡಿಸಿದ ಭಾಷಣದ ಮೇಲೆ ಮಾತನಾಡಲು ಅವಕಾಶ ನೀಡಿದಕ್ಕಾಗಿ ಧನ್ಯವಾದಗಳು. ಈ ನಮ್ಮ ಘನವೆತ್ತ ರಾಜ್ಯಪಾಲರ ಭಾಷಣದ ಪುಸ್ತಕದ 3ನೇ ಪೇಜ್ 5ನೇ ಪ್ಯಾರವನ್ನು ಓದಬಯಸುತ್ತೇನೆ. "ಆಡಳಿತ ಸುಧಾರಣೆಯ ಅಂಗವಾಗಿ ಸಮರ್ಪಕವಾಗಿ ತನಿಖೆಗಳನ್ನು ಮತ್ತು ಅಭಿಯೋಗಗಳನ್ನು ನಡೆಸುವುದಕ್ಕಾಗಿ ನ್ಯಾಯಾಲಯದ ಆದೇಶದ ಲೋಪದೋಷಗಳನ್ನು ಕುರಿತು ವಿಮರ್ಶಿಸಲು ರಾಜ್ಯಮಟ್ಟದಲ್ಲಿ ವಿಭಾಗಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಕರ್ನಾಟಕ ರಾಜ್ಯ ಅಪರಾಧ ವಿಮುಕ್ತಿ ಪುನರಾವಲೋಕನ ಸಮಿತಿಯನ್ನು ರಚಿಸಲಾಗಿದೆ" ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ.

(ಮುಂದು)

ಶ್ರೀ ಶರಣಪ್ಪ ಮಟ್ಟೂರ(ಮುಂದು):- ಅಪರಾಧಗಳ ಬಗ್ಗೆ, ಭ್ರಷ್ಟಾಚಾರದ ಬಗ್ಗೆ, ಸರ್ಕಾರವು ಹೊರಡಿಸುವ ಕೆಲವು ಸುತ್ತೋಲೆಗಳಾಗಿರಬಹುದು, ಇವುಗಳನ್ನು ಏಕೆ ಅಧಿಕಾರಿಗಳು ಅರ್ಥೈಸಿಕೊಳ್ಳುವುದಿಲ್ಲ ಮತ್ತು ಅವುಗಳನ್ನು ಜಾರಿ ಮಾಡುವುದಿಲ್ಲ ಎನ್ನುವ ಬಗ್ಗೆ ನಾನು ಇಂದು ಮಾತನಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಕಾರ್ಯವೈಖರಿ ಬಗ್ಗೆ ಈಗಾಗಲೇ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಗೃಹ ಸಚಿವರಾದ ಜಿ.ಪಮೇಶ್ವರರವರು ಕಾನೂನು ಮತ್ತು ಸುವ್ಯವಸ್ಥೆ ಮತ್ತು ಕೋಮುಸೌಹಾರ್ದಯನ್ನು ಕಾಪಾಡಿಕೊಂಡು ಬರಲು ಈ ಒಂದು ಸಮಿತಿಯನ್ನು ರಚಿಸಿಕೊಂಡಿರುವುದು ಬಹಳ ಸ್ವಾಗತಾರ್ಹ. ತಮ್ಮ ಮತ್ತು ಈ ಸದನದ ಗಮನಕ್ಕೆ ಒಂದು ವಿಚಾರವನ್ನು ತರಲು ಬಯಸುತ್ತೇನೆ. ಮಾನ್ಯ ಉಗ್ರಪ್ಪನವರು ನೇತೃತ್ವದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಹಿಡಿಯಲು ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ನಾನು ಆ ಸಮಿತಿಯ ಸದಸ್ಯನಾಗಿ 9 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೆವೆ. ಒಂದು ಗಂಭೀರವಾದ ವಿಚಾರವನ್ನು ಹೇಳಬಯಸುತ್ತೇನೆ. 2011ರಿಂದ ಸುಪ್ರಿಮ ಕೋರ್ಟ್ ಆದೇಶದನ್ವಯ particularly Prevention of Atrocities on SC/STs Act 1989 ಆಧಾರಿಸಿ 2011ನಲ್ಲಿ ಒಂದು ಸ್ಕೀಮ್ ಮಾಡಿದರು. ಈ ಸ್ಕೀಮ್ ಆದ ನಂತರ 2012ನಲ್ಲಿ Enhancement of Compensation Scheme ಮಾಡಿದರು, 2013-14ರನಲ್ಲಿ ಮಾಡಿದ್ದರು, ನಿರ್ಭಯ ಕೇಸ್ ಆದಮೇಲೆ ಎರಡು ಸುತ್ತೋಲೆಗಳನ್ನು ಹೊರಡಿಸಿದರು. ಯಾವ-ಯಾವ ಅಪರಾಧಗಳಲ್ಲಿ, ಯಾವ-ಯಾವ ಕೇಸ್‌ಗಳು ರಜಿಸ್ಟರ್ ಆಗಬೇಕು, ಅವರಿಗೆ ಯಾವ ರೀತಿ ಪರಿಹಾರವನ್ನು ಕೊಡಬೇಕು, ಎಷ್ಟು ಗಂಟೆಗಳಲ್ಲಿ ಕೊಡಬೇಕು, ಚಾರ್ಜ್‌ಶಿಟ್ ಹಾಕಿದಾಗ ಹೇಗೆ, ಎಫ್‌ಐಆರ್ ಹಾಕಿದಾಗ ಹೇಗೆ, after completing the trial how much compensation has to be given to the victim ಎನ್ನುವುದನ್ನು ಸವಿಸ್ತಾರವಾಗಿ ಇದರಲ್ಲಿ ಇದೆ. Based on Section 357 of the Cr.P.C., the Supreme Court has come down heavily and directed all the Home Secretaries to convey with regard to the notifications, how to distribute the compensation to the victims ಎನ್ನುವುದು ಬಂದಿರುವುದು ಯಾವ ಒಬ್ಬ ಅಧಿಕಾರಿಗೂ ಗೊತ್ತಿಲ್ಲ. ಇದನ್ನು ಬಹಳ ನೋವಿನಿಂದ ಹೇಳಬಯಸುತ್ತೇನೆ. 300 ಕೋಟಿ ರೂ.ಗಳನ್ನು ಇದಕ್ಕಾಗಿ ನಿಗದಿ ಮಾಡಲಾಗಿದೆ. ಆದರಲ್ಲಿ 30ಕೋಟಿ ರೂ.ಗಳನ್ನು ಸರ್ಕಾರ ಖರ್ಚು ಮಾಡಿರುವುದಿಲ್ಲ.

ಆದರೆ ಸರ್ಕಾರದಲ್ಲಿ ಬದ್ಧತೆ ಇದೆ ಅಧಿಕಾರಿಗಳು ಖರ್ಚು ಮಾಡಿರುವುದಿಲ್ಲ. ನಮ್ಮ ಜೊತೆ ಹಿರಿಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪನವರು, ಶ್ರೀಮತಿ ಮೋಟಮ್ಮನವರು ಇದ್ದಾರೆ. ಶ್ರೀಮತಿ ಜಯಮಾಲ ಮೇಡಂರವರನ್ನು ನಮ್ಮ ಜೊತೆ 2-3 ಮೀಟಿಂಗ್‌ಗೆ ಬಂದಿದ್ದಾರೆ. I would like to tell very painfully that Deputy Commissioners are not aware about the notifications issued by the Government of India and the Government of Karnataka. The Superintendent of Police is also not aware of the said notifications. ಸಮಾಜ ಕಲ್ಯಾಣ ಇಲಾಖೆಯವರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರಿಗೆ ಗೊತ್ತಿಲ್ಲ. ಯಾವ ರೀತಿ ಅರ್ಜಿಯನ್ನು ಮೂವ್ ಮಾಡಬೇಕು ಎನ್ನುವುದು ಅಧಿಕಾರಿಗಳಿಗೆ ಗೊತ್ತಿಲ್ಲ. ಒಂದು ಮಗುವಿನ ಮೇಲೆ ಅತ್ಯಾಚಾರವಾಗಿ ಕೇಸ್ ರಜಿಸ್ಟರ್ ಆದ 24 ಗಂಟೆಗಳ ಒಳಗಾಗಿ 20,000 ರೂ.ಗಳನ್ನು ವೈದ್ಯಕೀಯ ಖರ್ಚಿಗಾಗಿ ಕೊಡಬೇಕು. 25,000 ರೂ.ಗಳನ್ನು ಘಟನೆಯಲ್ಲಿ ನಿಧನ ಹೊಂದಿದ್ದರೆ ಅವರ funeral ಗಾಗಿ ಕೊಡಬೇಕು. ಮೊನ್ನೆ ಉಗ್ರಪ್ಪನವರು ಇದರ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿ ಇದರ ಬಗ್ಗೆ ನಾವು ಹೇಳಿದ್ದೇವೆ. ಇಂತಹ ವಿಚಾರಗಳು ಅಧಿಕಾರಿಗಳಿಗೆ ಗೊತ್ತಿಲ್ಲ ಎಂದರೆ ಏನು ಅರ್ಥ? ಹೊಸ ಯೋಜನೆಗಳನ್ನು ತಂದು ಅದಕ್ಕೆ ಕಾನೂನನ್ನು ರಚನೆ ಮಾಡಿ, ಅದು ಯಾವುದೆ ಸರ್ಕಾರವಿರಲ್ಲಿ, whichever may be the Government, I don't want to talk about the governments and politics. Why the government officers are failing to exercise their powers conferred by the Government? They have totally failed in implementing the notifications issued or schemes formulated by the Government of Karnataka or the Government of India. ಏಕೆ ಈ ಕೇಸ್‌ಗಳು ಫೇಲ್ ಆಗುತ್ತವೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಒಂದು ಇಲಾಖೆಯಲ್ಲಿ ಪೊಲೀಸ್ ಇಲಾಖೆಯ ಎಸ್‌ಪಿ, ಡಿಸಿ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಒಂದಕ್ಕೊಂದು coordination ಇಲ್ಲ. ದಯಮಾಡಿ ಈ coordination ಬೇಕಾಗಿದೆ. ಈ coordination ಬರದೆ ಇದ್ದರೆ ಖಂಡಿತವಾಗಿ ನಾವು ಈ ಯೋಜನೆಗಳಲ್ಲಿ ಫೇಲ್ ಆಗುತ್ತೇವೆ. ಬಡವರಿಗೆ, ನೊಂದವರಿಗೆ, ಅತ್ಯಾಚಾರಕ್ಕೆ ಒಳಗಾದವರಿಗೆ, ಮಹಿಳೆ ಮತ್ತು ಮಕ್ಕಳಿಗೆ ನ್ಯಾಯ ಕೊಡಿಸಲು

ಸಾದ್ಯವಾಗುತ್ತಿಲ್ಲ. Conviction ವಿಚಾರದಲ್ಲಿ ಮಾನ್ಯ ಉಗ್ರಪ್ಪನವರು ನಿನ್ನೆ ಮಾತನಾಡುವಾಗ ತುಂಬಾ ಹೇಳಿದ್ದಾರೆ. 4000 ರಲ್ಲಿ... All over the State, ದೇಶದ ವಿಚಾರಕ್ಕೆ ಹೋದಾಗ the conviction rate is not even 6-6.5%. ನಮ್ಮ ರಾಜ್ಯದಲ್ಲಿ conviction rate 4-4.5% ಇಲ್ಲ. ಏಕೆ? ಜನರಿಗೆ ಇದರ ಬಗ್ಗೆ ಭಯ ಬರುತ್ತಿಲ್ಲ, ಲಹೆರ ಸಿಂಗ್‌ರವರು we have to support police and give them moral support ಎಂದು ಹೇಳಿದರು. ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಿದರು. ಈ ವಿಚಾರದಲ್ಲಿ ಮಾನ್ಯ ಗೃಹ ಸಚಿವರು ಬಹಳ ಪ್ರಮಾಣಿಕವಾಗಿ hard work ಮಾಡುತ್ತಿದ್ದಾರೆ. ಆದರೆ ನಾವು ಅಪರಾಧಿಗಳಿಗೆ conviction ಮಾಡಿಸುವಲ್ಲಿ ಫೇಲ್ ಆಗುತ್ತಿದ್ದೆವೆ. ಇದಕ್ಕೆ ಕಾರಣ ಎಂದರೆ, due to failure on the part of investigating agency and police, there are acquittals in the court of law. ನಾವು ಮಾತೆದಿದ್ದರೆ ಕೋರ್ಟ್‌ನಲ್ಲಿ ಕೇಸ್ ಬಿಡುಗಡೆಯಾಗುತ್ತದೆ, quash ಆಗುತ್ತದೆ, ಕೋರ್ಟ್‌ಗಳ ಮೇಲೆ ಮಾತನಾಡುತ್ತೇವೆ, ಲೋಕಾಯುಕ್ತದ ಮೇಲೆ ಹೇಳುತ್ತೇವೆ. ಪೊಲೀಸ್‌ನವರು ಸರಿಯಾಗಿ ಕೇಸ್ ರಜಿಸ್ಟರ್ ಮಾಡಿ, investigation ಮಾಡಿ ಚಾರ್ಜ್‌ಶೀಟ್ ಹಾಕದೆ ಇದ್ದರೆ, ಸರಿಯಾದ ರೀತಿಯಲ್ಲಿ Statement under Section 161 ಬರೆದುಕೊಳ್ಳದಿದ್ದರೆ, ಮುಖ್ಯವಾದ ಸಾಕ್ಷಿಗಳನ್ನು 164ರಲ್ಲಿ ತರದೆ ಇದ್ದರೆ, ಸರಿಯಾದ ರೀತಿಯಲ್ಲಿ Inquest Report ನ್ನು Section 174ರ ಕೆಳಗೆ ಮಾಡದೆ ಇದ್ದರೆ ಹೇಗೆ? Section 161-162 ಹೇಳಿಕೆ ಆಗಿರಬಹುದು, Section 174 Inquest Report ಆಗಿರಬಹುದು, Statement under Section 164 is a very important statement. ಇವುಗಳನ್ನು ಪೊಲೀಸ್‌ನವರು ಸರಿಯಾಗಿ ಪಾಲನೆ ಮಾಡದೆ ಇದ್ದರೆ ಖಂಡಿತವಾಗಿ ಅವರಿಗೆ conviction ಮಾಡಲು ಕಷ್ಟವಾಗುತ್ತದೆ. ಇಷ್ಟೆಲಾ evidence ಗಳನ್ನು ಪೊಲೀಸ್‌ನವರು ಚಾರ್ಜ್‌ಶಿಟ್ ಮುಖಾಂತರ ನ್ಯಾಯಾಲಯದ ಮುಂದೆ ತಂದಾಗ ಯಾವುದೆ ಕೋರ್ಟಾದರೂ ignore ಮಾಡುವುದಿಲ್ಲ. ಇಲ್ಲಿ ನಮ್ಮ Investigating Officer ಗಳು prosecution ದವರಿಗೆ ಸರಿಯಾದ ರೀತಿಯಲ್ಲಿ ಸಹಕಾರವನ್ನು ಕೊಡದೆ ಇದ್ದರೆ, ಮೊನ್ನೆ ಮಾನ್ಯ ಉಗ್ರಪ್ಪನವರು ಮಾತನಾಡುತ್ತಾ ಹೇಳಿದರು, seize ಮಾಡಿದ incriminating materials ನ್ನು ಪೊಲೀಸ್‌ನವರ ಹತ್ತಿರ ತಂದು ಓಪನ್

ಮಾಡಿಸಿ, identify ಮಾಡಿಸಬೇಕಾಗುತ್ತದೆ. Apart from that I would like to tell one more important thing. Witnesses ಅನ್ನು identify ಮಾಡುವವರು ಯಾರು? ಇದನ್ನು ಪೊಲೀಸ್‌ನವರು prosecution ದವರಿಗೆ ಇವಳೇ prosecutrix, ಇವಳೇ witness ಎಂದು ಹೇಳಬೇಕು. ಕಳ್ಳತನದ ವಸ್ತು ಆಗಿರಬಹುದು, ಅತ್ಯಾಚಾರವಾಗಿರಬಹುದು, ಕೊಲೆಯಾಗಿರಬಹುದು, Outraging the Modesty of a Woman under Section 354 ಆಗಿರಬಹುದು, 376ರಲ್ಲಿ ನಮಗೆ ಕೆಲವು medical evidence ಬೇಕು. Yes it is true. We need medical evidence to get the corroboration with regard to the statement made by the victim. ಮೊನ್ನೆ ನಾವು ಮಂಗಳೂರಿಗೆ ಹೋದಾಗ, ನಿಮ್ಮಲ್ಲಿ ಏಕೆ conviction ಕಡಿಮೆಯಾಗುತ್ತಿದೆ ಎಂದು ಕೇಳಿದಾಗ, ಕಮೀಶನರ್‌ರವರು ನಾವು ಚಾರ್ಜ್‌ಶೀಟ್ ಹಾಕಿದ ಮೇಲೆ ನಮ್ಮ ಕೆಲಸ ಮುಗಿಯಿತು ಎಂದು ಹೇಳಿದರು. Then who is to take care of the injustice caused to the victim, Sir? ಅತ್ಯಾಚಾರಕ್ಕೆ ಒಳಗಾದವರು ಮಹಿಳೆಯಾಗಿರಬಹುದು, ಮಗು ಆಗಿರಬಹುದು ಅವರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ? Is it not the duty of the State to protect the interest of the victim for which the Government is spending lots and lots of money? Why the police are there to?

**ಸಭಾಪತಿಯವರು:-** ಬಹಳ ಗಂಭೀರವಾದ ವಿಚಾರವನ್ನು ತಾವು ಎತ್ತಿ ಸರ್ಕಾರದ ಗಮನವನ್ನು ಸೆಳೆಯಲು ಪ್ರಯತ್ನ ಮಾಡುತ್ತಿದ್ದೀರಿ. ಆ ಸಮಿತಿಯ ವರದಿ ಬಂದಮೇಲೆ ನೋಡೋಣ. ಈಗ ತಮಗೆ ಏನು ಅನ್ನಿಸುತ್ತದೆ, ಇದಕ್ಕೆ ಪರಿಹಾರವೇನು ಹೇಳಿಬಿಡಿ. ಏಕೆಂದರೆ ಸಮಯದ ಅಭಾವವಿದೆ, ಒಳ್ಳೆಯ ವಿಚಾರವನ್ನು ಮಾತನಾಡುತ್ತೀದ್ದಿರಿ ನಾನು ಮಧ್ಯೆ ಬಾಯಿ ಹಾಕುವುದಕ್ಕೆ ನನಗೆ ಬೇಜಾರಾಗುತ್ತದೆ. ಈಗ ತಾಪತ್ರಯ ಏನು ಎನ್ನುವುದನ್ನು ವಿವರಣೆ ಕೊಟ್ಟಿದ್ದಿರಿ. ಅದಕ್ಕೆ ಪರಿಹಾರ ಏನು ಎನ್ನುವುದನ್ನು ಹೇಳಿಬಿಡಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಗಳೆ, ತಾವು ಆ impression ತೆಗೆದುಕೊಳ್ಳಬಾರದು. ಏಕೆಂದರೆ ನಾನು ಆ ಸಮಿತಿಗೆ ಬಗ್ಗೆ ಹೇಳುತ್ತಿಲ್ಲ. ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. As a lawyer as well as a Member of the Committee ಆಗಿ ನಾನು ನೋಡಿರುವುದು, ಇಲ್ಲಿ ಜಿಲ್ಲಾ, ತಾಲ್ಲೂಕು, ರಾಜ್ಯ ಮಟ್ಟದಲ್ಲಿ Review Committee ಮಾಡಿದ್ದಾರೆ. ಈ ಸಮಿತಿಗೆ ಹೆಚ್ಚಿನ ಸಲಹೆ ಕೊಡಲು ನಾನು ಬಯಸುತ್ತೇನೆ. ಈ ಜವಾಬ್ದಾರಿಯನ್ನು ತೆಗೆದುಕೊಂಡು Investigating Officer ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕಾಗಿದೆ. ಒಂದು ಕೇಸ್ ರಜಿಸ್ಟರ್ ಆದ ಮೇಲೆ ಕಾನೂನಿನ ಅಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ issue ಮಾಡಿದಂತಹ ಸುತ್ತೋಲೆ ಪ್ರಕಾರ ಅವರಿಗೆ ಪರಿಹಾರವನ್ನು ಮುಟ್ಟಿಸುವ ಜವಾಬ್ದಾರಿ ಇವರದಲ್ಲವೆ?

(ಮುಂದು)

Sri SHARANAPPA MATTUR (contd.):

Is it not the bounden duty of the officials concerned?

**ಸಭಾಪತಿಯವರು:-** ಇದನ್ನು ಸರ್ಕಾರಕ್ಕೆ ಹೇಳಬೇಕು ಮತ್ತು ಇಂತಹ ಗಂಭೀರವಾದ ವಿಚಾರವನ್ನು ಬಹಳ ಚೆನ್ನಾಗಿ ವಿವರಣೆ ಕೊಡುತ್ತಿದ್ದು, ಇಡೀ ರಾಜ್ಯ ತಾವು ಹೇಳುತ್ತಿರುವ ವಿಚಾರದ ಬಗ್ಗೆ ಗಮನಿಸುತ್ತಿದೆ. ಇದನ್ನು ಹೇಳಿ ಕುಳಿತರೆ ಸರಿಹೋಗುವುದಿಲ್ಲ ಹಾಗೂ ಪೂರ್ತಿ ಹೇಳುವುದಕ್ಕೆ ಅವಕಾಶ ಕೊಡಲು ನನ್ನ ಹತ್ತಿರ ಸಮಯ ಇಲ್ಲ. ಅದಕ್ಕೆ ಸರ್ಕಾರ ಏನು ಮಾಡಬೇಕು? ತಾವು ಸಮಿತಿಗೆ ಹೇಳುತ್ತಿಲ್ಲ. ಆದ್ದರಿಂದ ಏನು ಮಾಡಬೇಕೆಂದು ಅನಿಸುತ್ತದೆಯೋ, ಅದನ್ನು ಹೇಳಿ ಮುಗಿಸಿ.

**ಶ್ರೀ ಎನ್. ಶರಣಪ್ಪ ಮಟ್ಟೂರ್:-** ತಮ್ಮ ಸಲಹೆಗೆ ನನ್ನ ಅಭಿನಂದನೆ ತಿಳಿಸುತ್ತೇನೆ. ಈ Review Committee ಯಲ್ಲಿ ಅಧಿಕಾರಿಗಳಿಗೆ notifications, Cr.P.C. provisions ಗಳ ಬಗ್ಗೆ ಸರಿಯಾಗಿ ಅರಿವನ್ನು ಕೊಡಬೇಕಾಗಿದೆ. ಸರಿಯಾದ ರೀತಿಯಲ್ಲಿ conviction ಆಗಬೇಕು. ಇಲ್ಲದಿದ್ದರೆ ಜನರಲ್ಲಿ ಭಯಭೀತಿ ಬರುವುದಿಲ್ಲ. ಜನರಲ್ಲಿ ಅಯ್ಯೋ ಮೊನ್ನೆ ಕೇಸ್‌ನಲ್ಲಿ ಆತ ಬಿಡುಗಡೆಯಾಗಿ ಬಂದಿದ್ದಾನೆ ಎನ್ನುವ ಭಾವನೆ ಬರಬಾರದು.

**Mr. CHAIRMAN:** What is your either request or advice to the Government?

**ಶ್ರೀ ಎನ್. ಶರಣಪ್ಪ ಮಟ್ಟೂರ್:-** ಅಧಿಕಾರಿಗಳು ಸರಿಯಾದ ರೀತಿ ನಿಗಾ ವಹಿಸಬೇಕು.

**ಸಭಾಪತಿಯವರು:-** ಅಧಿಕಾರಿಗಳಿಗೆ ಹೇಳುವುದಕ್ಕೆ ಬರುವುದಿಲ್ಲ, ಸರ್ಕಾರಕ್ಕೆ ಹೇಳಬೇಕು. ನಂತರ ಸರ್ಕಾರವು ಅಧಿಕಾರಿಗಳಿಗೆ ಹೇಳುತ್ತದೆ. This House cannot dictate the officers. We can only talk to the Government.

**ಶ್ರೀ ಎನ್. ಶರಣಪ್ಪ ಮಟ್ಟೂರ್:-** ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಅಧಿಕಾರಿಗಳ ಮೇಲೆ accountability fix ಮಾಡಬೇಕು.

**ಸಭಾಪತಿಯವರು:–** ಈ ರೀತಿ ನೇರವಾಗಿ ಹೇಳಿ.

**Sri SHARANAPPA MATTUR:** Suppose if any officers fail to exercise the powers given by the Government of Karnataka or the Government of India, he should be made accountable.

**Mr. CHAIRMAN:** That is what I wanted from you. ಇದನ್ನು ಹೇಳಲಿ ಎಂದು ನಾನು ಹೇಳಿದೆ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ನಾನು ಬಹಳ ನೋವಿನಿಂದ ಏಕೆ ಹೇಳಿದೆ ಎಂದರೆ ರಾಜ್ಯದಲ್ಲಿ 4% conviction ಆಗುತ್ತಿದ್ದು, ದೇಶದಲ್ಲಿ 6% conviction ಆಗುತ್ತಿರುವುದು ನಾಚಿಕೆಗೇಡಿನ ವಿಷಯವಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ತಮ್ಮ ಸಮಯ ಆಯಿತು, ಒಂದು ನಿಮಿಷದಲ್ಲಿ ಮುಗಿಸಿ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ನಾನು ಬಹಳ ಮಾತನಾಡಬೇಕಾಗಿತ್ತು.

**ಸಭಾಪತಿಯವರು:–** ನಂತರ ನೋಡೋಣ. ಸಿಕ್ಕಿರುವ ಅವಕಾಶದಲ್ಲಿ ಒಳ್ಳೆಯ ವಿಷಯಗಳನ್ನು ಚೆನ್ನಾಗಿ ಹೇಳಿದ್ದೀರಿ. ತಮ್ಮ ಮಾತು ಮುಗಿಸುವುದಕ್ಕೆ ಮುಂಚೆ ಈ ವಿಷಯವನ್ನು ತಮ್ಮ ಬಾಯಿಂದ ಹೇಳಿಸಿ ಮುಗಿಸಬೇಕು ಎಂದು ನನಗೆ ತಳಮಳ ಇತ್ತು. ತಾವು ಚೆನ್ನಾಗಿ ಹೇಳಿದ್ದೀರಿ, ಮುಕ್ತಾಯ ಮಾಡಿ, ಬೇರೆಯವರಿಗೆ ಅವಕಾಶ ಕೊಡೋಣ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ಎರಡನೆಯದಾಗಿ,

**ಸಭಾಪತಿಯವರು:–** 2ನೇ ಪಾಯಿಂಟ್ ಬೇಡ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ತಾವು ನನಗೆ ಅವಕಾಶ ಕೊಟ್ಟರೆ ಮೂರು ಅಂಶಗಳು ಇವೆ, ಅದನ್ನು ಹೇಳಬೇಕು, ನಾಲ್ಕೈದು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ.

**ಸಭಾಪತಿಯವರು:–** ವಿಷಯ ಹೇಳಿ, 2 ಮತ್ತು 3 ಏನು ಎಂಬುದನ್ನು ಹೇಳಿ. ವಾದ ಬೇಡ. ಸಮಯ ಇಲ್ಲ, ಒಂದೂವರೆ ಆಯಿತು, ಇನ್ನು ಮಾನ್ಯ ಉಗ್ರಪ್ಪನವರಿಗೆ ಕರೆದಿಲ್ಲ. ಅವರಿಗೆ ಬೇಡ ಎಂದು ತಾವು ಹೇಳುವುದಾದರೆ ನನ್ನ ಅಭ್ಯಂತರ ಇಲ್ಲ. ನನ್ನ ಹತ್ತಿರ ಸಮಯ ಇಲ್ಲ. I have to conclude. ಇರುವ ಸಮಯದಲ್ಲಿ ಹಂಚಬೇಕು. ಸಹಕಾರ ಕೊಡಿ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ನನ್ನ ಸಮಯವನ್ನು ತಾವೇ ತೆಗೆದುಕೊಂಡು ಮಾತನಾಡಿಬಿಟ್ಟಿರಿ. ಇನ್ನೊಂದು ವಿಷಯವೆಂದರೆ ಸರ್ಕಾರವು ಬಹಳ ಒತ್ತಾಸೆಯಿಂದ ಹಸಿವನ್ನು ನೀಗಿಸಬೇಕು.

**ಸಭಾಪತಿಯವರು:–** ನೀವು ಹೊಸ ವಿಷಯಕ್ಕೆ ಹೋದಿರಿ. ಮಹಿಳೆಯರ ವಿಷಯ ಬಿಟ್ಟು ಬೇರೆ ವಿಷಯಕ್ಕೆ ಹೋದಿರಿ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ಇಲ್ಲ. Where the government officers are going on the wrong side…

**ಸಭಾಪತಿಯವರು:–** ಅವು ಬಹಳ ಇವೆ. ತಾವು ಮಾತನಾಡುವುದಕ್ಕೆ ಬಹಳ ಅವಕಾಶ ಬೇಕು, ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಒಳ್ಳೆಯ ವಿಷಯಗಳನ್ನು ಮಿಕ್ಸ್ ಮಾಡಬೇಡಿ. ಮುಕ್ತಾಯ ಮಾಡಿ. ನಾನು ಮೊದಲನೆಬಾರಿ ಈ ರೀತಿ ಮಾತನಾಡುತ್ತಿರುವುದನ್ನು ಕೇಳುತ್ತಿದ್ದೇನೆ. ಬಜೆಟ್ ಅಧಿವೇಶನದಲ್ಲಿ ಪ್ರಯತ್ನ ಮಾಡಿ ಒಂದು ಅವಕಾಶ ಕೊಡಿಸಿಕೊಡುತ್ತೇನೆ ಎಂದು ಮಾತು ಕೊಡುತ್ತಿದ್ದೇನೆ. ಆಗ ಮಾತನಾಡಿ, ಈಗ ಮುಕ್ತಾಯ ಮಾಡಿ, ಸಹಕಾರ ಕೊಡಿ.

**ಶ್ರೀ ಎನ್. ಶರಣಪ್ಪ ಮಟ್ಟೂರ್:–** ಮುಖ್ಯವಾದ ವಿಷಯಗಳು ಇವೆ. I have no word against you. ಧನ್ಯವಾದಗಳು, ಇದಕ್ಕಿಂತ ಹೆಚ್ಚಿಗೆ ಮಾತನಾಡುವುದಿಲ್ಲ. ನಾನು ಇನ್ನೇನು ಮಾತನಾಡಲಿ? ಮೊದಲಿಗೆ ಮಾತನಾಡಲು ಅವಕಾಶ ತೆಗೆದುಕೊಂಡಿದ್ದೇನೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಧಾನ ಮಂಡಲದಲ್ಲಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಹಿರಿಯ ಸದಸ್ಯರಾದ ಡಾ: ವೀರಣ್ಣ ಮತ್ತಿಕಟ್ಟಿಯವರು ವಂದನಾ ನಿರ್ಣಯವನ್ನು ಮಂಡಿಸಿದ್ದು, ಈ ಭಾಷಣದ ಪ್ರತಿಯನ್ನು

ಓದುವಾಗ ನಿಜಕ್ಕೂ ಸಜ್ಜನರಾದ ರಾಜ್ಯಪಾಲರಿಗೆ ವೈಯಕ್ತಿಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇದರಲ್ಲಿ content ನೋಡುತ್ತಾ ಹೋದಾಗ ಎಲ್ಲೋ ಒಂದು ಭ್ರಮೆ ಲೋಕದಲ್ಲಿ ಹೋಗಿರುವ ಬಗ್ಗೆ ಭಾವನೆ ಬಂತು. ವಿಶೇಷವಾಗಿ ಗುಲ್ಬರ್ಗಾದ ವಿಮಾನ ನಿಲ್ದಾಣದಿಂದ ಪುಷ್ಪಕ ವಿಮಾನದಲ್ಲಿ ಹಾರಾಡಿ ಹೋಗುತ್ತಿದ್ದೇವೆ. ನನ್ನ ಮಿತ್ರರಾದ ಶ್ರೀ ಡಿಸೋಜಾರವರು ಸರ್ಕಾರವು ಬಹಳ ಒಳ್ಳೆಯ ಸಾಧನೆಗಳನ್ನು ಮಾಡಿದ್ದು, ಇದು ಬರೀ 31 ಪುಟಗಳ ಪುಸ್ತಕವಲ್ಲದೇ ಸಾವಿರಾರು ಪುಟಗಳ ಗ್ರಂಥವನ್ನು ಬರೆಯಬಹುದೆಂಬ ಮಾತನ್ನು ಹೇಳಿದರು. ಆ ಹಂತದಲ್ಲಿ ಭ್ರಮೆಯಲ್ಲಿದ್ದು, ಇನ್ನೂ ಸ್ವಲ್ಪ ಸಮಯದಲ್ಲಿ ಸಾವಿರಾರು ಪುಟಗಳ ಭಾಷಣಕ್ಕೆ ಹೋಗಬಹುದಿತ್ತೇನೋ ಎಂಬ ಭಾವನೆ ಬಂತು ಆದರೆ ಅದು ಬಹಳಷ್ಟು ಉಳಿಯಲಿಲ್ಲ. ಏಕೆಂದರೆ ವಿಧಾನ ಸಭೆಯ ಸಭಾ ಭವನದಿಂದ ಹೊರಗೆ ಬರುವಷ್ಟರಲ್ಲಿ ಅತಿಥಿ ಉಪನ್ಯಾಸಕರ ಕಣ್ಣೀರು–ಗೋಳು ಅವರ ವಸ್ತುಸ್ಥಿತಿ ಅರಿವಿಗೆ ಬಂತು. ಅವರ ಅಳು, ಕಣ್ಣೀರಾಗುವಷ್ಟರಲ್ಲಿ ಉತ್ತರ ಕರ್ನಾಟಕದ 8 ಜನ ಅತಿಥಿ ಉಪನ್ಯಾಸಕರು ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ದಿನಾಂಕ 12ರಂದು ಚಿಕ್ಕೋಡಿಯ ಮಿನಿ ವಿಧಾನ ಸೌಧದ ಎದುರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಭಯಂಕರ ಸುದ್ದಿ ಬಂತು. ಅದರ ಜೊತೆ ನಮ್ಮ ಹೈದರಾಬಾದ್–ಕರ್ನಾಟಕದ ಕಡೆಯಿಂದ ' ಗೌಡ್ರೇ, ನಮಗೆ ನೀರಿಲ್ಲ, ಪರಿಹಾರ ಸಿಗುತ್ತಿಲ್ಲ' ಎಂದು ದೂರವಾಣಿ ಕರೆಗಳು ಬಂದವು. ಈ ಗೋಳುಗಳನ್ನು ಕೇಳುವ ನಿಟ್ಟಿನಲ್ಲಿ ಭಾಷಣವನ್ನು ಕೇಳುತ್ತಾ ಕೇಳುತ್ತಾ ವಸ್ತುಸ್ಥಿತಿಗೆ ಬಂದುಬಿಡುತ್ತೇನೆ. ಮಾನ್ಯ ಸಭಾಪತಿಯವರೇ, ಇವತ್ತು as usual ನನಗೂ ಕೂಡ ಕೊನೆಯಲ್ಲಿ ಮಾತನಾಡುವ ಅವಕಾಶ ಸಿಕ್ಕಿದ್ದು, ಈ ಭಾಷಣದಲ್ಲಿಯೂ ಹೈದ್ರಾಬಾದ್–ಕರ್ನಾಟಕದ ಬಗ್ಗೆ 31ನೇ ಪುಟದಲ್ಲಿ ಪ್ರಸ್ತಾಪವಾಗಿದೆ. ಏಕೆಂದರೆ ಅದರ ಮುಂದೆ ಪುಟಗಳೇ ಇಲ್ಲ. ನಮ್ಮ ಸಭಾನಾಯಕರು ಸದನದಲ್ಲಿ ಇಲ್ಲ. ಹೈದ್ರಾಬಾದ್–ಕರ್ನಾಟಕಕ್ಕೆ ಭಾಗ್ಯದ ಬಾಗಲು ತೆರೆದಿದ್ದೇವೆ ಎಂದು ಹೇಳುತ್ತಾರೆ. ಭಾಷಣದಲ್ಲಿ ಹುದ್ದೆಗಳನ್ನು ತುಂಬುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ನಾನು ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಪ್ರಶ್ನೆಯನ್ನು ಕೇಳಿದ್ದಕ್ಕೆ ' ಇದುವರೆಗೆ ಲಭ್ಯವಿರುವ ಮಾಹಿತಿ ಆಧರಿಸಿ ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದುವರೆಗೆ ಅಂದರೆ ಇವತ್ತಿನವರೆಗೆ, ಈ ಗಳಿಗೆವರೆಗೆ ಬರೀ 19,315 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ. ಆದರೆ ಇದರಲ್ಲಿ 30,000 ಹುದ್ದೆಗಳು ಎಂದು ಹೇಳಿದ್ದಾರೆ. 2014ರ ನವೆಂಬರ್‌ನಲ್ಲಿ ಕ್ಯಾಬಿನೆಟ್

ಸಭೆ ಮಾಡಿ, 40ರಿಂದ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಇವುಗಳನ್ನು ಡಿಸೆಂಬರ್‌ವರೆಗೆ ಹುದ್ದೆಗಳನ್ನು identify ಮಾಡಿ, ಜೂನ್ ಒಳಗೆ ನೇಮಕಾತಿ ಪ್ರಕ್ರಿಯೆಯನ್ನು complete ಮಾಡುತ್ತೇವೆ ಎಂದು ಹೇಳಿ, ಇವತ್ತು 2016ರ ಮಾರ್ಚ್ ತಿಂಗಳಿನಲ್ಲಿದ್ದು, ಇವತ್ತಿಗೂ ಸರಿಯಾದ ನಿಖರವಾದ ಅಂಕಿ ಸಂಖ್ಯೆ ಸರ್ಕಾರದ ಬಳಿ ಇಲ್ಲ. ಇವತ್ತು ಇಂತಹ ಕೆಲಸ ಆಗುತ್ತಿದೆ. ಅದರ ಜೊತೆಗೆ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (HKRDB) ಬಗ್ಗೆ ಪ್ರಸ್ತಾಪ ಇಲ್ಲ. ಅವರು ಭಾಗ್ಯದ ಬಾಗಿಲು ಎಂದು ಹೇಳಿ ಅದರ ಬಾಗಿಲು, ಅದರ ಪಟ್ಟು, ಕೀಲಿ ಅರಬ್ಬಿ ಸಮುದ್ರದಲ್ಲಿ ಬಿಸಾಕಿರಬಹುದೇನೋ ಎಂದು ಹುಡುಕಾಟ ಮಾಡುವ ಪರಿಸ್ಥಿತಿ ಉದ್ಭವವಾಗುತ್ತಿದೆ. ನಾನು ಪ್ರತಿ ವರ್ಷದ ವಿಷಯಗಳಿಗೆ ಹೋಗುವುದಿಲ್ಲ, ಏಕೆಂದರೆ ಮಾನ್ಯ ಸಭಾಪತಿಯವರಾದ ತಾವುಗಳು ನನಗೆ ಯಾವಾಗ ಕೂರಿಸುತ್ತೀರೋ ಗೊತ್ತಿಲ್ಲ.

**ಸಭಾಪತಿಯವರು:-** ನೀರು ಶುರು ಮಾಡಿದಾಗಿನಿಂದ 10 ನಿಮಿಷದ ಅವಕಾಶ.

**ಶ್ರೀ ಅಮರನಾಥ ಪಾಟೀಲ್:-** ಇಲ್ಲ, ಹಿರಿಯರಿಗೆ ಮಾನ್ಯ ಉಪ ಸಭಾಪತಿಯವರು ಅರ್ಧ ಗಂಟೆ ಸಮಯ ಕೊಟ್ಟಿದ್ದು, ಪ್ರಮುಖ ವಿಷಯ ಪ್ರಸ್ತಾಪಿಸಲು ನನಗೆ ದಯಮಾಡಿ ಅವಕಾಶ ಕೊಡಬೇಕು.

**ಸಭಾಪತಿಯವರು:-** ಬೇರೆಯಾರೂ ಮಾತನಾಡುವುದಿಲ್ಲ. 10 ನಿಮಿಷಗಳಲ್ಲಿ ಇದಕ್ಕಿಂತ ಡಬ್ಬಲ್ ವಿಷಯ ಹೇಳುವುದಕ್ಕೆ ಬರುತ್ತದೆ.

**ಶ್ರೀ ಅಮರನಾಥ ಪಾಟೀಲ್:-** ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಭಾಗ್ಯದ ಬಾಗಿಲು ಎಂದು ರೂ.2,153 ಕೋಟಿ ಘೋಷಣೆ ಮಾಡಿ, ರೂ.850 ಕೋಟಿ ಬಿಡುಗಡೆ ಮಾಡಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗೆ actual ಖರ್ಚು ರೂ.350 ಕೋಟಿ ಆಗಿದೆ. ಇದನ್ನು ಅವಲೋಕನ ಮಾಡಿದಾಗ 10ರಿಂದ 15 ಪರ್ಸೆಂಟ್ physical progress ನ್ನು ಕಾಣುತ್ತೇವೆ. ಇದು ಭಾಗ್ಯದ ಬಾಗಿಲೇ? 3 ವರ್ಷಗಳಲ್ಲಿ 6,461 ಕಾಮಗಾರಿಗಳಿಗೆ ಮಂಜೂರಾತಿ ಕೊಟ್ಟು, ಸುಮಾರು 650ರಿಂದ 700 ಕಾಮಗಾರಿಗಳು ಪೂರ್ಣಗೊಂಡಿವೆ. ಇದು ಕೂಡ 12ರಿಂದ 15 ಪರ್ಸೆಂಟ್ ಭೌತಿಕ ಪ್ರಗತಿ ಕಾಣುತ್ತದೆ. ಅಂದರೆ 10ರಿಂದ 15 ಪರ್ಸೆಂಟ್ ಆರ್ಥಿಕ ಪ್ರಗತಿ ಮತ್ತು 15 ಪರ್ಸೆಂಟ್ ಭೌತಿಕ ಪ್ರಗತಿಯು ಹೈದ್ರಾಬಾದ್-ಕರ್ನಾಟಕಕ್ಕೆ ಭಾಗ್ಯದ ಬಾಗಿಲೇ? ಬಹಳ

ಆಶಯದಿಂದ ಸಂವಿಧಾನದ 371(ಜೆ) ಕಂಡಿದ್ದು ಈ ಪರಿಸ್ಥಿತಿಗಾಗಿಯೇ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ. ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎಂದರೂ ಹುದ್ದೆಗಳು ಖಾಲಿ ಇವೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಮರನಾಥ ಪಾಟೀಲ್(ಮುಂದುವರಿದ್ದು):-**

ಸನ್ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಬೇರೆ ಬೇರೆ ಇಲಾಖೆಗಳ ಮೇಲೆ ಮತ್ತು ಜಿಲ್ಲಾ ಪಂಚಾಯಿತಿಯ ಮೇಲೆ ಬಹಳಷ್ಟು ಅವಲಂಬಿತವಾಗಿದೆ. ಆ ಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡುವುದಕ್ಕೆ ನನಗೂ ಸಹ ಒಂದು ಅವಕಾಶ ಸಿಕ್ಕಿತ್ತು. ಅವತ್ತಿನಿಂದಲೂ ಹೈದ್ರಾಬಾದ್-ಕರ್ನಾಟಕದ ಆರು ಜಿಲ್ಲೆಗಳಿಗೆ ಇಂಜಿನಿಯರಿಂಗ್ ಡಿವಿಜನ್‌ಗಳನ್ನು ಕೊಡಬೇಕು ಮತ್ತು ಅಲ್ಲಿಗೆ ಬೇಕಾಗಿರುವ ಸಿಬ್ಬಂದಿವರ್ಗದವರನ್ನು ನೇಮಕ ಮಾಡಿ, ಹೆಚ್.ಕೆ.ಆರ್.ಡಿ. ಅಡಿಯಲ್ಲಿ ಬರುವಂತಹ ಕಾಮಗಾರಿಗಳ ಮೇಲ್ವಿಚಾರಣೆಯನ್ನು ಆಯಾಯ ಇಲಾಖೆಯವರು ನೋಡಿಕೊಳ್ಳಬೇಕು ಮತ್ತು ಅದಕ್ಕೆ ಚುರುಕು ಮಟ್ಟಿಸುವಂತಹ ಕೆಲಸ ಆಗಬೇಕೆನ್ನುವ ಒತ್ತಾಯವನ್ನು ತರುತ್ತಿದ್ದೇವೆ. ಆದರೆ, ಈ ಬಗ್ಗೆ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಮುಂದಿನ ಆಯವ್ಯಯ ಅಧಿವೇಶನದಲ್ಲಿ ಇದಕ್ಕೊಂದು ಕಾಯಕಲ್ಪ ನೀಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ಕೆಲಸವನ್ನು ಮಾಡದೇ ಕೇವಲ 'ಭಾಗ್ಯದ ಬಾಗಿಲು ತೆರೆದಿದ್ದೇವೆ', 'ಸಾವಿರಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ' ಎಂದು ಹೇಳಿದರೆ ಪ್ರಯೋಜನವಿಲ್ಲ. ಕಾಮಗಾರಿಗಳಿಗೆ ನಿಖರವಾಗಿ ಹಣವನ್ನು ಖರ್ಚು ಮಾಡುವ ಮೂಲಕ ಕಾಮಗಾರಿಗಳಿಗೆ ಚುರುಕು ಮಟ್ಟಿಸುವ ಕೆಲಸ ಆಗಬೇಕಾಗಿದೆ. ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ವಿಶೇಷವಾಗಿ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನ ಮಿತ್ರರಾದ ಮಾನ್ಯ ಎಂ.ಬಿ.ಪಾಟೀಲ್‌ರವರು ಇದರ ಬಗ್ಗೆ ಆಸಕ್ತಿ ಇರುವ ಕ್ರಿಯಾಶೀಲ ವ್ಯಕ್ತಿಯಾಗಿದ್ದಾರೆ. ಯಾವುದೇ ಒಂದು ಸಣ್ಣ ಸಣ್ಣ ಅಭಿವೃದ್ಧಿ ಕೆಲಸವಾದರೂ ಸಹ ಅವರು ಬಹಳ ಖುಷಿಯಿಂದ ಬಂದು ಆ ಸಂತೋಷವನ್ನು ನಮ್ಮ ಜೊತೆಗೆ ಹಂಚಿಕೊಂಡಿರುವ ಅನುಭವ ನನಗಿದೆ. ಆದರೆ, ಖೇದದ ಸಂಗತಿಯೆಂದರೆ, ಬೀದರ್ ಜಿಲ್ಲೆಯ ಕಾರಂಜ, ಬೆಣ್ಣೆತೊರೆ, ಅಮರ್ಜಾ, ಮುಲ್ಲಾಮಾರಿ, ಗಂಟೂರಿ ಮತ್ತು ಭೀಮಾ ಏತನೀರಾವರಿ ಯೋಜನೆಗಳು 1972-73ನೇ ಇಸವಿಯಲ್ಲಿ ಪ್ರಾರಂಭವಾಗಿದ್ದವು. ಆಗ ಅವುಗಳ ಕಾಮಗಾರಿ ವೆಚ್ಚ 3 ಕೋಟಿ, 7 ಕೋಟಿ ಮತ್ತು 9 ಕೋಟಿ ಈ ರೀತಿ ಎರಡಂಕಿಯನ್ನು ಸಹ ಮುಟ್ಟಿರಲಿಲ್ಲ. ಇಷ್ಟು ಕಡಿಮೆ ವೆಚ್ಚದಲ್ಲಿ ಪ್ರಾರಂಭವಾದ

ನೀರಾವರಿ ಯೋಜನೆಗಳು 380 ಕೋಟಿ, 400 ಕೋಟಿ, 453 ಕೋಟಿ ರೂಪಾಯಿಗಳನ್ನು ಮುಟ್ಟಿವೆ. ಸಾವಿರಾರು ಕೋಟಿ ರೂಪಾಯಿಗಳು ಖರ್ಚಾದರೂ ಸಹ ಇವತ್ತಿನವರೆಗೆ ರೈತರಿಗೆ ನೀರು ಕೊಡುವ ಕೆಲಸವಾಗಿಲ್ಲ. ಕಾಲುವೆಗಳಲ್ಲಿ ಹಣದ ಹೊಳೆ ಹರಿದಿದೆಯೇ ಹೊರತು ನೀರನ್ನು ಹರಿಸುವ ಕೆಲಸ ನಮ್ಮ ಭಾಗದಲ್ಲಿ ಆಗಿಲ್ಲ. ಇನ್ನು ಕೆಲವು ವರ್ಷಗಳು ಕಳೆದರೆ, ಈ ಯೋಜನೆಗಳು ಪ್ರಾರಂಭವಾಗಿರುವ ಸುವರ್ಣ ಮಹೋತ್ಸವವನ್ನು ಆಚರಣೆ ಮಾಡಬೇಕಾಗುತ್ತದೆ.

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಲಾಖೆಯಲ್ಲಿ ಇದ್ದಂತಹ ಯೋಜನೆಗಳನ್ನು ನಿಗಮಕ್ಕೆ ವರ್ಗಾವಣೆ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸುವ ಕೆಲಸವನ್ನು ಮಾಡಲಾಗುತ್ತಿದೆ. ಅವರ ಸರ್ಕಾರ ಐದು ವರ್ಷಗಳ ಕಾಲ ಅಧಿಕಾರದಲ್ಲಿ ಇತ್ತು, ಆಗ ಇವರುಗಳು ಏನು ಮಾಡುತ್ತಿದ್ದರು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಮಾನ್ಯ ನೀರಾವರಿ ಸಚಿವರೇ, ಈಗ ಅದರ ಬಗ್ಗೆ ಪ್ರಶ್ನೆಬೇಡ. ಅವರು ಸರ್ಕಾರದಿಂದ ಏನೇನು ಅಪೇಕ್ಷ ಮಾಡುತ್ತಿದ್ದಾರೆ ಅದನ್ನು ಹೇಳುತ್ತಿದ್ದಾರೆ.

**ಶ್ರೀ ಅಮರನಾಥ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, 'ಡಿ' ಗ್ರೂಪ್‌ನ 3249 ಪೋಸ್ಟ್‌ಗಳನ್ನು ತುಂಬುವುದಕ್ಕೆ ಇವರಿಂದಾಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ರೈತರ ಬಗ್ಗೆ ಮಾತನಾಡಬೇಕಾದರೆ, ಮೊದಲು ನಮ್ಮಲ್ಲಿ **'ಕೃಷಿ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಕನಿಷ್ಠ'** ಎಂದು ಹೇಳುತ್ತಿದ್ದರು. ಆದರೆ ಇವತ್ತು ಅದು ತದ್ವಿರುದ್ಧವಾಗಿದೆ. ಇವತ್ತು. ನೌಕರಿ ಅತ್ಯುತ್ತಮವಾಗಿದೆ, ವ್ಯಾಪಾರ ಮಧ್ಯಮವಾಗಿದೆ, ಕೃಷಿ ಸಂಪೂರ್ಣ ಕನಿಷ್ಠವಾಗಿದೆ. ನಮ್ಮ ರಾಷ್ಟ್ರಕವಿಗಳಾದ ಕು.ವೆಂ.ಪು.ರವರು ಬದುಕಿದ್ದು, ರೈತಗೀತೆಯನ್ನು ಇವತ್ತಿನ ದಿನಮಾನಗಳಲ್ಲಿ ಬರೆಯಿರಿ ಎಂದು ಹೇಳಿದ್ದರೆ, ಅದನ್ನು ಬರೆಯುತ್ತಿದ್ದರೇ ಎನ್ನುವ ಅನುಮಾನ ಬರುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಹಿಂಗಾರು ಮತ್ತು ಮುಂಗಾರು ಮಳೆ ಕೈಕೊಟ್ಟ ಕಾರಣ ಬಹಳ ದುಸ್ಥಿತಿಯುಂಟಾಗಿ ಹಾಹಾಕಾರ ಎದ್ದಿದೆ. ಬಳ್ಳಾರಿ, ಬೀದರ್, ಕಲಬುರ್ಗಿ ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಈ ಜಿಲ್ಲೆಗಳಲ್ಲಿ ಒಟ್ಟಾರೆ 5117 ಗ್ರಾಮಗಳಿವೆ. ಅವುಗಳಲ್ಲಿ 1718 ಗ್ರಾಮಗಳಲ್ಲಿ ಅತ್ಯಂತ ಭೀಕರವಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಲಾಗುತ್ತಿದೆ. ಬಹಳ ನೋವಿನ ಸಂಗತಿಯೆಂದರೆ, ಕುಡಿಯುವ ನೀರಿನ ಸಮಸ್ಯೆಯನ್ನು ತಾತ್ಕಾಲಿಕವಾಗಿಯಾದರೂ ಪರಿಹರಿಸಲು ಎಲ್ಲಿಯೂ ವಾಟರ್ ಟ್ಯಾಂಕರ್‌ಗಳಿಂದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿಲ್ಲ.

**ಸಭಾಪತಿಯವರುಃ–** ಮಾನ್ಯ ಅಮರನಾಥ ಪಾಟೀಲ್‌ರವರೇ, ಮಾನ್ಯ ಶರಣಪ್ಪ ಮಟ್ಟೂರುರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ 'ಒಂದು ವಿಷಯದ ಬಗ್ಗೆ ಮಾತ್ರ ಕೇಂದ್ರೀಕರಿಸಿ ಮಾತನಾಡಿ' ಎನ್ನುವ ಮಾತನ್ನು ಹೇಳಿದ್ದೆ. ಅದು ಅವರಿಗೆ ಮಾತ್ರ ಹೇಳಿದ್ದೇನೆಂದು ತಾವು ತಿಳಿದುಕೊಂಡಿದ್ದೀರಿ. ಆದರೆ, ನಾನು ಇಡೀ ಸಭೆಗೆ ಅನ್ವಯಿಸಿ ಆ ಮಾತುಗಳನ್ನು ಹೇಳಿದ್ದೇನೆ. ಶರಣಪ್ಪ ಮಟ್ಟೂರುರವರು ಮಾತನಾಡುತ್ತಿದ್ದಾಗ ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಬಿಡಲೇ ಇಲ್ಲ.

**ಶ್ರೀ ಅಮರನಾಥ ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿರುವ ಸಮಸ್ಯೆಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ.

**ಸಭಾಪತಿಯವರುಃ–** ಆ ಭಾಗದಲ್ಲಿರುವ ನೀರಾವರಿ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದೀರಿ, ಪುನಃ ಬೇರೆ ವಿಚಾರದ ಬಗ್ಗೆ ಮಾತನಾಡುತ್ತೀರಿ. ನಿಮಗೆ ಸಿಕ್ಕಿರುವ ಹತ್ತು ನಿಮಿಷಗಳಲ್ಲಿ ಎಷ್ಟು ವಿಚಾರಗಳ ಬಗ್ಗೆ ಮಾತನಾಡುತ್ತೀರಿ?

**ಶ್ರೀ ಅಮರನಾಥ ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಹೈದ್ರಾಬಾದ್–ಕರ್ನಾಟಕದ ಚಿತ್ರಣವನ್ನು ಮಾತ್ರ ಸರ್ಕಾರದ ಮುಂದಿಡುತ್ತಿದ್ದೇನೆ. ಬೇರೆ ಯಾವ ವಿಚಾರದ ಬಗ್ಗೆಯೂ ಮಾತನಾಡುತ್ತಿಲ್ಲ. ಬಹಳ ಮುಖ್ಯವಾಗಿರುವ 2–3 ಅಂಶಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೇನೆ.

**ಸಭಾಪತಿಯವರುಃ–** ಒಂದು ನಿಮಿಷ ಅಮರನಾಥ ಪಾಟೀಲ್‌ರವರೇ, ಹೈದ್ರಾಬಾದ್–ಕರ್ನಾಟಕಕ್ಕೆ ಸಂಬಂಧಪಟ್ಟಂತೆ ನಾನೇ 25 ಸಮಸ್ಯೆಗಳನ್ನು ಪಟ್ಟಿ ಮಾಡುತ್ತೇನೆ. ಆ ಎಲ್ಲ 25 ಸಮಸ್ಯೆಗಳ ಬಗ್ಗೆ ಮಾತನಾಡುವುದಕ್ಕೆ ಬದಲಾಗಿ, ಒಂದು ಸಮಸ್ಯೆಯ ಬಗ್ಗೆ ಮಾತನಾಡಿದರೆ ಆಗ ಸರ್ಕಾರದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇಲ್ಲದಿದ್ದರೆ ನಿಮ್ಮ ಮಾತನಾಡುವ ಆಸೆ ಮಾತ್ರ ತೀರುತ್ತದೆ ಪ್ರಯೋಜನವೇನು ಆಗುವುದಿಲ್ಲ.

ಶರಣಪ್ಪ ಮಟ್ಟೂರುರವರು ಒಂದು ವಿಚಾರವನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶವನ್ನು ನೀಡಿದ್ದೆ, ಮತ್ತೊಂದು ವಿಚಾರಕ್ಕೆ ಹೋಗಲು ಬಿಡಲೇ ಇಲ್ಲ. ಆದರೆ, ತಾವು ಶಾಲೆಯಿಂದ ಹಿಡಿದು ಕುಡಿಯುವ ನೀರಿನವರೆಗೆ ಎಲ್ಲ ವಿಚಾರಗಳ ಬಗ್ಗೆ ಮಾತನಾಡಿದರೆ ಏನು ಪ್ರಯೋಜನವಾಗುವುದಿಲ್ಲ.

**ಶ್ರೀ ಅಮರನಾಥ ಪಾಟೀಲ್‌ಃ–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖವಾಗಿರುವ ಅಂಶಗಳಿಗೆ ಸಂಬಂಧಪಟ್ಟಂತೆ, ಕೆಲವು ಜ್ವಲಂತ ಸಮಸ್ಯೆಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

**ಸಭಾಪತಿಯವರುಃ–** ನಾನು ಎಲ್ಲ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಭೆಯಲ್ಲಿ ಯಾವ ರೀತಿ ಮಾತನಾಡಬೇಕು ಎನ್ನುವ ನಿಟ್ಟಿನಲ್ಲಿ 'ಮಾತುಗಾರಿಕೆಯ ಕಲೆ'ಯನ್ನು ಕಲಿತುಕೊಳ್ಳಬೇಕಾಗಿದೆ. ತಾವುಗಳು ನಮ್ಮ ಸದನ ಕಾರ್ಯನಿರ್ವಹಿಸದೇ ಇರುವ ಸಮಯದಲ್ಲಿ ಹಿರಿಯ ಸದಸ್ಯರು ಯಾವ ರೀತಿ ಮಾತನಾಡುತ್ತಾರೆ, ಲೋಕಸಭೆ ಮತ್ತು ರಾಜ್ಯಸಭೆಗಳು ನಡೆಯುವಂತಹ ಸಂದರ್ಭದಲ್ಲಿ ಅಲ್ಲಿನ ಸದಸ್ಯರು ಯಾವ ರೀತಿ ಮಾತನಾಡುತ್ತಾರೆ, ಅಲ್ಲಿ ಯಾವ ರೀತಿಯಲ್ಲಿ ನಿಯಂತ್ರಣ ಮಾಡುತ್ತಾರೆ ಎನ್ನುವ ಅಂಶವನ್ನು  ಗಮನಿಸಬೇಕಾಗುತ್ತದೆ.

ಮಾನ್ಯ ಅಮರನಾಥ ಪಾಟೀಲ್‌ರವರೇ, ಇವತ್ತು ಅಪರೂಪಕ್ಕೆ ಸಮಯ ಸಿಕ್ಕಿದೆ ಎಲ್ಲ ಅಂಶಗಳ ಬಗ್ಗೆ ಮಾತನಾಡಿಬಿಡೋಣ ಎನ್ನುವುದಾದರೆ ಅದು ಸಾಧ್ಯವಾಗುವುದಿಲ್ಲ. ಈಗ ತಾವು

ಯಾವುದಾದರೊಂದು ಅಂಶದ ಬಗ್ಗೆ ಮಾತ್ರ ಮಾತನಾಡಿ. ಇನ್ನು 5 ನಿಮಿಷಗಳ ಕಾಲಾವಕಾಶವನ್ನು ಮಾತ್ರ ತಮಗೆ ನೀಡುತ್ತಿದ್ದೇನೆ.

**ಶ್ರೀ ಅಮರನಾಥ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಬಾರಿ ನಾವುಗಳು ಸುಧಾರಣೆ ಮಾಡಿಕೊಂಡು ಒಂದೇ ಒಂದು ವಿಚಾರದ ಬಗ್ಗೆ ಮಾತ್ರ ಮಾತನಾಡುತ್ತೇವೆ. ಈಗ ನನ್ನ ಮಾತುಗಳನ್ನು ಮುಗಿಸುವುದಕ್ಕೆ ತಾವು 5 ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಆ ಭಾಗದ ಜಾನುವಾರುಗಳು ಸಹ ಮೇವಿನ ಸಮಸ್ಯೆಯನ್ನು ಎದುರಿಸುತ್ತಿವೆ. ಬಳ್ಳಾರಿ, ಬೀದರ್, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಲ್ಲಿಯೂ ಜಾನುವಾರಗಳ ಕ್ಯಾಂಪ್ ತೆಗೆದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿರುವುದೇನೆಂದರೆ, ಕುಡಿಯುವ ನೀರಿನ ವ್ಯವಸ್ಥೆ ಆದಷ್ಟು ಬೇಗ ಆಗಬೇಕಾಗಿದೆ, ಮಲ್ಟಿ ವಿಲೇಜ್ ಕಾಮಗಾರಿಗಳು, ಬೋರ್‌ವೆಲ್‌ಗಳನ್ನು ಕೊರೆಯುವ ಕಾಮಗಾರಿಗಳು ಸಮರೋಪಾದಿಯಲ್ಲಿ ಆಗಬೇಕೆನ್ನುವ ಒತ್ತಾಯವನ್ನು ತಮ್ಮ ಮೂಲಕ ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಲಾಗಿರುವ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ನಮ್ಮ ಸರ್ಕಾರ ಯಾವಯಾವ ಪ್ರಗತಿಪರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಹಲವಾರು ಸದಸ್ಯರು ಮಾತನಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವ ವೈದ್ಯರ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಆದರೆ, ಇತ್ತೀಚೆಗೆ ಕೆಲವು ವೈದ್ಯರು ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಿದ್ದಾರೆ ಎನ್ನುವ ವಿಚಾರವನ್ನು ಅನೇಕ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಅನೇಕ ಆಸ್ಪತ್ರೆಗಳಿಗೆ ಭೇಟಿ ನೀಡಿದಾಗ ಗಮನಿಸಿದ ಅಂಶವೇನೆಂದರೆ, ಗ್ರಾಮೀಣ ಭಾಗಕ್ಕೆ ವೈದ್ಯರನ್ನು ಕಳುಹಿಸಿಕೊಡುವುದಷ್ಟೇ ಸರ್ಕಾರದ ಕರ್ತವ್ಯವಲ್ಲ, ಅವರು ಅಲ್ಲಿ ವಾಸ ಮಾಡುವುದಕ್ಕೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಸುಮಾರು 5–10 ಸಾವಿರ ಮನೆಗಳಿರುವ ದೊಡ್ಡ ದೊಡ್ಡ ತಾಲ್ಲೂಕುಗಳಲ್ಲಿ ವೈದ್ಯರು ಇರುವುದಕ್ಕೆ ಒಂದು ಮನೆಯನ್ನು ಕಟ್ಟಿಸಿ, ಅವರು ಅಲ್ಲಿಯೇ ವಾಸಿಸುವುದಕ್ಕೆ ಅವಕಾಶವನ್ನು ಮಾಡಿಕೊಡದಿದ್ದರೆ, ಅಲ್ಲಿ ವೈದ್ಯರೂ ಇರುವುದಿಲ್ಲ, ನರ್ಸ್ ಸಹ ಇರುವುದಿಲ್ಲ.  ಆಕಸ್ಮಿಕವಾಗಿ ರಾತ್ರಿ ರೋಗಿಗಳಿಗೆ ತೊಂದರೆಯಾದಾಗ ಅಲ್ಲಿ ಯಾರೂ ಇರುವುದಿಲ್ಲ.

(ಮುಂದುವರಿದಿದೆ)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

ಶ್ರೀ ಎಂ.ಕೆ.ಪ್ರಾಣೇಶ್(ಮುಂದುವರೆದಿದೆ)

ಈಗಾಗಲೇ ತಮಗೆ ಗೊತ್ತಿರುವ ಹಾಗೆ, ಗ್ರಾಮಪಂಚಾಯಿತಿಗೆ 14ನೇ ಹಣಕಾಸು ಯೋಜನೆ ಅಡಿ ಕೇಂದ್ರಸರ್ಕಾರ ನೇರವಾಗಿ ಹಣ ಕೊಡುವಂತಹ ವ್ಯವಸ್ಥೆ ಮಾಡಿದೆ. ಆದರೆ ರಾಜ್ಯ ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕು. ಒಬ್ಬ ಗ್ರಾಮಪಂಚಾಯಿತಿ ಸದಸ್ಯ 14ನೇ ಹಣಕಾಸು ಯೋಜನೆ ಅಡಿ ನೇರವಾಗಿ ಬರುವಂತಹ ಹಣದಿಂದ ಸಾಮಾನ್ಯ ಜನರ ಕನಿಷ್ಠ ಕೆಲಸ ಮಾಡಿಕೊಡುವ ಕಾರ್ಯ ಮಾಡುತ್ತೇನೆ. ಆದರೆ, ಈ ರಾಜ್ಯ ಸರ್ಕಾರ ವಿದ್ಯುತ್ ಬಿಲ್ಲನ್ನು ಶೇಕಡ 25ರಷ್ಟು ತಡೆಹಿಡಿಯವ ಕೆಲಸವನ್ನು ಮಾಡುತ್ತಿದೆ. ಶುದ್ಧ ಕುಡಿಯುವ ನೀರಿನ ಘಟಕ ಆಗಲೇ ಬೇಕು, ಇದರಲ್ಲಿ ಎರಡನೆಯ ಮಾತಿಲ್ಲ. ಆದರೆ, ಕೇಂದ್ರ ಸರ್ಕಾರದಿಂದ ನೇರವಾಗಿ ಬರುತ್ತಿರುವ ಹಣದಲ್ಲಿ ರೂ. 5 ಲಕ್ಷ ಹಣವನ್ನು ಕಡ್ಡಾಯವಾಗಿ ಕುಡಿಯುವ ಶುದ್ಧ ನೀರಿನ ಘಟಕ್ಕಾಗಿ ಇಡಬೇಕು ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರ ನೇರವಾಗಿ ಹಣ ಕೊಡುವ ಕೆಲಸ ಮಾಡುತ್ತಿರುವ ಉದ್ದೇಶವೇನು? ಕೇಂದ್ರ ಸರ್ಕಾರ ಗ್ರಾಮಪಂಚಾಯಿತಿ ಒಳಗಡೆ ಸಾಮಾನ್ಯ, ಕನಿಷ್ಠ ಜನರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ, ರಾಜ್ಯ ಸರ್ಕಾರ ಹೆಚ್ಚಿನ ಒತ್ತನ್ನು ಕುಡಿಯುವ ನೀರಿಗೆ ಕೊಡಬೇಕು. ರಾಜ್ಯ ಸರ್ಕಾರದವರು ಖಂಡಿತವಾಗಿ ಆ ವ್ಯವಸ್ಥೆಯಿಂದ ಹಿಂದೆ ಸರಿದು ಹಣವನ್ನು ಕೊಡುವ ಕೆಲಸವನ್ನು ಮಾಡಬೇಕು. ಹಾಗೆಯೇ ವಿದ್ಯುತ್ ಬಿಲ್ಲನ್ನು . . . ಈ ವಿದ್ಯುತ್ ಬಿಲ್ ಬಾಕಿ ಇವತ್ತು ನಿನ್ನೆಯದಲ್ಲ. 5-6 ವರ್ಷಗಳ ಹಿಂದಿನ ಬಾಕಿ ಕೂಡ ಇದರಲ್ಲಿದೆ. 5-6 ವರ್ಷಗಳ ಬಾಕಿಯನ್ನು, 6 ತಿಂಗಳ ಹಿಂದೆ ಚುನಾಯಿತರಾಗಿ ಆಯ್ಕೆಯಾಗಿರುವಂಥವರ ಅನುದಾನದಿಂದ ಬರುವಂತಹ ಹಣದಲ್ಲಿ ತಡೆಹಿಡಿಯುವ ಕೆಲಸ ಮಾಡಬಾರದು. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು. ಹಲವಾರು ವರ್ಷಗಳಿಂದ ಬಾಕಿ ಇರುವ ವಿದ್ಯುತ್ ಬಾಕಿಯನ್ನು ಮನ್ನಾ ಮಾಡುವ ಕೆಲಸ ಮಾಡಿ, ಮುಂದಿನ ದಿನಗಳಲ್ಲಿ ನೇರವಾಗಿ ಏನು ವಿದ್ಯುತ್ ಬಾಕಿ ಬರುತ್ತದೆಯೋ ಅದನ್ನು ಕೂಡಲೇ ಸಂದಾಯ ಮಾಡುವುದು ಮತ್ತು ಹಾಗೆ ಮಾಡದೇ ಇದ್ದರೆ ಪಿಡಿಓ ಮತ್ತು ಅಧ್ಯಕ್ಷರಿಬ್ಬರನ್ನೂ ಕೂಡ ಜಂಟಿಯಾಗಿ, ಕಟ್ಟದೇ ಇದ್ದರೇ ಅವರನ್ನೇ ಹೊಣೆಗಾರರನ್ನಾಗಿ ಮಾಡುವ ಕೆಲಸ ಮಾಡಬೇಕಾಗುತ್ತದೆ. ನಮ್ಮ ಆರೋಗ್ಯ ಮಂತ್ರಿಗಳು ಇಲ್ಲಿದ್ದಾರೆ. ನಾನು ಮೂಡಿಗೆರೆಯವನು. ಮಾನ್ಯ ಸಚಿವರಿಗೂ ಮೂಡಿಗೆರೆಯ ಪರಿಚಯ ಚೆನ್ನಾಗಿದೆ. ಅಲ್ಲಿ 100 ಹಾಸಿಗೆಯ ಆಸ್ಪತ್ರೆ ಇದೆ. ಆದರೆ ಸಾಕಷ್ಟು ವೈದ್ಯರು ಇಲ್ಲ. ಹಿಂದೆ ಐದಾರು ವೈದ್ಯರು ಇದ್ದರು. ಆವತ್ತು 50 ಹಾಸಿಗೆಗಳಿತ್ತು, ಆಗ ಒಂದು ಟ್ರಸ್ಟ್ ಇತ್ತು. ಆ ಆಸ್ಪತ್ರೆಯನ್ನು

ಮೇಲ್ದರ್ಜೆಗೇರಿಸಿ 100 ಹಾಸಿಗೆ ಆಸ್ಪತ್ರೆಯನ್ನಾಗಿ ಯಾವಾಗ ಮಾಡಲಾಯಿತೋ ಆವತ್ತು ಟ್ರಸ್ಟ್ ಡಿಸಾಲ್ವ್ ಆಗುತ್ತದೆ. ಈಗ ಆ ಆಸ್ಪತ್ರೆ ನಿಮ್ಮ ಡಿ.ಹೆಚ್.ಒ ಅವರಿಗೆ, ನಿಮ್ಮಗಳ ಅಧಿಕಾರದ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ವೈದ್ಯರುಗಳಿಲ್ಲ. ಆ ಆಸ್ಪತ್ರೆಗೆ ಕೋಟಿಗಟ್ಟಲೆ ಹಣ ಖರ್ಚು ಮಾಡಲಾಗಿದೆ.

**ಶ್ರೀ ಯು.ಟಿ.ಖಾದಿರ್( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-**ನಾವು ಅಧಿಕಾರ ವಹಿಸಿಕೊಂಡ ನಂತರ ಹಲವಾರು ವೈದ್ಯರ ನೇಮಕ ಮಾಡಿದ್ದೇವೆ. ಅಲ್ಲಿ ವೈದ್ಯರ ಸಂಖ್ಯೆ ಕಡಿಮೆ ಇರಬಹುದು, ಇಲ್ಲ ಎಂದಲ್ಲ. ತಾಲ್ಲೂಕು ಆಸ್ಪತ್ರೆಯನ್ನು ನಡೆಸಿ ಉತ್ತಮವಾಗಿ ಕಾರ್ಯನಿರ್ವಹಿಸಲು ಸೀಮಿತವಾಗಿ ಕೆಲವು ವೈದ್ಯರಿದ್ದಾರೆ. ಜನಪ್ರತಿನಿಧಿಗಳು ಅಲ್ಲಿದ್ದವರ ಜೊತೆ ತಿಂಗಳಿಗೊಮ್ಮೆ ಮೀಟಿಂಗ್ ಮಾಡಿ ಅವರು ಕೆಲಸ ನಿರ್ವಹಿಸುವ ಹಾಗೆ ಮಾಡಬೇಕು.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಮಂತ್ರಿಗಳೇ ಅಲ್ಲಿ ಇಬ್ಬರು ವೈದ್ಯರು ಮಾತ್ರ ಇದ್ದಾರೆ. ತಾವು ಬೇಕಾದರೆ ಅಲ್ಲಿನ ಮಾಹಿತಿಯನ್ನು ತರಿಸಿಕೊಳ್ಳಬಹುದು. ಅಲ್ಲಿ 7 ಜನ ವೈದ್ಯರು ಇರಬೇಕು, ಆದರೆ ಇವತ್ತು ಕೇವಲ ಅಲ್ಲಿ ಇಬ್ಬರು ವೈದ್ಯರು ಮಾತ್ರ ಇದ್ದಾರೆ. ನಾನು 3 ದಿವಸಗಳ ಹಿಂದೆ ಖುದ್ದಾಗಿ ಹೋಗಿ ನೋಡಿದ್ದೇನೆ. ನೀವು ಅದರ ಮಾಹಿತಿಯನ್ನು ತರಿಸಿಕೊಳ್ಳಬೇಕು. ತಾವು ಕೂಡಲೇ ಅಲ್ಲಿ ವೈದ್ಯರ ವ್ಯವಸ್ಥೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ರಘು ಆಚಾರ್‌ರವರು ಮಾತನಾಡುತ್ತಾ, ನಮ್ಮ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯವನ್ನು ವರ್ಗವಿಂಗಡಣೆ ಮಾಡದೇ ಕೊಡುತ್ತಿದ್ದಾರೆ ಎಂದು ಹೇಳಿದರು. ಆದರೆ ಶಾಲೆಯ ಮಕ್ಕಳಲ್ಲಿ ಜಾತಿ-ಭೇದ ಹುಟ್ಟು ಹಾಕುವಂತಹ ಕೆಲಸವನ್ನು ಈ ಸರ್ಕಾರ ಮಾಡಿದೆ. ಮಕ್ಕಳನ್ನು ಶೈಕ್ಷಣಿಕ ಶಾಲಾ ಪ್ರವಾಸಗಳಿಗೆ ಕರೆದುಕೊಂಡು ಹೋಗುವಾಗ ಅಲ್ಲಿ, ನೀನು ಮೇಲ್ವರ್ಗದ ಜಾತಿಯವನು, ನಿನಗೆ ಈ ಶೈಕ್ಷಣಿಕ ಪ್ರವಾಸ ಹೋಗುವಂತಹ ಅಧಿಕಾರ ಇಲ್ಲ, ಇಂತಹ ನಿರ್ದಿಷ್ಟ ಜಾತಿಯವರು ಮಾತ್ರ ಹೋಗಬೇಕು ಎಂದು ಹೇಳುವ ಕೆಲಸವನ್ನು ಮಾಡುತ್ತಿದ್ದಾರೆ. ಇದು ಧರ್ಮವಲ್ಲ, ನ್ಯಾಯ ಅಲ್ಲ. ಮಕ್ಕಳಿಗೆ ಜಾತಿ-ಮತ ಗೊತ್ತಿರುವುದಿಲ್ಲ. ಆ ಮಕ್ಕಳು, ನನ್ನ ಶಾಲೆಯಿಂದ ಶೈಕ್ಷಣಿಕ ಪ್ರವಾಸ ಕರೆದುಕೊಂಡು ಹೋಗುತ್ತಿದ್ದಾರೆ, ಆದರೆ ನನ್ನನ್ನು ಏಕೆ ಕರೆದುಕೊಂಡು ಹೋಗುತ್ತಿಲ್ಲ ಎಂದು ಅವರ ತಂದೆ-ತಾಯಿಗಳಿಗೆ ಕೇಳಿದರೆ ಅವರು, ನೀನು ಆ ವರ್ಗಕ್ಕೆ ಸೇರಿದವನಲ್ಲ, ನೀನು ಇಂತಹ ವರ್ಗದವನು, ಆದ್ದರಿಂದ ನೀನು ಪ್ರವಾಸಕ್ಕೆ ಹೋಗುವುದಕ್ಕೆ ಅವಕಾಶ ಇಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ವಿದ್ಯಾರ್ಥಿಗಳು ಬೆಳೆಯುವ ಸಂದರ್ಭಗಳಲ್ಲೇ ಈ ಜಾತಿ-ಭೇದವನ್ನು ಹುಟ್ಟು

ಹಾಕುವ ಕೆಲಸವನ್ನು ಸಿದ್ಧರಾಮಯ್ಯನವರ ಸರ್ಕಾರ ಮಾಡುತ್ತಿದೆ. ದಯವಿಟ್ಟು ಹಾಗೆ ಮಾಡಬಾರದು ಎಂದು ವಿನಿಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಗಳು:– ಇನ್ನೊಬ್ಬ** ನೂತನ ಸದಸ್ಯರು ಮಾನ್ಯ ಪ್ರಸನ್ನ ಕುಮಾರ್‌ರವರು ಮಾತನಾಡುತ್ತಾರೆ. ಅವರು ನಮ್ಮ ಊರಿನವರಾದ್ದರಿಂದ ನನಗೆ ಒಂದು ರೀತಿಯ ಹಮ್ಮೆ. ವೈಯಕ್ತಿಕವಾಗಿ ಹೇಳುವುದಾದರೆ ನನ್ನ ಸ್ನೇಹಿತನ ಮಗ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಾನೂ ಸಹ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿ ಬಂದಿದ್ದೇನೆ. ಮೇಲ್ಮನೆಯಲ್ಲಿ, ಚಿಂತಕರ ಛಾವಡಿಯಲ್ಲಿ ಬಂದು ಕುಳಿತು, ಈಗಾಗಲೇ 5 ದಿನಗಳಿಂದ ತಮ್ಮ ಎಲ್ಲಾ ಚಲನ-ವಲನಗಳನ್ನು, ತಾವು ಕೊಡುವಂತಹ ಅಭಿಪ್ರಾಯಗಳನ್ನು, ತಾವು ಮಂಡಿಸುವ ಎಲ್ಲಾ ವಿಚಾರಗಳನ್ನು ನೋಡುತ್ತಾ ಕುಳಿತಿದ್ದೆ. ಇವತ್ತು ಆಕಸ್ಮಾತ್ ಆಗಿ ನಮ್ಮ ಮುಖ್ಯ ಸಚೇತಕರು ಒಂದು ಅವಕಾಶವನ್ನು ಮಾಡಿಕೊಡುತ್ತೇನೆ, ಮಾತನಾಡಬಹುದು ಎಂದು ಹೇಳಿದರು. ಹಾಗಾಗಿ ನನಗೆ ಇವತ್ತು ಒಂದು ಅವಕಾಶ ಸಿಕ್ಕಿದೆ. ಈಗಾಗಲೇ ನನ್ನ ಸ್ನೇಹಿತ ಪ್ರಾಣೇಶ್‌ರವರು ಮಾತನಾಡಿದರು. ನಾವು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿದ್ದೇವೆ. ನನಗೆ ಸುಮಾರು 382 ಗ್ರಾಮಪಂಚಾಯಿತಿಗಳ ಸದಸ್ಯರುಗಳು ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಸುಮಾರು 4700 ಜನ ಮತದಾರರು ಇರುವಂತಹ ಕ್ಷೇತ್ರದಲ್ಲಿ ಸುಮಾರು 3500 ಜನ ಗ್ರಾಮಪಂಚಾಯಿತಿ ಸದಸ್ಯರು ಮತವನ್ನು ಹಾಕಿದ್ದರಿಂದ ನಾನು ಆಯ್ಕೆಯಾಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈಗಾಗಲೇ ಅವರು ನೇರವಾಗಿ ಜನರಿಂದ ಆಯ್ಕೆಯಾಗಿ ಬಂದಂಥವರು, ಆ ಜನಪ್ರತಿನಿಧಿಗಳು ನನ್ನನ್ನು ಆಯ್ಕೆ ಮಾಡಿದ್ದಾರೆ. ಅವರ ಸಮಸ್ಯೆಗಳು ಸಾಕಷ್ಟಿವೆ. ಇವತ್ತು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲೂ ಹೊಸ ಗ್ರಾಮಪಂಚಾಯಿತಿಗಳಾಗಿವೆ. ಇಡೀ ರಾಜ್ಯದಲ್ಲಿ ಸುಮಾರು 440 ಹೊಸ ಗ್ರಾಮಪಂಚಾಯಿತಿಗಳು ಆಗಿವೆ. 6020 ಗ್ರಾಮಪಂಚಾಯಿತಿಗಳಿಗೆ ಇವತ್ತು ಕೊಡುತ್ತಿರುವ ಅನುದಾನ ಸಾಕಾಗುತ್ತಿಲ್ಲ. ಕನಿಷ್ಠ ಒಂದು ವರ್ಷಕ್ಕೆ ವಿಶೇಷ ಅನುದಾನ ಎಂದು ರೂ. 25 ಲಕ್ಷ ಒದಗಿಸಬೇಕು, ಆ ಮೂಲಕ ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯ ಕಲ್ಪಿಸಬಹುದಾಗಿದೆ. ಇವತ್ತು ಭೀಕರ ಬರಗಾಲ ಇದೆ. ನಮ್ಮ ಮಲೆನಾಡಿನಂತಹ ಪ್ರದೇಶದಲ್ಲೂ ಸಹ ಅಂತರ್ಜಲ ಬತ್ತಿ ಹೋಗಿದೆ. ಕುಡಿಯುವ ನೀರಿಗೆ ಬಹಳಷ್ಟು ತೊಂದರೆ ಆಗುತ್ತಿದೆ. ನಿನ್ನೆ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಾತನಾಡುತ್ತಾ, ಕುಡಿಯುವ ನೀರಿಗೆ ಎಷ್ಟೇ ಹಣ ಬೇಕಾದರು ಕೊಡುತ್ತೇವೆ ಎಂದು ಹೇಳಿದರು. ತಾವು ಎಷ್ಟೇ ಹಣ ಕೊಡಬಹುದು. ಆದರೆ ಸಂಬಂಧಪಟ್ಟ ಅಧಿಕಾರಿಗಳು ತಮಗೆ ವಹಿಸಿದ ಕೆಲಸವನ್ನು ಸೂಕ್ತರೀತಿಯಲ್ಲಿ ಮಾಡಬೇಕಾಗುತ್ತದೆ. ಅಧಿಕಾರಿಗಳು ನಿರ್ವಹಿಸದೇ ಇದ್ದರೆ ಆ ಹಣ ಜಿಲ್ಲಾಧಿಕಾರಿಗಳ ಹತ್ತಿರ ಇರುತ್ತದೆ. ಆದರೆ ಕೆಲಸ ಆಗುವುದಿಲ್ಲ. ಇದಕ್ಕೆ ಸರಿಯಾದ ಸುತ್ತೋಲೆಗಳನ್ನು ಹೊರಡಿಸಕಾಗುತ್ತದೆ. ಒಂದು ಜಿಲ್ಲೆಗೆ 5 ಕೋಟಿ ಹಣ ಕೊಟ್ಟಿದ್ದರೆ ಅವರು, ಇದು ಯಾವುದೋ ಹಳೆ ಬಾಕಿ ಕೊಡುವುದಕ್ಕೆ ಈ ಹಣವನ್ನು ಕೊಟ್ಟಿದ್ದಾರೆ ಎಂದು ಭಾವಿಸುತ್ತಾರೆ. ಆದರೆ ಪ್ರಚಲಿತದಲ್ಲಿರುವ ಕುಡಿಯುವ ನೀರಿನ ಸಮಸ್ಯೆಗೆ ಕೊಟ್ಟಿದ್ದೇವೆ ಎನ್ನುವ ನಿಟ್ಟಿನಲ್ಲಿ

ಸುತ್ತೋಲೆ ಕಳುಹಿಸಬೇಕು. ಆ ಸುತ್ತೋಲೆಗಳು ಅಧಿಕಾರಿಗಳಿಗೆ ತಲುಪದೇ ಇದ್ದರೆ ಆ ಹಣವನ್ನು ಬಾಕಿ ಉಳಿಸಿಕೊಂಡಿರುವ ಲೆಕ್ಕಕ್ಕೆ ಕೊಡಲೆಂದು ಇಟ್ಟುಕೊಂಡಿರುತ್ತಾರೆ. ಕುಡಿಯುವ ನೀರಿನ ಬಗ್ಗೆ ಯಾವುದೇ ರೀತಿಯಲ್ಲಿ ಸಮಸ್ಯೆ ಆಗದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬಡವರಿಗೋಸ್ಕರ ಹಲವಾರು ಕಾರ್ಯಕ್ರಮವಗಳನ್ನು ಕೊಟ್ಟಿದ್ದಾರೆ. ಎಲ್ಲಾ ವರ್ಗದವರಿಗೂ ಸಿಗುವ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. 8 ನೇ ತಾರೀಖು ಹೊಸದಾಗಿ ಒಂದು ಕಾರ್ಯಕ್ರಮವನ್ನು ಪ್ರಾಯೋಜನೆ ಮಾಡುತ್ತಿದ್ದಾರೆ. "ಮುಖ್ಯಮಂತ್ರಿಗಳ ಸಾಂತ್ವನ ಯೋಜನೆ"ಯ ಚಾಲನಾ ಸಮಾರಂಭವನ್ನು ಇಟ್ಟುಕೊಂಡಿದ್ದಾರೆ. ಇದು ನಿಜವಾಗಲೂ ಒಳ್ಳೆಯ ಕೆಲಸ. ಅಪಘಾತಗಳು ಬಡವ-ಶ್ರೀಮಂತ ಎಂದು ನೋಡಿಕೊಂಡು ಆಗುವುದಿಲ್ಲ. ಅಪಘಾತಗಳು ಯಾವಾಗ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲಿ ಅವನ ಹತ್ತಿರ ಹಣ ಇಲ್ಲದೇ ಇದ್ದರೆ ಪರದಾಡುವಂತಾಗುತ್ತದೆ. ಆತನ ತಾಯಿ ಅಥವಾ ಹೆಂಡತಿ ತನ್ನ ಮಾಂಗಲ್ಯ ಇಟ್ಟು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ.

(ಮುಂದು . . . )

(136) 05-03-2016 1.50 MD-RN

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ಮುಂದು):-**

ಅಲ್ಲಿ ಉಳಿಯಲು ಯಾವುದೇ ಸವಲತ್ತುಗಳಿಲ್ಲವೆಂದು ಎಲ್ಲಾ ವೈದ್ಯರುಗಳು ಸಂಜೆಯವರೆವಿಗೂ ಆಸ್ಪತ್ರೆಯಲ್ಲಿದ್ದು ರಾತ್ರಿ ನಗರಕ್ಕೆ ವಾಪಸ್ ಹೋಗುತ್ತಾರೆ. ಅದಕ್ಕಾಗಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೇವಲ ವೈದ್ಯರಿಗೆ ಹಳ್ಳಿಗಳಿಗೆ ಹೋಗಿ ಕೆಲಸ ಮಾಡಿ ಎಂದು ಹೇಳುವುದಕ್ಕಿಂತ ಅವರಿಗೆ ಅಲ್ಲಿ ಉಳಿದುಕೊಳ್ಳಲು ಸೌಲಭ್ಯಗಳನ್ನು ಒದಗಿಸಬೇಕು.

**ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಅಬ್ದುಲ್ ಜಬ್ಬಾರ್‌ರವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಸಹ ಈ ಬಗ್ಗೆ ಆಲೋಚನೆಯನ್ನು ಮಾಡಿದ್ದೇವೆ. ಇಲ್ಲಿ ಎರಡು ರೀತಿಯ ಸಮಸ್ಯೆ ಇದೆ. ಕೆಲವೊಂದು ಕಡೆ ವೈದ್ಯರುಗಳು ಸರ್ಕಾರಿ ವಸತಿ ಗೃಹಗಳು ಇಲ್ಲದೇ ಇರುವುದರಿಂದ ನಾವು ನಿಲ್ಲುವುದಿಲ್ಲವೆಂದು ಹೇಳುತ್ತಾರೆ. ಆದರೆ ಎಲ್ಲಿ ಉತ್ತಮವಾದ ಸರ್ಕಾರಿ ವಸತಿ ಗೃಹವಿದೆ ಅಲ್ಲಿ ವೈದ್ಯರು ಸಂಜೆಯವರೆವಿಗೂ ಕೆಲಸವನ್ನು ಮಾಡಿ ಪೇಟೆಗೆ ವಾಪಸ್ ಹೋಗುತ್ತಾರೆ. ಮಾನ್ಯ ಸದಸ್ಯರ ಕಾಳಜಿ ನಮಗೆ ಅರ್ಥವಾಗುತ್ತದೆ. ಅದಕ್ಕಾಗಿ ಇವತ್ತು ನಾವು ಒಂದು ಆಲೋಚನೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರ ಕ್ಷೇತ್ರ ವ್ಯಾಪ್ತಿ ಮತ್ತು ಅವರು ಹೋದ ಕಡೆ ವೈದ್ಯರು ಎಲ್ಲಿ ರಾತ್ರಿಯ ಹೊತ್ತು ಉಳಿದುಕೊಳ್ಳಲು ಇಚ್ಛಿಸುತ್ತಾರೆ ಎಂಬುದನ್ನು ಅವರು ತಿಳಿಸಲಿ ಅಲ್ಲಿ ನಾವು ಕಟ್ಟಡವನ್ನು ಕಟ್ಟುವುದಕ್ಕಾಗದೇ ಇದ್ದರೂ ಸಹ ನಮ್ಮ ಇಲಾಖೆಯ ಮುಖಾಂತರ ಅವರಿಗೆ ಬಾಡಿಗೆ ಮನೆಯನ್ನಾದರೂ ಕೊಡಿಸುತ್ತೇವೆ. ಆದರೆ ವೈದ್ಯರುಗಳು ಅಲ್ಲಿ ಉಳಿದುಕೊಳ್ಳಬೇಕು. ವೈದ್ಯರು ಅಲ್ಲಿ ಉಳಿದುಕೊಳ್ಳುವ ಹಾಗೆ ಆಗಲಿ. ಏಕೆಂದರೆ ನಾವು 20 ಲಕ್ಷ ರೂಪಾಯಿ ಖರ್ಚು ಮಾಡಿ ವಸತಿ ಗೃಹಗಳನ್ನು ನಿರ್ಮಾಣ ಮಾಡಿ ಅಲ್ಲಿ ಯಾರೂ ಸಹ ಉಳಿದುಕೊಳ್ಳುವುದಿಲ್ಲವೆಂದರೆ ಇದು ವ್ಯರ್ಥವಾಗುತ್ತದೆ. ಆ ಮನೆಗಳು ಬಿದ್ದು ಹೋಗುವ ಪರಿಸ್ಥಿತಿಗೆ ಬಂದಾಗ ಪುನಃ ಅವುಗಳನ್ನು ರಿಪೇರಿ ಮಾಡಿ ಎಂದು ಹೇಳುತ್ತಾರೆ. ಅಲ್ಲಿ ಯಾರೂ ಸಹ ಉಳಿಯುವುದೂ ಇಲ್ಲ. ಅದೇ ಬಡ್ಡಿ ಹಣಕ್ಕೆ ನಾವು ಇಲಾಖೆಯ ವತಿಯಿಂದ ಬಾಡಿಗೆ ಮನೆಯನ್ನು ಕೊಡಿಸುತ್ತೇವೆ, ಆದರೆ ವೈದ್ಯರುಗಳು ಅಲ್ಲಿ ಉಳಿದುಕೊಳ್ಳಬೇಕು.

**ಶ್ರೀ ಅಬ್ದುಲ್ ಜಬ್ಬಾರ್:–** ತಾವು ಹೆಚ್‌ಆರ್‌ಎ ಕೊಡುತ್ತೀರಿ.

**ಸಭಾಪತಿಯವರು:–** ಮಾನ್ಯ ಅಬ್ದುಲ್ ಜಬ್ಬಾರ್‌ರವರೆ, ಮಾನ್ಯ ಸಚಿವರು ಹೇಳಿದ್ದು ನಿಮಗೆ ಸರಿಯಾಗಿ ಕೇಳಿಸಿತೋ ಇಲ್ಲವೋ ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ, ಮಾನ್ಯ ಸಚಿವರು ನಾವು ಕೆಲವು ಕಡೆ ಸುಮಾರು 10 ರಿಂದ 20 ಲಕ್ಷ ರೂಪಾಯಿ ಖರ್ಚು ಮಾಡಿ ಸರ್ಕಾರಿ ವಸತಿ ಗೃಹಗಳನ್ನು ನಿರ್ಮಾಣ ಮಾಡಿದ್ದೇವೆ. ಆದರೆ ಅಲ್ಲಿಗೆ ವೈದ್ಯರುಗಳು ಹೋಗುವುದಿಲ್ಲ. ವಸತಿ ಗೃಹಗಳನ್ನು ಹಾಗೆಯೇ ಖಾಲಿ ಬಿಟ್ಟರೆ ಅದು ಹಾಳಾಗುತ್ತದೆ. ಅದರ ಬದಲು ವೈದ್ಯರುಗಳು ಉಳಿದುಕೊಳ್ಳುತ್ತಾರೆ ಎನ್ನುವ ಕಡೆ ನಮ್ಮ ಸರ್ಕಾರದ ಬಂಗಲೆ ಇದ್ದರೆ ಅದನ್ನು ಅವರಿಗೆ ಕೊಟ್ಟುಬಿಡುತ್ತೇವೆ. ಅಕಸ್ಮಾತ್ ಇಲ್ಲದೇ ಹೋದರೆ ನಾವು ಹೆಚ್‌ಆರ್‌ಎ ಮುಂತಾದವುಗಳನ್ನು ಯೋಚನೆ ಮಾಡುವುದಿಲ್ಲ. ಅವರು ಯಾವ ಮನೆಯಲ್ಲಿ ಬಾಡಿಗೆಗೆ ಇರುತ್ತಾರೆಯೋ ಆ ಮನೆಯ ಬಾಡಿಗೆಯನ್ನು ನಾವು ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆ ತರಹ ವೈದ್ಯರುಗಳು ಉಳಿದುಕೊಳ್ಳಲು ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ವ್ಯವಸ್ಥೆಯನ್ನು ಮಾಡಿ.

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ವೈದ್ಯರು ಎಲ್ಲಿ ಕೆಲಸವನ್ನು ನಿರ್ವಹಿಸುತ್ತಾರೆಯೋ ಅಲ್ಲಿ ಉಳಿದುಕೊಳ್ಳಬೇಕೆನ್ನುವುದನ್ನು ಕಡ್ಡಾಯ ಮಾಡಿ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರದ ನಿಯಮ ಏನಿದೆ?

**ಸಭಾಪತಿಯವರು:–** ನಿಯಮಗಳನ್ನು ಆಮೇಲೆ ನೋಡೋಣ. ಈಗ ಯಾರೂ ವೈದ್ಯರುಗಳು ಕೆಲಸ ಮಾಡಲು ಒಪ್ಪುತ್ತಿಲ್ಲ, ನೀವು ನಿಯಮಗಳಿಗೆ ಹೋಗುತ್ತಿದ್ದೀರಿ. ಮಾನ್ಯ ಸಚಿವರು ವೈದ್ಯರು ಉಳಿದುಕೊಳ್ಳಲು ಏನೋ ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

**ಶ್ರೀ ಅಬ್ದುಲ್ ಜಬ್ಬಾರ್:–** ವೈದ್ಯರು ಉಳಿದುಕೊಳ್ಳಬೇಕೆಂದು ಸರ್ಕಾರ ಕಡ್ಡಾಯ ಮಾಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಇಷ್ಟು ಅಸಹಾಯಕತೆಯನ್ನು ತೋರಿಸಿದರೆ ಹೇಗೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಕೆ.ಸಿ.ಎಸ್.ಆರ್. ನಿಯಮಗಳ ಪ್ರಕಾರ ವೈದ್ಯರುಗಳು ಅವರು ಕೆಲಸ ಮಾಡುವ ಕೇಂದ್ರ ಸ್ಥಾನವನ್ನು ಬಿಡಬೇಕಾದರೆ ಅನುಮತಿಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಅಬ್ದುಲ್ ಜಬ್ಬಾರ್‌ರವರು ತಮ್ಮ ಮಾತುಗಳನ್ನು ಮುಗಿಸಲಿ. ಅವರು ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

**ಶ್ರೀ ಅಬ್ದುಲ್ ಜಬ್ಬಾರ್:–** ವೈದ್ಯರು ಉಳಿದುಕೊಳ್ಳುವ ಮನೆಯನ್ನು ಚೆನ್ನಾಗಿ ಮಾಡಿಕೊಡಬೇಕು.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಎರಡು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಗಣಿಸುತ್ತೇವೆ.

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ಇನ್ನು ಎರಡನೆಯದಾಗಿ 1993–94ರಲ್ಲಿ ಶ್ರೀ ವೀರಪ್ಪ ಮೋಯ್ಲಿಯವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಖಾಸಗಿಯವರು ಬಹಳಷ್ಟು ಶಾಲೆಯನ್ನು ಪ್ರಾರಂಭ ಮಾಡಲು ಅವಕಾಶ ಮಾಡಿಕೊಟ್ಟರು. ಈ ಶಾಲೆಗಳು ಪ್ರಾರಂಭವಾಗಿ ಸುಮಾರು 20 ರಿಂದ 30 ವರ್ಷಗಳಾಗುತ್ತಿವೆ. ಹಿಂದೆ ಯಾರು ಶಾಲೆಗಳನ್ನು ಪ್ರಾರಂಭ ಮಾಡಿದ್ದರೋ ಆ ಶಾಲೆಗಳನ್ನು 1995ರವರೆವಿಗೂ grant-in-aidಗೆ ಸೇರಿಸಿದ್ದಾರೆ. 1995 ರಿಂದ ಈಗ ನಾವು 2016ನೇ ಇಸವಿಯಲ್ಲಿದ್ದೇವೆ. ಈ ಶಾಲೆಗಳಲ್ಲಿ ಕೆಲಸ ಮಾಡುವವರು ನಿವೃತ್ತಿಯ ಹಂತಕ್ಕೆ ಬಂದಿದ್ದಾರೆ. ತಾಲ್ಲೂಕುಗಳಲ್ಲಿ ಸುಮಾರು 5,000, 6,000 ರೂಪಾಯಿ ಸಂಬಳಕ್ಕಾಗಿ ಅವರು ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅದಕ್ಕೆ ಸರ್ಕಾರ ಆದಷ್ಟು 1995 ರಿಂದ 2000ನೇ ಇಸವಿಯವರೆವಿಗೂ ಪ್ರಾರಂಭಿಸಲಾದ ಶಾಲೆಗಳು ಯಾವುದು ಚೆನ್ನಾಗಿ ನಡೆಯುತ್ತಿವೆ, ಆ ಖಾಸಗಿ ಶಾಲೆಗಳನ್ನು grant-in-aid ಗೆ ಸೇರಿಸಿದರೆ ಆ ಶಿಕ್ಷಕರುಗಳು ನಿವೃತ್ತಿಯನ್ನು ಹೊಂದುವುದಕ್ಕಿಂತ ಮೊದಲು ಸಂಬಳವನ್ನು ನೋಡಿದ ಹಾಗೆ ಆಗುತ್ತದೆ ಎಂದು ನಾನು ಸರ್ಕಾರವನ್ನು ತಮ್ಮ ಮುಖಾಂತರ ಬೇಡಿಕೊಳ್ಳುತ್ತೇನೆ.

ಇನ್ನು ದಾವಣಗೆರೆ ವಿಶ್ವವಿದ್ಯಾನಿಲಯ ವಿಚಾರವಾಗಿ ಹೇಳುವುದಾದರೆ, ದಾವಣಗೆರೆ ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದ ಕೇವಲ 16 ಜನ lecturers and professors ಮಾತ್ರ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಹೆಸರಿಗೆ ವಿಶ್ವವಿದ್ಯಾನಿಲಯವಿದೆ, ಆದರೆ ಎಲ್ಲಿಯೂ ಸಹ ಉಪನ್ಯಾಸಕರುಗಳ ನೇಮಕಾತಿಯಾಗುತ್ತಿಲ್ಲ. ಸಾಕಷ್ಟು ಜನ ಉಪನ್ಯಾಸಕರುಗಳನ್ನು ಹೊರಗಡೆಯಿಂದ ತೆಗೆದುಕೊಂಡು ಅವರಿಗೆ ಕೇವಲ 15,000 ದಿಂದ 20,000 ರೂಪಾಯಿ ಸಂಬಳವನ್ನು ಕೊಟ್ಟು ಕೆಲಸ

ಮಾಡುತ್ತಿದ್ದಾರೆ. ಹಗಲೆಲ್ಲಾ ಬಂದು ನಾವು ಈ ಬಗ್ಗೆ ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರನ್ನು ಕೇಳುತ್ತಿದ್ದೇವೆ. ನೀವು ಕನಿಷ್ಟ ಪಕ್ಷ ಈ ಉಪನ್ಯಾಸಕರುಗಳ ನೇಮಕಾತಿಗಾದರೂ ಅನುಮತಿಯನ್ನು ಕೊಡಿ, ಶೇಕಡ 80ರಷ್ಟು ಕೇಂದ್ರ ಸರ್ಕಾರ ಮತ್ತು ಶೇಕಡ 20ರಷ್ಟನ್ನು ರಾಜ್ಯ ಸರ್ಕಾರ ಕೊಡುತ್ತದೆಂದು ಹೇಳಿದರೂ ಆ ಪ್ರಸ್ತಾವನೆಯನ್ನು ಸಹ ಆರ್ಥಿಕ ಇಲಾಖೆಯಿಂದ ನಿರಾಕರಣೆ ಮಾಡಿ ಕಳುಹಿಸಿದ್ದಾರೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಉಪನ್ಯಾಸಕರ ನೇಮಕಾತಿಗೋಸ್ಕರ ಸರ್ಕಾರ ಅನುಮತಿಯನ್ನು ಕೊಡಬೇಕು.

ಕೊನೆಯದಾಗಿ ನಮ್ಮ ಸದಸ್ಯರಾದ ಮಾನ್ಯ ಮಧುಸೂದನ್‌ರವರು ಮಾತನಾಡುತ್ತಾ, "ಸಾರೆ ಜಹಾಂಸೆ ಅಚ್ಛಾ..." ಎಂದು ಬಹಳ ಚೆನ್ನಾಗಿ ಹೇಳಿದರು. ಆದರೆ "ಸಾರೆ ಜಹಾಂಸೆ ಅಚ್ಛಾ..." ಗೀತೆಯಲ್ಲಿ "ಮಝಬ್ ನಹಿ ಸಿಖಾತಾ ಆಪಸ್ ಮೆ ಬೈರ್ ರಕ್ನಾ ಹಿಂದಿ ಹೈ ಹಮ್, ವತನ್ ಹೈ ಹಿಂದೂಸ್ತಾನ್ ಹಮಾರ" ಎಂದು ಹೇಳಿದ್ದಾರೆ. ಅದು "ಹಿಂದು ಹೈ ಹಮ್, ವತನ್ ಹೈ" ಅಲ್ಲ.

**ಶ್ರೀ ಗೋ.ಮಧುಸೂದನ್:-** ಅದರ ಒರಿಜಿನಾಲಿಟಿ...

**ಸಭಾಪತಿಯವರು:-** ಈ ಬಗ್ಗೆ ಚರ್ಚೆ ಬೇಡ, ದಯಮಾಡಿ ಕುಳಿತುಕೊಳ್ಳಿ. ನಾನು ಮಾನ್ಯ ಅಬ್ದುಲ್ ಜಬ್ಬಾರ್‌ರವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡುತ್ತಾರೆ.

**ಶ್ರೀ ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಇನ್ನು ಎರಡನೆಯ ವಿಚಾರವಾಗಿ ಹೇಳುವುದಾದರೆ, ಇತ್ತೀಚೆಗೆ "ಇಸ್ಲಾಂ ಭಾರತ ಮಟ್ಟಿಗೆ ಮಾತ್ರವಲ್ಲವೇ.... ಅಪಾಯ......"

**ಸಭಾಪತಿಯವರು:-** ಥೂ ಥೂ ಅದೆಲ್ಲಾ ಹೇಳಬೇಡಿ. ಅದು ನ್ಯಾಯಾಲಯದಲ್ಲಿದೆ. ಅದು ಯಾರೋ ಹೇಳಿದ್ದಾರೆ. ಅದು ತಪ್ಪು ಅಭಿಪ್ರಾಯ.

**ಶ್ರೀ ಅಬ್ದುಲ್ ಜಬ್ಬಾರ್:-** ಇದು ಮೇಲ್ನೋಟಕ್ಕೆ ಆಗಿದೆ ಎಂದು ಶ್ರೀ ಎಂ.ಪಿ.ಅನಂತ್ ಹೆಗಡೆಯವರು ಇತ್ತೀಚೆಗೆ ಹೇಳಿದ್ದಾರೆ.

**ಸಭಾಪತಿಯವರು:-** ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ಇದೆ.

**ಶ್ರೀ ಅಬ್ದುಲ್ ಜಬ್ಬಾರ್:-** ಏನಾದರು ಅನಾಹುತವಾದರೆ ಒಬ್ಬ ಮನುಷ್ಯ ಸಾಯುತ್ತಾನೆ. ಇಂತಹ ವಿಷಕಾರಿಯಾದ ಭಾಷಣವನ್ನು ಮಾಡಿದರೆ ಇಡೀ ಸಮಾಜ ನಾಶವಾಗುವಂಥ ರೀತಿಯಲ್ಲಿ ಪರಿಣಾಮ ಬೀರುತ್ತದೆ.

**ಸಭಾಪತಿಯವರು:-** ಅದು ತಪ್ಪು ಬಿಡ್ರಿ. ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣವಿದೆ.

**ಶ್ರೀ ಅಬ್ದುಲ್ ಜಬ್ಬಾರ್:-** ಶ್ರೀ ಎಂ.ಪಿ.ಅನಂತ್ ಹೆಗಡೆಯವರನ್ನು ದಯಮಾಡಿ ಬಂದಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. Apology ಕೇಳಲಿ, ಆದರೆ ಮಾತನಾಡುವಾಗ ಇಂತಹ ವಿಚಾರಗಳನ್ನು ಮಾತನಾಡಿದರೆ ಏನಾಗುತ್ತದೆ ಹೇಳಿ.

**ಸಭಾಪತಿಯವರು:-** ಆ ವಿಷಯದ ಬಗ್ಗೆ ಈಗ ಚರ್ಚೆ ಬೇಡ, ಅದು ನ್ಯಾಯಾಲಯದಲ್ಲಿದೆ. ಜೊತೆಗೆ ಅದು ಸರಿಯೂ ಅಲ್ಲ. ಆ ತರಹ ಮಾತನಾಡುವವರ ಬಗ್ಗೆ ನಾವಿಲ್ಲಿ ಚರ್ಚೆ ಮಾಡಿ ಅವರನ್ನು ದೊಡ್ಡವರನ್ನಾಗಿ ಮಾಡುವುದು ಬೇಡ. ನಾವು ಅವರನ್ನು ದೊಡ್ಡವರು ಮಾಡುವುದು ಸರಿಯಲ್ಲ. ಆ ತರಹ ಮಾತನಾಡುವವರನ್ನು ನಾವಿಲ್ಲಿ glorify ಮಾಡುವುದು ಸರಿಯಲ್ಲ. ಆ ವಿಚಾರವನ್ನು ಬಿಟ್ಟುಬಿಡಿ, ಸರ್ಕಾರ ನೋಡಿಕೊಳ್ಳುತ್ತೇನೆ.

**ಶ್ರೀ ಅಬ್ದುಲ್ ಜಬ್ಬಾರ್:-** ಈ ಸದನದ ಮುಖಾಂತರ ನಾನು ಅವರ ವಿಚಾರವನ್ನು condemn ಮಾಡುತ್ತೇನೆ. ಮುಂದೆ ಅವರು ಆ ರೀತಿಯಾದ ಮಾತುಗಳನ್ನು ಹೇಳದ ಹಾಗೆ ನೋಡಿಕೊಳ್ಳಬೇಕೆಂದು ಈ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–:–** ಮಾನ್ಯ ಸಭಾಪತಿಯವರೆ, ಸಮಯ ನಮ್ಮದಲ್ಲ, ಭೂಮಿ ನಮ್ಮದಲ್ಲ, ಪ್ರಕೃತಿ ನಮ್ಮದಲ್ಲ. ಆದರೆ, ನಮ್ಮದು ಎಂದು ಉಳಿಯುವುದು ಸ್ನೇಹ, ನಂಬಿಕೆ, ಪ್ರೀತಿ ಮಾತ್ರ. ನಾವು ಮಾಡುವಂತಹ ಪ್ರಾಮಾಣಿಕ ಸೇವೆ, ಈ ಕೆಲಸವನ್ನು ಮಾಡಬೇಕಾಗಿದ್ದು ನಮ್ಮ ಕರ್ತವ್ಯ, ದರ್ಮ ಎಂದು ಹೇಳಿ ನಾನು ಭಾವಿಸಿ, ಈ ಒಂದು ಚಿಂತಕರ ಛಾವಡಿ ಎಂದು ಏನು ಕರೆಯುತ್ತಾರೆ ಅದರೊಳಗಡೆ ಬಂದು ನಾನು ಭಾಗವಹಿಸುತ್ತಿರುವುದು ನನಗೊಂದು ಹೆಮ್ಮೆ ತರುವಂತಹ ವಿಚಾರವಾಗಿದೆ. ಕಾರಣ ಇಷ್ಟೆ, ಮಾನ್ಯ ಸಭಾಪತಿಗಳ ಮರ್ಗದರ್ಶನದ ಅಡಿಯಲ್ಲಿ, ಸಣ್ಣ ಹುಡುಗನಿಂದ ನಾನು ಅವರ ಕೆಳಗಡೆ ಬೆಳೆದಂತಹವನು ಹಾಗೂ ಅವರಿರುವಂತಹ ಸಮಯದೊಳಗಡೆ ನಾನು ಈ ಒಂದು ವಿಧಾನ ಪರಿಷತ್ತಿಗೆ ಅಥವಾ ಮೇಲ್ಮನೆ ಎಂದು ಏನು ಹೇಳುತ್ತಾರೆ ಇಲ್ಲಿಗೆ ಬಂದಿರುವುದು ನನಗೆ ಹೆಮ್ಮೆ ಅನಿಸುತ್ತಿದೆ.

ಮಾನ್ಯ ಸಭಾಪತಿಯವರೆ, ನಾನು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತನಾಗಿ ಬಂದಂತಹವನು, ಸಾಕಷ್ಟು ಸಮಸ್ಯೆಗಳ ಅಡಿಯಲ್ಲಿ ಈ ಒಂದು ಗ್ರಾಮ ಪಂಚಾಯತಿಗಳಿವೆ. ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಕಡೆ ಪ್ರವಾಸ ಮಾಡಿದಂತಹ ಕಾಲದಲ್ಲಿ ನನ್ನ ಅರಿವಿಗೆ ಬಂದಂತಹದ್ದು ಗ್ರಾಮ ಪಂಚಾಯತಿಯ ಸದಸ್ಯರುಗಳ ಆಯ್ಕೆ ಆಗಿರುವಂತಹದ್ದು. ಈ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ, ಈ ಒಂದು ಮೀಸಲಾತಿಯ ಒಳಗಡೆ, ಎಲ್ಲರೂ ಕೂಡ ಅಂದರೆ ಒಬ್ಬ ಸಾಮಾನ್ಯ ಕೂಲಿ ಕಾರ್ಮಿಕನಿಂದ ಹಿಡಿದು ಪ್ರತಿಯೊಬ್ಬರೂ ಕೂಡ ಇದರಲ್ಲಿ ಆಯ್ಕೆಯಾಗಿದ್ದಾರೆ. ಅವರಿಗೆ ಕೂಡಲೇ ಗೌರವಧನ ಸಿಗಬೇಕಾದಂತಹ ಅನಿವಾರ್ಯತೆ ಇದೆ ಎಂದು ನನಗೆ ಅನ್ನಿಸಿತು. ಕಾರಣ ಇಷ್ಟೆ, ಸಾಮಾನ್ಯವಾಗಿ ಒಬ್ಬ ಹೊಟ್ಟೆ ಹಸಿದಂತಹವನು ತನಗೆ ಊಟ ಸಿಗದಿದ್ದಂತಹ ಸಂದರ್ಭದಲ್ಲಿ ಅವನು ಕದಿಯಲಿಕ್ಕೆ ಪ್ರಾರಂಭ ಮಾಡಿ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾನೆ. ಊಟಕೋಸ್ಕರ ಕದಿಯುವಂತಹ ಕೆಲಸವನ್ನು ಮಾಡುತ್ತಾನೆ. ಈಗ ರಾಜ್ಯ ಸರ್ಕಾರ ಏನೊಂದು ಯೋಚನೆಯನ್ನು ಮಾಡುತ್ತಿದೆ, ಭ್ರಷ್ಟಾಚಾರ ಮುಕ್ತವಾಗಿರುವಂತಹ ಒಂದು ಕೆಲಸವನ್ನು ನಾವು ಮಾಡಬೇಕಾಗಿದೆ ಎನ್ನುವಂತಹ ಮಾತುಗಳನ್ನು ಹೇಳುತ್ತಿದೆ, ಅದು ಪ್ರಾರಂಭವಾಗಬೇಕಾಗಿರುವುದು ಇಲ್ಲಿಂದ ಎಂದು ನಾನು ಭಾವಿಸಿದ್ದೇನೆ. ಕಾರಣ ಇಷ್ಟೆ, ಒಬ್ಬ ಕೂಲಿ ಕಾರ್ಮಿಕನನ್ನು ನಾವು ಈ ಒಂದು ವ್ಯವಸ್ಥೆಯ ಒಳಗಡೆ ಒಬ್ಬ ಗ್ರಾಮ ಪಂಚಾಯತಿಯ ಸದಸ್ಯನನ್ನಾಗಿ ಆಯ್ಕೆಯನ್ನು ಮಾಡುತ್ತೇವೆ. ಅವನು ಒಂದು ದಿವಸ ತನ್ನ ಕೆಲಸವನ್ನು ಬಿಟ್ಟು, ಸ್ಥಳೀಯ

ಮಟ್ಟದಲ್ಲಿ ಮತದಾರರ ಕೆಲಸವನ್ನು ಮಾಡಿಕೊಡಲು ಅವನು ಗ್ರಾಮ ಪಂಚಾಯ್ತಿಗೆ ಬರುತ್ತಾನೆ. ಅವನನ್ನು ಕರೆತರುವಂತಹ ವ್ಯವಸ್ಥೆಯೂ ಸಹ ಆಗುತ್ತದೆ. ಅವನು ಬರಲಿಲ್ಲವೆಂದರೆ ಮತದಾರ ಏನು ಮತವನ್ನು ಕೊಟ್ಟಿರುತ್ತಾನೆ, ಅವನು ಒತಾಯಪೂರ್ವಕವಾಗಿ ಆ ಗ್ರಾಮ ಪಂಚಾಯ್ತಿಯ ಸದಸ್ಯನನ್ನು ಕರೆತರುವಂತಹ ಕೆಲಸವನ್ನು ಮಾಡುತ್ತಾನೆ. ಹಾಗೆ ಮಾಡಿದಂತಹ ಸಂದರ್ಭದಲ್ಲಿ ಆತನ ಆ ದಿನದ ಕೂಳಿನ ವ್ಯವಸ್ಥೆಗೆ ಅಡ್ಡಿಯುಂಟಾಗುತ್ತದೆ. ಈಗ ಆ ಗ್ರಾಮ ಪಂಚಾಯ್ತಿ ಸದಸ್ಯನಿಗೆ 250 ರೂಪಾಯಿ ಗೌರವಧನ ಕೊಡುವಂತಹ ವ್ಯವಸ್ಥೆ ಸರ್ಕಾರದಲ್ಲಿದೆ. ಆದರೆ ಕಾಂಗ್ರೆಸ್ ಪಕ್ಷ ತನ್ನ ಆಡಳಿತವನ್ನು ಪ್ರಾರಂಭ ಮಾಡಿದ ಈ ಎರಡೂವರೆ ವರ್ಷದ ಅವಧಿಯಲ್ಲಿ ಅದರಿಂದ ಈಚೆಗೆ ಗ್ರಾಮ ಪಂಚಾಯ್ತಿ ಸದಸ್ಯರಿಗೆ ಗೌರವಧನವನ್ನು ಕೊಡುವಂತಹ ಕೆಲಸವಾಗಲಿಲ್ಲ. ಆತನಿಗೆ ಇವತ್ತೂ ಸಹ ಗೌರವಧನ ಸಿಕ್ಕಿಲ್ಲ. ನಾನು ಇವತ್ತು ಪತ್ರಿಕೆಯಲ್ಲಿ ನೋಡಿದೆ. ಏನೆಂದರೆ ಈ ತಿಂಗಳಿನಿಂದ ಗ್ರಾಮ ಪಂಚಾಯ್ತಿ ಸದಸ್ಯರಿಗೆ ಪ್ರತಿ ತಿಂಗಳು ಗೌರವಧನವನ್ನು ಸರಿಯಾಗಿ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಸಂಬಂಧಪಟ್ಟ ಇಲಾಖೆ ಮಂತ್ರಿಗಳು ಹೇಳಿಕೆಯನ್ನು ನೀಡಿದ್ದಾರೆ. ನಾನು ಮೊದಲೆ ಉಲ್ಲೇಖ ಮಾಡಿದೆ. ಕನಿಷ್ಠ ಅವರಿಗೆ 1,000 ದಿಂದ 2,000 ರೂಪಾಯಿಯವರೆವಿಗೂ ಗೌರವಧನವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅಲ್ಲಿ ಭ್ರಷ್ಟಾಚಾರವನ್ನು ತಡೆ ಹಿಡಿಯುವಂತಹ ಕೆಲಸವಾಗುತ್ತದೆ. ಇಲ್ಲದೇ ಇದ್ದರೆ ಗ್ರಾಮ ಪಂಚಾಯ್ತಿಯೊಳಗೆ ಏನು ಕೆಲಸವಾಗಬೇಕು, ಅವನನ್ನು ಕರೆತರುವಂತಹ ವ್ಯವಸ್ಥೆಯನ್ನು ಏನು ಮತದಾರ ಅಥವಾ ಸಾರ್ವಜನಿಕ ಮಾಡಿರುತ್ತಾನೆ, ಗ್ರಾಮ ಪಂಚಾಯ್ತಿಯಿಂದ ಏನು ಅವನು ಚುನಾಯಿತನಾಗಿರುತ್ತಾನೆ ಅವನಿಂದ ನಿರೀಕ್ಷೆ ಮಾಡುವಂತಹ ಕೆಲಸವನ್ನು ಮಾಡುತ್ತಾನೆ. ಅಲ್ಲಿಂದ ಈ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ. ಅದನ್ನು ನಿಲ್ಲಿಸುವಂತಹ ಕೆಲಸವನ್ನು ಅಲ್ಲಿಂದ ಮಾಡಬೇಕೆಂಬುದು ನನ್ನ ಒಂದು ಮನವಿಯಾಗಿದೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

ಶ್ರೀ ಆರ್.ಪ್ರಸನ್ನ ಕುಮಾರ್(ಮುಂದು):-

ಅದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅಂತಹ ಸಂದರ್ಭದಲ್ಲಿ 25,000 ರೂಪಾಯಿಗಳವರೆಗೆ ವೆಚ್ಚ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಂಡು ಬಂದಿದ್ದಾರೆ. ಇದು ರಾಷ್ಟ್ರದಲ್ಲೇ ಒಂದು ಮಾದರಿ ಕಾರ್ಯಕ್ರಮ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ ಇದು ಆರೋಗ್ಯ ಇಲಾಖೆಯ ಸಚಿವರಿಗೆ ಸಂಬಂಧಪಟ್ಟಿದೆ. ಅವರು ಈಗ ಸದನದಲ್ಲಿದ್ದಾರೆ. ಅವರಿಗೂ ಕೂಡ ನನ್ನ ಅಭಿನಂದನೆಯನ್ನು ಈ ಸಂದರ್ಭದಲ್ಲಿ ಸಲ್ಲಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಎಲ್ಲರಿಗೂ ಆರೋಗ್ಯ ಮುಖ್ಯ. ಅದರಲ್ಲೂ ಅಪಘಾತ ಆದಂತಹ ಸಂದರ್ಭದಲ್ಲಿ ಈ ಹಣ ಕೊಡುವುದಿದೆಯೆಲ್ಲಾ ಇವತ್ತು ಒಂದು ರೂಪಾಯಿ ಸಿಕ್ಕಿದರೂ ಅದು ಬಹಳ ದೊಡ್ಡ ಮೊತ್ತವಾಗುತ್ತದೆ. ಆದರೆ ಇವತ್ತು 25,000 ರೂಪಾಯಿ ಸಿಗುತ್ತಿದೆ ಎಂದರೆ ಸರ್ಕಾರ ಬಹಳ ದೊಡ್ಡ ಮೊತ್ತವನ್ನು ಕೊಡುತ್ತಿದೆ. ಹಾಗಾಗಿ ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಬೇಕು. ಇದು ಬಡವರ ಪರವಾಗಿರುವಂತಹ ಕೆಲಸ. ಇವತ್ತು ಯಾರಾದರೂ ಹಣವಂತರು ಇದ್ದರೆ ಆ ಹಣವಂತರು ದೊಡ್ಡ ಆಸ್ಪತ್ರೆಯನ್ನು ನೋಡಿಕೊಂಡುಬಿಡುತ್ತಾರೆ. ಆದರೆ, ಅಪಘಾತವಾದಂತಹ ಸಂದರ್ಭದಲ್ಲಿ ನಾವು ಯಾರೂ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿಲ್ಲ. ಏಕೆಂದರೆ, ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಬೇಕಾದಷ್ಟು ಸೌಲಭ್ಯಗಳು ಸಿಕ್ಕಿದರೂ ಕೂಡ ಆತನನ್ನು ದೊಡ್ಡ Multispeciality hospitalಗೆ ಕರೆದುಕೊಂಡು ಹೋಗಬೇಕೆನ್ನುವ ಭಾವನೆ ಇರುತ್ತದೆ. ಆತ ಉಳಿಯಬೇಕು, ಆತ ಸತ್ತು ಹೋಗಿಬಿಡುತ್ತಾನೆ ಏನೋ ಎನ್ನುವ ಭಾವನೆ ಇರುತ್ತದೆ. ಹಾಗಾಗಿ ಇವತ್ತು ಸರ್ಕಾರ ಈಗ ಮಾಡಿರುವಂತಹ ಕೆಲಸವನ್ನು ನಾನು ಅಭಿನಂದಿಸುತ್ತಿದ್ದೇನೆ. ನಾನು ಮಲೆನಾಡು ಪ್ರದೇಶದಿಂದ ಬಂದಂಥವನು.

**ಸಭಾಪತಿಯವರು:-** ಎರಡು ವಿಷಯಗಳನ್ನು ಹೇಳಿದ್ದೀರಿ ಮುಗಿಸಿಬಿಡಿ, ಈಗ ಸಮಯವಿಲ್ಲ. ಇನ್ನು ಮೂರು ಜನ ಮಾತನಾಡುವವರಿದ್ದಾರೆ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಕೆಳಮನೆಯಲ್ಲಿ ನಿನ್ನೆ ಕಸ್ತೂರಿ ರಂಗನ್ ವರದಿಯ ಬಗ್ಗೆ ಚರ್ಚೆಯಾಗಿದೆ. ಇವತ್ತು ಕಸ್ತೂರಿ ರಂಗನ್ ವರದಿಯನ್ನೇನಾದರೂ ಅನುಷ್ಠಾನಕ್ಕೆ ತಂದುಬಿಟ್ಟರೆ ನಮ್ಮ ಭಾಗ ಶಿವಮೊಗ್ಗ ಜಿಲ್ಲೆಯಷ್ಟೇ ಅಲ್ಲ, ಪಕ್ಕದ ಜಿಲ್ಲೆಗಳು ಸೇರಿ ಅಲ್ಲಿರುವಂತಹ ವಸತಿ ಪ್ರದೇಶಗಳನ್ನು ಸಂಪೂರ್ಣವಾಗಿ shift ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಇವತ್ತು ಜನರು ಆ ಪ್ರಕೃತಿಗೆ ಮತ್ತು ಪ್ರದೇಶಕ್ಕೆ ಅವಲಂಬಿತರಾಗಿದ್ದಾರೆ. ಅವರನ್ನು ನಿರ್ಗತಿಕರನ್ನಾಗಿ ಮಾಡುವ ಕೆಲಸ ಆಗಿಬಿಡುತ್ತದೆ. ಆದ್ದರಿಂದ ದಯಮಾಡಿ ಕಸ್ತೂರಿ ರಂಗನ್ ವರದಿಯನ್ನು ವಿರೋಧಿಸುವ ಕೆಲಸ ಆಗಬೇಕು. ಮತ್ತೊಂದು ನಮ್ಮ ಜಿಲ್ಲೆಯ ಜ್ವಲಂತ ಸಮಸ್ಯೆ ಎಂದರೆ ಬಗರ್‌ಹುಕುಂ ಮತ್ತು ಅರಣ್ಯ ಭೂಮಿಗಳ ಸಕ್ರಮೀಕರಣದ ವಿಚಾರ.

**ಸಭಾಪತಿಯವರು:-** ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಆಯವ್ಯಯ ಭಾಷಣದ ಅಧಿವೇಶನದಲ್ಲಿ ಅವಕಾಶ ಕೊಡುತ್ತೇನೆ. ಏಕೆಂದರೆ ಕೆಳಮನೆಯ ಸಭಾಧ್ಯಕ್ಷರವರು ಬಹಳ ಹಿರಿಯರು. ಅವರು ನನಗೆ ನಿಮ್ಮ ಸದನದಲ್ಲಿ ಏಕೆ ಈ ವಿಷಯ ಚರ್ಚೆಯಾಗುವುದಿಲ್ಲ ಎಂದು ಕೇಳುತ್ತಿದ್ದಾರೆ. ಆಯವ್ಯಯ ಭಾಷಣದ ಅಧಿವೇಶನದಲ್ಲಿ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಲೆನಾಡು ಪ್ರದೇಶದಿಂದ ಬಂದಿರುವಂತಹ ಮೂರ್‍ನಾಲ್ಕು ಸದಸ್ಯರಿಗೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಿ. ಏಕೆಂದರೆ ಈ ವಿಚಾರ ಬಹಳ ಪ್ರಮುಖವಾಗಿದೆ. ಸದರಿ ವಿಷಯದ ಬಗ್ಗೆ ಸಭಾಧ್ಯಕ್ಷರು ಮನಸ್ಸಿಗೆ ತುಂಬಾ ನೋವು ಮಾಡಿಕೊಂಡಿದ್ದಾರೆ. ನಿಮ್ಮ ಸಭೆಯಲ್ಲಿ ಏಕೆ ಈ ವಿಷಯ ಚರ್ಚೆ ಮಾಡುವುದಿಲ್ಲವೆಂದು ನನ್ನ ಹತ್ತಿರ personal ಆಗಿ ಮಾತನಾಡುವಾಗ ಹೇಳಿದ್ದಾರೆ. ಈಗ ನೀವು ಪ್ರಸ್ತಾಪ ಮಾಡಿದರೆ ಬಹಳ ಕಷ್ಟವಾಗುತ್ತದೆ. ಸಾಕು ನಿಲ್ಲಿಸಬಿಡಿ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಜಿಲ್ಲೆಯವರಾದಂತಹ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರರವರು ಇವತ್ತು ಸದನದಲ್ಲಿದ್ದಾರೆ. ಹಲವಾರು ವರ್ಷಗಳಿಂದ ನಮ್ಮ ಅಧ್ಯಾಪಕರ ನೇಮಕಾತಿ ನಿಂತು ಹೋಗಿತ್ತು. ಇವತ್ತು ಆ

ನೇಮಕಾತಿಯನ್ನು ಮಾಡಿಕೊಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈಗಾಗಲೇ ಹತ್ತು ವರ್ಷಗಳಿಂದ ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಇಲ್ಲಿಯವರೆಗೆ ಸರ್ಕಾರ ಕೊಟ್ಟಿಲ್ಲ. ಅದರ ಬಗ್ಗೆ ಚಿಂತನೆ ಮಾಡಬೇಕು. ನಮ್ಮ ರಾಜ್ಯಕ್ಕೆ ಕನಿಷ್ಠ 500 ಪ್ರೌಢ ಶಾಲೆಗಳನ್ನು 250 ಪದವಿ ಪೂರ್ವ ಕಾಲೇಜುಗಳನ್ನು ಕೊಡುವಂಥ ಕೆಲಸವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ತಾವು ಸಮಯದ ಅಭಾವ ಇದ್ದರೂ ಕೂಡ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಸಲ್ಲಿಸುತ್ತೇನೆ. ನನಗೆ ಈ ವಂದನೆ ಎನ್ನುವ ಮಾತನ್ನು ಕೇಳುವಾಗ ನಮ್ಮ ನೆಚ್ಚಿನ ಮಾಜಿ ಪ್ರಧಾನಿಗಳಾದ ಸನ್ಮಾನ್ಯ ವಾಜಪೇಯಿಯವರ ಒಂದು ಕವನ ನೆನಪಾಗುತ್ತದೆ. ಅವರು ಏನು ಹೇಳುತ್ತಾರೆಂದರೆ ಈ ದೇಶದ ಬಗ್ಗೆ, ಮಣ್ಣಿನ ಬಗ್ಗೆ ಹೇಳಿದಂಥ ಮಾತಿದು, ***"ಯೇ ವಂದನ್‌ಕೀ ಧರ್ತಿ ಹೈ, ಯೇ ಅಭಿನಂದನ್‌ಕೀ ಧರ್ತಿ ಹೈ, ಯೇ ಅರ್ಪಣ್‌ಕೀ ಧರ್ತಿ ಹೈ, ಯೇ ಸಮರ್ಪಣ್‌ಕೀ ಧರ್ತಿ ಹೈ"*** ಅಂದರೆ, ನಾವೆಲ್ಲಾ ಈ ಮಾತೃ ಭೂಮಿಯ ಬಗ್ಗೆ, ಈ ಮಣ್ಣಿನ ಬಗ್ಗೆ ಯಾವ ಗೌರವ ಇಟ್ಟುಕೊಂಡಿದ್ದೇವೆ, ಯಾವ ಒಂದು ಭಾವನೆ ಇಟ್ಟುಕೊಂಡಿದ್ದೇವೆ ಎನ್ನುವುದನ್ನು ಹೇಳುತ್ತಾರೆ. ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾನು ವಂದನೆ, ಅಭಿನಂದನೆಯನ್ನು ನಿಮಗೆ ಹೇಳುತ್ತೇನೆ. ನಮ್ಮ ಎರಡೂ ಸದನಗಳನ್ನು ಉದ್ದೇಶಿಸಿ ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು ಬಂದು ಭಾಷಣ ಮಾಡಿದರೆ ಅವರಿಗೆ ನಾವು ವಂದನೆ ಹೇಳುತ್ತೇವೆ. ಇದು ನಮ್ಮ ದೇಶದ ಪರಂಪರೆ, ಇದೊಂದು ಸಂಸ್ಕಾರ. ಆದರೆ ನನಗೆ ಏಕೋ ಇತ್ತೀಚೆಗೆ ಒಂದು ಪ್ರಶ್ನೆಯಂತೂ ಕಾಡುತ್ತಿದೆ. ನಾನು 7-8 ವರ್ಷ ಸೇನೆಯಲ್ಲಿ ಕೆಲಸ ಮಾಡಿದ್ದೆ. ಸೈನಿಕನಾಗಿ ಕೆಲಸ ಮಾಡಿರುವುದರ ಬಗ್ಗೆ ನನಗೆ ತುಂಬಾ ಹೆಮ್ಮೆ ಇತ್ತು. ನಾನು ಇಲ್ಲಿಗೆ ಬಂದಾಗ ಸನ್ಮಾನ್ಯ ಎಚ್.ಕೆ.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ನನಗೆ ಮೊದಲು

ಅಭಿನಂದನೆ ಮಾಡಬೇಕಾದರೆ ಒಬ್ಬ ಮಾಜಿ ಸೈನಿಕರಾಗಿ ಈ ಸದನಕ್ಕೆ ಬರುತ್ತಿದ್ದೀರಿ, ತುಂಬಾ ಖುಷಿಯಾಗುತ್ತಿದೆ ಎಂದು ಹೇಳಿದರು. ಆದರೆ ಇತ್ತೀಚೆಗೆ ಏಕೋ ಒಂದು ಪ್ರಶ್ನೆ ಕಾಡುತ್ತಿದೆ. ನಾನು ಏತಕ್ಕಾಗಿ ಸೈನ್ಯಕ್ಕೆ ಸೇರಿದೆ, ನಾನು ಸೈನ್ಯಕ್ಕೆ ಸೇರಿದ್ದು ದೇಶ ಪ್ರೇಮದಿಂದಲೋ, ರಾಷ್ಟ್ರಭಕ್ತಿ ಭಾವನೆಯಿಂದಲೋ, ನಮ್ಮ ಮನೆಯಲ್ಲಿ ಕಡು ಬಡತನ ಇತ್ತು, ನನಗೇನೂ ಉದ್ಯೋಗ ಇರಲಿಲ್ಲ, ಹೊಟ್ಟೆಪಾಡಿಗಾಗಿ ಸೈನ್ಯಕ್ಕೆ ಸೇರಿದನೇ? ಶ್ರೀ ಹನುಮಂತಪ್ಪ 22,000 ಅಡಿ ಎತ್ತರದಲ್ಲಿ, ಮೈನಸ್ 52 ಡಿಗ್ರಿ ಸೆಂಟಿಗ್ರೇಡ್ ತಾಪಮಾನದಲ್ಲಿ ಪಹರೆ ಕೊಡಬೇಕಾದರೆ ಹಿಮಪಾತದಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ. ಅದು ಯಾವ ಯೋಗದ ಮಹಿಮೆಯೋ ಏನೋ ನನಗೆ ಗೊತ್ತಿಲ್ಲ. ಉಳಿದ 9 ಜನರು ತೀರಿಕೊಂಡರೆ ಆತ ಆರು ದಿನಗಳ ನಂತರ ಜೀವ ಇಟ್ಟುಕೊಂಡು ಬದುಕಿ ಬರುತ್ತಾರೆಂದು ನಾವು ಅಂದುಕೊಂಡಿರಲಿಲ್ಲ. ನಾನು ನಿಜ ಹೇಳುತ್ತೇನೆ, ಆ ಭಾಗದಲ್ಲಿ ನಾನು ಕೆಲಸ ಮಾಡಿದ್ದೇನೆ. ಕೊನೆ ಘಳಿಗೆಗೆ ಸೈನಿಕ ಆಸ್ಪತ್ರೆಗೆ ಬರುವವರೆಗೆ ಅವನ ಜೀವ ಇರುವುದು ನೋಡಿದರೆ ಅದೊಂದು ವಿಚಿತ್ರ. ಅವನನ್ನು ಇವತ್ತು ನಾವು ಕೇಳುವುದಕ್ಕಾಗುವುದಿಲ್ಲ. ಅವನಿಗೆ ಬಡತನ ಇದೆ ಎನ್ನುವ ಕಾರಣಕ್ಕಾಗಿ ಸೈನ್ಯಕ್ಕೆ ಸೇರಿದನೇ? ಎಲ್ಲೋ ಒಂದು ಕಡೆ ಪತ್ರಿಕೆ, ಮಾಧ್ಯಮದಲ್ಲಿ ಹೇಳಿಕೆ ಕೊಡುವಾಗ ಸರ್ಕಾರ ಜವಾಬ್ದಾರಿ ಇಟ್ಟುಕೊಂಡು ಮಾತನಾಡಬೇಕಾಗುತ್ತದೆ. ಅದರ ನಂತರದ ಅವಧಿಯಲ್ಲಿ ಹತ್ತು ಜನ ಸೈನಿಕರು ಹಿಮಪಾತದಲ್ಲಿ ತೀರಿ ಹೋದರು. ಇಬ್ಬರು ಕ್ಯಾಪ್ಟನ್ ಜಮ್ಮು-ಶ್ರೀನಗರದ ವ್ಯಾಪ್ತಿಯಲ್ಲಿ ಕ್ಯಾಪ್ಟನ್ ತುಷಾರ್ ಮಹಾಜನ್ ಮತ್ತು ಕ್ಯಾಪ್ಟನ್ ಪವನ್ ಕುಮಾರ್, ಆ ಶತೃಗಳ ಗುಂಡಿಗೆ ಎದೆ ಹೊಡೆದು ಸತ್ತು ಹೋಗುತ್ತಾರೆ. ಅದಾದ ಮೇಲೆ ಒಬ್ಬ ಸೈನಿಕ ಮೋರೆ ದೇಶಕ್ಕಾಗಿ ಬಲಿದಾನ ಆಗುತ್ತಾರೆ. ನಮ್ಮ ಕರ್ನಾಟಕ ರಾಜ್ಯದ ಸೈನಿಕರು ಈ ರೀತಿ ಆಗುತ್ತಿರಬೇಕಾದರೆ ಈ ರಾಜ್ಯದಲ್ಲಿ ಜವಾಬ್ದಾರಿ ಇರುವಂತಹ ವ್ಯಕ್ತಿ ಮಾನ್ಯ ಮುಖ್ಯಮಂತ್ರಿಗಳಿಗೆ ಮಾಧ್ಯಮ ಸಲಹೆಗಾರನಾಗಿರುವಂತಹ ವ್ಯಕ್ತಿ ಸಾರ್ವಜನಿಕವಾಗಿ ಸಭೆಯಲ್ಲಿ ಹೇಳಿಕೆ ಕೊಡುತ್ತಾರೆ, "ಸೇನೆಯಲ್ಲಿರುವಂಥದ್ದು ದೇಶಭಕ್ತಿಯಿಂದ ಸೇರುವುದಲ್ಲ, ಬಡತನದ ಕಾರಣದಿಂದ ಅನಿವಾರ್ಯವಾಗಿ ಸೈನ್ಯಕ್ಕೆ ಸೇರುತ್ತಾರೆ" ಎಂದು ಹೇಳಿಕೆ ಕೊಡುತ್ತಾರೆ. ದುರಾದೃಷ್ಟ ಎಂದು ಹೇಳಿದರೆ ಅವರು ನಮ್ಮ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು. ಈ ಹೇಳಿಕೆಯನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ನಿಮ್ಮ ಊರಿನ ಒಂದು ಕಥೆ ಹೇಳುತ್ತೇನೆ. ಬಾಗಲಕೋಟೆಯ ಹತ್ತಿರ ಬೀಳಗಿ

ಎನ್ನುವ ಊರು ಇದೆ. ಮಾನ್ಯ ಸಭಾನಾಯಕರು ಈಗ ಬಂದರು, ಅವರಿಗೆ ಹೇಳುತ್ತೇನೆ. ನಿಮ್ಮ ಊರಿನ ಪಕ್ಕ ಬೀಳಗಿಯಲ್ಲಿ ಒಬ್ಬ ಮಾಜಿ ಸೈನಿಕ ರಂಗಪ್ಪ ಎನ್ನುವವರು ಇದ್ದರು. ಕಾರ್ಗಿಲ್ ಯುದ್ಧದ ಸಮಯದಲ್ಲಿ ಬಾಂಬ್ ಸ್ಫೋಟವಾಗಿ ಆತ ತನ್ನ ಎರಡು ಕೈ ಕಳೆದುಕೊಳ್ಳುತ್ತಾನೆ, ಅವನಿಗೆ ಒಂದು ಕಾಲು ಇಲ್ಲ, ಆ ಸೈನಿಕನ ದಶಮಾನೋತ್ಸವ ಸಂದರ್ಭದಲ್ಲಿ ಕಾರ್ಕಳದಲ್ಲಿ ಆತನಿಗೆ ಸನ್ಮಾನ ಮಾಡುತ್ತಾರೆ. ಸನ್ಮಾನ ಎಂದರೆ ಹಾರ, ತುರಾಯಿ, ಎಲ್ಲಾ ಇರುತ್ತದೆ. ಅವನಿಗೆ ಸನ್ಮಾನ ಮಾಡಬೇಕಾದರೆ ಕೊನೆಗೆ ಒಂದೆರಡು ಮಾತು ಹೇಳಿ ಎಂದು ಭಾಷಣ ಮಾಡುವುದಕ್ಕೆ ಹೇಳುತ್ತಾರಲ್ಲಾ ಆಗ ಆ ಸೈನಿಕ ಒಂದು ಮಾತನ್ನು ಹೇಳುತ್ತಾರೆ, ಅದನ್ನು ಕೇಳಿದರೆ ಕಣ್ಣೀರು ಬರುತ್ತದೆ. ಅವನು ಹೇಳುತ್ತಾನೆ, ನನಗೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ, ಎರಡು ಕೈ ಕಳೆದುಕೊಂಡಿದ್ದೇನೆ, ಒಂದು ಕಾಲು ಕಳೆದುಕೊಂಡಿದ್ದೇನೆ, ಈಗ ಮತ್ತೆ ನಾನು ಸೈನಿಕ ಆಗುವುದಕ್ಕೆ ಆಗುವುದಿಲ್ಲ, ಆದರೆ ಮತ್ತೆ ಹುಟ್ಟಿ ಬರುತ್ತೇನೆ, ಮತ್ತೆ ಸೈನಿಕ ಆಗುತ್ತೇನೆ ಎಂದು ಹೇಳುತ್ತಾನೆ. ಅವನು ಯಾವ ಕುಟುಂಬ? ಇವತ್ತು ಮಾನ್ಯ ವೀರಯ್ಯನವರು ಉಲ್ಲೇಖ ಮಾಡುತ್ತಿದ್ದರು, ಅವನು ಎಸ್‌ಸಿ ಕುಟುಂಬದವನು. ತಂದೆ ಇಲ್ಲ, ತಾಯಿ ಹಣ್ಣಣ್ಣು ಮುದುಕಿ.

**ಶ್ರೀ ಎಸ್.ಆರ್.ಪಾಟೀಲ್:-** ಅವನು ಎಸ್‌ಸಿ ಕುಟುಂಬ ಅಲ್ಲ. ಹಾಲುಮತ ಜನಾಂಗ. ಅವರು ಬಾದಾಮಿ ತಾಲ್ಲೂಕಿನವರು.

**ಸಭಾಪತಿಯವರು:-** ಅವರ ಬಗ್ಗೆ ಉಲ್ಲೇಖ ಮಾಡಿದ್ದೀರಿ ಸಾಕು. Don't miss the main point.

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದ ದಿವಸ ಅವರಿಗೆ ಸನ್ಮಾನ್ಯ ಮಾಡಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಸೈನಿಕರು ಬಡತನದಿಂದ ಸೈನ್ಯಕ್ಕೆ ಸೇರುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಅವರು ಹಾಲುಮತ ಜನಾಂಗ.

**ಸಭಾಪತಿಯವರು:-** ಅದನ್ನು ತೆಗೆದುಕೊಂಡು ಏನು ಚರ್ಚೆ ಮಾಡುತ್ತೀರಿ, ಮುಂದಕ್ಕೆ ಹೋಗಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಉಲ್ಲೇಖ ಮಾಡಿದೆ ಅಷ್ಟೆ. ನಾನು ಹೇಳುತ್ತಿರುವುದೇನೆಂದರೆ, ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಿಗೆ ಮಾಧ್ಯಮ ಸಲಹೆಗಾರನಾಗಿರುವಂತಹ ವ್ಯಕ್ತಿ ಸಾರ್ವಜನಿಕವಾಗಿ ಹೇಳಿಕೆ ಕೊಡುತ್ತಾರೆ, ಸೈನಿಕರು ದೇಶದ ಸೇವೆಗೆ ಸೇರುತ್ತಿರುವುದು ದೇಶಭಕ್ತಿಯಿಂದಲ್ಲ, ಹೊಟ್ಟೆಪಾಡಿಗಾಗಿ ಅನಿವಾರ್ಯವಾಗಿ ಸೈನ್ಯಕ್ಕೆ ಸೇರುತ್ತಾರೆ ಎಂದು ಹೇಳಬೇಕಾದರೆ ಎಲ್ಲೋ ಒಂದು ಕಡೆ ನನಗನಿಸುತ್ತದೆ, ಈ ಬಡತನವನ್ನೇ ಇವರು ಅವಮಾನ ಮಾಡಿದ್ದಾರೆ.

**ಸಭಾಪತಿಯವರು:-** ಆ ರೀತಿ ಹೇಳಿಕೆ ಕೊಟ್ಟಿರುವುದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಮುಖ್ಯಮಂತ್ರಿಗಳು ಹನುಮಂತಪ್ಪ ಕೊಪ್ಪದವರ.......

**ಸಭಾಪತಿಯವರು:-** ಅವರು ಹೇಳುತ್ತಿರುವುದು ಅದಲ್ಲ, ಅವರು ಹೇಳುತ್ತಿರುವುದು ಮಾಧ್ಯಮ ಸಲಹೆಗಾರರ ಹೇಳಿಕೆಯ ಬಗ್ಗೆ ಚರ್ಚೆ. ಬೇರೆ ವಿಷಯ ಬೇಡ. ಅವರು ಹೇಳಿರುವ ಹೇಳಿಕೆಯ ಬಗ್ಗೆ ಮಾತ್ರ.

(ಮುಂದು)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇವರಿಗೆ 25 ಲಕ್ಷ ರೂಪಾಯಿಗಳ ಹಣ, ಒಂದು ಸೈಟ್, 4 ಎಕರೆ ಜಮೀನು, ಪರಿಹಾರ ರೂಪದಲ್ಲಿ ಒಂದು ಉದ್ಯೋಗ ಕೊಡುವಲ್ಲಿ ನಾವು ಚಿಂತನೆ ಮಾಡಿದ್ದೇವೆ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ನಮ್ಮ ರಾಜ್ಯದ ಎಲ್ಲಾ ಸೈನಿಕರನ್ನು ಅವಮಾನಿಸುವಂತಹ ಕೆಲಸವನ್ನು ಮಾಡಿದ್ದಾರೆ.

**ಸಭಾಪತಿಯವರು:-** ಅದನ್ನು ಖಂಡಿಸುತ್ತೇನೆಂದು ಹೇಳಿದರೆ ಸಾಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಆದ್ದರಿಂದ, ಅಲ್ಲಿ ಅವರನ್ನು ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಮುಂದುವರಿಸಲಿಕ್ಕೆ ಬಿಡಬಾರದು. ಅವರು ಇಡೀ ದೇಶದ ಸೈನಿಕರಿಗೆ ಅವಮಾನ ಮಾಡಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಯಾವುದೇ ಸರ್ಕಾರದ ಮುಖ್ಯಮಂತ್ರಿಗಿಂತ ನಮ್ಮ ಸರ್ಕಾರದ ಮುಖ್ಯಮಂತ್ರಿಗಳು, ಇಷ್ಟು ದೊಡ್ಡ ಪ್ರಮಾಣದಲ್ಲಿ, ದೇಶದ ಭದ್ರತೆಯ, ಅಖಂಡತೆ, ಸಾರ್ವಭೌಮತ್ವಕ್ಕೆ ಜೀವ ಕೊಟ್ಟವರಿಗೆ, ಹುತಾತ್ಮರಾದವರಿಗೆ ದೊಡ್ಡ ಪ್ರಮಾಣದಲ್ಲಿ ಪ್ರೋತ್ಸಾಹವನ್ನು ನೀಡಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಶ್ರೀಯುತ ಎಸ್‌ಆರ್.ಪಾಟೀಲ್‌ರವರೆ, ದಯಮಾಡಿ ಕುಳಿತುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಆ ಮಾತನ್ನು ಇವರು ಹೇಳುತ್ತಾರೆ. ದಯವಿಟ್ಟು, ಆ ಮಾಧ್ಯಮ ಸಲಹೆಗಾರರನ್ನು ಕೆಲಸದಿಂದ ತೆಗೆಸಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಈ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನೋಡುತ್ತೇವೆ. We will enquire.

MR.CHAIRMAN:- You have presented your case. Please sit down. ಈಗ ಮಾನ್ಯ ಉಗ್ರಪ್ಪನವರು ಮಾತನಾಡಬೇಕು.

SRI S.R.PATIL:- I will look into the matter.

SRI RAMACHANDRAGOWDA: Sir,……

**ಸಭಾಪತಿಯವರು:-** ಗೌಡರೆ, ಬೇಡ. ಅವರು ಏನೋ ಹೇಳುತ್ತಾರೆ, ನೀವು ಮತ್ತೇನೋ ಹೇಳುತ್ತಿದ್ದೀರಿ. ನಿಮ್ಮ ಪ್ರಶ್ನೆಗೆ ಅವರು ಉತ್ತರ ಹೇಳಲಿಲ್ಲ. ಯಾರು ಅವರ ಮಾಧ್ಯಮ ಸಲಹೆಗಾರರಿದ್ದಾರೆ, ಅವರ ಬಗ್ಗೆ ಬಿಟ್ಟು, ಮುಖ್ಯಮಂತ್ರಿಗಳು ಏನು ಮಾಡಿದ್ದಾರೆನ್ನುವುದನ್ನು ಹೇಳಿದ್ದಾರೆ. ಅದು, ಇದು ಬೇರೆ ಬೇರೆಯಾಗಿದ್ದು, ಒಂದಕ್ಕೊಂದು ಸಂಬಂಧವಿಲ್ಲ. ಶ್ರೀಯುತ ಉಗ್ರಪ್ಪನವರು ಮಾತನಾಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಆ ರೀತಿಯಲ್ಲಿ ಹೇಳಿಕೆ ಕೊಟ್ಟವರು ಅಲ್ಲಿ ಮುಂದುವರಿಯಬಾರದು. ಸರ್ಕಾರದಲ್ಲಿ ಅವರು ಮಾಧ್ಯಮ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಕ್ಯಾಪ್ಟನ್ ಕಾರ್ಣಿಕ್‌ರವರೆ, ತಾವು ಹೇಳಿದ್ದೀರಿ, ಅವರು ಯಾವಾಗ ಹೇಳಿದ್ದಾರೆ, ಹೇಗೆ ಹೇಳಿದ್ದಾರೆ, ಅವರು ಹೇಳಿದ್ದು ಸರಿಯೋ, ತಪ್ಪೋ ಅದೆಲ್ಲವನ್ನು ನಾವು ವಿಚಾರಣೆ ಮಾಡುತ್ತೇವೆ.

**ಸಭಾಪತಿಯವರು:-** ಸರಿ. ಈಗ ಶ್ರೀಯುತ ಉಗ್ರಪ್ಪನವರು ಮಾತನಾಡಬೇಕು. ಶ್ರೀಯುತ ಉಗ್ರಪ್ಪನವರು ಮಾತನಾಡುತ್ತಾರೆ, ಮಧ್ಯೆ ಬಾಯಿ ಹಾಕಬೇಡಿ.

**ಶ್ರೀ ಎಸ್.ಆರ್.ಪಾಟೀಲ್:-** ನೋಡಿ ಗೌಡರೆ, ನಮ್ಮ ಸರ್ಕಾರ, ಸೈನಿಕರ ಬಗ್ಗೆ, ಈ ದೇಶಕ್ಕಾಗಿ ಮಡಿದಂತಹ ಯೋಧರ ಬಗ್ಗೆ, ಇನ್ನು ಯಾವುದೇ ಸರ್ಕಾರದ ಮುಖ್ಯಮಂತ್ರಿಗಳು ಈ ರೀತಿಯ

ಪ್ರೋತ್ಸಾಹಧನವನ್ನು ಅವರ ಕುಟುಂಬ ವರ್ಗದವರಿಗೆ ಸಹಾಯ ಮಾಡಿರುವುದಿಲ್ಲ. ಮಾಧ್ಯಮ ಸಲಹೆಗಾರರು ಈ ರೀತಿಯಲ್ಲಿ ಮಾತನಾಡಿದ್ದಾರೆಂದು ಹೇಳಿ. . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಾನು ಸರ್ಕಾರದ ಬಗ್ಗೆ ಅಪಾದನೆ ಮಾಡಿಲ್ಲ. ನಾನು ಆ ವ್ಯಕ್ತಿ ಬಗ್ಗೆ ಮಾತ್ರ ಮಾತನಾಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾಧ್ಯಮ ಸಲಹೆಗಾರರ ಬಗ್ಗೆ ತಾವು ಏನು ಹೇಳಿದಿರಿ, ಅದರ ಬಗ್ಗೆ ನಾವು ವಿಚಾರಣೆ ಮಾಡುತ್ತೇವೆ.

**ಸಭಾಪತಿಯವರು:–** ಆಯಿತು. ಎಲ್ಲರೂ ಕುಳಿತುಕೊಳ್ಳಿ. ಶ್ರೀಯುತ ಉಗ್ರಪ್ಪನವರು ಶುರು ಮಾಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಅವಕಾಶ ನೀಡಿದ್ದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ. ಸಂವಿಧಾನದ ಆರ್ಟಿಕಲ್ 176 ಪ್ರಕಾರ, ರಾಜ್ಯಪಾಲರು ವರ್ಷದ ಮೊದಲನೆ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಅವರ ಭಾಷಣದ ಮೇಲೆ ಆರ್ಟಿಕಲ್ 176 ನಲ್ಲಿ ಒಂದು ವಾಕ್ಯವನ್ನು ಓದಲಿಕ್ಕೆ ಬಯಸುತ್ತೇನೆ.

***"176. Special address by the Governor*** *- (2) Provision shall be made by the rules regulating the procedure of the House or either House for the allotment of time for discussion of the matters referred to in such address."*

ಅದರಲ್ಲಿ ಏನೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆ ವಿಚಾರಗಳ ಬಗ್ಗೆ ವಂದನಾ ನಿರ್ಣಯದ ಮೂಲಕ ನಾವು ಪ್ರಸ್ತಾಪ ಮಾಡುವಂತಹದ್ದಕ್ಕೆ ಸಂವಿಧಾನದ ಆರ್ಟಿಕಲ್ 176 mandate ಮಾಡುತ್ತದೆ. ಬಹುಶ: ಈ ಸಂಪ್ರದಾಯ 1921 ರಿಂದ ನಮ್ಮ ದೇಶದಲ್ಲಿ ಇದೆ. 1919 ರ ಗೌರ್ನಮೆಂಟ್ ಆಫ್ ಇಂಡಿಯಾದ ಆಕ್ಟ್ ಏನಿತ್ತು, ಆ ಆಕ್ಟ್ ಪ್ರಕಾರ 1921 ರಿಂದ 1946 ರವರೆಗೆ ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳಲ್ಲಿ ಈ ರೀತಿಯ ಭಾಷಣಗಳು ಆಗುತ್ತಿತ್ತು. 1947ರಿಂದ 1950 ರವರೆಗೆ ಈ ರೀತಿಯ ಭಾಷಣಗಳು ಆಗಿರುವಂತಹದ್ದು, ಅಥವಾ ವಂದನಾ ನಿರ್ಣಯಗಳು ಆಗಿರುವಂತಹ ಉಲ್ಲೇಖಗಳಿರುವುದಿಲ್ಲ. ಆದರೆ, 1950 ರಲ್ಲಿ ನಾವು ಸಂವಿಧಾನವನ್ನು ತೆಗೆದುಕೊಂಡ ಮೇಲೆ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ

ಸರ್ಕಾರಗಳಿಗೆ, ವಿಶೇಷವಾಗಿ ರಾಜ್ಯ ಸರ್ಕಾರಕ್ಕೆ ಆರ್ಟಿಕಲ್ 176 ರಲ್ಲಿ ಅಡ್ರೆಸ್ ಮಾಡುವಂತಹ ಭಾಷಣ ಏನಿದೆ, ಅದು it is a statement of the policy of the Government which includes ಹಿನ್ನೋಟ ಮತ್ತು ಮುನ್ನೋಟ ಹಿಂದೆ ಏನೆಲ್ಲಾ ಮಾಡಿದ್ದೇವೆ, ಮುಂದೆ ನಮ್ಮ ಸರ್ಕಾರ ಸಂವಿಧಾನದ Preambleನಲ್ಲಿ ಸರ್ವರಿಗೂ ಸಮಪಾಲು, ಸಮಬಾಳು, ಸಮಾನ ಅವಕಾಶದ ಸುಖಿ ರಾಜ್ಯವನ್ನು ಸ್ಥಾಪನೆ ಮಾಡತಕ್ಕಂತಹ ಉದ್ದೇಶದಿಂದ ನಮಗೆ ಅಧಿಕಾರ ಕೊಟ್ಟಂತಹ ಜನರಿಗೆ ನಾವು ನೀಡಿರುವಂತಹ ಆಶ್ವಾಸನೆಗಳನ್ನು ಯಾವ ರೀತಿಯಲ್ಲಿ ಈಡೇರಿಸುತ್ತೇವೆ ಎನ್ನುವಂತಹ ವಿಚಾರದಲ್ಲಿ ಈ ಪಾಲಿಸಿ ಡಾಕ್ಯೂಮೆಂಟ್ ಪ್ಲೇಸ್ ಮಾಡುತ್ತಾರೆ.

ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ನಾನು ಹೆಚ್ಚು ನಂಬಿಸಲಿಕ್ಕೆ ಹೋಗುವುದಿಲ್ಲ. ಸರ್ಕಾರ ಅಧಿಕಾರಕ್ಕೆ ಬಂದು ಎರಡುವರೆ ವರ್ಷಗಳಾಗಿದ್ದು, ಈ ಅವಧಿಯಲ್ಲಿ ಚುನಾವಣೆ ಸಂದರ್ಭದಲ್ಲಿ ನೀಡಿದಂತಹ ಸುಮಾರು 165 ಆಶ್ವಾಸನೆಗಳಲ್ಲಿ 100 ಆಶ್ವಾಸನೆಗಳಿಗೂ ಹೆಚ್ಚು ಆಶ್ವಾಸನೆಗಳನ್ನು ಈಡೇರಿಸುವಂತಹದ್ದನ್ನು ಹೇಳಿದ್ದು, ನಾನು ಅದನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಈ ಸಮಯದಲ್ಲಿ ನಾನು ಸಾಮಾಜಿಕ ನ್ಯಾಯಕ್ಕೆ ಸಂವಿಧಾನದ Preamble read with the provision of Article 15, 16, 332, 342 of the Constitution of India ಇದರಲ್ಲಿ ಇರುವಂತಹ, ಒಂದು ಕಡೆ ದಲಿತರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗಗಳು, ಹಾಗೆಯೇ ಬಡವರಿಗೆ, ಇವರುಗಳಿಗೆ ಸಮಾನ ಅವಕಾಶ ಕೊಡುವಂತಹ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಇವತ್ತು ರೂಪಿಸಿರುವಂತಹದ್ದನ್ನು ಈಗಾಗಲೇ ಅನೇಕ ನನ್ನ ಸನ್ಮಿತ್ರರು ವಿಶ್ಲೇಷಣೆ ಮಾಡಿದ್ದಾರೆ. ಒಂದು ಕಡೆ ಯಾವ ಆಹಾರ ಖಾತ್ರಿ ಅಥವಾ ಅನ್ನ ಭಾಗ್ಯದ ಮೂಲಕ, ಕ್ಷೀರ ಭಾಗ್ಯದ ಮೂಲಕ ಸಾಲ ಮನ್ನಾ ಮಾಡುವ ಮೂಲಕ ನೀರಾವರಿಗೆ ಪ್ರತಿವರ್ಷ 10,000 ಕೋಟಿ ರೂಪಾಯಿಗಳನ್ನು ನಿಗದಿ ಮಾಡುವ ಮೂಲಕ, ಸುಮಾರು 12 ಸಾವಿರ ಕಿ.ಮೀ ರಸ್ತೆಗಳನ್ನು ದುರಸ್ತಿ ಮಾಡಿ, ಉತ್ತಮ ರಸ್ತೆಗಳನ್ನು ನೀಡುವಂತಹದ್ದರ ಮೂಲಕ ಸಮಾಜದ ಎಲ್ಲಾ ವರ್ಗದ ಹಿತವನ್ನು ಕಾಪಾಡುವಂತಹದ್ದಕ್ಕೆ ಈ ಸರ್ಕಾರ ಈ ಒಂದು ಕಾರ್ಯಕ್ರಮವನ್ನು ರೂಪಿಸಿದೆ.

ಇನ್ನು ಅಹಿಂದ ವಿಷಯದ ಬಗ್ಗೆ ಬಹಳಷ್ಟು ಜನರು ಹೇಳುತ್ತಾರೆ. ಅಹಿಂದ ಎಂದು ಹೇಳಿದರೆ ಒಂದು ಕಡೆ ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ

ಸಂವಿಧಾನದ ಆರ್ಟಿಕಲ್ 332 ಮತ್ತು 342 ಈ ಮಧ್ಯೆ ಬರತಕ್ಕಂತಹದ್ದರಲ್ಲಿ ಆಂಗ್ಲೋ ಇಂಡಿಯನ್ ಸೇರುತ್ತಾರೆ, ಎಸ್.ಸಿ.ಗಳು ಸೇರುತ್ತಾರೆ, ಎಸ್.ಟಿ.ಗಳು ಸೇರುತ್ತಾರೆ, ಓಬಿಸಿ.ಗಳು ಸೇರುತ್ತಾರೆ.

ಮಾನ್ಯ ಸಭಾಪತಿಯವರೆ, ನಾನು ಇದನ್ನು ಹೆಚ್ಚು ಬಳಸಲಿಕ್ಕೆ ಹೋಗುವುದಿಲ್ಲ. 1974 ರಲ್ಲಿ ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರು, ರಾಷ್ಟ್ರದ ಎಲ್ಲಾ ರಾಜ್ಯಗಳ ಸೋಸಿಯಲ್ ವೆಲ್‌ಫೇರ್ ಮಿನಿಸ್ಟರ್‌ಗಳನ್ನು ಕರೆದು ಕಾನ್ಫರೆನ್ಸ್ ಮಾಡಿ, ಅಂದು ಡಿಕ್ಲೇರ್ ಮಾಡುತ್ತಾರೆ. ರಾಷ್ಟ್ರದ ಎಲ್ಲಾ ರಾಜ್ಯಗಳ ಬಜೆಟ್‌ನಲ್ಲಿ ಅಲೋಕೇಷನ್ಸ್ so far as Scheduled Castes and Scheduled Tribes are concerned ಅವರ ಜನಸಂಖ್ಯೆಗೆ ಅನುಗುಣವಾಗಿ proportionate to the population, allocation has to be made ಎಂದು ಹೇಳಿ as early as 1974 a decision was taken.

**ಮುಂದು. . .**

(ಸಭಾಪತಿಯವರ ಉಪಸ್ಥಿತಿ)

ಶ್ರೀ ವಿ.ಎಸ್.ಉಗ್ರಪ್ಪ(ಮುಂದುವರೆದುದು ...

ಆದರೆ 2013ರವರೆಗೆ ಈ ದೇಶದ ಇತಿಹಾಸದಲ್ಲಿ ಯಾವುದೇ ರಾಜ್ಯ ಈ ರೀತಿ ಜನಸಂಖ್ಯೆಗೆ ಅನುಗುಣವಾಗಿ ಅಲೋಕೇಷನ್ ಮಾಡಿರುವಂಥದ್ದು ಯಾವುದೂ ಇಲ್ಲ ಎಂಬುದನ್ನು ಅತ್ಯಂತ ನಿರ್ವಿಕಾರ ಭಾವನೆಯಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. 2013ರಲ್ಲಿ ಈ ರಾಜ್ಯದಲ್ಲಿ ಎಸ್.ಸಿ./ಎಸ್.ಟಿ. ಜನಸಂಖ್ಯೆಗೆ ಅನುಗುಣವಾಗಿ ಅಲೋಕೇಷನ್ ಆಗಬೇಕೆಂದು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಕಾನೂನನ್ನು ತಂದಿರುವ ಮೂಲಕ, ಅದೇರೀತಿ ಆಂದ್ರ ಪ್ರದೇಶ ಸರ್ಕಾರ ಸಹ ಆ ರೀತಿಯ ಒಂದು ಕಾನೂನನ್ನು ತಂದಿದೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸಬಯಸುವುದೇನೆಂದರೆ, ಸ್ವರ್ಗವನ್ನೇ ಭುವಿಗಿಳಿಸಿದ್ದೇವೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರದ ಮೈಂಡ್‌ಸೆಟ್, ಸರ್ಕಾರದ ಯೋಚನೆ ಮತ್ತು ಬದ್ಧತೆ ಇದರ ಮೂಲಕ ಸ್ಪಷ್ಟವಾಗುತ್ತದೆ. ಒಂದು ವರ್ಷಕ್ಕೆ 7800 ಕೋಟಿ ಇದ್ದಂತಹ ಅನುದಾನ ಈ ಕಾನೂನಿನಿಂದ 16300 ಕೋಟಿ ರೂಪಾಯಿಗಳ ವೆಚ್ಚವನ್ನು ಎಸ್.ಸಿ./ಎಸ್.ಟಿ. ಜನಾಂಗದವರಿಗೆ ನೀಡುವುದಕ್ಕೆ ಪ್ರಾಮಾಣಿಕ ಬದ್ಧತೆಯನ್ನು ತೋರಿದೆ. ಅದಕ್ಕಾಗಿ ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ನಾನು ಸರ್ಕಾರವನ್ನು ಅಭಿನಂದಿಸುವುದಕ್ಕೆ ಬಯಸುತ್ತೇನೆ.

ಯಾವ ಅಹಿಂದ ಅಥವಾ ಅಲ್ಪಸಂಖ್ಯಾತರಿದ್ದಾರೆ, ಇವರ ಬಗ್ಗೆ ಇಂದಿರಾ ಸಹಾನಿ ಪ್ರಕರಣದಲ್ಲಿ ಮಂಡಲ ವರದಿಯ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ 9 ನ್ಯಾಯಾಧೀಶರ ಪೀಠ ಕೊಟ್ಟಂತಹ ತೀರ್ಪಿನ ಆಧಾರದ ಮೇಲೆ there shall be a permanent Backward Class Commission in each and every State ಎಂದು that is the decision of the Supreme Court of India. ಬಹುಶಃ ಆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ಗೆ, ಒಂದು omission ಗೆ, ಇನ್ನೊಂದು addition ಗೆ ಅಂದರೆ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿಸಲಿಕ್ಕೆ, ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಮುಂದುವರೆದ ಜನಾಂಗದವರಿದ್ದರೆ ಅದನ್ನು ತೆಗೆದು ಹಾಕಲಿಕ್ಕೆ, ಇನ್ನೊಂದು ಅವರ ವೆಲ್‌ಫೇರ್ ನ್ನು ನೋಡಲಿಕ್ಕೆ supervisory powers ನ್ನು ಕೊಟ್ಟಿರುವಂಥದ್ದು ಆ ಕಾಯಿದೆಯಲ್ಲಿರತಕ್ಕಂಥದ್ದನ್ನು ನಾವು ಗಮನಿಸಬೇಕು. ಇದರ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ರೂವಾರಿಗಳಾಗಿದ್ದಂತಹ ಒಂದು ಕಡೆ ಸನ್ಮಾನ್ಯ ದೇವರಾಜ ಅರಸುರವರು, ಇನ್ನೊಂದು ಕಡೆ ಸನ್ಮಾನ್ಯ ವಿ.ಪಿ.ಸಿಂಗ್‌ರವರು, ಇಲ್ಲಿ ಸನ್ಮಾನ್ಯ ದೇವರಾಜ ಅರಸುರವರು ಎಲ್.ಜಿ.ಹಾವನೂರ್‌ರವರ ಮೂಲಕ ಒಂದು ಹೊಸ ಮನ್ವಂತರವನ್ನು ಹೇಗೆ ಬರೆದರೋ

ಅದೇರೀತಿ ಈ ರಾಜ್ಯದಲ್ಲಿ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿಗಳ ಮಾಹಿತಿಯನ್ನು ಪಡೆಯುವ ಮೂಲಕ ಸಮಾಜದ ಬದಲಾವಣೆಗೆ ಹೊಸ ಮನ್ವಂತರವನ್ನು ಬರೆಯುವುದಕ್ಕೆ ಈ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮೂಲಕ ಒಂದು ಸಮೀಕ್ಷೆಯನ್ನು ಮಾಡಿ ನಿಜ ಸ್ಥಿತಿಯನ್ನು ತಿಳಿದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುವಂತಹ ಬದ್ಧತೆಯನ್ನು ಯಾವುದಾದರೂ ಸರ್ಕಾರ ತೋರಿದ್ದರೆ ಅದು ಇವತ್ತಿನ ಸರ್ಕಾರ, ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಎಂದು ಹೇಳುವುದಕ್ಕೆ ಅತ್ಯಂತ ಸಂತೋಷ ಪಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಆದರೆ, ಆ ಬಗ್ಗೆ ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಉಲ್ಲೇಖ ಇಲ್ಲದಿರುವುದು ದುರ್ದೈವ.

**ಶ್ರೀ ವಿ.ಎಸ್.ಉಗ್ರಪ್ಪ:-** ನಿರ್ದಿಷ್ಟವಾಗಿ ಅದನ್ನು ಹೇಳದಿದ್ದರೂ ಸಹ ಸಾಮಾಜಿಕ ನ್ಯಾಯ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣದ ಬಗ್ಗೆ ಪ್ರಸ್ತಾಪ ಮಾಡುವುದರಲ್ಲಿ ಆ ಚೌಕಟ್ಟಿನಲ್ಲಿ ನಾವು ಇದನ್ನು ತೆಗೆದುಕೊಳ್ಳಬೇಕೇ ಹೊರತು ಎಲ್ಲವನ್ನೂ ಸಹ ಹೇಳುವುದಕ್ಕೆ ಹೋದರೆ ಸನ್ಮಾನ್ಯ ರಾಜ್ಯಪಾಲರ ಭಾಷಣ ಸುಮಾರು 1000 ಪುಟಗಳ ಡಾಕ್ಯುಮೆಂಟ್ ಆಗಬಹುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಪಾಲಿಸಿ ಮುಂದೆ ಮಾಡುವಂತಹ ಪಾಲಿಸಿಗಳನ್ನು ಅನುಷ್ಠಾನ ಮಾಡಬೇಕೆನ್ನುವುದು. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿತ್ತು, ಅದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಅಲ್ಲದೆ, ಈ ಸಮೀಕ್ಷೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ ಎನ್ನುವ ಬಗ್ಗೆ ಕೂಡ ಮಾಹಿತಿ ಇಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಇರಲಿ, ಇವತ್ತು ಆ ಮಾಹಿತಿಗಳನ್ನೇನು ಪಡೆದಿದ್ದಾರೆ, ನಾನು ಈಗಾಗಲೇ ತಿಳಿಸಿರುವಂತೆ ಸನ್ಮಾನ್ಯ ರಾಜ್ಯಪಾಲರ ಭಾಷಣ, it is a policy statement of the State Government. Based on that policy statement, there shall be allocation of funds in the Budget. ಅದನ್ನು ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 176 ತಾಲ್ಲೂಕುಗಳಿದ್ದು, ಅದರಲ್ಲಿ 136 ತಾಲ್ಲೂಕುಗಳು ಬರಪೀಡಿತ ಎಂದು ಘೋಷಣೆಯಾಗಿವೆ. ಈ ರೀತಿ ಘೋಷಣೆಯಾಗಿರುವಂತಹ ಹಿನ್ನೆಲೆಯಲ್ಲಿ ಈ ವರ್ಷ ಸುಮಾರು 28 ಲಕ್ಷ ರೈತರು ಅವರ ಬೆಳೆ, ಜಾನುವಾರುಗಳು ಮತ್ತಿತರ ಸಂಪತ್ತಿನ

ಬಗ್ಗೆ ಬೆಲೆ ಕಟ್ಟಿದರೆ ಸುಮಾರು 12,000 ಕೋಟಿಗೂ ಹೆಚ್ಚು ನಷ್ಟವಾಗಿರುವುದಾಗಿ ದಾಖಲೆಗಳಿಂದ ತಿಳಿದುಬರುತ್ತಿದೆ. ನಮ್ಮ ಪ್ರಕೃತಿ ವಿಕೋಪ ನಿಯಮಗಳ ಪ್ರಕಾರ ಇವತ್ತೇನಾದರೂ ಲೆಕ್ಕಾಚಾರ ಮಾಡಿದ್ದರೆ ಅದರ ಹಿನ್ನೆಲೆಯಲ್ಲಿ, NDRF (National Disaster Response Fund) and SDRF (State Disaster Response Fund) 28 ಲಕ್ಷ ರೈತರ ಬೆಳೆ ಹಾನಿಯಿಂದ ನಾರ್ಮ್ಸ್ ಪ್ರಕಾರ ಸುಮಾರು 3800 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಅಂದಾಜಿಸಲಾಗಿದ್ದು, ಆ ಮೊತ್ತವನ್ನು ಕೇಂದ್ರ ಸರ್ಕಾರವನ್ನು ಕೇಳಿದ್ದಾರೆ. ಕೇಂದ್ರ ಸರ್ಕಾರದ ಸಮಿತಿಗಳು ಇಲ್ಲಿಗೆ ಭೇಟಿ ಕೊಟ್ಟು ಪರಿಶೀಲಿಸಿ ವರದಿಯನ್ನು ನೀಡಿದ್ದು, ಕೇಂದ್ರ ಸರ್ಕಾರ 1500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದನ್ನು ನಾನು ಸಹ ಒಪ್ಪುತ್ತೇನೆ.

ನಮ್ಮ ಫೆಡರಲ್ ಸಿಸ್ಟಮ್‌ನಲ್ಲಿ ಎಲ್ಲ ರಾಜ್ಯಗಳು ಅಭಿವೃದ್ಧಿಯಾಗದಿದ್ದರೆ ರಾಷ್ಟ್ರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ; ಎಲ್ಲ ರಾಜ್ಯಗಳು ಕೂಡ ಅಭಿವೃದ್ಧಿಯನ್ನು ಹೊಂದಿದಾಗ ಮಾತ್ರ ನಮ್ಮ ಭಾರತ ದೇಶ ಅಭಿವೃದ್ಧಿಯನ್ನು ಕಾಣಲು ಸಾಧ್ಯವಿದೆ. ಕೇಂದ್ರದ ಸುಮಾರು 1500 ಕೋಟಿ ರೂಪಾಯಿಗಳ ಜೊತೆಗೆ ಈಗಾಗಲೇ ರಾಜ್ಯ ಸರ್ಕಾರ 26.31 ಲಕ್ಷ ರೈತರಿಗೆ 1066 ಕೋಟಿ ರೂಪಾಯಿಗಳ ಪರಿಹಾರವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ. ಇನ್ನುಳಿದಿರುವಂತಹ ರೈತರು ಯಾರಿದ್ದಾರೆ, ಕೆಲವು ಕಡೆ multiple claims ಇವೆ, ಕೆಲವರು ಗುಳೆ ಹೋಗಿದ್ದಾರೆ, ಕೆಲವರು ಮಾಹಿತಿಗಳನ್ನು ಒದಗಿಸಲಿಲ್ಲ. ಈಗಾಗಲೇ ರಾಜ್ಯ ಸರ್ಕಾರ 1578 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, ಕುಡಿಯುವ ನೀರು ಮತ್ತು ಮೇವಿಗಾಗಿ 512 ಕೋಟಿ ರೂಪಾಯಿಗಳನ್ನು ನೀಡಿದೆ. ಇದು ಕೇವಲ ತಾತ್ಕಾಲಿಕ ಪರಿಹಾರವಾಗಿದ್ದು, ಬಹುಶಃ ನನಗನಿಸುತ್ತದೆ. We have to change our attitude, we have to change our system or thinking because every year we see drought in one or the other place. ಬಹುಶಃ ಶಾಶ್ವತವಾದಂತಹ ಪರಿಹಾರವನ್ನು ಈ ರಾಷ್ಟ್ರದಲ್ಲಿ ರೂಪಿಸದಿದ್ದರೆ ಈ ಸಮಸ್ಯೆಗಳಿಗೆ ಯಾವುದೇ ಮದ್ದು ಇಲ್ಲದಂತಾಗುತ್ತದೆ. ಇದು ರಾಜ್ಯ ಸರ್ಕಾರವೊಂದರ ಜವಾಬ್ದಾರಿ ಮಾತ್ರವಲ್ಲ, ಕೇಂದ್ರ ಸರ್ಕಾರದ ಜವಾಬ್ದಾರಿ ಕೂಡ ಇದೆ. ಇವತ್ತು ಖಚ್ಚಾ ತೈಲದ ಬೆಲೆ ಕಡಿಮೆಯಾಗಿರುವುದರಿಂದ 2013ರಲ್ಲಿ ಒಂದು ಬ್ಯಾರಲ್‌ಗೆ 139 ಡಾಲರ್ ಇದ್ದದ್ದು, ಇವತ್ತು ಕೇವಲ 29 ರಿಂದ 30 ಡಾಲರ್‌ಗೆ ಬಂದಿದೆ.

(ಮುಂದುವರೆದಿದೆ ...

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಇವತ್ತಿನ ದಿವಸ ಒಂದು ವರ್ಷಕ್ಕೆ ಕೇಂದ್ರ ಸರ್ಕಾರಕ್ಕೆ ಎರಡು ಲಕ್ಷ ಕೋಟಿ ರೂಪಾಯಿಗಳು ಉಳಿತಾಯವಾಗುತ್ತಿದೆ. During the recent budget service cess has been imposed. ಯಾವ ಸೆಸ್‌ಗಳಿವೆ, ಅಂದರೆ ಎರಡು ಲಕ್ಷ ಕೋಟಿ ಮತ್ತು ಈಗ ಇಂಪೋಸ್ ಮಾಡಿರುವಂತಹ ಸೆಸ್. ಈ ಡಿವಿಶನ್ ಪೂಲ್‌ಗಳೇನಿವೆ ಇದರಲ್ಲಿ ರಾಜ್ಯ ಸರ್ಕಾರಗಳಿಗೆ ಕೊಡುವಂಥದ್ದಕ್ಕೆ ಬರುವುದಿಲ್ಲ. ಏನಿದ್ದರೂ ಕೇಂದ್ರ ಸರ್ಕಾರಕ್ಕೆ ಇದೆ. ಆದಕಾರಣ ನಿಮ್ಮ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಡೀಸಲ್ ಮತ್ತು ಪೆಟ್ರೋಲ್ ಮೇಲೆ ಹಾಕಿರುವಂತಹ ಸೆಸ್ ಮತ್ತು ಸರ್ವೀಸ್ ಸೆಸ್ ನಿಂದಾಗಿ ಕೇಂದ್ರ ಸರ್ಕಾರಕ್ಕೆ ಪ್ರತೀ ವರ್ಷ 2 ಲಕ್ಷ ಕೋಟಿ ರೂಪಾಯಿ ಸೇವಿಂಗ್ಸ್ ಆಗುತ್ತಿದೆ. ಆದಕಾರಣ ರಾಷ್ಟ್ರದಲ್ಲಿ "ಶಾಶ್ವತ ಪ್ರಕೃತಿ ವಿಕೋಪ ತಡೆ" ಪ್ರಾಧಿಕಾರವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಸ್ಥಾಪನೆ ಮಾಡಬೇಕು. "ಶಾಶ್ವತ ಪ್ರಕೃತಿ ವಿಕೋಪ ತಡೆ" ಪ್ರಾಧಿಕಾರಕ್ಕೆ ಈ 2 ಲಕ್ಷ ಕೋಟಿ ರೂಪಾಯಿ ಏನಿದೆ, ಇವತ್ತು ಏನು River inter-linking Project ಎಂದು as early as in 1978 ಮಾನ್ಯ ಮುರಾರ್ಜಿ ದೇಸಾಯಿಯವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಈ ದೇಶದ ಜನತೆಯ ಮುಂದೆ ಇಟ್ಟರು. ಆ ಯೋಜನೆ ನೆನಗುದಿಗೆ ಬೀಳದೆ, ಇಲ್ಲಿ ಉಳಿತಾಯವಾಗುವಂತಹ ಸುಮಾರು ಎರಡೂವರೆ ಲಕ್ಷ ಕೋಟಿ ಹಣವನ್ನು ಕೂಡಲೆ ಕೇಂದ್ರ ಸರ್ಕಾರ ಗಂಗಾ ಕಾವೇರಿ, ಕೃಷ್ಣ, ಗೋದಾವರಿ ಇನ್ನಿತರ ನದಿಗಳ ಲಿಂಕಿಂಗ್ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕೆಂದು ನಮ್ಮ ಸದನ ಒಕ್ಕೊರಳಿನ ತೀರ್ಮಾನವನ್ನು ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು ಎಂಬ ಮಾತನ್ನು ಹೇಳಬಯಸುತ್ತೇನೆ.

**Sri B.J.PUTTASWAMY:** It is fluctuating Fund. It is not permanent fixed income to the exchequer.

**MR.CHAIRMAN:** Please do not interrupt the hon.Member. Let us hear his opinion.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಅವರ ಕಡೆ ಬೆರಳು ತೋರಿಸಿ ಅವರೇ ಮಾಡಬೇಕೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 4 ಸಾವಿರ ಟಿಎಂಸಿ ವಾಟರ್ ಎಲ್ಲಾ ಮೂಲಗಳಿಂದ ಲಭ್ಯವಾಗುತ್ತಿದೆ. We have been able to utilise only 2000 tmc of water. ಇನ್ನು 2 ಸಾವಿರ ಟಿಎಂಸಿ ವಾಟರ್ ಪಶ್ಚಿಮ ಘಟ್ಟಗಳ ಮೂಲಕ ಇವತ್ತಿನ ದಿವಸ ಸಮುದ್ರದ ಪಾಲಾಗುತ್ತಿದೆ. ಇಲ್ಲಿ ಮಾನ್ಯ ಎಂ.ಬಿ.ಪಾಟೀಲರು ಇದ್ದಾರೆ, ಬಹುಶಃ ಮಾನ್ಯ ಕೆ.ಪ್ರತಾಪಚಂದ್ರಶೆಟ್ಟಿ ಮತ್ತು ಆ ಭಾಗದ ಜನರು ಸಂಕುಚಿತರಲ್ಲ. ಅವರುಗಳು ಅತ್ಯಂತ ವಿದ್ಯಾವಂತರು, ಸಹೃದಯಿಗಳು. ಅವರು ಅರ್ಥ ಮಾಡಿಕೊಳ್ಳುತ್ತಾರೆ ಈ ನೀರನ್ನು ಸದ್ಬಳಕೆ ಮಾಡಿಕೊಳ್ಳುವ ದೃಷ್ಟಿಯಿಂದ ಕಾವೇರಿ, ಕೃಷ್ಣ, ಗೋದಾವರಿ ಮತ್ತು ಪಶ್ಚಿಮ ಘಟ್ಟಗಳ ಲಿಂಕನ್ನು ಮಾಡುವುದಕ್ಕೆ ಒಂದು ಪ್ರಾಧಿಕಾರ ಮಾಡಬೇಕು, ನಮ್ಮ ಬಜೆಟ್ ಅಲೋಕೇಶನ್‌ನಲ್ಲಿ, Sir, every year in our Budget atleast Rs. 25000 crores will have to be allocated for this. ಇದರ ಜೊತೆಗೆ ಪರಿಸರ ಉಳಿಯಬೇಕು ಎನ್ನುವುದಾದರೆ ಪ್ರತೀ ವರ್ಷ ಕನಿಷ್ಠ 5 ಕೋಟಿ ಗಿಡಗಳನ್ನು...

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ಮಧ್ಯೆ ಮಾತನಾಡುತ್ತಿದ್ದೇನೆಂದು ತಪ್ಪು ತಿಳಿಯಬೇಡಿ. ನೀವು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದಿರಿ. ಅದನ್ನು 25 ಸಾವಿರ ಕೋಟಿಗೆ ಬಿಟ್ಟುಬಿಟ್ಟಿರಿ. ನಂತರ ಪರಿಸರಕ್ಕೆ ಹೋದಿರಿ. ನಿಮಗೆ ಸಮಯದ ಅಭಾವ ಗೊತ್ತಿದೆ. ಆ ವಿಷಯದ ಬಗ್ಗೆ ಇನ್ನಷ್ಟು ಹೇಳಿ ರಿವರ್ ಲಿಂಕಿಗ್ ಬಗ್ಗೆ ನೀರಿನ ಉಪಯೋಗದ ಬಗ್ಗೆ ಇನ್ನಷ್ಟು ವಿಷಯ ಹೇಳಿ ಮುಗಿಸಿದರೆ ತುಂಬಾ ಚೆನ್ನಾಗಿರುತ್ತದೆ ಅಲ್ಲವೆ. ಅದು ಬಿಟ್ಟು ಪರಿಸರದ ವಿಷಯದ ಬಗ್ಗೆ ಏಕೆ ಹೋಗುತ್ತೀರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇನ್ನೆರಡು ಪಾಯಿಂಟ್ ಹೇಳಿ ಮುಗಿಸುತ್ತೇನೆ. ಎರಡನೆಯದಾಗಿ, ಕನಿಷ್ಟಪಕ್ಷ 5 ಲಕ್ಷ ಕೋಟಿ ಸಸಿಗಳನ್ನು ಶಾಲಾ-ಕಾಲೇಜುಗಳು ಮತ್ತು ಗ್ರಾಮಪಂಚಾಯಿತಿಗಳ ಮೂಲಕ mandatory ಮಾಡಿ ಸಸಿಗಳನ್ನು ನಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅದೇ ರೀತಿ ಯಾವೆಲ್ಲಾ ಕಂಪನಿಗಳಿವೆ, ಅವರ Corporate Social Responsibilityನಲ್ಲಿ ಏನಾದರು ಹಣ ಸಿಗುವಂಥದ್ದಕ್ಕೆ drip irrigation ಮಾಡಿಸುವಂಥದ್ದಕ್ಕೆ ಮುಂದಾಗುವಂಥದ್ದು ಇದರ ಮೂಲಕ ಪರಿಸರವನ್ನು ಉಳಿಸಿದರೆ ಬಹುಶಃ ಈ ರೀತಿಯ ಬರವಾಗಲಿ, ಪ್ರಕೃತಿಯ ವಿಕೋಪವಾಗಲಿ ಆಗುವುದಕ್ಕೆ ಸಾಧ್ಯತೆ ಇಲ್ಲ.

ಪರಿಸರ ನಾಶವಾಗುವುದಕ್ಕೆ ಇನ್ನೊಂದು ಕಾರಣವೇನೆಂದರೆ, ದೊಡ್ಡ ದೊಡ್ಡ ಬೆಟ್ಟಗಳನ್ನು ಕರಗಿಸುತ್ತಿದ್ದಾರೆ. as far as possible ಈ ಬೆಟ್ಟಗಳನ್ನು ಕರಗಿಸುವಂಥದ್ದನ್ನು ನಿಲ್ಲಿಸಲಿಲ್ಲವೆಂದರೆ ನಮ್ಮ ರಾಜ್ಯವು ಸಹ ರಾಜಾಸ್ಥಾನ ಆಗುವಂತಹ ದಿನಗಳು ಬಹಳ ದೂರ ಉಳಿದಿಲ್ಲ ಎಂಬ ಎಚ್ಚರಿಕೆಯ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಅಂತಿಮವಾಗಿ ನಮ್ಮಂಥ ರಾಜಕಾರಣಿಗಳು – we should be model to others. ರಾಜಕಾರಣಿಗಳು ಎಂದಾಕ್ಷಣ ನಮಸ್ಕಾರ ಎಂದು ಅನ್ನಿಸಿಕೊಳ್ಳಬೇಕು ಎನ್ನುವುದಾದರೆ ನಾವು ಮಾಡಲ್ ಆಗಿರಬೇಕು. ಇವತ್ತಿನ ದಿವಸ ಅನೇಕ ಸಂದರ್ಭಗಳಲ್ಲಿ ಗಿಫ್ಟ್ ಅನ್ನು ಅಂದರೆ ಒಳ್ಳೆಯ ಸಂದರ್ಭಗಳಲ್ಲಿಯೂ ಕೊಡುತ್ತಾರೆ, ಸದುದ್ದೇಶದಿಂದಲೂ ಕೊಡುತ್ತಾರೆ, ದುರುದ್ದೇಶದಿಂದಲೂ ಕೊಡುತ್ತಾರೆ. ಒಂದು ಕಡೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಸ್ನೇಹಿತರು ಒಂದು ವಾಚನ್ನು ಕೊಟ್ಟಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳಿಗೂ ಸಹ ನಾಲ್ಕು ಕೋಟಿ 31 ಲಕ್ಷ ಬೆಲೆ ಬಾಳುವಂತಹ ಸೂಟನ್ನು ಸಹ ಯಾರೋ ಅವರ ಸ್ನೇಹಿತರು ಕೊಟ್ಟಿದ್ದಾರೆ. ಬಹುಶಃ ಇವತ್ತಿನ ದಿವಸ ದೇಶವ್ಯಾಪ್ತಿ ಇದರ ಬಗ್ಗೆ ಚರ್ಚೆ ಆಗುತ್ತಿದೆ. ದೇವರನ್ನು ಸಹ ತೃಪ್ತಿ ಪಡಿಸುವುದಕ್ಕೆ, ಅಥವಾ ಓಲೈಸಿಕೊಳ್ಳುವುದಕ್ಕೆ ನಮ್ಮ ವ್ಯವಸ್ಥೆಯಲ್ಲಿ ಹಾರ ಕೊಡುತ್ತೇವೆ, ತೆಂಗಿನಕಾಯಿ ಕೊಡುತ್ತೇವೆ, ಕಿರೀಟ ಕೊಡುತ್ತೇವೆ, ಬಂಗಾರ ಕೊಡುತ್ತೇವೆ, ಹಣ ಕೊಡುತ್ತೇವೆ. ಅದೇ ಸದುದ್ದೇಶದಿಂದಲೂ ಕೊಡುತ್ತಾರೆ, ದುರುದ್ದೇಶದಿಂದಲೂ ಕೊಡುತ್ತಾರೆ. ಬಹುಶಃ ನನಗೆ ಅನ್ನಿಸುತ್ತದೆ ನಾವೆಲ್ಲರೂ ಸೇರಿ ಅಂದರೆ ರಾಜಕಾರಣಿಗಳು ಒಂದು ತೀರ್ಮಾನವನ್ನು ಮಾಡಬೇಕು. ಏನೆಂದರೆ, ಯಾವುದೇ ರೀತಿಯ ಗಿಫ್ಟ್ ಇವೆ, ಈ ಗಿಫ್ಟ್‌ಗಳನ್ನು ಅಂದರೆ ಹಾರ ಇರಬಹುದು, ಶಾಲು ಇರಬಹುದು, ಉಂಗುರ, ವಾಚ್, ಸೂಟ್ ಇರಬಹುದು, ಇದು ಯಾವುದೇ ಕಾರಣಕ್ಕೂ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಪ್ರಧಾನ ಮಂತ್ರಿಗಳಾಗಲಿ, ಎಂಎಲ್ಎ, ಎಂ.ಎಲ್.ಸಿ, ಎಂ.ಪಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರುಗಳು, ಚುನಾಯಿತ ಪ್ರತಿನಿಧಿಗಳು I think we have to decide and take a decision that hereafter we will not accept such type of any gifts from anybody. ಇದನ್ನು ಬೇಕಾದರೆ ಸರ್ಕಾರ ಒಂದು ನೀತಿಯನ್ನು, ಒಂದು ಕಾನೂನನ್ನು ತರುವುದರ ಮೂಲಕ ಮಾಡಬೇಕು. ಏಕೆಂದರೆ ಅವರು ಇವರ ಮೇಲೆ ಆಪಾದನೆ ಮಾಡುವುದು, ಇವರು ಅವರ ಮೇಲೆ ಆಪಾದನೆ ಮಾಡುವಂಥದ್ದು ತಪ್ಪುತ್ತದೆ. ನಿನ್ನೆ ದಿವಸ ತಾನೆ ಮಾನ್ಯ ಪ್ರಧಾನ ಮಂತ್ರಿಗಳು "ಅಸೂಹೆ" ಪಡಬೇಡಿ ಎಂದು ಹೇಳಿದ್ದಾರೆ. ಅವರು ಪಾರ್ಲಿಮೆಂಟಿನಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ವಿಚಾರಗಳ ಮೂಲಕ ಅಸೂಹೆ ಪಡಬೇಡಿ ಎಂದು ಹೇಳಿದ್ದಾರೆ.

ಇದನ್ನು ನಾವು ಎಷ್ಟರ ಮಟ್ಟಿಗೆ ನಮ್ಮ ಬದುಕಿನಲ್ಲಿ ಎಲ್ಲಾ ಪಕ್ಷದ ರಾಜಕಾರಣಿಗಳು ಅಳವಡಿಸಿಕೊಳ್ಳುತ್ತೇವೆ ಎನ್ನುವುದನ್ನು ನಮ್ಮ ಮನಸ್ಸಿಗೆ ನಾವೇ ಪ್ರಶ್ನೆ ಹಾಕಿಕೊಳ್ಳೋಣ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಜನರು ಬೀದಿಯಲ್ಲಿ ರಾಜಕಾರಣಿಗಳನ್ನು ಅಟ್ಟಾಡಿಸುವಂತಹ ಪರಿಸ್ಥಿತಿ ಬರಬಾರದು ಎನ್ನುವ ಹಾಗಿದ್ದರೆ ನಾವು ನಮ್ಮ ಬದುಕಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಬದ್ಧತೆಯನ್ನು, ತತ್ವಗಳನ್ನು, ಸಿದ್ಧಾಂತಗಳನ್ನು ರೂಢಿಸಿಕೊಂಡು ಜನ ಪ್ರತಿನಿಧಿಗಳಾಗಿ ಕೆಲಸ ಮಾಡುವುದಕ್ಕೆ ಒಂದಾಗೋಣ, ಮುಂದೆ ಸಾಗೋಣ ಎನ್ನುವಂತಹ ಮಾತನ್ನು ಹೇಳಿ, ರಾಜ್ಯಪಾಲರ ಭಾಷಣ ಅತ್ಯಂತ ಸಮಯೋಚಿತ ಹಾಗೂ ಅತ್ಯಂತ ಅಭಿವೃದ್ಧಿ ಪರವಾಗಿರುವಂಥದ್ದು, ಸಾಮಾಜಿಕ ಬದ್ಧತೆಯ ಪರವಾಗಿರುವಂತಹ ರಾಜ್ಯಪಾಲರ ಭಾಷಣಕ್ಕೆ ನಾನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಆರೋಗ್ಯ ಸಚಿವರು ಹಾಗೂ ನಮ್ಮ ಭಾರಿ ನೀರಾವರಿ ಸಚಿವರು ಇಬ್ಬರೂ ಒಂದು ಸಣ್ಣ ಹೇಳಿಕೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಒಬ್ಬೊಬ್ಬರಾದಮೇಲೆ ಒಬ್ಬರು ಹೇಳಿಕೆಯನ್ನು ಮಾಡಿ.

# ಹೇಳಿಕೆ

**ಶ್ರೀ ಯು.ಟಿ.ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ರಾಜ್ಯದ ವ್ಯಾಪ್ತಿಯಲ್ಲಿ ತುರ್ತು ಅಪಘಾತಕ್ಕೆ ಒಳಗಾದಂತಹ ಸಂದರ್ಭದಲ್ಲಿ ನಾವು ಬಹಳಷ್ಟು ಕಡೆ ನೋಡುತ್ತಿದ್ದೇವೆ, ರಸ್ತೆ ಮಧ್ಯದಲ್ಲಿ ಏನಾದರು ಅಪಘಾತಗಳು ಆದರೆ ಎರಡು ಕಾರಣದಿಂದ ಇವತ್ತು ಯಾರೂ ಕೂಡ ಅಪಘಾತವಾದಂತಹ ವ್ಯಕ್ತಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿಲ್ಲ. ಮೊದಲನೆಯದಾಗಿ, ಅಪಘಾತಕ್ಕೆ ಈಡಾದಂತಹ ವ್ಯಕ್ತಿಯ್ನನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಪೊಲೀಸರ ಕಿರುಕುಳ ಇರುತ್ತದೆ, ಅದಕ್ಕೆ ಸಾಕ್ಷಿ ಹಾಕಬೇಕು, ಕೋರ್ಟಿಗೆ ಅಲೆದಾಡಬೇಕು ಎನ್ನುವುದು ಒಂದು ಕಾರಣವಾದರೆ, ಮತ್ತೊಂದು ಅದಕ್ಕಿಂತ ದೊಡ್ಡ ಸಮಸ್ಯೆ ಎಂದರೆ, ಅಪಘಾತಕ್ಕೆ ಒಳಗಾದಂತಹ ವ್ಯಕ್ತಿಯ ಜೀವನ್ಮರಣದ ಪ್ರಶ್ನೆ ಎಂದು ಮಾನವೀಯ ದೃಷ್ಟಿಯಿಂದ ಯಾರಾದರು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೆ, ಆಸ್ಪತ್ರೆಯಲ್ಲಿ ಇವರು ಯಾರು, ನಿಮಗೂ ಅವರಿಗು ಏನು ಸಂಬಂಧ, ನಿಮಗೂ ಅವರಿಗು ಪರಿಚಯವಿದೆಯೆ ಎಂದು ಕೇಳುತ್ತಾರೆ. ಯಾರು ಅಪಘಾತಕ್ಕೆ ಒಳಗಾದಂತಹ ವ್ಯಕ್ತಿಯನ್ನು ಕರೆದುಕೊಂಡು ಹೋಗಿರುತ್ತಾರೆ ಅವರನ್ನೇ ಚಿಕಿತ್ಸೆಗೆ ದುಡ್ಡು ಕಟ್ಟಿ ಎಂದು ಹೇಳುತ್ತಾರೆ. ಮಾನವೀಯ ದೃಷ್ಟಿಯಿಂದ ಅಪಘಾತಕ್ಕೆ ಈಡಾದಂತಹ ವ್ಯಕ್ತಿಯನ್ನು ಕರೆದುಕೊಂಡು ಹೋಗಿರುತ್ತಾರೆ, ಆದರೆ ಅವರ ಬಳಿ ದುಡ್ಡು ಇರುವುದಿಲ್ಲ, ಆದರೂ ಏನೋ ಸಾಲ ಸೋಲ ಮಾಡಿ ಆಸ್ಪತ್ರೆಗೆ ದುಡ್ಡು ಕಟ್ಟುತ್ತಾನೆ. ಆದರೆ ಮುಂದೆ ಇಂತಹ ಯಾವುದಾದರು ಸಂದರ್ಭ ಬಂದಾಗ ಅವನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಜೆಟ್‌ನಲ್ಲಿ "ಮುಖ್ಯ ಮಂತ್ರಿಗಳ ಸ್ವಾಂತನ ಯೋಜನೆ" ಎಂದು ಹೇಳಿ ಒಂದು ಕಾರ್ಯಕ್ರಮವನ್ನು ತಂದಿದ್ದರು. ಈ ಯೋಜನೆ ಕೇವಲ ಭಾರತ ದೇಶದಲ್ಲಿ ಮಾತ್ರವಲ್ಲ, ಏಷ್ಯಾದಲ್ಲಿಯೇ ಪ್ರಪ್ರಥಮವಾಗಿ ಜಾರಿಯಾಗಿರುವಂತಹ ಒಂದು ಯೋಜನೆಯನ್ನು 8 ನೇ ಮಾರ್ಚ್ 2016ರಂದು ಮಾನ್ಯ ಮುಖ್ಯಮಂತ್ರಿಗಳು ಚಾಲನೆ ಕೊಡುತ್ತಿದ್ದಾರೆ. ಈ ಯೋಜನೆಯ ಮುಖ್ಯ ಉದ್ದೇಶದ ಬಗ್ಗೆ ಒಂದೆರಡು ಮಾತಿನಲ್ಲಿ ಹೇಳಬಯಸುತ್ತೇನೆ. ಇನ್ನು ಮುಂದೆ ಕರ್ನಾಟಕದ ವ್ಯಾಪ್ತಿಯಲ್ಲಿ, ಕೇವಲ ಕರ್ನಾಟಕದ ಪ್ರಜೆಗಳು ಮಾತ್ರವಲ್ಲದೆ, ಈ ದೇಶದ ಇನ್ನಿತರ ರಾಜ್ಯಗಳ ಪ್ರಜೆಗಳಾದಂತಹ ವಿದ್ಯಾರ್ಥಿಗಳು, ಕೂಲಿಕಾರ್ಮಿಕರು, ಬಸ್ಸ್, ರೈಲಿನಲ್ಲಿ ಬರುವಂತಹ ಪ್ರಯಾಣಿಕರು, ಅಷ್ಟೇ ಅಲ್ಲದೆ ನಮ್ಮ ರಾಜ್ಯಕ್ಕೆ ಬರುವಂತಹ ಪ್ರವಾಸಿಗರಿಗೆ ಅಂದರೆ ನಮ್ಮ ದೇಶದ ಪ್ರಾವಾಸಿಗರಿಗೆ ಮಾತ್ರವಲ್ಲದೆ, ವಿದೇಶದಿಂದಲೂ ಬರುವಂತಹ ಪ್ರವಾಸಿಗರಿಗರು ನಮ್ಮ

ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ರಸ್ತೆ ಅಪಘಾತಕ್ಕೆ ಒಳಗಾದಂತಹ ಯಾವುದೇ ವ್ಯಕ್ತಿ/ಗಾಯಾಳುಗಳನ್ನು ಅಪಘಾತದಿಂದ ಹೊರತರಲು ಹಾಗೂ ಇಂತಹ ಸಂಕಷ್ಟದ ಸೂಕ್ಷ್ಮ ಸಮಯದಲ್ಲಿ ತುರ್ತಾಗಿ ಪ್ರಥಮ ಆಧ್ಯತೆಯ ಮೇಲೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸುವುದು "ಮುಖ್ಯಮಂತ್ರಿಗಳ ಸಾಂತ್ವನ" ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಅಪಘಾತಕ್ಕೊಳಗಾದ ವ್ಯಕ್ತಿಯ ಜೀವವನ್ನು ರಕ್ಷಿಸಲು/ಉಳಿಸಲು ಮೊದಲ 48 ಗಂಟೆಗಳ ಅವಧಿಗೆ ರೂ.25,000/–ಗಳವರೆಗೆ ಚಿಕಿತ್ಸೆ ನೀಡಲು ಕರ್ನಾಟಕ ಸರ್ಕಾರವೆ ಅವರ ಚಿಕಿತ್ಸೆಗೆ ಬೇಕಾದಂತಹ ದುಡ್ಡು ಕೊಟ್ಟು ಜೀವ ಉಳಿಸುವಂತಹ ಕೆಲಸ ಮಾಡುತ್ತದೆ. ಕೇವಲ ಸರ್ಕಾರಿ ಆಸ್ಪತ್ರೆಯಲ್ಲಿ ಮಾತ್ರವಲ್ಲದೆ, ಖಾಸಗಿ ಆಸ್ಪತ್ರೆಯಲ್ಲಿಯೂ ಕೂಡ ಈ ಚಿಕಿತ್ಸೆ ದೊರಕುತ್ತದೆ. 48 ಗಂಟೆಯವರೆಗೆ ಏಕೆ ಎಂದರೆ, 48 ಗಂಟೆಯ ಒಳಗೆ ಅಪಘಾತಕ್ಕೆ ಒಳಗಾದಂತಹ ವ್ಯಕ್ತಿಗೆ ಜ್ಞಾನ ಬರುತ್ತದೆ, ಮತ್ತು ಆತ ಅಲ್ಲಿಯೇ ಚಿಕಿತ್ಸೆ ತೆಗೆದುಕೊಳ್ಳಬೇಕೆ ಅಥವಾ ಅಲ್ಲಿಂದ ಬೇರೆ ಆಸ್ಪತ್ತೆಗೆ ಹೋಗಬೇಕೆ ಎನ್ನುವಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ, ಅಲ್ಲದೆ ಆ ಸಮಯದೊಳಗೆ ಅವರ ಕುಟುಂಬ ವರ್ಗದವರು ಆತನನ್ನು ಸೇರುವುದಕ್ಕೆ ಅವಕಾಶವಿರುತ್ತದೆ, ಆದಕಾರಣ ತುರ್ತು ಅಪಘಾತವಾದಂತಹ ಸಂದರ್ಭದಲ್ಲಿ ಉತ್ತಮವಾದ ಚಿಕಿತ್ಸೆಯನ್ನು ಕೊಟ್ಟು, ಕುಟುಂಬಕ್ಕೆ ಆತನನ್ನು ಒಪ್ಪಿಸುವಂಥದ್ದಕ್ಕೆ ಕಾಲಾವಕಾಶವಿರುತ್ತದೆ. ಆದಕಾರಣ 8ನೇ ಮಾರ್ಚ್ 2016ರಂದು "ಮುಖ್ಯಮಂತ್ರಿಗಳ ಸ್ವಾಂತನ ಹರೀಶ್ ಯೋಜನೆ" ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಗೆ ಚಾಲನೆಯನ್ನು ಕೊಡುತ್ತಾರೆ. ಆದಕಾರಣ ಈ ಕಾರ್ಯಕ್ರಮಕ್ಕೆ ಮಾನ್ಯ ಎಲ್ಲಾ ಸದಸ್ಯರು ಭಾಗವಹಿಸಬೇಕೆಂದು ತಮ್ಮ ಮೂಲಕ ಗೌರವಾನ್ವಿತ ಎಲ್ಲಾ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

(ಮುಂದು)

(142) 02:50 05-03-2016 ಸಿಎಸ್:ಹೆಚ್‌ವಿಆರ್

**ಶ್ರೀ ಯು.ಟಿ.ಖಾದಿರ್(ಮುಂದು):-** ಆತನಿಗೆ ಚಿಕಿತ್ಸೆಯನ್ನು ಕೊಟ್ಟು ಜೀವ ಉಳಿಸುವಂತಹ ಕೆಲಸವನ್ನು ಮಾಡಲಾಗುತ್ತದೆ. 48 ಗಂಟೆಗಳ ಅವಧಿ ಏಕೆ ಬೇಕು ಎಂದರೆ ತುರ್ತು ಚಿಕಿತ್ಸೆ ನೀಡಿ, ಆತನಿಗೆ ಜ್ಞಾನ ಬಂದ ಮೇಲೆ ಅಪಘಾತಕ್ಕೆ ಒಳಗಾದ ರೋಗಿ ಅಲ್ಲಿಯೇ ಇರಬೇಕೋ ಅಥವಾ ಬೇಗೆ ಕಡೆಗೆ ಶಿಫ್ಟ್ ಆಗಬೇಕಾ ಎನ್ನುವ ತೀರ್ಮಾನ ಕೈಗೊಳ್ಳಬಹುದು. ಜ್ಞಾನ ಬರದೇ ತೊಂದರೆ ಆದಲ್ಲಿ ಆತನ ಕುಟುಂಬದವರು ಬಂದು ಸೇರಲಿಕ್ಕೆ ಇಷ್ಟು ಸಮಯ ಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಈ ಸಾಂತ್ವಾನ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಮಾರ್ಚ್ 8ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಚಾಲನೆಯನ್ನು ನೀಡುತ್ತಾರೆ. ಇದರಲ್ಲಿ ಮಾನ್ಯ ಸದಸ್ಯರೆಲ್ಲರೂ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಗಳೇ, ಜೆಡಿಎಸ್ ಪಕ್ಷದ ಹಿರಿಯ ನಾಯಕರಾದ ಮಾನ್ಯ ಬಸವರಾಜ ಹೊರಟ್ಟಿಯವರು ಹಾವೇರಿ ಜಿಲ್ಲೆಯ ರೈತರು ತುಂಗಾ ಮೇಲ್ದಂಡೆ ಯೋಜನೆಯ ಹಗರಣಕ್ಕೆ ಸಂಬಂಧಿಸಿದಂತೆ ನಿಯಮ 330ರ ಅಡಿಯಲ್ಲಿ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಈ ಹಾವೇರಿ ಜಿಲ್ಲೆಯ ಎಸ್‌ಎಲ್‌ಒ ಕಚೇರಿಯಲ್ಲಿ ನಡೆದಿರುವ ಅನಾಹುತಗಳು ನಮ್ಮ ಗಮನಕ್ಕೆ ಬಂದಿದೆ. ಈ ವಿಚಾರವನ್ನು 18-10-2014 ರಂದು ಸಿಓಡಿ ತನಿಖೆಗೆ ನೀಡಲಾಗಿದೆ. ಇದರ ಜೊತೆಗೆ ಇಲಾಖೆಯಲ್ಲಿ ಜಂಟಿ ವಿಚಾರಣಾ ಸಮಿತಿಯನ್ನು ರಚಿಸಿ, ಇಸ್ಮಾಯಲ್ ಸಾಬ್ ಸಿರಟ್ಟಿ, ಜೇನುಕಟ್ಟಿ ಮನಿ ಮತ್ತು ಕಲ್ಲಪ್ಪಮನಿ ಇವರ ಮೇಲೆ ತನಿಖೆಯನ್ನು ನಡೆಸಲಾಗುತ್ತಿದೆ. ಅವರ ಮೇಲೆ ಒಂದು ಕ್ರಿಮಿನಲ್ ಕೇಸನ್ನು ಕೂಡ ಲಾಂಚ್ ಮಾಡಿದ್ದೇವೆ. ಇದರಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದ್ದು, ನಮ್ಮ ಚೆಕ್ ಪುಸ್ತಕಗಳನ್ನು ಕೂಡ ಖಾಸಗಿಯವರ ಬಳಿ ಸೀಜ್ ಮಾಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಐತೀರ್ಪಿನ ಪ್ರಕಾರ ನಿಗಧಿಯಾಗಿದ್ದ ಹಣಕ್ಕಿಂತ ಹೆಚ್ಚಿನ ಹಣವನ್ನು ನೀಡಲಾಗಿದೆ. ಚೆಕ್‌ಗಳನ್ನು ತಿದ್ದುರುವುದು ಸಹ ಸಾಬೀತಾಗಿದೆ, ಚೆಕ್ ಲೀಫ್‌ಗಳು ಹೊರಗೆ ಹೋಗಿವೆ ಆದ್ದರಿಂದಲೇ ಇದರ ಬಗ್ಗೆ ವಿಚಾರಣೆಯನ್ನು ನಡೆಸಲಾಗುತ್ತಿದೆ. ಹೊರಟ್ಟಿಯವರು ಪ್ರಸ್ತಾಪಿಸಿದಂತೆ 400 ಜನ

ರೈತರಿಗೆ ಸಿಓಡಿಯವರು ನೋಟಿಸನ್ನು ನೀಡಿದ್ದಾರೆ. ತನಿಖೆಯ ಸಲುವಾಗಿ ನೋಟಿಸನ್ನು ನೀಡಲೇ ಬೇಕಾಗುತ್ತದೆ. ಇದರಿಂದ ತೊಂದರೆ ಆಗುತ್ತಿದೆ ಎನ್ನುವ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಆದರೆ ಸಿಓಡಿಯವರು ತನಿಖೆ ನಡೆಸುವಂತಹ ಸಂದರ್ಭದಲ್ಲಿ ನಾವು ಅದರಲ್ಲಿ ಮಧ್ಯಪ್ರವೇಶ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು ಅವರ ಮೇಲೆ ಶಿಕ್ಷೆ ವಿಧಿಸುವ ಕೆಲಸ ಆಗುತ್ತದೆ. ನಿರಾಪರಾಧಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಸಿಓಡಿ ತನಿಖೆ ನಡೆಯುತ್ತಿರುವುದರಿಂದ ನಾವು ಮಧ್ಯೆದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಆಗುವುದಿಲ್ಲ. ನಿರಪರಾಧಿ ರೈತರಿಗೆ ಯಾವುದೇ ರೀತಿಯ ಹಿಂಸೆ ಕಿರುಕುಳ ಆಗದ ಹಾಗೆ ಕ್ರಮ ವಹಿಸುವುದಕ್ಕೆ ಗೃಹಸಚಿವರಿಗೆ ತಿಳಿಸಿ ಅವರಿಂದ ಸಿಓಡಿಗೆ ಸೂಚನೆಯನ್ನು ನೀಡಿಸಲಾಗುವುದು.

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ 3 ಗಂಟೆ 45 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನಕ್ಕಾಗಿ ಮಧ್ಯಾಹ್ನ 2 ಗಂಟೆ 52 ನಿಮಿಷದಲ್ಲಿ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಸಮಾವೇಶಗೊಳ್ಳುವುದು)**

**(ಸದನವು ಭೋಜನ ವಿರಾಮದ ನಂತರ 4 ಗಂಟೆ 7 ನಿಮಿಷಗಳಿಗೆ ಪ್ರಾರಂಭವಾಯಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ನನ್ನ ವಿಷಯವನ್ನು ದಯವಿಟ್ಟು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಇಲ್ಲ, ಸಂಬಂಧಪಟ್ಟ ಸಚಿವರು ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು. ಇಂದು ಕೊನೆಯ ದಿನವಾಗಿದ್ದು, ಮಾನ್ಯ ಜಯಚಂದ್ರರವರು ವಕ್ಫ್ ಆಸ್ತಿಯ ವಿಚಾರವಾಗಿ ಇಂದು table ಮಾಡುತ್ತೇವೆ ಎಂದು Business Advisory Committee ಮುಖಾಂತರ ಹೇಳಿದ್ದರು.

**ಸಭಾಪತಿಯವರು:-** ಸದನದಲ್ಲಿಯೂ ಹೇಳಿದ್ದಾರೆ. ಅವರು ಬರುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಅವರು ಸದನಕ್ಕೆ ಬರುತ್ತಿದ್ದು, ಬಂದ ಕೂಡಲೇ immediately place ಮಾಡುತ್ತೇವೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಜಯಚಂದ್ರರವರಿಗೆ ಉನ್ನತ ಶಿಕ್ಷಣ ಪರಿಷತ್ತಿನ ಒಂದು ಸಭೆ ಇದ್ದು ಅದಾದ ನಂತರ ಬಂದು ಟೇಬಲ್ ಮಾಡುತ್ತಾರೆ. ನಾವು ಮಾತಿನಂತೆ ನಡೆದುಕೊಳ್ಳುತ್ತೇವೆ. ಅದರಲ್ಲಿ ಏನೂ ಅನುಮಾನ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಅದರಲ್ಲಿ ಪ್ರಶ್ನೆಯೇ ಇಲ್ಲ, ರಾಜ್ಯದಲ್ಲಿ ಮಾತಿನಂತೆ ನಡೆಯುವವರು ಮಾನ್ಯ ಸಿದ್ದರಾಮಯ್ಯನವರು ಎಂದು ತೀರ್ಮಾನವಾಗಿಬಿಟ್ಟಿದೆ.

**ಶ್ರೀ ಸಿದ್ದರಾಮಯ್ಯ:-** ಫೆಬ್ರವರಿ ಅಧಿವೇಶನದಲ್ಲಿ ಮಂಡಿಸಬೇಕು ಎಂದು ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಅಧಿವೇಶನ ಮಾರ್ಚ್ 31ರವರೆಗೆ ಇದ್ದು ನಾವು ಮುಂಚಿತವಾಗಿ ಇವತ್ತೇ ಮಂಡಿಸಿಬಿಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಧನ್ಯವಾದಗಳು.

**ಶ್ರೀ ಗೊ. ಮಧುಸೂದನ್:–** ಮಾನ್ಯ ಮಧುಸೂದನ್‌ರವರೇ, ಗೊತ್ತಾಯಿತೇ? ನೀವು ಹೇಗಾದರೂ ಮಾಡಿ ಪುನ: ಎಂ.ಎಲ್.ಸಿ., ಆಗುವುದಕ್ಕೆ ಪ್ರಯತ್ನ ಮಾಡು. ಅವರ ಮಾತು ಕೇಳಿಕೊಂಡು ಹೋಗಬಾರದು. ನಿಮ್ಮನ್ನು ಹೊರಗಡೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟೆಲ್ಲಾ active ಆಗಿ ಇದ್ದಾರೆ ಎಂದು ಹೊರಗಡೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಚರ್ಚೆ ಬೇಡ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ನಿಯಮ 330(ಎ)ರಡಿಯಲ್ಲಿ ಉಡುಪಿ ಮತ್ತು ಮಂಗಳೂರು ಜಿಲ್ಲೆಯ ಮರಳು ನೀತಿ ಗೊಂದಲದ ಬಗ್ಗೆ ಪ್ರಸ್ತಾಪಿಸಿರುವ ಸೂಚನೆಯ ಬಗ್ಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಿದೆ)

**ಶ್ರೀ ಬಸವರಾಜ ಹೊರಟ್ಟಿ:-** ನನ್ನ ವಿಷಯಕ್ಕೆ ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:-** ಬೆಳಿಗ್ಗೆ ಉತ್ತರವನ್ನು ಕೊಟ್ಟಾಗ ತಾವು ಸದನದಲ್ಲಿ ಇರಲಿಲ್ಲ

**ಶ್ರೀ ಎಸ್.ಆರ್. ಪಾಟೀಲ್:-** ಅವರು ಸದನದಲ್ಲಿ ಇರಲಿಲ್ಲ, ನಾವೇನೂ ಮಾಡೋಣ?

**ಶ್ರೀ ಬಸವರಾಜ ಹೊರಟ್ಟಿ:-** ನನಗೆ ಕೊಠಡಿ ಸಂಖ್ಯೆ 106ಕ್ಕೆ ಸಭೆಗೆ ಕಳುಹಿಸಿದರು.

**ಸಭಾಪತಿಯವರು:-** ಅದು, ಬೇರೆ ವಿಷಯ, ಏನೂ ಮಾಡುವುದಕ್ಕೆ ಬರುವುದಿಲ್ಲ. ಉತ್ತರವನ್ನು ಅವರು ಹೇಳಿದ್ದಾರೆ, ನಾನು ಕಾಪಿ ಕೊಡಿಸುತ್ತೇನೆ. ತಾವು ಸದನದಲ್ಲಿ ಇರದಿದ್ದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:-** ನಾನು ಹೊರಗೆ ಹೋಗಿದ್ದಾಗ ಆಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಅವರು oral ಆಗಿ ಉತ್ತರವನ್ನು ಹೇಳಿದ್ದು, ಮಾನ್ಯ ಸದಸ್ಯರಿಗೆ ಬರವಣಿಗೆಯಲ್ಲಿ ಒಂದು ಕಾಪಿ ಕಳುಹಿಸುತ್ತೇನೆ. ಅವರು ಇಲ್ಲದಿದ್ದರೆ ನಮ್ಮ ತಪ್ಪೇನಿದೆ? ಮಾನ್ಯ ಜಲ ಸಂಪನ್ಮೂಲ ಸಚಿವರಿಂದ ಉತ್ತರ ಕೊಡಿಸಿದ್ದೇನೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** 2016ನೇ ಫೆಬ್ರವರಿ 29ನೇ ತಾರೀಖಿನಂದು ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣದ ಮೇಲೆ ಈ ಸದನದಲ್ಲಿ ಅಭಿನಂದನಾ ನಿರ್ಣಯವನ್ನು ಮಂಡಿಸಲಾಗಿತ್ತು. ಅದರ ಬಗ್ಗೆ ಸುಮಾರು 28 ಜನ ಸದಸ್ಯರು ಮಾತನಾಡಿದ್ದಾರೆ. ಈಗ ಆ ಚರ್ಚೆಗೆ ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಲಿದ್ದಾರೆ.

**ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ 29.02.2016ರಂದು ಘನತೆವೆತ್ತ ರಾಜ್ಯಪಾಲರು ಎರಡೂ ಸದನಗಳನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಪ್ರತಿವರ್ಷ ಹೊಸ ವರ್ಷ ಪ್ರಾರಂಭವಾದಾಗ ಮೊದಲನೆಯ ಅಧಿವೇಶನವನ್ನು ಘನತೆವೆತ್ತ ರಾಜ್ಯಪಾಲರ ಭಾಷಣದ ಮೂಲಕ ಪ್ರಾರಂಭ ಮಾಡುವುದು ಸಂಪ್ರದಾಯವಾಗಿದೆ. ಫೆಬ್ರವರಿ ತಿಂಗಳ 29ನೇ ತಾರೀಖಿನಂದು ಘನತೆವೆತ್ತ ರಾಜ್ಯಪಾಲರು ಮಾಡಿರುವ ಭಾಷಣಕ್ಕೆ ಈ ಮನೆಯ ಹಿರಿಯ ಸದಸ್ಯರಾದ ಮತ್ತು ಮಾಜಿ ಸಭಾಪತಿಗಳಾದ ಶ್ರೀ ವೀರಣ್ಣ ಮತ್ತಿಕಟ್ಟಿಯವರು ವಂದನಾ ನಿರ್ಣಯವನ್ನು ಮಂಡಿಸಿ, ಅವರಿಗಿರುವ ಅನುಭವದ ಆಧಾರದ ಮೇಲೆ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಮತ್ತು ಈ ಸರ್ಕಾರ ನಡೆದು ಬಂದ ದಾರಿಯ ಬಗ್ಗೆ ಹೇಳಿ, ಅನೇಕ ಸಲಹೆ ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಈ ಸರ್ಕಾರವನ್ನು ಬೆಂಬಲಿಸುವ ಅಥವಾ ಹೊಗಳುವ ಕೆಲಸವನ್ನು ಅವರು ಮಾಡಿಲ್ಲ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ಐವನ್ ಡಿ'ಸೋಜಾರವರು ಮೊದಲನೆಯ ಬಾರಿಗೆ ಈ ಮನೆಯ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಅವರು ಬಹಳ ಕ್ರಿಯಾಶೀಲ ವ್ಯಕ್ತಿಯಾಗಿದ್ದಾರೆ.

**ಶ್ರೀ ಗೋ.ಮಧುಸೂದನ್:-** ಸನ್ಮಾನ್ಯ ಸಭಾಪತಿಯವರೇ, ಐವನ್ ಡಿ'ಸೋಜಾ ರವರನ್ನು ಹಿಡಿಯುವುದೇ ಕಷ್ಟದ ಕೆಲಸವಾಗಿದೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋ.ಮಧುಸೂದನ್‌ರವರಿಗೆ ಎಲ್ಲ ಅಲ್ಪಸಂಖ್ಯಾತರನ್ನು ನೋಡಿದ ಕೂಡಲೇ ಒಂದು ರೀತಿ ಆಗುತ್ತದೆ. ಅವರಲ್ಲಿ ಅಸಹನೆ ಬೆಳೆದುಬಿಟ್ಟಿದೆ.

**ಶ್ರೀ ಗೋ.ಮಧುಸೂದನ್:-** ಸನ್ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ನಾನು ಇಸ್ಲಾಂ ಬಗ್ಗೆ, ಕುರಾನ್ ಬಗ್ಗೆ ಮತ್ತು ಮದರಸಗಳ ಬಗ್ಗೆ ಎಷ್ಟು ಸೊಗಸಾಗಿರುವ ಭಾಷಣ ಮಾಡಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಆ ನಡವಳಿಕೆಗಳನ್ನು ತರಿಸಿ ನೋಡಿದರೆ ನನ್ನನ್ನು ಪ್ರಶಂಸಿಸುವುದರ

ಜೊತೆಗೆ ಈಗ ನನ್ನ ಬಗ್ಗೆ ಆಡಿರುವ ಮಾತುಗಳನ್ನು ಖಂಡಿತ ಅವರು ವಾಪಸ್ಸು ತೆಗೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ನನಗಿದೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ " ಒಂದಿಗೆ (ಜೊತೆಗೆ) ಉಂಡರೂ ಅವರೇಕಾಳು ಮುಟ್ಟಬೇಡ" ಎನ್ನುವ ಒಂದು ಗಾದೆ ಮಾತಿದೆ. 'ಒಟ್ಟಿಗೆ ಒಂದೇ ತಟ್ಟೆಯಲ್ಲಿ ಊಟ ಮಾಡೋಣ ಆದರೆ ನೀನು ಅವರೇಕಾಳು ಮಾತ್ರ ಮುಟ್ಟಬೇಡ, ಅವರೇಕಾಳೆಲ್ಲ ನನಗೆ ಇರಿಲಿ' ಎನ್ನುವುದು ಈ ಗಾದೆ ಮಾತಿನ ಅರ್ಥ. ನಮ್ಮ ಹಳ್ಳಿಗಳಲ್ಲಿ ಒಣ ಅವರೇಕಾಳು ಮತ್ತು ಬದನೇಕಾಯಿ ಹಾಕಿದ ಮಾಡಿದ ಸಾರಿನ ಊಟಕ್ಕೆ ಬಹಳ ಮಹತ್ವವಿದೆ. ಹಳ್ಳಿ ಕಡೆ ಪ್ರೀತಿ ಬಾಂಧವ್ಯವನ್ನು ಸೂಚಿಸುವುದಕ್ಕೆ ಜೊತೆಯಾಗಿ ಊಟ ಮಾಡುವುದು ವಾಡಿಕೆಯಾಗಿದೆ. ಒಟ್ಟಿಗೆ ಊಟ ಮಾಡೋಣ ಆದರೆ, ಅವರೇಕಾಳನ್ನು ಮಾತ್ರ ಮುಟ್ಟಬೇಡ ಎನ್ನುವ ರೀತಿಯಲ್ಲಿ ಮಾನ್ಯ ಮಧುಸೂದನ್‌ರವರು ಹೇಳುತ್ತಿದ್ದಾರೆ. ನಾವೆಲ್ಲರೂ ಈ ದೇಶದಲ್ಲಿಯೇ ಇರೋಣ ಆದರೆ, ನೀವು ಬೇರೆ ಇರಿ, ನಾವು ಬೇರೆ ಇರುತ್ತೇವೆ ಎನ್ನುವುದು ಅವರ ಭಾವನೆ. ನಾವೆಲ್ಲರೂ ಮನುಷ್ಯರು ಎನ್ನುವುದನ್ನು ಮಾನ್ಯ ಮಧುಸೂದನ್‌ರವರು ಅರ್ಥ ಮಾಡಿಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯರೇ, ಯಾವ ದೇವರು ಸಹ ನೀನು ಇಂತಹ ಧರ್ಮದಲ್ಲಿ ಹುಟ್ಟು ಎಂದು ಹೇಳುವುದಕ್ಕೆ ಹೋಗುವುದಿಲ್ಲ ಅಥವಾ ನಾವು ಇಂತಹ ಧರ್ಮದಲ್ಲಿಯೇ ಹುಟ್ಟಬೇಕೆಂದು ಅರ್ಜಿ ಹಾಕಿಕೊಂಡು ಹುಟ್ಟಿರುವುದಿಲ್ಲ. ನಾನು ಕುರುಬರ ಜಾತಿಯಲ್ಲಿ ಹುಟ್ಟಬೇಕೆಂದು ದೇವರಲ್ಲಿ ಅರ್ಜಿ ಹಾಕಿಕೊಂಡಿರಲಿಲ್ಲ. ನಮ್ಮ ಅಪ್ಪ ಅಮ್ಮ ಕುರುಬರಾದ ಕಾರಣ ನನ್ನ ಜಾತಿ ಕುರುಬರ ಜಾತಿಯಾಗಿದೆ. ಜಾತಿ ವ್ಯವಸ್ಥೆ ಇರುವುದರಿಂದ ನಾವು ಜಾತಿ ಹಣೆಪಟ್ಟಿಯನ್ನು ಕಟ್ಟಿಕೊಂಡಿದ್ದೇವೆ. 'ಹುಟ್ಟು ಆಕಸ್ಮಿಕ ಸಾವು ನಿಶ್ಚಿತ' ಸಾಯುವಾಗ ಮನುಷ್ಯರಾಗಿ ಸತ್ತರೇ ಸಾಕಾಗಿದೆ. ನಾವೆಲ್ಲರೂ ಮನುಷ್ಯರಾಗಿ ಸಾಯುವುದನ್ನು ಕಲಿತುಕೊಂಡರೆ, ಈ ಸಮಾಜಕ್ಕೆ ಅದಕ್ಕಿಂತ ದೊಡ್ಡ ಕೊಡುಗೆ ಮತ್ತೊಂದಿಲ್ಲ. ಮಾನ್ಯ ಮಧುಸೂದನ್‌ರವರಿಗೆ ಎಲ್ಲವೂ ತಿಳಿದಿದೆ ತಿಳಿದೂ ತಿಳಿದೂ ಈ ರೀತಿ ಮಾತನಾಡುತ್ತಾರೆ ಅದೇ ಕಷ್ಟಕ್ಕೆ ಬಂದಿದೆ. ಮಾನ್ಯ ಮಧುಸೂದನ್‌ರವರಿಗೆ ಸಚಿವರಾದ ಮಾನ್ಯ ಖಮರುಲ್ಲ ಇಸ್ಲಾಂ ಅವರನ್ನು ಕಂಡರೆ ಆಗುವುದಿಲ್ಲ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ನನಗೆ ಆ ರೀತಿಯ ಯಾವುದೇ ಭಾವನೆಗಳು ಇಲ್ಲ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು "ಒಂದಿಗೆ ಉಂಡರೂ ಅವರೇಕಾಳು ತಿನ್ನಬೇಡ" ಎನ್ನುವ ಗಾದೆ ಮಾತನ್ನು ಹೇಳುತ್ತಿರುವುದು. ನಾನು ಇದರ ಬಗ್ಗೆ ಹೆಚ್ಚಿಗೆ ಲಂಬಿಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತು ಶನಿವಾರ ಜೊತೆಗೆ ನಾಳಿದ್ದು ಶಿವರಾತ್ರಿ ಹಬ್ಬವಿದೆ ಎಲ್ಲ ಸದಸ್ಯರು ತಮ್ಮ ತಮ್ಮ ಊರುಗಳಿಗೆ ಹೋಗಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಹೊಸ ಸದಸ್ಯರಾಗಿದ್ದರೂ ಸಹ ಬಹಳ ಕ್ರಿಯಾಶೀಲರಾಗಿ ಸದನದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವು ಅವರಿಗೆ ಉತ್ತೇಜನ ಕೊಡಬೇಕಾಗುತ್ತದೆ. ಯಾರು ಹೊಸ ಸದಸ್ಯರಿದ್ದಾರೆ ಯಾರು ಕ್ರಿಯಾಶೀಲ ಸದಸ್ಯರಿದ್ದಾರೆ ಅವರಿಗೆ ತಾವು ಹೆಚ್ಚು ಒತ್ತು ಕೊಡುತ್ತಿದ್ದೀರಿ. ನಾವು ಅವರಿಗೆ ಕುಮ್ಮಕ್ಕು ಕೊಟ್ಟರೆ ಇನ್ನೂ ಹೆಚ್ಚು ಕ್ರೀಯಾಶೀಲರಾಗುತ್ತಾರೆ ಮತ್ತು ಉತ್ತಮ ಸಂಸದೀಯಪಟುವಾಗುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ವೀರಣ್ಣಮತ್ತಿಕಟ್ಟಿಯವರು ಘನತೆವೆತ್ತ ರಾಜ್ಯಪಾಲ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಿ ಮಾತನಾಡಿದ್ದಾರೆ. ಮಾನ್ಯ ಐವನ್ ಡಿ'ಸೋಜಾರವರು ಅದನ್ನು ಅನುಮೋದಿಸಿ ಮಾತನಾಡಿದ್ದಾರೆ. ಸರ್ಕಾರದ ವತಿಯಿಂದ ಅವರಿಗೂ ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಈ ಪ್ರಸ್ತಾವನೆಯ ಮೇಲೆ ಸುಮಾರು 28 ಜನ ಸದಸ್ಯರು ಮಾತನಾಡಿದ್ದಾರೆ. ಸುಮಾರು 7 ಗಂಟೆ 15 ನಿಮಿಷಗಳ ಕಾಲ ಮಾತನಾಡಿದ್ದಾರೆ.

(ಮುಂದುವರಿದಿದೆ)

(145) 05-03-2016 4.20 MD-AK

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿದ್ದರಾಮಯ್ಯ (ಮುಂದು):-**

ಅದೇ ರೀತಿ ವಿರೋಧ ಪಕ್ಷದ ನಾಯಕರಾದ ಶ್ರೀ ಈಶ್ವರಪ್ಪನವರು ಸಹ ಮಾತನಾಡಿದ್ದಾರೆ, ಜೆಡಿ(ಎಸ್) ಪಕ್ಷದ ಮುಖಂಡರಾದ ಬಸವರಾಜ ಹೊರಟ್ಟಿಯವರು, ರಾಮಚಂದ್ರಗೌಡರು, ಪುಟ್ಟಣ್ಣನವರು, ಬಿ.ಜೆ.ಪುಟ್ಟಸ್ವಾಮಿಯವರು, ಶರವಣರವರು ಮಾತನಾಡಿದ್ದಾರೆ. ಮಾಜಿ ಕೇಂದ್ರ ಸಚಿವರಾದ ಬಸನಗೌಡ ಪಾಟೀಲ್ ಯತ್ನಾಳ್‌ರವರು ಚೆನ್ನಾಗಿ ಮಾತನಾಡಿದ್ದಾರೆ. He is a good speaker. ಅವರಿಗೆ ಹೆಚ್ಚಿನ ಸಮಯ ಸಿಗಲಿಲ್ಲವೆಂದು ಹೇಳುತ್ತಿದ್ದಾರೆ. ನೀವು ಇನ್ನೊಂದು ಅಧಿವೇಶನದಲ್ಲಿ ಹೆಚ್ಚಿಗೆ ಮಾತನಾಡಿ. ಶ್ರೀ ನಾರಾಯಣ ಸಾ.ಬಾಂಡಗೆ, ಶ್ರೀ ಗೋ.ಮಧುಸೂದನ್, ಶ್ರೀ ಡಿ.ಎಸ್.ವೀರಯ್ಯ, ಶ್ರೀಮತಿ ತಾರಾ ಅನೂರಾಧ, ಶ್ರೀ ಸಿ.ಹೆಚ್.ವಿಜಯಶಂಕರ್, ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ಶ್ರೀ ಅಮರನಾಥ್ ಪಾಟೀಲ್, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮತ್ತು ಶ್ರೀ ಎಂ.ಕೆ.ಪ್ರಾಣೇಶ್ ಇವರೆಲ್ಲರೂ ವಿರೋಧ ಪಕ್ಷದ ಕಡೆಯಿಂದ ಮಾತನಾಡಿರತಕ್ಕಂಥ ಸದಸ್ಯರುಗಳು. ಅದೇ ರೀತಿ ಆಡಳಿತ ಪಕ್ಷದಿಂದಲೂ ಸಹ ಡಾ॥ ವೀರಣ್ಣ ಮತ್ತಿಕಟ್ಟಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸಿರುವವರು, ಶ್ರೀ ಐವಾನ್ ಡಿ'ಸೋಜಾರವರು ಅದನು ಅನುಮೋದಿಸಿರುವವರು, ಶ್ರೀ ಕೆ.ಸಿ.ಕೊಂಡಯ್ಯ, ಶ್ರೀ ಎನ್.ಎಸ್.ಬೋಸರಾಜು, ಶ್ರೀ ಬಸವರಾಜ ಪಾಟೀಲ್ ಇಟಗಿ, ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ, ಶ್ರೀ ಆರ್.ಧರ್ಮಸೇನ, ಶ್ರೀಮತಿ ಜಯಮಾಲಾ ರಾಮಚಂದ್ರ, ಶ್ರೀ ಜಿ.ರಘು ಆಚಾರ್, ಶ್ರೀ ಶರಣಪ್ಪ ಮಟ್ಟೂರು, ಶ್ರೀ ಕೆ.ಅಬ್ದುಲ್ ಜಬ್ಬಾರ್, ಶ್ರೀ ಆರ್.ಪ್ರಸನ್ನ ಕುಮಾರ್ ಮತ್ತು ಶ್ರೀ ವಿ.ಎಸ್.ಉಗ್ರಪ್ಪನವರು ಆಡಳಿತ ಪಕ್ಷದ ಕಡೆಯಿಂದ ಮಾತನಾಡಿದ್ದಾರೆ. ಒಟ್ಟು 29 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರವಾಗಿದೆ. ನಾನು ಈಶ್ವರಪ್ಪ ಆದಿಯಾಗಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಸರ್ಕಾರದ ವತಿಯಿಂದ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ. ಎಲ್ಲಾ ಸದಸ್ಯರು ಸರ್ಕಾರದ ಪರವಾಗಿಯೇ ಮಾತನಾಡಬೇಕೆಂದು ನಾನು ನಿರೀಕ್ಷೆ ಮಾಡುವುದಿಲ್ಲ. ಇದು ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆ.

**ಸಭಾಪತಿಯವರು:-** ಆಡಳಿತ ಪಕ್ಷದವರು ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದರು. ಇದೊಂದು ಅದ್ಭುತವಾದ ಘಟನೆ ನಮ್ಮ ಸದನದಲ್ಲಿ ನಡೆದಿದೆ. ಚರ್ಚೆ ಬಹಳ ಚೆನ್ನಾಗಿ

ನಡೆಯಿತು. ಅವರು ಸಲಹೆಗಳನ್ನು ಕೊಟ್ಟು ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿದರು. ನಂತರ ಸರ್ಕಾರವನ್ನು ಅಭಿನಂದಿಸಿದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ನಮ್ಮ ಆಡಳಿತ ಪಕ್ಷದವರಿಂದಲೂ ಸಹ ಅದನ್ನು ನಿರೀಕ್ಷೆ ಮಾಡುವುದಿಲ್ಲ. ಅವರು ವಿರೋಧ ಪಕ್ಷದವರಷ್ಟೇ ಟೀಕೆಯನ್ನು ಮಾಡಬೇಕು, ಅವರು ಸರ್ಕಾರದಲ್ಲಿ ಕಾಣತಕ್ಕಂಥ ತಪ್ಪುಗಳನ್ನು ಹೇಳಬಾರದು, ಸಲಹೆಗಳನ್ನು ಕೊಡಬಾರದು, ಅವರ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳಬಾರದೆಂದು ನಾನು ನಿರೀಕ್ಷೆ ಮಾಡುವುದಿಲ್ಲ. ಮಾತನಾಡಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರುಗಳು ಟೀಕೆಗಳನ್ನು ಮಾಡಿದ್ದಾರೆ, ಸರ್ಕಾರದಲ್ಲಿರತಕ್ಕಂಥ ದೋಷಗಳನ್ನು ಹೇಳಿದ್ದಾರೆ ಮತ್ತು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಟೀಕೆಗಳನ್ನು, ಸಲಹೆಗಳನ್ನು, ಎಲ್ಲರ ಅಭಿಪ್ರಾಯಗಳನ್ನು ನಾನು ಮುಕ್ತ ಮನಸ್ಸಿನಿಂದ ಸ್ವಾಗತ ಮಾಡುತ್ತೇನೆ. ನಾನು ನಮ್ಮ ಸರ್ಕಾರ ಮಾಡಿರುವುದೆಲ್ಲಾ ಸರಿ ಎಂದೂ ಸಹ ಹೇಳುವುದಕ್ಕೆ ಹೋಗುವುದಿಲ್ಲ. 13ನೇ ಮೇ 2016ಕ್ಕೆ ನಮ್ಮ ಸರ್ಕಾರ ಬಂದು ಮೂರು ವರ್ಷಗಳಾಗುತ್ತದೆ. ಈ ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆ ಇದೆಯಲ್ಲಾ, ಇದಕ್ಕೆ ದಿಕ್ಕು-ದಿಸೆ ತೋರಿಸತಕ್ಕಂಥಾದ್ದೆ ಇಲ್ಲಿ ಈ ಸದನದಲ್ಲಿ ನಡೆಯತಕ್ಕಂಥ ಚರ್ಚೆಯಲ್ಲಿ. ಆದರೆ ನಮ್ಮ ಚರ್ಚೆಯ ಒಟ್ಟು outcome ಬರತಕ್ಕಂಥಾದ್ದು ಅದು ಅಮೃತದಂತೆ ಇರಬೇಕೆನ್ನುವುದು ನನ್ನ ಒಂದು ಆಸೆಯಾಗಿದೆ, ಅದು ಹಾಲಾಹಲ ಆಗಬಾರದು. ಇದು ಅಮೃತದಂತೆ ಇದ್ದರೆ ಸಮಾಜಕ್ಕೆ ಬಹಳ ಒಳ್ಳೆಯದಾಗುತ್ತದೆ. ನಮ್ಮ ಚರ್ಚೆ ಹಾಲಾಹಲದಂತೆ ಇದ್ದರೆ ಅದು ಸಮಾಜಕ್ಕೆ ಮಾರಕವಾಗುತ್ತದೆ. ನನ್ನನ್ನು ಕೆಲವರು ನಾಸ್ತಿಕ ಎಂದು ಕರೆಯುತ್ತಾರೆ. ನಾನು ನಾಸ್ತಿಕ ಅಲ್ಲ, ಆಸ್ತಿಕ. ನಾನು ಸಹ ದೇವಸ್ಥಾನಗಳಿಗೆ ಹೋಗುತ್ತೇನೆಂದು ಇತ್ತೀಚೆಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ದೇವಸ್ಥಾನಗಳಿಗೆ ಹೋಗುವುದೇ ಇಲ್ಲವೆಂದು ಹೇಳುವುದಿಲ್ಲ. ಆದರೆ ನಾನು ಪ್ರತಿನಿತ್ಯ ಪೂಜೆಯನ್ನು ಮಾಡುವುದಿಲ್ಲ. ನಮ್ಮನೆಯಲ್ಲಿ ದೇವರ ಮನೆ ಇದೆ. ಆದರೆ ನಾನು ಆ ಕಡೆಗೆ ತಿರುಗಿಯೂ ನೋಡುವುದಿಲ್ಲ, ಅಲ್ಲಿಗೆ ಹೋಗುವುದೂ ಇಲ್ಲ. ನಮಗೆ ಇರುವ ದೇವರುಗಳು ಯಾವುದರಲ್ಲಿ ನಂಬಿಕೆ ಇದೆ ಎಂದರೆ, ಕೆಳಮನೆಯಲ್ಲಿ ನಾನು ಹೇಳುತ್ತಿದ್ದೆ. ದೇವರಿಗಾಗಿ ನಾವು ದೇವಸ್ಥಾನಗಳಿಗೆ ಹೋಗಬೇಕಾಗಿಲ್ಲ. ಅದಕ್ಕೆ ಬಸವಣ್ಣನವರು "ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ. ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯ ಕೂಡಲಸಂಗಮ ದೇವಾ" ಎಂದು ಹೇಳಿದ್ದಾರೆ. ನಾನು ಸಹ ಇದರಲ್ಲಿ ನಂಬಿಕೆಯನ್ನಿಟ್ಟುಕೊಂಡು ಕೆಲಸ ಮಾಡುವವನು. ಅದಕ್ಕಾಗಿಯೇ ನಾನು ಹೇಳುವುದೇನೆಂದರೆ, ದೇವರು ಎಂದರೆ ಅದನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ನಾನು ನನ್ನ ಕ್ಷೇತ್ರದಲ್ಲಿರುವ ಚಾಮುಂಡಿ ಬೆಟ್ಟಕ್ಕೆ, ತಿರುಪತಿಗೆ ಮತ್ತು ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದೇನೆ.

ಕೆಲವರು ಹಿಮಾಲಯಕ್ಕೆ ದೇವರನ್ನು ಹುಡುಕಿಕೊಂಡು ಹೋಗುತ್ತಾರೆ. ಅಲ್ಲೆಲ್ಲೋ ಕಾಶ್ಮೀರದಲ್ಲಿ ವೈಷ್ಣೋ ದೇವಿ ದೇವಾಲಯಕ್ಕೆ ಹೋಗುವುದು ಮತ್ತು ಇನ್ನೆಲ್ಲೋ ಹೋಗುವುದು ಮಾಡುತ್ತಾರೆ. ಆದರೆ ನಾನು ದೇವಸ್ಥಾನಗಳಿಗೆ ಎಲ್ಲಿಗೂ ಹೋಗುವುದಿಲ್ಲ. ನಾನು ರಾಜಕೀಯಕ್ಕೆ ಬಂದಾಗಿನಿಂದ ನಂಬಿಕೆಯನ್ನಿಟ್ಟುಕೊಂಡಿರುವುದು, ಎರಡನ್ನು ದೇವರು ಎಂದುಕೊಂಡಿದ್ದೇನೆ. ಒಂದು ಈ ರಾಜ್ಯದ ಜನ, ಇನ್ನೊಂದು ನಮ್ಮ ಆತ್ಮಸಾಕ್ಷಿ. ಜನರಿಗೆ ಪ್ರಾಮಾಣಿಕವಾಗಿ ನಾವು ಏನನ್ನು ಹೇಳುತ್ತೇವೆಯೋ ಆ ತರಹ ನಡೆದುಕೊಂಡರೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಂಡರೆ ಬಹುಶಃ ಇದಕ್ಕಿಂತ ದೊಡ್ಡ ದೇವರು ಯಾವುದೂ ಇಲ್ಲ ಎನ್ನುವುದು ನನ್ನ ಒಂದು ಭಾವನೆಯಾಗಿದೆ. ಬಸವಣ್ಣನವರು "ಕಾಯಕವೇ ಕೈಲಾಸ / Work is worship" ಎಂದು ಹೇಳಿದರು. ಇಲ್ಲಿ ವಿಧಾನ ಸೌಧದ ಮುಂದೆಯೂ ಸಹ "ಜನರ ಕೆಲಸ ದೇವರ ಕೆಲಸ" ಅಂದರೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಹಾಕಿದ್ದಾರೆ. ಸರ್ಕಾರ ಇರುವುದು ಯಾರಿಗೋಸ್ಕರ? ಸರ್ಕಾರ ಎಂದರೇನು? It is by the people, of the people and for the people. ಆದ್ದರಿಂದ ಜನರ ಕೆಲಸ ಎಂದರೂ ಒಂದೇ, ಸರ್ಕಾರದ ಕೆಲಸ ಎಂದರೂ ಒಂದೇ. ಆದರೆ ನಾವು ಅದರಲ್ಲಿ ನಂಬಿಕೆಯನ್ನಿಟ್ಟುಕೊಂಡು ಕೆಲಸವನ್ನು ಮಾಡಬೇಕು. ಅದಕ್ಕಾಗಿಯೇ ನಾವು ಇಲ್ಲಿ ಮಾತನಾಡುವಾಗ ಆತ್ಮಸಾಕ್ಷಿಗೆ ಅನುಗುಣವಾಗಿ ಮಾತನಾಡಿದರೆ, ಅದು ಈ ನಾಡಿಗೂ ಒಳ್ಳೆಯದು, ಜನರಿಗೂ ಒಳ್ಳೆಯದು ಮತ್ತು ಜನರೂ ಸಹ ನಮ್ಮನ್ನು ನಂಬುತ್ತಾರೆ ಎನ್ನುವುದು ನನ್ನ ಒಂದು ಭಾವನೆಯಾಗಿದೆ. ಯಾವಾಗಲೂ ಸಹ ಆತ್ಮವಂಚನೆಯನ್ನು ಮಾಡಿಕೊಂಡು ಮಾತನಾಡಬಾರದು. ಸಾಧ್ಯವಾದ ಮಟ್ಟಿಗೆ ನಾವು ಇಲ್ಲಿ ಸಾರ್ವಜನಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಬೇಕು.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

**ಶ್ರೀ ಸಿದ್ಧರಾಮಯ್ಯ**(ಮುಂದುವರೆದಿದೆ)

ವೈಯಕ್ತಿಕವಾಗಿ ಏನೇ ಇರಲಿ, ವೈಯಕ್ತಿಕ ವಿಚಾರಗಳನ್ನು ಇಟ್ಟುಕೊಂಡು ಚರ್ಚೆ ಮಾಡಿದರೆ ಅದರಿಂದ ಸದನದ ಸಮಯ ಹಾಳಾಗುತ್ತದೆ. ಸಾರ್ವಜನಿಕರಿಗೆ ಮತ್ತು ಸಮಾಜಕ್ಕೂ ಅನುಕೂಲ ಆಗುವುದಿಲ್ಲ. ಸುಮ್ಮನೆ ಮಾತನಾಡಿಬಿಡುತ್ತಾರೆ. ಪಂಚೆ ಎಂಥದ್ದು ಹಾಕಿದ್ದಾರೆ, ಚಪ್ಪಲಿ ಎಂಥದ್ದು ಹಾಕಿದ್ದಾರೆ, ವಾಚ್ ಯಾವುದು ಕಟ್ಟಿಕೊಂಡಿದ್ದಾರೆ, ಶರ್ಟ್–ಜುಬ್ಬಾ ಎಂಥದ್ದು ಹಾಕಿಕೊಂಡಿದ್ದಾರೆ ಎಂಬಿತ್ಯಾದಿಗಳ ಬಗ್ಗೆ ಚರ್ಚೆ ಮಾಡಿದರೆ ಅದು ಸಮಾಜಕ್ಕೆ, ಜನರಿಗೆ ಪ್ರಯೋಜನವಾಗುವುದಿಲ್ಲ. ಅದು ಜನಹಿತಾಸಕ್ತಿ ಆಗಿರುವುದಿಲ್ಲ. 60 ದಿನಗಳ ಕಾಲ ಉಭಯ ಸದನಗಳ ಅಧಿವೇಶನ ನಡೆಯಬೇಕು ಎನ್ನುವುದರಲ್ಲಿ ನಾನು ನಂಬಿಕೆ ಇಟ್ಟುಕೊಂಡಿದ್ದೇನೆ. ಹೋದ ಸಲ 60 ದಿನ ಸದನ ನಡೆಯಿತು.

**ಸಭಾಪತಿಗಳು:–** ನಮ್ಮ ಸದನ 61 ದಿನ ನಡೆಯಿತು.

**ಶ್ರೀ ಸಿದ್ಧರಾಮಯ್ಯ:–** ಕಾನೂನು ಮಾಡಿಕೊಂಡ ಮೇಲೆ ಮೊದಲ ಬಾರಿಗೆ 61 ದಿನ ಸದನ ನಡೆದಿದೆ. ಅಲ್ಲಿ 60 ದಿನ ನಡೆಯಿತು.

**ಸಭಾಪತಿಗಳು:–** ತಮ್ಮ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಗಾಂಧಿನಗರದಲ್ಲಿ ಅಖಿಲ ಭಾರತ ಮಟ್ಟದ ಪೀಠಾಸೀನ ಅಧಿಕಾರಿಗಳ ಕಾನ್‌ಫರೆನ್ಸ್ ನಡೆಯಿತು. ನಾನು ಅಲ್ಲಿ, ನಾವು 60 ದಿವಸ ವಿಧಾನ ಮಂಡಲದ ಅಧಿವೇಶನ ನಡೆಸಿದೆವು ಎಂದ ಹೇಳಿದ್ದಕ್ಕೆ, ಕರ್ನಾಟಕ ಸರ್ಕಾರಕ್ಕೆ, ಕರ್ನಾಟಕದ ಶಾಸಕರಿಗೆ ವಿಶೇಷವಾಗಿ ಆ ಸಭೆಯಲ್ಲಿ ಷಹಬಾಸ್‌ಗಿರಿ ಕೊಟ್ಟರು.

**ಶ್ರೀ ಸಿದ್ಧರಾಮಯ್ಯ:–**ಅವರಿಗೂ ಧನ್ಯವಾದಗಳು, ನೀವು ಅಲ್ಲಿ ಹೋಗಿ ಈ ಅಂಶವನ್ನು ಹೇಳಿದ್ದರಿಂದ ನಿಮಗೂ ಧನ್ಯವಾದಗಳು. ಕರ್ನಾಟಕದಲ್ಲಿ 60 ದಿನದ ಅಧಿವೇಶನ ಫಲಪ್ರದ ಅಧಿವೇಶನ ಆಗಬೇಕು. 60 ದಿನಗಳೂ ಕೂಡ ಅರ್ಥಪೂರ್ಣ ಚರ್ಚೆ ಆಗಬೇಕು. ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಇರುತ್ತವೆ, ತಾತ್ವಿಕವಾಗಿ ಭಿನ್ನಾಭಿಪ್ರಾಯಗಳು ಇರುತ್ತವೆ. ಆಚಾರ–ವಿಚಾರಗಳು ಬೇರೆ ಬೇರೆ ಇರುತ್ತವೆ. ಅವೆಲ್ಲ ಕೂಡ ಚರ್ಚೆ ಆಗಬೇಕು, ಆರೋಗ್ಯಕರವಾಗಿ ಇರಬೇಕು. ಆರೂವರೆ ಕೋಟಿ ಜನ ನಮ್ಮನ್ನು ನೋಡುತ್ತಾರೆ. ಆ ಜನ

ನಮ್ಮ ಚರ್ಚೆ ಬಗ್ಗೆ ಭ್ರಮನಿಸನರಾಗಬಾರದು. ಆರೋಗ್ಯಕರ ಚರ್ಚೆಯಾದರೆ ಅದು ಪ್ರಜಾಪ್ರಭುತ್ವದ ಬೆಳವಣಿಗೆಗೆ ಅನುಕೂಲವಾಗುತ್ತದೆ, ಸಮಾಜದ ಬೆಳವಣಿಗೆಗೂ ಅನುಕೂಲವಾಗುತ್ತದೆ, ರಾಜ್ಯದ ಜನತೆಗೂ ಅನುಕೂಲ ಆಗುತ್ತದೆ. ಅಂತಹ ಚರ್ಚೆಗಳು ಆಗಬೇಕು ಎನ್ನುವುದು ನನ್ನ ಆಸೆ. ನಾನು ಮುಖ್ಯಮಂತ್ರಿ ಆದಾಗ ಈ ತರಹದ್ದೆಲ್ಲಾ ಆಗಬೇಕು ಎಂದುಕೊಂಡಿದ್ದೆ. ಎಷ್ಟು ದಿನ ಚರ್ಚೆ ಆಗುತ್ತದೆಯೋ ಅಷ್ಟು ದಿನ ಚರ್ಚೆ ನಡೆಯಲಿ ಎಂದು ಬಯಸುವವನು. ಸಣ್ಣಪುಟ್ಟ ವಿಚಾರಗಳ ಬಗ್ಗೆ, ಕ್ಷುಲ್ಲಕವಾದ ವಿಚಾರಗಳ ಬಗ್ಗೆ, ಕಾರಣಗಳಿಲ್ಲದೇ ಸಮಯ ಹಾಳು ಮಾಡುವಂಥದ್ದು ಅಷ್ಟೊಂದು ಆರೋಗ್ಯಕರ ಅಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಉತ್ತಮ ರೀತಿಯ ಚರ್ಚೆ ಯಾವಾಗಲೂ ನಡೆಯಲಿ ಎಂದು ನಾನು ಆಶಿಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:–** ನೀವು ಆಶಾವಾದಿಗಳು.

**ಶ್ರೀ ಸಿದ್ಧರಾಮಯ್ಯ:–** ನಾನು ಯಾವಾಗಲೂ ಆಶಾವಾದಿಯಾಗಿರುತ್ತೇನೆ. ಕುರಿ ಕಾಯುತ್ತಿದ್ದ ಹಿನ್ನೆಲೆಯಿಂದ ಬಂದಂಥವರು, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿ ಆಗುವುದು ಎಷ್ಟು ಕಷ್ಟದ ಕೆಲಸ ಅಲ್ಲವೇ? ಮುಖ್ಯಮಂತ್ರಿ ಆದಮೇಲೆ ಆ ಸೀಟನ್ನು ಉಳಿಸಿಕೊಳ್ಳುವುದು ಎಷ್ಟು ಕಷ್ಟ ಅಲ್ಲವೇ? ನಾನು ಈ ಮಾತನ್ನು ಎಲ್ಲರಿಗೂ ಹೇಳುತ್ತಿದ್ದೇನೆ. ನಮ್ಮ ಇತಿಹಾಸವನ್ನು ತೆಗೆದು ನೋಡಿದರೆ, ಯಾರು ಸಮಾಜದಲ್ಲಿ ದನಿ ಇಲ್ಲದವರ ಪರವಾಗಿ ಮಾತನಾಡುತಾರೋ, ಬಡವರ ಬಗ್ಗೆ ಮಾತನಾಡುತ್ತಾರೋ, ಶೋಷಿತರ ಬಗ್ಗೆ ಮಾತನಾಡಿತ್ತಾರೋ. ಅವಕಾಶ ಇಲ್ಲದೇ ವಂಚಿತರಾದವರ ಬಗ್ಗೆ ಮಾತನಾಡುತ್ತಾರೋ ಅಂಥವರ ವಿರುದ್ಧವಾಗಿಯೇ, ವ್ಯವಸ್ಥೆ ಪರವಾಗಿ ಇರುವಂಥವರು ಮಾತನಾಡುತ್ತಾರೆ, ವಾಸ್ತವ ಅಂಶಗಳನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿರುವುದಿಲ್ಲ. ಅವ್ಯವಸ್ಥೆ ವಿರುದ್ಧವಾಗಿ ಯಾರು ಇರುತ್ತಾರೋ ಅವರಿಗೆ ಅನೇಕ ಅಡೆತಡೆಗಳು ಬರುತ್ತವೆ, ನೋವುಗಳು ಬರುತ್ತವೆ, ಅನ್ಯಾಯಗಳಾಗುತ್ತವೆ, ತೊಂದರೆಗಳಾಗುತ್ತವೆ. ಬಸವಣ್ಣನವರ ಕಾಲದಿಂದಲೂ ಇಂಥದ್ದನ್ನು ನೋಡಬಹುದು. ಬಸವಣ್ಣ, ಗಾಂಧಿಜಿ, ಅಂಬೇಡ್ಕರ್, ದೇವರಾಜ್ ಅರಸು, ಇಂದಿರಾಗಾಂಧಿ ಇಂಥವರ ಕಾಲವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಹಾಗೆಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾವು ಓಡಿ ಹೋಗುವುದಕ್ಕಾಗುವುದಿಲ್ಲ. ನಾವೆಲ್ಲರೂ ಹೋರಾಟದ ಹಿನ್ನೆಲೆಯಿಂದ ಬಂದಿದ್ದೇವೆ. ನಾನು ಇದ್ದಕ್ಕಿದ್ದ ಹಾಗೆ ಮುಖ್ಯಮಂತ್ರಿ ಆದವನಲ್ಲ. ಕೆಲವರು, ಸಿದ್ಧರಾಮಯ್ಯ ಸಮಾಜವಾದಿಯಾಗಿ ಇದ್ದವರು, ಈಗ ಮಜಾವಾದಿ ಆಗಿದ್ದಾರೆ ಎಂದು ಹೇಳಿದರು. ಯಾರೋ ನಮ್ಮ ಸ್ನೇಹಿತರು ಕೊಟ್ಟ ವಾಚ್ ಕಟ್ಟಿಕೊಂಡಿದ್ದಕ್ಕೆ ಮಜಾವಾದಿ ಎಂದು ಎಲ್ಲಾ ಕಡೆ ಹೇಳಿದ್ದೇ ಹೇಳಿದ್ದು. ನಿನ್ನೆ

ಕೂಡ ಯಾರೋ ದೆಹಲಿಯಲ್ಲಿ ಪ್ರದರ್ಶನ ಮಾಡುತ್ತಿದ್ದರು. ಒಬ್ಬ ಎನ್ಆರ್ಐ, 30 ವರ್ಷದ ಸ್ನೇಹಿತ, ಆತ ಕೈಗೆ ಕಟ್ಟಿಕೊಂಡು ಬಂದಿದ್ದ ವಾಚನ್ನು, ನೀವು ಕಟ್ಟಿಕೊಳ್ಳಿ ಎಂದು ಬಲಾತ್ಕಾರ ಮಾಡಿ ಕಟ್ಟಿದ. ನಾನು ಕಟ್ಟಿಕೊಂಡೆ. ನಾನು ಯಾವತ್ತೂ ಸಮಾಜವಾದಿ ಎಂದು ಹೇಳಿಕೊಂಡಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಒಂದು ನಿಮಿಷ ನಾನು ಮಾತನಾಡುತ್ತೇನೆ . .

**ಶ್ರೀ ಸಿದ್ಧರಾಮಯ್ಯ:-** ಬೇಡ ಕುಳಿತುಕೊಳ್ಳಿ, ನಾವು ನಿಮ್ಮಷ್ಟು ಬುದ್ಧಿವಂತರಲ್ಲ. ನಾನು ಏನೇನು ಹೇಳುಬೇಕು ಎಂದಿದ್ದೆನೋ ಅದೆಲ್ಲವೂ ಮರೆತು ಹೋಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ನೀವು ಹೇಗೆ ಕುರುಬರೋ ನಾನೂ ಹಾಗೆಯೇ ಕುರುಬ. ಮಾನ್ಯ ಮುಖ್ಯಮಂತ್ರಿಯವರು ಜಾತಿಯನ್ನು ತಂದು . .

**ಶ್ರೀ ಸಿದ್ಧರಾಮಯ್ಯ:-** ಜಾತಿ ಬಗ್ಗೆ ನಾನು ಹೇಳಲಿಲ್ಲ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಮುಖ್ಯಮಂತ್ರಿಗಳು, ನಾನು ಕುರಿ ಕಾಯಿಕೊಂಡು ಇದ್ದವನು ಮುಖ್ಯಮಂತ್ರಿ ಆಗಿದ್ದು ಸಂತೋಷ, ಅದನ್ನು ಉಳಿಸಿಕೊಳ್ಳುವುದು ಇನ್ನೂ ಕಷ್ಟ, ಈ ವ್ಯವಸ್ಥೆಯಲ್ಲಿ . . .

**ಶ್ರೀ ಸಿದ್ಧರಾಮಯ್ಯ:-** ನಾನು ಸತ್ಯವನ್ನು ಹೇಳುತ್ತಿದ್ದೇನೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ನಾನು ಇಲ್ಲ ಎಂದು ಹೇಳುತ್ತಿಲ್ಲ. ಇಲ್ಲಿ ಜಾತಿ ಪ್ರಶ್ನೆ ಬರುವುದಿಲ್ಲ. ಏಕೆಂದರೆ, ಹಿಂದೆ ಮಾನ್ಯ ಜನಾರ್ಧನ ಪೂಜಾರಿ, ಮಾನ್ಯ ಹರಿಪ್ರಸಾದ್, ಮಾನ್ಯ ಬಂಗಾರಪ್ಪ, ಮಾನ್ಯ ವೀರಪ್ಪ ಮೊಯ್ಲಿ ಇಂಥವರನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಿದರು. ಇಲ್ಲಿ ಜಾತಿ ಪ್ರಶ್ನೆ ಬರುವುದಿಲ್ಲ. ಬಿಜೆಪಿಯಲ್ಲೂ ಹಾಗೆಯೇ ಆಯಿತು, ಮಾನ್ಯ ಯಡಿಯೂರಪ್ಪನವರನ್ನು ಇಳಿಸಿದರು. ಇಲ್ಲಿ ಜಾತಿ ಬರುವುದಿಲ್ಲ. ಇದಕ್ಕೆ ಜಾತಿ ಕಾರಣ ಅಲ್ಲ. ಪಕ್ಷದಲ್ಲಿ ಏಕತೆ ಇರಬೇಕು. . . .

**ಶ್ರೀ ಸಿದ್ಧರಾಮಯ್ಯ:-** ನಾನು ರಾಜಕೀಯ ಮಾತನಾಡಲಿಲ್ಲ. ನೀವು ರಾಜಕೀಯಕ್ಕೆ ಹೋಗುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:**-ಪಕ್ಷದ ಏಕತೆಗೆ ಪೆಟ್ಟಾದಾಗ ಈ ರೀತಿ ಸಮಸ್ಯೆ ಬರುತ್ತದೆ. ನನ್ನ ಹತ್ತಿರ ಒಂದು ಪೇಪರ್ ಕಟ್ಟಿಂಗ್ ಇದೆ, ನಾನು ಅದನ್ನು ಇವತ್ತು ತಂದಿಲ್ಲ, ಬಜೆಟ್ ಭಾಷಣದ ನಡೆಯುವ ಸಂದರ್ಭದಲ್ಲಿ ಅದನ್ನು ತರುತ್ತೇನೆ. ಒಂದು ಪತ್ರಿಕೆಯಲ್ಲಿ, ಹಿಂದುಳಿದವರಿಗೆ ಈ ರೀತಿ ಆಗುತ್ತಿದೆ ಎನ್ನುವುದನ್ನು ಪ್ರಸ್ತಾಪ ಮಾಡುತ್ತಿರುವುದು ಇದೆ. ಇದು ಖಂಡಿತಾ ಹಿಂದುಳಿದವರ ಪ್ರಶ್ನೆಯಲ್ಲ. ನಿಮ್ಮ ಪಕ್ಷದ ಆಂತರಿಕ ಗೊಂದಲ. ಕಾಂಗ್ರೆಸ್ ಪಕ್ಷದ ಆಂತರಿಕ ಗೊಂದಲ, ನಿಮ್ಮನ್ನು ಇಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

**ಡಾ:ಮತ್ತಿಕಟ್ಟಿ ವೀರಣ್ಣ:**- ಕಾಂಗ್ರೆಸ್ ಪಕ್ಷದಲ್ಲಿ ಆ ರೀತಿ ಇಲ್ಲ, ಹಾಗೆ ಹೇಳಬೇಡಿ . . .

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:**-ನೀವೇಕೆ ಮಾತನಾಡುತ್ತಿದ್ದೀರಿ? ಮುಖ್ಯಮಂತ್ರಿಗಳು ನಿಮಗಿಂತ ಚೆನ್ನಾಗಿ ಉತ್ತರ ಕೊಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಮುಖ್ಯಮಂತ್ರಿಗಳು ನಿಮಗಿಂತಲೂ ಹೆಚ್ಚಿನ ಕಾಂಗ್ರೆಸಿಗರಾಗಿದ್ದಾರೆ, ಮುಖ್ಯಮಂತ್ರಿ ಆಗಿರುವ ತನಕ ನಿಮಗಿಂತಲೂ ಹೆಚ್ಚು ಕಾಂಗ್ರೆಸಿಗರಾಗಿರುತ್ತಾರೆ. ಅವರಿಗೆ ಉತ್ತರ ಕೊಡುವುದಕ್ಕೆ ಬರುತ್ತದೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಮಾತನಾಡಿದ ಮೇಲೆ ನೀವು ಮಾತನಾಡಿ. ಮಾನ್ಯ ಸಭಾಪತಿಗಳೆ, ಮುಖ್ಯಮಂತ್ರಿಗಳಾಗಿ ಸಿದ್ಧರಾಮಯ್ಯನವರಿಗೆ ತೊಂದರೆ ಆಗುತ್ತಿದೆ. ಇದು ಇಡೀ ರಾಜ್ಯಕ್ಕೆ ಗೊತ್ತು. ಇದರ ಬಗ್ಗೆ ಅನುಮಾನ ಇಲ್ಲ. ಏಕೆ ತೊಂದರೆ ಕೊಡುತ್ತಿದ್ದಾರೆ, ಯಾರ್‍ಯಾರು ತೊಂದರೆ ಕೊಡುತ್ತಿದ್ದಾರೆ ಎನ್ನುವುದು ಆಂತರಿಕವಾಗಿ ನಿಮಗೆ ಚೆನ್ನಾಗಿ ಗೊತ್ತು. ಬಹಿರಂಗವಾಗಿ ನಮಗೆ ಜಾಸ್ತಿ ಗೊತ್ತಿಲ್ಲ. ನೀವೇ ಮುಖ್ಯಮಂತ್ರಿಗಳಾಗಿರಬೇಕು ಎಂದು ಅನೇಕರ ಆಕಾಂಕ್ಷಿಸುತ್ತಾರೆ, ಇಲ್ಲ ಎಂದು ಹೇಳುತ್ತಿಲ್ಲ. . . . . (ಗೊಂದಲ)

(ಮುಂದು . . .)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ನೀವು ಹಿಂದುಳಿದ ವರ್ಗದವರಿಗೆ ಮುಖ್ಯಮಂತ್ರಿ ಸ್ಥಾನವನ್ನು ತೆಗೆಯುವಂತಹ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದಾಗ, ನಾವು ಅಲ್ಲಿಯವರೆಗೂ ಅಲ್ಲ ಎಂದು ತಿಳಿದುಕೊಂಡಿದ್ದೆವು.

**ಶ್ರೀ ಸಿದ್ದರಾಮಯ್ಯ:-** ಹಾಗೆಂದು ನಾನು ಎಲ್ಲಿ ಹೇಳಿದ್ದೇನೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಪತ್ರಿಕಾ ಹೇಳಿಕೆಯನ್ನು ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ನೀವು ಪತ್ರಿಕೆಯನ್ನು ಆಧಾರವಾಗಿಟ್ಟುಕೊಳ್ಳಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಬಂಗಾರಪ್ಪನವರು, ವೀರಪ್ಪಮೊಯ್ಲಿಯವರು, ಅವರೆಲ್ಲಾ ಇದೇ ರೀತಿ ಅನುಭವಿಸಿದರು. ನಿಮ್ಮ ಪಕ್ಷದಲ್ಲಿ ವೀರೇಂದ್ರ ಪಾಟೀಲ್‌ರವರು ಇದೇ ರೀತಿ ಅನುಭವಿಸಿದರು. ವೀರೇಂದ್ರ ಪಾಟೀಲ್‌ರವರು ಅಧಿಕಾರದ ಗದ್ದುಗೆಯನ್ನು ಏರಿಕೊಂಡು ಹೋಗುವುದರೊಳಗೆ ಅವರು ಯಾವ ರೀತಿ ಇಳಿದರು ಎಂಬುದು ನಿಮಗೆ ಗೊತ್ತಿದೆ. ನಿಮಗೆ ತೊಂದರೆ ಇದೆ, ನಿಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸುವ ಪ್ರಯತ್ನ ನಿಮ್ಮ ಪಕ್ಷದಿಂದ ನಡೆಯುತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ತಾವು ಪ್ರೊಟೆಕ್ಷನ್ ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ರೇವಣ್ಣನವರೇ, ಮಾನ್ಯ ಮುಖ್ಯಮಂತ್ರಿಗಳು ಫಸ್ಟ್ ಕ್ಲಾಸ್ ಉತ್ತರ ಕೊಡುತ್ತಾರೆ. ಅವರು ಒಂದು ಕಡೆ ಕುರಿ ಕಾಯುತ್ತಿದ್ದರೂ ಕೂಡ ವಕೀಲರು. ಇದರಲ್ಲೇನು ಅನುಮಾನ ಇಲ್ಲ. ಕುರಿ ಕಾಯುತ್ತಿದ್ದ ವ್ಯಕ್ತಿಯೊಬ್ಬ ಮುಖ್ಯಮಂತ್ರಿಯಾಗಿರುವುದಕ್ಕೆ ರಾಜ್ಯದ ಜನ ಬಹಳ ಸಂತೋಷಪಟ್ಟಿದ್ದಾರೆ. ನಾನು ಇಲ್ಲ ಎಂದು ಹೇಳಿಲ್ಲ. *(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟುವುದರ ಮೂಲಕ ಮುಖ್ಯಮಂತ್ರಿಗಳನ್ನು ಅಭಿನಂದಿಸಿದರು)* ಈಗ ಅದೇ ಕಾಂಗ್ರೆಸ್‌ನವರು ಕೆಳಗೆ ಇಳಿಸುತ್ತಿದ್ದಾರೆ. ಈಗ ಚಪ್ಪಾಳೆ ಹೊಡೆಯಿರಿ. ಇದೇ ಕಾಂಗ್ರೆಸ್‌ನವರು ಕೆಳಗೆ ಇಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗಾದರೆ ಚಪ್ಪಾಳೆ ಹೊಡೆಯಿರಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರನ್ನು ಇಳಿಸುವಂತಹ ಪ್ರಯತ್ನ ನಡೆಯುತ್ತಿದೆ. ನಾನು ಅದಕೋಸ್ಕರ ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾನು ಇಲ್ಲವೆಂದು ಹೇಳಲಿಲ್ಲ. ಮುಖ್ಯಮಂತ್ರಿ ಸ್ಥಾನದಿಂದ ಇಳಿಸುವುದಕ್ಕೆ ನಾನು ಒಬ್ಬ ಹಿಂದುಳಿದ ವರ್ಗದವನು, ಅದಕ್ಕೆ ಈ ಪ್ರಯತ್ನ ನಡೆಯುತ್ತಿದೆ, ನನಗೆ ನೋವಾಗಿದೆ ಎಂದು ಹೇಳಿದ್ದೀರಲ್ಲಾ, ಇದನ್ನು ನಾನು ಒಪ್ಪುವುದಿಲ್ಲ. ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಮುಖ್ಯಮಂತ್ರಿಯಾಗಿ ನೀವು ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿರುವಂತಹ ವ್ಯಕ್ತಿಗಳು ನಿಮ್ಮನ್ನು ಇಳಿಸುತ್ತಿದ್ದಾರೆ, ಇದನ್ನು ಬಹಿರಂಗವಾಗಿ ಹೇಳಿ. ಅದು ಬಿಟ್ಟು ನೀವು ಜಾತಿ ಲೇಪ ಹಚ್ಚಿದರೆ ಅದು ಒಳ್ಳೆಯದಲ್ಲ ಎನ್ನುವುದು ನನ್ನ ಭಾವನೆ.

**ಶ್ರೀ ಹೆಚ್.ಎಂ.ರೇವಣ್ಣ:-** ನೀವು ಐದು ವರ್ಷಗಳಲ್ಲಿ ಮೂರು ಜನರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದೀರಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಜಾತಿಯಲ್ಲ, ಏಕತೆ ಇರಲಿಲ್ಲ. ಇದು ಜಾತಿಯತೇ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ಈಶ್ವರಪ್ಪನವರೇ, ಆಯಿತು. ಮಾನ್ಯ ಸಭಾಪತಿಯವರೇ, ನನ್ನನ್ನು ಮುಖ್ಯಮಂತ್ರಿ ಮಾಡಿರುವುದೇ ಕಾಂಗ್ರೆಸ್ ಪಕ್ಷ.

**(ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)**

ಸೋನಿಯಾಗಾಂಧಿಯವರು, ರಾಹುಲ್ ಗಾಂಧಿಯವರು ನನ್ನನ್ನು ಮುಖ್ಯಮಂತ್ರಿಯಾಗಿ ಮಾಡಿರುವುದು. ನಮ್ಮ ಶಾಸಕರೆಲ್ಲರೂ ಸೇರಿ ಮುಖ್ಯಮಂತ್ರಿ ಮಾಡಿರುವುದಲ್ಲ. ಕಾಂಗ್ರೆಸ್ ಪಕ್ಷ ಮಾಡಿರುವುದು. ನಾನು ಆ ಅರ್ಥದಲ್ಲಿ ಹೇಳಲಿಲ್ಲ. ನಾನು ವ್ಯವಸ್ಥೆ ಬಗ್ಗೆ ಮಾತ್ರ ಹೇಳಿದ್ದೇನೆ ಅಷ್ಟೆ. 'ವ್ಯವಸ್ಥೆ' ಹೇಗೆ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ಹೇಳಿದ್ದೇನೆ. ಬಸವಣ್ಣನವರ ಕಾಲದಿಂದಲೂ 'ವ್ಯವಸ್ಥೆ' ಹೇಗೆ ಕೆಲಸ ಮಾಡುತ್ತಾ ಬರುತ್ತಿದೆ ಎಂದು ಅಷ್ಟೆ ಹೇಳಿದ್ದೇನೆಯೇ ಹೊರತು ಬೇರೆ ವೈಯುಕ್ತಿಕವಾಗಿ ಅಲ್ಲ. ಹಾಗಾದರೆ ನಿಮ್ಮ ಉಮಾ ಭಾರತಿಯವರನ್ನು ಸಣ್ಣ ವಿಚಾರಕ್ಕೆ ತೆಗೆದು ಹಾಕಲಿಲ್ಲವೆ? ವ್ಯವಸ್ಥೆ ಆ ರೀತಿ ಆಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಉಮಾ ಭಾರತಿಯವರನ್ನು ತೆಗೆದು ಹಾಕಿರುವುದು ಜಾತಿಯಿಂದ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ನಾನು ಜಾತಿ ಎಂದು ಹೇಳಲೇ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:- ಬಜೆಟ್** ಭಾಷಣದಲ್ಲಿ ನೀವೇನು ಹೇಳಿಕೆಯನ್ನು ಕೊಟ್ಟಿದ್ದೀರಿ ಎಂದು ತೆಗೆದಿಟ್ಟಿದ್ದೇನೆ, ಅದನ್ನು ನಾನು ನಿಮಗೆ ತೋರಿಸುತ್ತೇನೆ. ಅದನ್ನು ನಾನು ಈಗ ತಂದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಈಗ ನಾನು ಏಕೆ ಹೇಳಿದ್ದೇನೆಂದರೆ, ಈ ನಮ್ಮ ವ್ಯವಸ್ಥೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಯಾರು ಪ್ರಗತಿಪರವಾಗಿ ಇರುತ್ತಾರೆ, ಯಾರು ಬಡವರ ಪರವಾಗಿ ಇರುತ್ತಾರೆ, ಧ್ವನಿ ಇಲ್ಲದವರ ಪರವಾಗಿ, ವಂಚಿತರ ಪರವಾಗಿ ಇರುತ್ತಾರೆ, ಅವರನ್ನೆಲ್ಲಾ ಹತ್ತಿಕ್ಕುವಂತಹ ಪ್ರಯತ್ನಗಳು ಮೊದಲನಿಂದಲೂ ನಡೆದುಕೊಂಡು ಬಂದಿವೆ ಈಗಲೂ ನಡೆಯುತ್ತಿದೆ, ಮುಂದೆಯೂ ನಡೆಯುತ್ತದೆ ಎಂದು ನಾನು ಹೇಳಿದೆ. ಇಂತಹ ವ್ಯವಸ್ಥೆಯೊಳಗೆ ನಮ್ಮಂಥವರು ಮುಖ್ಯಮಂತ್ರಿಯಾಗುವುದು ಕಷ್ಟ, ಅದನ್ನು ಉಳಿಸಿಕೊಳ್ಳುವುದು ಕಷ್ಟ ಎಂದು ನಾನು ಹೇಳಿದ್ದೇನೆ ಅಷ್ಟೆ. ನಾನು ಯಾರನ್ನೂ ಬೆಟ್ಟು ಮಾಡಿ ಹೇಳಿರತಕ್ಕಂಥದ್ದಲ್ಲ. ನಾನು ವ್ಯವಸ್ಥೆ ಬಗ್ಗೆ ಮಾತನಾಡಿದ್ದೇನೆ. ನಾನು ಕೆಳಮನೆಯಲ್ಲಿ ಹೇಳುತ್ತಿದ್ದೆ, ಈ ವ್ಯವಸ್ಥೆಯಲ್ಲಿ ನಾವೇನು ಮಾಡುವುದಕ್ಕಾಗುವುದಿಲ್ಲ. We have to live in this system. ಈ ವ್ಯವಸ್ಥೆಯಲ್ಲಿ ಬದುಕಲೇ ಬೇಕು, ಹೋರಾಟ ಮಾಡಲೇಬೇಕು. ಈಸಬೇಕು,

ಇದ್ದು ಜಯಿಸಲೇ ಬೇಕು. ವಿರೋಧ ಪಕ್ಷದ ನಾಯಕರನ್ನು ಮುಖ್ಯಮಂತ್ರಿ ಮಾಡಿದರೆ ಸಂತೋಷವಲ್ಲವೆ? ಮಾನ್ಯ ಈಶ್ವರಪ್ಪನವರನ್ನು ಮುಖ್ಯಮಂತ್ರಿ ಮಾಡಿದರೆ ನನಗೆ ಸಂತೋಷ.

**ಶ್ರೀ ರಾಮಚಂದ್ರಗೌಡ:-** ನಮ್ಮ ರಾಜ್ಯದಲ್ಲಿ ಶ್ರೀ ಚೆಂಗಲ ರಾಯ ರೆಡ್ಡಿಯವರನ್ನು ತೆಗೆದರು. ಶ್ರೀ ಕೆಂಗಲ್ ಹನುಮಂತಯ್ಯನವರನ್ನು ತಂದರು, ನಂತರ ನಿಜಲಿಂಗಪ್ಪನವರನ್ನು ತಂದರು. ನೀವು ಹೇಳಿದ್ದು ಸರಿಯಾಗಿದೆ. ನಿಮ್ಮ ಮಾತಿಗೆ ನಾನು ಸೇರಿಸುತ್ತಿದ್ದೇನೆ. ವ್ಯವಸ್ಥೆ ಆ ರೀತಿ ಇದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಯಡಿಯೂರಪ್ಪನವರನ್ನು ತೆಗೆದರು, ನಂತರ ಸದಾನಂದಗೌಡರನ್ನು ತೆಗೆದು ಜಗದೀಶ್ ಶೆಟ್ಟರ್‌ರವರನ್ನು ತಂದರು. ನಾನು ಸಿಸ್ಟಮ್ ಬಗ್ಗೆಯೇ ಹೇಳುತ್ತಿರುವುದು. I am confining to the system. ರಾಜಕೀಯವಾಗಿ ಯಾರ ಮೇಲೂ ಹೇಳುತ್ತಿಲ್ಲ. ಜಾತಿಗಳನ್ನು ನಾವು ಬದಲಾವಣೆ ಮಾಡುವವರೆಗೂ ಅದು ಇದ್ದೇ ಇರುತ್ತದೆ. ಜಾತಿ ಬೇರುಗಳು ಅಷ್ಟು ಸುಲಭವಾಗಿ ಹೋಗುವುದಿಲ್ಲ. ಏಕೆಂದರೆ, ಇಲ್ಲಿ ಜಾತಿ ಬಹಳ ಆಳವಾಗಿ ಬೇರುಬಿಟ್ಟಿವೆ. ಆ ಬೇರುಗಳನ್ನು ಕತ್ತರಿಸಿ ಹಾಕುವವರೆಗೂ ಕೂಡ ಜಾತಿ ಹೋಗುವುದಿಲ್ಲ. ಅಷ್ಟರ ಮಟ್ಟಿಗೆ ಅದಕ್ಕೆ ನೀರೆರೆದು ಅದು ಆಳವಾಗಿ ಬೇರು ಬಿಟ್ಟುಬಿಟ್ಟಿದೆ. ಒಂದೊಂದು ಸಾರಿ ಜಾತಿ ವ್ಯವಸ್ಥೆ ಬಗ್ಗೆ ನಾನು ಹೇಳುತ್ತಿರುತ್ತೇನೆ. ನಾವೆಲ್ಲರೂ ಊರಿನಲ್ಲಿ ಹುಡುಗರಿರುವಾಗ ಬಾವಿಯಿಂದ ನೀರು ಸೇದುವುದಕ್ಕೆ ಹೋಗುತ್ತಿದ್ದೆವು. ಆಗ ತೆರೆದ ಬಾವಿಗಳಿರುತ್ತಿದ್ದವು. ಈಗೆಲ್ಲಾ ಬಾವಿಗಳೇ ಇಲ್ಲ ಹಾಗೂ ಬೋರ್‌ವೆಲ್‌ಗಳು ಬಂದುಬಿಟ್ಟಿವೆ. ಆ ಬೋರ್‌ವೆಲ್‌ಗಳು ಸಹ ನೀರಿಲ್ಲದೇ ಬತ್ತು ಹೋಗಿವೆ. ಬಿಂದಿಗೆ ಮುಂತಾದವು ಬಿದ್ದಾಗ ಅವುಗಳನ್ನು ತೆಗೆಯಲು ಕೆಳಗಿಳಿದರೆ ತೆರೆದ ಬಾವಿಯಲ್ಲಿ ಗುಬ್ಬಚ್ಚಿಗಳು ಗೂಡು ಕಟ್ಟಿಕೊಂಡಿರುವುದನ್ನು ನೋಡುತ್ತಿದ್ದೆವು. ಗುಬ್ಬಚ್ಚಿಗಳು ಗೂಡು ಕಟ್ಟಲು ಹುಲ್ಲು, ಸತ್ತೆ ಮುಂತಾದವುಗಳನ್ನು ಅಲ್ಲಿ ತೆಗೆದುಕೊಂಡು ಹೋಗಿ ಹಾಕಿಕೊಂಡುಬಿಡುತ್ತಿದ್ದವು. ಈ ಕಸ ಎಲ್ಲಾ ಕೆಳಗಡೆ ಬಿದ್ದು ನೀರೆಲ್ಲಾ ಮುಚ್ಚಿ ಹೋಗುತ್ತಿತ್ತು. ಆದರೂ ಸಹ ನಾವು ಶುದ್ಧವಾದ ನೀರನ್ನೇ ತೆಗೆದುಕೊಳ್ಳುತ್ತಿದ್ದೆವು ಮತ್ತು ಅದನ್ನೇ ಕುಡಿಯುತ್ತಿದ್ದೆವು.

ಬಿಂದಿಗೆಯನ್ನು ಬಾವಿಗೆ ಬಿಟ್ಟು ಅದನ್ನು ನೀರಿನ ಮೇಲೆ ಕೆಳಗೆ ಆಡಿಸುತ್ತಿದ್ದೆವು. ನಿಮ್ಮ ಮನೆಗಳಲ್ಲಿಯೂ ಸಹ ಬಾವಿಗಳು ಇತ್ತೆಂದು ಭಾವಿಸುತ್ತೇನೆ.

**ಸಭಾಪತಿಯವರು:-** ನಾನು ಸಹ ಬಾವಿಯಿಂದ ನೀರನ್ನು ಸೇದಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಬಾವಿಯಲ್ಲಿರುವ ಕಸ ಎಲ್ಲಾ ಆ ಕಡೆ ಈ ಕಡೆ ಆದಾಗ ನಾವು ಅಲ್ಲಿಂದ ನೀರನ್ನು ತೆಗೆದುಕೊಳ್ಳುತ್ತಿದ್ದೆವು. ಸ್ವಲ್ಪ ಹೊತ್ತಿನ ನಂತರ ಪುನಃ ಕಸ ಅಲ್ಲಿಗೆ ಸೇರಿಕೊಂಡು ಬಿಡುತ್ತಿತ್ತು. ನಮ್ಮ ಜಾತಿ ವ್ಯವಸ್ಥೆಯೂ ಸಹ ಈ ರೀತಿಯಾಗಿದೆ. ಸಮಾಜ ಸುಧಾರಕರೆಲ್ಲಾ ಬಂದು ಸಮಾಜವನ್ನು ಸುಧಾರಣೆ ಮಾಡಲಿಕ್ಕೆ ಏನೇನು ಪ್ರಯತ್ನಗಳು ನಡೆದಿವೆಯೋ, ಆ ಪ್ರಯತ್ನಗಳನ್ನು ಮಾಡಿದಾಗ ಸ್ವಲ್ಪ ಬದಲಾವಣೆಯಾಗುತ್ತದೆ. ಈಗ ನಾವು ಬಸವಣ್ಣನವರ ವಿಚಾರಧಾರೆಯನ್ನು ಹೇಳುತ್ತಲೇ ಇದ್ದೇವೆ. "*ಇವನ್ಯಾರವಾ ಇವನ್ಯಾರವಾ ಇವನ್ಯಾರವಾ ಎಂದೆನ್ನದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ*" ಎಂದು ಸುಮಾರು 850 ವರ್ಷಗಳಿಂದ ಹೇಳುತ್ತಲೇ ಇದ್ದೇವೆ. ಆಮೇಲೆ "*ಇವ ನಿಮ್ಮವ ಇವ ನಿಮ್ಮವ ಇವ ನಿಮ್ಮವ* "ಎನ್ನುತ್ತೇನೆ. ಆದರೆ ಜಾತಿ ವ್ಯವಸ್ಥೆ ಅಲ್ಲಿಯೇ ಇದೆ. ಏನಾದರೂ ಬದಲಾವಣೆ ಆಗಿದೆಯೇ? ನಮಗೆ ಬಹಳ ನೋವು ಆಗುವಂತಹ ವಿಷಯವೇನೆಂದರೆ, ವಿದ್ಯಾವಂತರು, ಶಿಕ್ಷಣವನ್ನು ಪಡೆದುಕೊಂಡವರು ಸಹ ಈ ವ್ಯವಸ್ಥೆಯಿಂದ ಹೊರಗಡೆಗೆ ಬರುವುದಕ್ಕೆ ಸಾಧ್ಯವಾಗಿಲ್ಲ. ಇನ್ನು ಅವರಿಗೆ ವೈಜ್ಞಾನಿಕವಾಗಿ, ವೈಚಾರಿಕವಾಗಿ ಯೋಚನೆ ಮಾಡತಕ್ಕಂಥ ಶಕ್ತಿ ಬಂದಿಲ್ಲ. ಈಗ ನಾವು ಜಾತ್ಯಾತೀತ ಎಂದು ಹೇಳಿದ ತಕ್ಷಣವೇ ಮಾನ್ಯ ಮಧುಸೂದನ್‌ರವರು ಮಾತನಾಡಲು ಎದ್ದು ನಿಲ್ಲುತ್ತಾರೆ. ಅವರಲ್ಲ, ಕೋಮುವಾದಿಗಳು ಆ ರೀತಿ ಹೇಳುತ್ತಾರೆಂದು ಹೇಳಿದ್ದು. Mr.Madhusudan is not a communal. ಜಾತ್ಯಾತೀತ ಎಂದ ತಕ್ಷಣವೇ ಕೋಮುವಾದಿಗಳು ಎದ್ದು ನಿಂತುಬಿಡುತ್ತಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ,...

**ಶ್ರೀ ಸಿದ್ದರಾಮಯ್ಯ:-** ನಾನು ಕೋಮುವಾದಿಗಳಿಗೆ ಹೇಳಿದ್ದೇ ಹೊರತು ಮಾನ್ಯ ರಾಮಚಂದ್ರಗೌಡರಿಗಲ್ಲ. ನಾನು ಅವರಿಗೆ ಆ ರೀತಿ ಹೇಳುವುದೇ ಇಲ್ಲ. You are a secular and gentleman. ಯಾರು ಸೆಕ್ಯುಲರ್ ಅಲ್ಲವೋ ಅವರಿಗೆ ನಾನು ಹೇಳುವುದು. ಆದ್ದರಿಂದ ನಮ್ಮ ಸಾಮಾಜಿಕ ವ್ಯವಸ್ಥೆ ಆ ರೀತಿ ಇದೆ. ನಾವು ಇದರಿಂದ ಹೊರಗಡೆ ಬರಬೇಕೆನ್ನುವುದು ನಮ್ಮ ಆಸೆಯಾಗಿದೆ. ಹುಟ್ಟುವಾಗ ಎಲ್ಲರೂ ಸಹ ಜಾತ್ಯತೀತವಾಗಿಯೇ ಹುಟ್ಟುವುದು ಅಲ್ಲವೇ? ಹುಟ್ಟುವ ಮಗುವಿಗೇ ಜಾತಿ ಎನ್ನುವುದೆಲ್ಲಾ ಗೊತ್ತಾಗುತ್ತದೆಯೇ? ಆದರೆ ಸಾಯುವಾಗ ಮಾತ್ರ ಜಾತಿಯ ಹಣೆಪಟ್ಟಿಯನ್ನು ಕಟ್ಟಿಕೊಂಡು ಸಾಯುವುದು. ಸಮಾಜದಲ್ಲಿ ಈ ರೀತಿಯ ಬದಲಾವಣೆ ಆಗಬೇಕು. ಶಿಕ್ಷಣ ಎಂದರೆ ಈ ವ್ಯವಸ್ಥೆ ಬದಲಾಗಬೇಕು. ನಾವು ಎಷ್ಟು ಸಂಪಾದನೆ ಮಾಡಿದೆವು, ಏನು ಪದವಿಯನ್ನು ಪಡೆದುಕೊಂಡೆವು ಎನ್ನುವುದು ಮುಖ್ಯವಲ್ಲ. ನಾವು ಹುಟ್ಟುವಾಗ ಜಾತ್ಯಾತೀತವಾಗಿ ಹುಟ್ಟುತ್ತೇವೆ. ಅದೇ ರೀತಿ ಸಾಯುವಾಗ ಜಾತ್ಯಾತೀತವಾಗಿ ಸತ್ತರೆ ಅದೇ ಮನುಷ್ಯತ್ವ. ಅದಷ್ಟನ್ನು ಮಾಡಿದರೆ ಇದಕ್ಕಿಂತ ದೊಡ್ಡ ಕೊಡುಗೆ ಈ ಸಮಾಜದಲ್ಲಿ ಮತ್ಯಾವುದು ಇಲ್ಲ. ಇದು ನಾವೆಲ್ಲರೂ ಮಾಡಬೇಕಾಗಿರತಕ್ಕಂಥ ಒಂದು ಕೆಲಸ.

(ಮುಂದು)

**ಶ್ರೀ ಗೋ.ಮಧುಸೂಧನ್:-** ಮಾನ್ಯ ಸಭಾಪತಿಯವರೆ, ಒಂದೇ ಒಂದು ತಾತ್ವಿಕವಾದಂತಹ ಕ್ಲಾರಿಫಿಕೇಷನ್ ತಮಗೆ ಕೊಡಬೇಕೆನಿಸುತ್ತದೆ. ನಮ್ಮ ದೇಶದ ಎಲ್ಲಾ ತತ್ವ ಸಿದ್ಧಾಂತಗಳು ಹೇಳಿರುವಂತಹದ್ದು, ಹುಟ್ಟು ನಿಶ್ಚಿತ, ಸಾವು ನಿಶ್ಚಿತವೆಂದು ಹೇಳಿವೆ.

**ಶ್ರೀ ಸಿದ್ದರಾಮಯ್ಯ:-** ಹುಟ್ಟು ನಿಶ್ಚಿತವಲ್ಲ.

**ಶ್ರೀ ಗೋ.ಮಧುಸೂದನ್:-** ಹುಟ್ಟು ಆಕಸ್ಮಿಕವೆಂದು ಅಲ್ಲ. ಪಾಪೋಹಂ ಪಾಪ ಕರ್ಮಾಹಂ ಪಾಪಾತ್ಮ ಪಾಪಸಂಭವ: ತ್ರಾಹಿ ಮಾಮ್ ಕೃಪಯಾ ದೇವ ಶರಣಾಗತ ವತ್ಸಲ ಎಂದು ಕೇಳಿದ್ದೇವೆ. ನಮ್ಮ ಜನ್ಮವನ್ನು ನಾವು ಏನು ಪಡೆಯುತ್ತೇವೆ, ಇದು ಪೂರ್ವ ಜನ್ಮದಲ್ಲಿ ನಾವು ಮಾಡಿದಂತಹ ಸುಕೃತ, ನಾವು ಮಾಡಿದಂತಹ ಪಾಪದ ಫಲದಿಂದ ಪಡೆಯುತ್ತೇವೆ ಎನ್ನುವಂತಹದ್ದಾಗಿದೆ. ಹುಟ್ಟು ಅನಿಶ್ಚಿತ ಎಂದು ಏನಿದೆ, ಇದು western ಸಿದ್ಧಾಂತ. ಹುಟ್ಟು ನಿಶ್ಚಿತ ಎನ್ನುವಂತಹದ್ದು ಭಾರತದ ಎಲ್ಲಾ ಸಿದ್ಧಾಂತ. ಇದನ್ನೇ ಕರ್ಮ ಸಿದ್ಧಾಂತ ಎಂದು ಹೇಳಿರುವುದಾಗಿದೆ. ಗೀತೆಯಲ್ಲಿ ಭಗವದ್ಗೀತೆ ಹೇಳಿದ್ದೇ ಕರ್ಮ ಸಿದ್ಧಾಂತವಲ್ಲ. ಹಾಗಾಗಿ, ನಾವು ಎಲ್ಲೋ ಒಂದು ಕಡೆ ನಮ್ಮೆಲ್ಲಾ ವಿಚಾರವನ್ನು ನಮ್ಮ ಎಲ್ಲಾ ತತ್ವ ಸಿದ್ಧಾಂತವನ್ನು ವಿದೇಶಗಳಿಗೆ ಒತ್ತೆ ಇಡುವಂತಹ ಕೆಲಸವನ್ನು ಮಾಡಬಾರದು. ಅದು ಈ ಭೂಮಿಯ ಮಣ್ಣಿನ ಲಕ್ಷಣವಲ್ಲ. ಪಾಪ-ಪುಣ್ಯ ಎರಡು ಸಹ ಈ ಭೂಮಿಗೆ ಸೇರಿರುವುದಾಗಿದೆ. ಅದರಿಂದಲೇ ನಮಗೆ ಜನ್ಮ ಸಿಕ್ಕುವಂತದ್ದಾಗಿದೆ. ಇವತ್ತು ನೀವು ಮುಖ್ಯಮಂತ್ರಿಯಾಗಿದ್ದೀರಿ ಎಂದರೆ ನೀವು ಹಿಂದೆ ಮಾಡಿದಂತಹ ಪುಣ್ಯದ ಫಲ, ತ್ಯಾಗದ ಫಲ, ಸಮಾಜಕ್ಕೋಸ್ಕರ ದುಡಿದಿದ್ದೀರಲ್ಲಾ, ಅದಕ್ಕೋಸ್ಕರ ನಿಮಗೆ ಸ್ಥಾನ ಸಿಕ್ಕಿರುವುದಾಗಿದೆ. ಈಗ ಮಾಡುವಂತಹ ಪುಣ್ಯ ಏನಿದೆ, ಇದರಿಂದ ಇನ್ನೂ ಒಳ್ಳೆಯ ಸ್ಥಾನ ಸಿಕ್ಕುತ್ತದೆ. ಇದರಿಂದ ನೀವು ಏನಾದರೂ ಅಪವ್ಯಯ ಮಾಡಿಕೊಂಡರೆ ಇದಕ್ಕಿಂತ ಘೋರವಾದ ನರಕ ಸಿಕ್ಕುತ್ತದೆ.

**ಶ್ರೀ ಸಿದ್ದರಾಮಯ್ಯ:-** ಆಯಿತು, ಕುಳಿತುಕೊಳ್ಳಿ. ಇದನ್ನೇ ಬಸವಣ್ಣನವರು ತಿರಸ್ಕಾರ ಮಾಡಿದ್ದು. ಬಸವಣ್ಣ, ಬಸವಾದಿ ಶರಣರು ಕರ್ಮ ಸಿದ್ಧಾಂತವನ್ನೇ ತಿರಸ್ಕಾರ ಮಾಡಿದರು. ಶ್ರೀಯುತ ಮಧುಸೂದನ್‌ರವರೆ, ಇಲ್ಲಿ ಗಮನಿಸಬೇಕು. ಅದಕ್ಕೆ ಬಸವಣ್ಣವರು ಏನು ಮಾಡಿದರು ಎಂದರೆ ನೀವು ಯಾವುದೋ ಒಂದು ಶ್ಲೋಕವನ್ನು ಹೇಳಿದಿರಲ್ಲಾ, ಈ ಶ್ಲೋಕಗಳು ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ.

ಅದಕ್ಕೆ, ಜನ ಸಾಮಾನ್ಯರ ಆಡು ಭಾಷೆಯಲ್ಲಿ ಜನರಿಗೆ ಧರ್ಮದ ಸತ್ಯವನ್ನು ತಿಳಿಸಬೇಕು, ಮನುಷ್ಯತ್ವನ್ನು ತಿಳಿಸಬೇಕೆಂದು ಹೇಳಿ, ಆಡು ಭಾಷೆಯಲ್ಲಿ ವಚನಗಳ ಮೂಲಕ ತಿಳಿಸುವಂತಹ ಕೆಲಸವನ್ನು ಮಾಡಿದರು.

**ಶ್ರೀ ಗೋ.ಮಧುಸೂಧನ್:-** ನಮ್ಮ ಎಲ್ಲಾ ಸಂಸ್ಕೃತ ಪಾಠವನ್ನು ಕನ್ನಡದಲ್ಲಿ ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಆಯಿತು, ಕುಳಿತುಕೊಳ್ಳಿ. ಯಾವ ಕರ್ಮವೂ ಇಲ್ಲ, ಧರ್ಮವೂ ಇಲ್ಲ. ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಬಸವಣ್ಣನವರು ಏನು ಹೇಳಿದ್ದಾರೆ, ಅವರು ಪುನರ್ ಜನ್ಮದ ಬಗ್ಗೆ ಹೇಳಿದ್ದಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ಎಲ್ಲಿಯೂ ಹೇಳಿಲ್ಲ.

**ಶ್ರೀ ಗೋ.ಮಧುಸೂಧನ್:-** ವೈಜ್ಞಾನಿಕವಾಗಿ ರುಜುವಾತಾಗಿದೆ.

**ಶ್ರೀ ಸಿದ್ದರಾಮಯ್ಯ:-** ವೈಜ್ಞಾನಿಕವಾಗಿಯೂ ಇಲ್ಲ, ಯಾವ ರೀತಿಯಲ್ಲಿಯೂ ಇಲ್ಲ. ನೀವು ಹೇಳುವುದಷ್ಟೆ. ಮರು ಜನ್ಮ ಎಂದು ಹೇಳುತ್ತಾರೆ. ದೇವರು ಹಣೆಯಲ್ಲಿ ಬರೆದಿದ್ದಾನೆಂದು ಹೇಳುತ್ತಾರೆ. ಬ್ರಹ್ಮ ಹಣೆಯಲ್ಲಿ ಬರೆದಿದ್ದಾನೆಂದು ಹೇಳುತ್ತಾರೆ. ಹಿಂದಿನ ಜನ್ಮದಲ್ಲಿ ಮಾಡಿದಂತಹ ಪುಣ್ಯದಿಂದ ಈಗ ನೀವು ಮುಖ್ಯಮಂತ್ರಿಯಾಗಿದ್ದೀರಿ ಎಂದು ತಾವು ಹೇಳಿದಿರಿ. ಹಿಂದಿನ ಜನ್ಮ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ದೇವರು ಈ ರೀತಿಯಲ್ಲಿ ಹಣೆಯಲ್ಲಿ ಬರೆಯುವುದಾದರೆ ನನಗೆ ಮುಖ್ಯಮಂತ್ರಿಯಾಗು ಎಂದು ಹೇಳಿ, ನನ್ನ ತಮ್ಮನಿಗೆ ಹೊಲ ಉಳಿಮೆ ಮಾಡು ಎಂದು ದೇವರು ಬರೆದಿದ್ದಾನೆಯೇ? ಯಾವ ಕರ್ಮವೂ ಇಲ್ಲ. ಬಸವಣ್ಣನವರು ಕರ್ಮ ಸಿದ್ದಾಂತವನ್ನೇ ತಿರಸ್ಕಾರ ಮಾಡಿದರು. ನನ್ನ ತಮ್ಮ ಈಗಲೂ ಹೊಲವನ್ನು ಉಳುಮೆ ಮಾಡುತ್ತಿದ್ದಾನೆ. ಅವನಿಗೆ ಮಾತ್ರ ಹೊಲವನ್ನು ಉಳುಮೆ ಮಾಡು, ಸಿದ್ದರಾಮಯ್ಯ ನೀನು ಹೋಗಿ ಮುಖ್ಯಮಂತ್ರಿಯಾಗು ಎಂದು ಹಣೆಯಲ್ಲಿ ದೇವರು ಬರೆದು ಬಿಟ್ಟಿದ್ದಾನೆಯೇ? ಇದೆಲ್ಲವೂ ನಾವು ನಮ್ಮ ಸ್ವಾರ್ಥಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿರುವಂತಹ ವಿಚಾರಗಳಾಗಿವೆ. ಇದರಲ್ಲಿ ಯಾವ ಕರ್ಮವೂ ಇಲ್ಲ. ಬಸವಣ್ಣನವರು ಏನು ಹೇಳುತ್ತಾರೆ, ಸತ್ಯವೇ ಸ್ವರ್ಗ, ಅಸತ್ಯವೇ ನರಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ, ಎಂದು ಹೇಳಿದ ಮೇಲೆ ಇದಕ್ಕಿಂತ ವೈಜ್ಞಾನಿಕವಾಗಿ ಸುಲಭವಾಗಿ ಜನರಿಗೆ ಅರ್ಥವಾಗುವಂತಹ ಭಾಷೆ ಇನ್ನು ಯಾವುದು ಇದೆ?

**ಶ್ರೀ ಸಿ.ಹೆಚ್.ವಿಜಯಶಂಕರ:-** ಅಚಾರವೇ ಸ್ವರ್ಗ, ಅನಾಚಾರವೇ ನರಕ.

**ಶ್ರೀ ಸಿದ್ದರಾಮಯ್ಯ:-** ಶ್ರೀಯುತ ವಿಜಯಶಂಕರ ರವರೆ, ಪಕ್ಕದಲ್ಲಿ ಕುಳಿತಿರುವವರಿಗೆ ಸ್ವಲ್ಪ ಹೇಳಿ. ಅಚಾರವೇ ಸ್ವರ್ಗ, ಅನಾಚಾರವೇ ನರಕ. ಸತ್ಯವೇ ಸ್ವರ್ಗ, ಮಿಥ್ಯವೇ ನರಕ. ಎಷ್ಟು ಸುಲಭವಾಗಿದೆ ನೋಡಿ. ಅದಕ್ಕೋಸ್ಕರವೇ ಬಸವಾದಿ ಶರಣರುಗಳು ಜನರ ಭಾಷೆಯಲ್ಲಿ ಅವರಿಗೆ ಗೊತ್ತಾಗಬೇಕೆಂದು ಹೇಳಿ, ಅವರ ಅನುಭವಗಳು, ಅದರಿಂದ ಜೀವನ ದರ್ಶನ ಮಾಡುವಂತಹ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರ ವಚನಗಳು ಇವತ್ತಿಗೂ ಪ್ರಸ್ತುತ, ಎಂದೆಂದಿಗೂ ಪ್ರಸ್ತುತ. ಮನುಕುಲ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೂ ಪ್ರಸ್ತುತ. ಅದಕ್ಕೋಸ್ಕರ, ಜಾತಿ ಎನ್ನುವುದು ಅಷ್ಟು ಸುಲಭವಾಗಿ ಹೋಗುವುದಿಲ್ಲ. ಬೇರು ಬಿಟ್ಟಿರುತ್ತದೆ. ಅದು ಹೋಗಬೇಕೆಂದರೆ, ಯಾವಾಗ ಹೋಗುತ್ತದೆ ಎಂದರೆ ಜಾತಿ-ಜಾತಿಗಳ ನಡುವೆ ಆರ್ಥಿಕವಾಗಿ, ಸಾಮಾಜಿಕವಾಗಿ ಸಮಾನತೆ ಬಂದಾಗ ಮಾತ್ರ ಕ್ರಮೇಣ ಹೋಗಲಿಕ್ಕೆ ಪ್ರಾರಂಭವಾಗುತ್ತದೆ. ಅದಕ್ಕೆ ಬಸವಣ್ಣನವರು ಅ ಕಾಲದಲ್ಲಿಯೇ ಅಂತರ್ ಜಾತಿ ಮದುವೆ ಮಾಡಿಸಲಿಕ್ಕೆ ಪ್ರಾರಂಭ ಮಾಡಿದರು. ಮಧುವರಸನ ಮಗಳು, ಹರಳಯ್ಯನ ಮಗ, ಇವರಿಗೆ ಮದುವೆ ಮಾಡಿಸಿದರು. ಪಾಪ, ಅದಕ್ಕೆ ಬಸವಣ್ಣನವರು ಎಷ್ಟು ಕಷ್ಟ ಅನುಭವಿಸಬೇಕಾಯಿತು, ಅದಕ್ಕೆ, ನಮ್ಮ ಸಮಾಜ ಈ ರೀತಿ ಇದೆ, ನಮ್ಮ ಸಾಮಾಜಿಕ ವ್ಯವಸ್ಥೆ ಈ ರೀತಿ ಇದೆ, ಇದನ್ನು ನಾವು ತಿಳಿದುಕೊಂಡು ಮಾಡಬೇಕೆಂದು ಹೇಳಿ.

ಮಾನ್ಯ ಸಭಾಪತಿಯವರೆ, ನೀವು ಸಹ ಸುಮ್ಮನೆ ಕುಳಿತಿದ್ದೀರಿ ಎಂದು ನಾನು ಇದೆಲ್ಲವನ್ನೂ ಹೇಳಿದೆ. ಇದು ಅನುಭವ ಮಂಟಪದ ಪರಿಕಲ್ಪನೆ. ಅನುಭವ ಮಂಟಪ ಎಂದು ಏತಕ್ಕೆ ಮಾಡಿದರು ಎಂದರೆ, ಎಲ್ಲರನ್ನು ಸಮಾನವಾಗಿ ಕುಳ್ಳಿರಿಸಿದರು. ಏಕೆಂದರೆ, ನಮ್ಮ ಜಾತಿ ವ್ಯವಸ್ಥೆ vertical ಆಗಿದೆ. ಶ್ರೇಣಿಕೃತ ವ್ಯವಸ್ಥೆ. ಒಬ್ಬರ ಮೇಲೆ ಒಬ್ಬರನ್ನು ಕುಳ್ಳಿರಿಸಿದ್ದಾರೆ. ಶ್ರೀಯುತ ಮಧುಸೂಧನ್‌ರವರು ಎಲ್ಲರಿಗಿಂತ ಮೇಲೆ ಕುಳಿತಿದ್ದಾರೆ. ನಾನು ಎಲ್ಲಿಯೋ ಐದನೆಯವನೋ, ಆರನೆಯವನೋ, ಎಲ್ಲಿಯೋ ಆ ಲೈನ್‌ನಲ್ಲಿ ಕುಳಿತಿದ್ದೇನೆ.

**ಡಾ॥ ಜಯಮಾಲಾ ರಾಮಚಂದ್ರ:-** ಹೆಣ್ಣು ಮಕ್ಕಳು ಸಹ ಶೋಷಣೆಗೆ ಒಳಗಾಗಿದ್ದರು.

**ಶ್ರೀ ಸಿದ್ದರಾಮಯ್ಯ:-** ಹೌದು. ನಿಮ್ಮನ್ನು ಸಹ ಓದಲಿಕ್ಕೆ ಬಿಟ್ಟಿರಲಿಲ್ಲ. ಆ ಸಮಯದಲ್ಲಿ ಅಕ್ಕಮಹಾದೇವಿಯವರು ಸಹ ಅಲ್ಲಿ ಇದ್ದರು. ಮತ್ತೆ ಬಸವಣ್ಣನವರ ಸಹೋದರಿಯಾದ ನಾಗಲಾಂಬಿಕೆ ಅವರೆಲ್ಲರೂ ಇದ್ದರು. ಅಲ್ಲಿ ಬೇರೆ ಬೇರೆ ಶರಣೆಯರೆಲ್ಲರೂ ಇದ್ದರು. ಎಲ್ಲಾ ಜಾತಿಯವರು ಅಲ್ಲಿದ್ದರು.

ಅದಕ್ಕೆ ನಮ್ಮ ಸಮಾಜದಲ್ಲಿ horizontal ಆಗಿ ಇರಬೇಕು. ಪುರುಷರು, ಮಹಿಳೆಯರು, ಎಲ್ಲಾ ಜಾತಿಯವರು horizontal ಆಗಿ ಇರಬೇಕು. ಒಬ್ಬರ ಮೇಲೆ ಒಬ್ಬರು ಏನು ಶ್ರೇಣಿಕೃತ ವ್ಯವಸ್ಥೆಯಲ್ಲಿ ಕುಳಿತಿದ್ದಾರೆ, ಇದನ್ನು demolish ಮಾಡಬೇಕೆಂದು ಅಂದು ಅನುಭವ ಮಂಟಪ ಆಯಿತು. ಇದನ್ನು demolish ಮಾಡಿ horizontal ಆಗಿ, ಅಂದರೆ ಸಮ-ಸಮ ಸಮಾಜ ಆಗಬೇಕೆಂದು, ಶೋಷಣೆ ರಹಿತ ಸಮಾಜ ಆಗಬೇಕೆಂದು ಅಂದು ಅನುಭವ ಮಂಟಪವನ್ನು ಮಾಡಿದರು. ಇವತ್ತು ನಾವು ಏನು ಅಸೆಂಬ್ಲಿ ಎಂದು ಕರೆಯತ್ತೇವೆ, ಕೌನ್ಸಿಲ್ ಎಂದು ಏನು ಕರೆಯುತ್ತೇವೆ, ಪಾರ್ಲಿಮೆಂಟ್ ಎಂದು ಏನು ಕರೆಯುತ್ತೇವೆ, ಅಂದಿನ ಆ ಅನುಭವ ಮಂಟಪದ ಕಲ್ಪನೆಯೇ ಇವತ್ತು ಎಲ್ಲಾ ಬಂದಿರುವುದಾಗಿದೆ. ಅಂದೇ ಬಸವಣ್ಣನವರು ಇದನ್ನೆಲ್ಲಾ ಮಾಡಿದ್ದರು. ವರ್ಗ ರಹಿತ, ಜಾತಿ ರಹಿತ, ಶೋಷಣೆ ರಹಿತ, ಲಿಂಗ ಭೇದ ಇಲ್ಲದೇ ಇರತಕ್ಕಂತಹ, ಏಕೆಂದರೆ, ಹೆಣ್ಣು ಮಕ್ಕಳು ಅದನ್ನು ಹೇಳದಿದ್ದರೆ ಕೋಪಿಸಿಕೊಳ್ಳುತ್ತಾರೆ. ಇವೆಲ್ಲವುಗಳು ಆಗಬೇಕೆಂದು ಅವತ್ತು ಅನುಭವ ಮಂಟಪ ಮಾಡಿರುವುದಾಗಿದೆ. ಆ ಕಲ್ಪನೆಯೇ ಇವತ್ತು ಬಂದಿರುವುದಾಗಿದೆ. ಆ ಕಾಲದಲ್ಲಿಯೇ ಪ್ರಜಾಪ್ರಭುತ್ವ ಆಗಿತ್ತು. ಆ ಕಾಲದಲ್ಲಿಯೇ ಸಂಸತ್ ವ್ಯವಸ್ಥೆ ಆಗಿತ್ತು. ಸಂಸದೀಯ ವ್ಯವಸ್ಥೆ ಆಗಿತ್ತು. ಅದೆಲ್ಲವೂ ಇಂದು ಮುಂದುವರಿದುಕೊಂಡು ಬಂದಿದೆ.

**ಶ್ರೀ ರಾಮಚಂದ್ರಗೌಡ:-** ಬಸವಣ್ಣನವರು ಮೊದಲನೆಯ ಸಂಸತ್ ಅನ್ನು ಕೊಟ್ಟರು.

**ಶ್ರೀ ಸಿದ್ದರಾಮಯ್ಯ:-** ಹೌದು, ಪ್ರಪಂಚದಲ್ಲಿಯೇ ಮೊದಲನೆಯ ಸಂಸತ್ ಅನ್ನು ಬಸವಣ್ಣನವರು ಕೊಟ್ಟರು. ಅನುಭವ ಮಂಟಪ ಏನಿದೆ, ಜಗತ್ತಿನಲ್ಲಿಯೇ ಮೊದಲನೆಯ ಸಂಸತ್ ಬಸವ ಕಲ್ಯಾಣದಲ್ಲಿ ಆಗಿತ್ತು. ಇದನ್ನು ನಾನು ಹೆಚ್ಚು ಲಂಬಿಸಲಿಕ್ಕೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಮುಖ್ಯಮಂತ್ರಿಗಳು ಇನ್ನು ಸ್ವಲ್ಪ ಸಮಯ ಮಾತನಾಡಬೇಕು. ಬಹಳ ದಿವಸಗಳ ನಂತರ ತಲೆ ಶಾಂತವಾಗಿದೆ. ಇನ್ನು ಸ್ವಲ್ಪ ಮಾತನಾಡಬೇಕು. ವಿಷಯವನ್ನು ನಂತರ ನೋಡೋಣ.

**ಶ್ರೀ ಸಿದ್ದರಾಮಯ್ಯ:-** ಸ್ವಲ್ಪಮಟ್ಟಿಗೆ ಲವಲವಿಕೆಯಿಂದ ಇರಲಿ ಎಂದು ಹೇಳಿ, ಇದೆಲ್ಲವನ್ನು ನಾನು ಹೇಳಿದೆ. ಏಕೆಂದರೆ, ಪ್ರತಿದಿನವೂ ಇವರು ಅವರ ಮೇಲೆ ಹೇಳುವುದು, ಅವರು ಇವರ ಮೇಲೆ ಹೇಳುವುದು ಇದೇ ನಡೆಯುತ್ತಿದೆ. ಸ್ವಲ್ಪ ಲವಲವಿಕೆಯಿಂದ ಇರಲಿ, ಆರೋಗ್ಯಕರ ಚರ್ಚೆಯಾಗಲಿ ಎಂದು ಹೇಳಿದೆ.

ಇನ್ನು ಮೇಲೆ ಇಂತಹ ವಿಷಯಗಳನ್ನೆಲ್ಲಾ ಚರ್ಚೆ ಮಾಡಿ. ಈ ಬಗ್ಗೆ ಶ್ರೀಯುತ ಈಶ್ವರಪ್ಪನವರು ಗಮನಿಸಬೇಕು. ಬಂದ ತಕ್ಷಣ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿ, ಕೂಗಾಡುವುದು ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿ, ಸುಮ್ಮನೆ ಕುಳಿತಿರುವವರನ್ನು ಎಬ್ಬಿಸುವುದೇ ಚಟವಾಗಿ ಬಿಟ್ಟಿದೆ.

**ಶ್ರೀ ಸಿದ್ದರಾಮಯ್ಯ:-** ಇಲ್ಲ, ಇಲ್ಲ. ನಾನು ಸುಮ್ಮನೆ ತಮಾಶೆಯಾಗಿ ಹೇಳಿದೆ. ಇದನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಬೇಡಿ. ಖುಷಿಯಾಗಿರಿ ಎಂದು ನಾನು ಹೇಳುತ್ತಿರುವುದಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಹೇಳುವುದು ತಪ್ಪಿಲ್ಲ. ಆದರೆ, ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಸುಮ್ಮನೆ ಕುಳಿತಿರುತ್ತಿದ್ದೀರಾ?

**ಶ್ರೀ ಸಿದ್ದರಾಮಯ್ಯ:-** ನಾನು ಸಹ ಮಾಡಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಮುಖ್ಯಮಂತ್ರಿಯಾದ ಕೂಡಲೇ ನಿಲುವಳಿ ಸೂಚನೆ ಬೇಡ ಎಂದು ಹೇಳುತ್ತೀರಿ. ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಬರಿ ನಿಲುವಳಿ ಸೂಚನೆ. ಇದು ಯಾವ ನ್ಯಾಯ. ಈಗ ಇವರು ಬಸವಣ್ಣನವರ ಹೆಸರನ್ನು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್: -** ಮಾನ್ಯ ಮುಖ್ಯಮಂತ್ರಿಗಳು lighter vein ನಲ್ಲಿ ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನೀವು ಇದನ್ನು ತಮಾಶೆಯಾಗಿ ತೆಗೆದುಕೊಳ್ಳಿ.

**ಮುಂದು. . .**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಯವರು):-** ನಾನು ಅದನ್ನು lighter vein ನಲ್ಲಿ ಹೇಳಿದ್ದೇನೆ. ವಿರೋಧ ಪಕ್ಷದವರ ಕೆಲಸವನ್ನು ವಿರೋಧ ಪಕ್ಷದವರು ಮಾಡಲೇಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಹೊರಟ್ಟಿಯವರು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ಪಾಪ! ಹೊರಗಡೆ ನೂರೆಂಟು ಸಮಸ್ಯೆ, ಇಲ್ಲೀಗ ಆರಾಮವಾಗಿದ್ದೀರಿ, ಮುಂದುವರೆಸಿ. ದೇವರು ನಿಮ್ಮನ್ನು ಹೀಗೆಯೇ ಇಟ್ಟಿರಲಿ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಬಸವಣ್ಣನವರ ವಚನಗಳು ಬೇಕಾದಷ್ಟಿವೆ, ಅವುಗಳನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ. ಸಮಯವಿಲ್ಲದ ಕಾರಣ ಇನ್ನೊಮ್ಮೆ ಯಾವಾಗಲಾದರೂ ಸಮಯ ಬಂದಾಗ ಮಾತನಾಡೋಣ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಒಳ್ಳೆಯ mood ನಲ್ಲಿದ್ದೀರಿ, ಚೆನ್ನಾಗಿ ಮಾತನಾಡುತ್ತಿದ್ದೀರಿ, ಮಾತನಾಡಿ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಯವರು):-** ನಾನು ಈ ವಿಚಾರವನ್ನೇಕೆ ಹೇಳಿದೆನೆಂದರೆ, ನಾವು ಅಧಿವೇಶನದ ಸಂದರ್ಭದಲ್ಲಿ ಪ್ರತಿ ದಿನ ಈ ಸದನಗಳಿಗೆ ಏತಕ್ಕೆ ಬರುತ್ತೇವೆ? ಜನತೆಗೆ ಒಳ್ಳೆಯದಾಗಲಿ, ಸಮಸ್ಯೆಗಳ ಬಗ್ಗೆ ಏನಾದರೂ ಚರ್ಚೆ ಮಾಡೋಣ ಎನ್ನುವ ಕಾರಣಕ್ಕಾಗಿ ಅಲ್ಲವೆ. ಮಾನ್ಯ ಈಶ್ವರಪ್ಪನವರು ಭಾಷಣ ಮಾಡುತ್ತಾ ಕುಡಿಯುವ ನೀರಿನ ಬಗ್ಗೆ ಬಹಳ ಪ್ರಮುಖವಾಗಿ ಮಾತನಾಡಿದ್ದಾರೆ. ಖಂಡಿತವಾಗಿಯೂ ಅಂತಹ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಈ ವರ್ಷ ಬರಗಾಲ ಪರಿಸ್ಥಿತಿ ಇದೆ, ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಜನತೆಗೆ ಕುಡಿಯುವ ನೀರನ್ನು ಒದಗಿಸಬೇಕು. ನಮ್ಮ ಸರ್ಕಾರ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ಹಿಂದೆ ಬೀಳುವುದಿಲ್ಲ. ನಾನು ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಕೂಡ ತಮ್ಮ ಚರ್ಚೆಯ ಸಂದರ್ಭದಲ್ಲಿ ಕುಡಿಯುವ ನೀರಿನ ವಿಚಾರದ ಬಗ್ಗೆ ಒತ್ತು ಕೊಟ್ಟು ಹೇಳಿರುವಂತಹ ಮಾತುಗಳನ್ನೆಲ್ಲಾ ನಾನು ಓದಿದ್ದೇನೆ. 7000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸುವುದಾಗಿ ತಾವು ಮಾತು ಕೊಟ್ಟಿದ್ದಿರಿ, ಆದರೆ ಇಲ್ಲಿಯವರೆಗೆ ಕೇವಲ 1645 ಘಟಕಗಳನ್ನು ಮಾತ್ರ ಪ್ರಾರಂಭಿಸಲಾಗಿದೆ, ಇನ್ನೂ ಸಾಕಷ್ಟು ಘಟಕಗಳನ್ನು ಪ್ರಾರಂಭಿಸುವಂತಹ ಕೆಲಸ ಆಗಬೇಕು, ಅದಕ್ಕೆ ಹಣ ಕೊಡಬೇಕು, ಕುಡಿಯುವ ನೀರಿನ ವ್ಯವಸ್ಥೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವಂತಹ ಮಾತುಗಳನ್ನೆಲ್ಲಾ ಅವರು ತಿಳಿಸಿದ್ದಾರೆ. ನಾನು ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ಕೆಲಸವನ್ನು ಮಾಡುತ್ತೇನೆ. ಏಕೆಂದರೆ ಒಂದು ಶುದ್ಧ ಕುಡಿಯುವ ನೀರಿನ

ಘಟಕವನ್ನು ಪ್ರಾರಂಭಿಸಲು ಸುಮಾರು 9.5 ಲಕ್ಷಗಳಿಂದ 10 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತದೆ. ಅದನ್ನು 50:50 ನಲ್ಲಿ ಅಂದರೆ, ಗ್ರಾಮ ಪಂಚಾಯತಿಯವರು 50% ಕೊಡುವುದು, ಸರ್ಕಾರ 50% ಕೊಡುವುದರ ಮೂಲಕ ಈ ವ್ಯವಸ್ಥೆಯನ್ನು ರೂಪಿಸಬೇಕಾಗಿದ್ದು, ಅದರಲ್ಲಿ ಗ್ರಾಮ ಪಂಚಾಯತಿಯವರು ತಮ್ಮ ಪಾಲಿನ 50% ಭರಿಸದ ಕಾರಣದಿಂದಾಗಿ ಈ ವ್ಯವಸ್ಥೆಯಲ್ಲಿ ವಿಳಂಬ ಉಂಟಾಗಿದೆ. ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆ ಕೊಟ್ಟರು, ಪಂಚಾಯತಿಗಳಿಂದ ಹಣವನ್ನು ಭರಿಸುವುದಕ್ಕೆ ಸಾಧ್ಯವಾಗದಿರುವಲ್ಲಿ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ತಮ್ಮ ಶಾಸಕರ ನಿಧಿಯಿಂದ ಅದಕ್ಕೆ ಹಣವನ್ನು ಕೊಡುತ್ತೇವೆ ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ನಾವು ಸರ್ಕಾರದ ಪಾಲಿನ ಮೊತ್ತವನ್ನು ಕೊಡುತ್ತೇವೆ, ಏಕೆಂದರೆ ಇದು ಸೊಸೈಟಿಗಳು ಮತ್ತು ಪಿ.ಪಿ.ಪಿ. ಯೋಜನೆಗಳ ಮುಖಾಂತರ ಆಗುತ್ತಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಆದರೂ ನಾವೇನು 7,000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದ್ದೇವೆ, ಅದಕ್ಕೆ ಎಷ್ಟೇ ಹಣ ಖರ್ಚಾದರೂ ಅದನ್ನು ಮಾಡಿ ಮುಗಿಸುತ್ತೇವೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಯಾವಾಗ ಮಾಡುತ್ತೀರಿ?

**ಶ್ರೀ ಸಿದ್ದರಾಮಯ್ಯ:–** ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಕಳಕಳಿಯ ಬಗ್ಗೆ ಖಂಡಿತವಾಗಿಯೂ ಪ್ರಶ್ನೆ ಮಾಡುತ್ತಿಲ್ಲ, ಮೊದಲನೆಯ ವರ್ಷ 1000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಎರಡನೆಯ ವರ್ಷ ಮತ್ತೆ 2000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು, ಮೂರನೇ ವರ್ಷ 4000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸುವುದಾಗಿ ಸರ್ಕಾರ ತಿಳಿಸಿತ್ತು. ಅದರ ಪ್ರಕಾರ 3 ವರ್ಷಕ್ಕೆ ಒಟ್ಟು 7000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸುವ ಗುರಿಯನ್ನು ಹೊಂದಲಾಗಿತ್ತು, ಸರ್ಕಾರದ ಲೆಕ್ಕಾಚಾರದ ಪ್ರಕಾರ 1645 ಘಟಕಗಳನ್ನು ಪ್ರಾರಂಭಿಸಿರುವುದಾಗಿ ತಿಳಿಸಲಾಗುತ್ತಿದೆ. ಆದರೆ ಅಷ್ಟು ಕೂಡ ಇಲ್ಲವೆನಿಸುತ್ತದೆ, ಏಕೆಂದರೆ ನಾನು ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸಿಕೊಂಡಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಆಯಿತು, 1,645 ಘಟಕಗಳನ್ನು ಪ್ರಾರಂಭಿಸಲಾಗಿದೆ ಎಂದಿಟ್ಟುಕೊಳ್ಳೋಣ. 3 ವರ್ಷಗಳಲ್ಲಿ 1645 ಘಟಕಗಳನ್ನು ಪ್ರಾರಂಭಿಸಿದ್ದರೆ ಇನ್ನುಳಿದ ಸುಮಾರು 5400 ಘಟಕಗಳನ್ನೇನು ಪ್ರಾರಂಭಿಸಬೇಕಾಗಿದೆ ಅವುಗಳನ್ನು ಯಾವಾಗ ಪ್ರಾರಂಭಿಸಲಾಗುತ್ತದೆ? ಆದಷ್ಟು ಬೇಗ ಎಂದರೆ ಯಾವಾಗ ಎನ್ನುವುದನ್ನು ಕೂಡ ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಯವರು):-** ಈ ಸಮಸ್ಯೆಯಿಂದ ಆಗಿಲ್ಲ, ಅದಕ್ಕೆ ರಾಜ್ಯ ಸರ್ಕಾರದ ವತಿಯಿಂದ ನಾವೇನು ಈಗ 5 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಕೆಲವು ಜಿಲ್ಲೆಗಳಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಈ ಜಿಲ್ಲೆಗಳಲ್ಲಿ ಸರ್ಕಾರದ ವತಿಯಿಂದ ಪ್ರತಿ ಘಟಕಕ್ಕೆ ರೂ. 7.5 ಲಕ್ಷಗಳನ್ನು ಕೊಡುತ್ತಿದ್ದೇವೆ. ಇದನ್ನು ಆದಷ್ಟು ಜಾಗ್ರತೆ ಮುಗಿಸಬೇಕು ಎಂದು ಮಾನ್ಯ ವಿರೋಧ ಪಕ್ಷದ ನಾಯಕರೇನು ತಿಳಿಸುತ್ತಿದ್ದಾರೆ, ಇನ್ನುಳಿದ 7000 ಘಟಕಗಳನ್ನು ಪ್ರಾರಂಭಿಸಬೇಕೆನ್ನುವ ಗುರಿಯನ್ನೇನು ಇಟ್ಟುಕೊಂಡಿದ್ದೇವೆ, ಅದಕ್ಕೆ ಅಗತ್ಯವಿರುವಷ್ಟು ಹಣವನ್ನು ಕೊಟ್ಟು, ಆದಷ್ಟು ಜಾಗ್ರತೆಯಾಗಿ ಅದನ್ನು ಮುಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ಮುಗಿಸಲಾಗುತ್ತದೆಯೇ? ದಯವಿಟ್ಟು ಒಂದು ನಿರ್ದಿಷ್ಟ ಸಮಯವನ್ನು ತಿಳಿಸಿ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಯವರು):-** ಜೂನ್-ಜುಲೈ ವೇಳೆಗೆ ಈ ಘಟಕಗಳನ್ನು ಪ್ರಾರಂಭಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಕುಡಿಯುವ ನೀರಿನ ವಿಚಾರದಲ್ಲಿ ಯಾರೂ ಸಹ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಕುಡಿಯುವ ನೀರನ್ನು ಕೊಡುವುದು ನಮ್ಮ ಮೊದಲ ಅದ್ಯತೆಯಾಗಿದೆ. ಅದಕ್ಕಾಗಿಯೇ ನಾವು ಜುಲೈ ತಿಂಗಳವರೆಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಾರದು ಎನ್ನುವ ಕಾರಣಕ್ಕಾಗಿ ಎಲ್ಲ ಜಲಾಶಯಗಳಲ್ಲಿ ಕೂಡ ನೀರಿನ ಮಟ್ಟ ಕಡಿಮೆಯಾಗಿದ್ದರೂ ಸಹ ಈ ಬಾರಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರನ್ನು ಇಟ್ಟುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಬೆಂಗಳೂರು ಇರಬಹುದು ಅಥವಾ ಬೇರೆ ಪಟ್ಟಣಗಳಿರಬಹುದು, ಹಳ್ಳಿಗಳಿರಬಹುದು, ಎಲ್ಲೆಲ್ಲಿ ಜಲಾಶಯಗಳಿಂದ ನಾವು ನೀರನ್ನು ಕೊಡುತ್ತಿದ್ದೇವೆ, ಅಲ್ಲಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರನ್ನು ಇಟ್ಟುಕೊಳ್ಳಬೇಕು, ಅನಂತರ ಬೇರೆ ಉದ್ದೇಶಗಳ ಬಗ್ಗೆ ವಿಚಾರ ಮಾಡಬೇಕೆಂದು ನಾನು ಈಗಾಗಲೇ ತಿಳಿಸಿದ್ದೇನೆ. ಹೀಗಾಗಿ ನಮ್ಮ ಸರ್ಕಾರ ಕುಡಿಯುವ ನೀರಿಗೆ ಹೆಚ್ಚು ಒತ್ತು ಕೊಡುವುದರ ಜೊತೆಗೆ ಅದಕ್ಕೆ

ಬೇಕಾದಂತಹ ಅನುದಾನವನ್ನು ಸಹ ಕೊಡುವಂತಹ ಕೆಲಸವನ್ನು ಸಹ ಮಾಡುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಬಹುಗ್ರಾಮ ಕುಡಿಯುವ ನೀರಿನ ಯೋಜನೆ (Multi-Village Drinking Water Scheme) ವಿಚಾರದಲ್ಲಿ ಕೂಡ ಸರ್ಕಾರ ಆದ್ಯತೆಯನ್ನು ನೀಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಯವರು):-** ಮಾನ್ಯ ಸಭಾಪತಿಯವರೇ, Multi-Village Drinking Water Scheme ವಿಚಾರದಲ್ಲಿ ಕೂಡ ನಾವು ಆದ್ಯತೆಯನ್ನು ನೀಡುತ್ತಿದ್ದೇವೆ. ಏಕೆಂದರೆ, ಕರ್ನಾಟಕದಲ್ಲಿ ಎಲ್ಲರಿಗೂ-ಎಲ್ಲಕ್ಕೂ ಶಾಶ್ವತವಾದಂತಹ ಒಂದು ನೀರಿನ ವ್ಯವಸ್ಥೆಯನ್ನು ಮಾಡಬೇಕಾದರೆ ಸುಮಾರು 62 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಅದಕ್ಕೆ ತಗಲುವಂತಹ ಖರ್ಚು ಸುಮಾರು 45,000 ಕೋಟಿ ರೂಪಾಯಿಗಳಾಗುತ್ತದೆ. ಇಷ್ಟನ್ನೂ ಒಂದೇ ಸಲ ಮಾಡಿಬಿಡುವುದಕ್ಕಾಗುವುದಿಲ್ಲ, ಅದನ್ನು ಹಂತಹಂತವಾಗಿ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಂಡು, ಅದರಲ್ಲಿಯೂ ವಿಶೇಷವಾಗಿ ಈ ವರ್ಷ ಮುಂಗಾರು ಮತ್ತು ಹಿಂಗಾರು ಮಳೆಗಳು ಕೈಕೊಟ್ಟ ಕಾರಣ ಬರಗಾಲ ಪರಿಸ್ಥಿತಿ ಎದುರಾಗಿದೆ. ಸರಾಸರಿ ಸುಮಾರು 22% ನಷ್ಟು ಮುಂಗಾರು ಮಳೆಯಲ್ಲಿ ಕೊರತೆ ಉಂಟಾಯಿತು, ಹಿಂಗಾರಿನಲ್ಲಿ 50% ಕ್ಕಿಂತಲೂ ಹೆಚ್ಚು ಕೊರತೆ ಉಂಟಾಯಿತು. ಇಷ್ಟೆಲ್ಲಾ ಆದರೂ ಸಹ ಆಹಾರದ ಉತ್ಪಾದನೆಯಲ್ಲಿ ಸುಮಾರು 110 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗಿದೆ. ಅದು ಸುಮಾರು 130 ರಿಂದ 140 ಲಕ್ಷ ಮೆಟ್ರಿಕ್ ಟನ್‌ನಷ್ಟು ಉತ್ಪಾದನೆಯಾಗಬೇಕಾಗಿತ್ತು. ಏಕೆಂದರೆ ಮುಂಗಾರಿನಲ್ಲಿ 73 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಏನು ಬಿತ್ತನೆಯಾಗಬೇಕಾಗಿತ್ತು, ಅದು 63 ಲಕ್ಷ ಹೆಕ್ಟೇರ್ ಪ್ರದೇಶಕ್ಕಷ್ಟೇ ಸೀಮಿತವಾಯಿತು. ಅದರಲ್ಲಿ 30 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬೆಳೆ ನಷ್ಟವಾಯಿತು. ಹಿಂಗಾರಿನಲ್ಲಿ 37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭಿತ್ತನೆ ಮಾಡಬೇಕಾಗಿತ್ತು, ಅದರಲ್ಲಿ ಕೂಡ 50% ಗಿಂತಲೂ ಹೆಚ್ಚು ಬೆಳೆ ನಷ್ಟವಾಯಿತು. ಈ ರೀತಿ ಸಮಸ್ಯೆಗಳೆಲ್ಲಾ ಇವೆ. ಅದಕ್ಕಾಗಿ ನಾವು ಈ ಬಾರಿ ಬೇಸಿಗೆಗೆ ಕುಡಿಯುವ ನೀರೊದಗಿಸುವುದು, ಜಾನುವಾರುಗಳಿಗೆ ಮೇವು ಒದಗಿಸಿ ಅವುಗಳ ಆರೋಗ್ಯ ರಕ್ಷಣೆ ಮಾಡುವುದು, ಕೂಲಿ ಕಾರ್ಮಿಕರಿಗೆ ಉದ್ಯೋಗ ಕೊಡುವುದು, ಜನರ ಆರೋಗ್ಯ ರಕ್ಷಣೆ ಮಾಡುವುದು ಇವೆಲ್ಲವನ್ನು ಕೂಡ ಮಾಡುವಂತಹ ದಿಕ್ಕಿನಲ್ಲಿ ಅದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಸಹ ಮಾಡಿಕೊಂಡಿದ್ದೇವೆ. ಏಕೆಂದರೆ ಮುಂದಿನ ಮಾರ್ಚ್-ಎಪ್ರಿಲ್-ಮೇ-ಜೂನ್ ತಿಂಗಳು ಬಹಳ crucial. ಈ ಅವಧಿಯಲ್ಲಿ ಜನತೆಗೆ

ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು. ಈ ಬಾರಿಯ ಬರಗಾಲ ಪರಿಸ್ಥಿತಿಗಾಗಿ ಕೇಂದ್ರ ಸರ್ಕಾರದಿಂದ ನಾವು 3830 ಕೋಟಿ ರೂಪಾಯಿಗಳನ್ನು ಕೇಳಿದ್ದೆವು. ಕುಡಿಯುವ ನೀರು, ಉದ್ಯೋಗ ಸೃಷ್ಠಿ ಮಾಡುವುದು, ಮೇವಿಗಾಗಿ, ರೈತರಿಗೆ ಇನ್‌ಪುಟ್ ಸಬ್ಸಿಡಿ ಕೊಡುವ ಉದ್ದೇಶಕ್ಕಾಗಿ ನಾರ್ಮ್ಸ್ ಪ್ರಕಾರ 3830 ಕೋಟಿ ರೂಪಾಯಿಗಳನ್ನು ಕೇಳಿದ್ದೆವು. ಆದರೆ ಕೇಂದ್ರ ಸರ್ಕಾರದಿಂದ ನಮಗೆ 1540 ಕೋಟಿ ರೂಪಾಯಿಗಳ ಅನುದಾನ ಬಂದಿದೆ. ಈ ಅನುದಾನ ರಾಜ್ಯಕ್ಕೆ ಬಂದ ಕೂಡಲೇ, ಮಾರನೇ ದಿನವೇ ಎಲ್ಲವನ್ನೂ ಬಿಡುಗಡೆ ಮಾಡಿದ್ದೇವೆ. ಕೇಂದ್ರದಿಂದ ಬಂದಂತಹ ಅನುದಾನವನ್ನು ನಾವು ಒಂದು ದಿನ ಕೂಡ ಇಟ್ಟುಕೊಂಡಿಲ್ಲ. ಈಗಾಗಲೇ 1200 ಕೋಟಿ ರೂಪಾಯಿ ವಿತರಣೆ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಕೆಲವು ಡಿಸ್ಪ್ಯೂಟ್‌ಗಳಿರುವುದರಿಂದ, ಏಕೆಂದರೆ ಜಂಟಿ ಖಾತೆ ಮತ್ತಿತರ ಸಮಸ್ಯೆಗಳಾಗಿವೆ.

ಒಂದು ವಿಚಾರವೆಂದರೆ ಇತ್ತೀಚೆಗೆ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ನಮ್ಮ ಕರ್ನಾಟಕಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ನಾವು ಕೊಟ್ಟಂತಹ ಹಣವನ್ನು ಟ್ರಜರಿಯಲ್ಲಿಟ್ಟುಕೊಂಡಿದ್ದಾರೆ ಎನ್ನುವಂತಹ ಒಂದು ಮಾತನ್ನು ಹೇಳಿಬಿಟ್ಟಿದ್ದಾರೆ, ಅವರು ಆ ರೀತಿ ಹೇಳಿರುವುದು ಸರಿಯಿಲ್ಲ. ಆ ಹಣವನ್ನು ಕೇಂದ್ರದಿಂದ ಬಂದ ದಿನವೇ ಬಿಡುಗಡೆ ಮಾಡಿಬಿಟ್ಟಿದ್ದೇವೆ, ಒಂದು ದಿನ ಕೂಡ ಅದನ್ನು ಇಟ್ಟುಕೊಳ್ಳುವುದಕ್ಕೆ ಹೋಗಲಿಲ್ಲ. ಎಲ್ಲ ಕಡೆ ಜಿಲ್ಲಾಧಿಕಾರಿಗಳು Input Subsidy ಕೇಳುತ್ತಿದ್ದಾರೆ, 5ನೇ ತಾರೀಖಿನೊಳಗೆ ಅಂದರೆ, ಇವತ್ತಿನೊಳಗೆ ಎಲ್ಲವನ್ನೂ ವಿತರಣೆ ಮಾಡಬೇಕೆಂದು ನಾವು ತಿಳಿಸಿದ್ದೆವು. ಬಹುಶಃ 10ನೇ ತಾರೀಖಿನೊಳಗೆ ಎಲ್ಲವನ್ನೂ ವಿತರಣೆ ಮಾಡಬೇಕೆಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ನಾವು ಕಟ್ಟುನಿಟ್ಟಿನ ಆದೇಶ ಕೊಟ್ಟಿದ್ದೇವೆ.

(ಮುಂದುವರೆದಿದೆ ...

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿದ್ದರಾಮಯ್ಯ(ಮುಂದು):-**

ಬಹುಶಃ 10ನೇ ತಾರೀಖಿನೊಳಗೆ ಡಿಸ್ಟ್ರಿಬ್ಯೂಟ್ ಮಾಡಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಸಹ ಕೊಟ್ಟಿದ್ದೇವೆ. ಎಲ್ಲವನ್ನೂ ಕೂಡ ಬಿಡುಗಡೆ ಮಾಡಿ input subsidy ತಲುಪಿಸಬೇಕೆಂದು ಮಾಡಿದ್ದೇವೆ. ಆದುದರಿಂದ ಬರಗಾಲವನ್ನು ಬಹಳ ಸಮರ್ಥವಾಗಿ ಎದುರಿಸುವಂತಹ ಕೆಲಸವನ್ನು ಮಾಡುತ್ತೇವೆ. ಕೆಲವರು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ತಾತ್ಕಾಲಿಕ ಪರಿಹಾರವನ್ನು ಬರಗಾಲದಲ್ಲಿ ಕೊಟ್ಟರೆ ಪ್ರಯೋಜನ ಆಗುವುದಿಲ್ಲ, ಶಾಶ್ವತವಾಗಿ ಏನಾದರು ಮಾಡಬೇಕು. ಮಾನ್ಯ ಸಭಾಪತಿಯವರೇ, ರಾಜಸ್ಥಾನ ಬಿಟ್ಟರೆ ಹೆಚ್ಚು ಮಳೆ ಆಶ್ರಿತ ರಾಜ್ಯವೆಂದರೆ ಕರ್ನಾಟಕ ರಾಜ್ಯ. ಅದಕಾರಣ ಸಣ್ಣ ರೈತರಿಗೆ, ಅತೀ ಸಣ್ಣ ರೈತರಿಗೆ ಅನುಕೂಲವಾಗಬೇಕೆಂದು ನಾವು ಕೃಷಿ ಭಾಗ್ಯ ಎಂಬ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದೆವು. ಅನೇಕ ಸಲ ಇಂತಹ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಎಲ್ಲದಕ್ಕೂ "ಭಾಗ್ಯ, ಭಾಗ್ಯ" ಎಂದು ಹೇಳಿ ಟೀಕೆ ಸಹ ಮಾಡಿದ್ದರು. ಕೆಳಮನೆಯಲ್ಲಿ "ಕತ್ತಲು ಬಾಗ್ಯ" ಕೊಟ್ಟಿದ್ದಾರೆಂದು ಹೇಳಿದರು. ಈ ಮನೆಯಲ್ಲಿ ಆ ರೀತಿ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಹಾರಾಷ್ಟ್ರದಲ್ಲಿ ಸುಮಾರು 3,800 ಜನ ರೈತರು ಸತ್ತುಹೋಗಿದ್ದಾರಂತೆ. ಅದಕ್ಕೆ ಏನೆಂದು ಕರೆಯುವುದು ಮಾನ್ಯ ಮದುಸೂಧನ್‌ರವರೆ? ಆದುದರಿಂದ ಯಾವ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು. ನಾನೂ ಕೂಡ ಈ ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆ. ಆತ್ಮಹತ್ಯೆ ಒಂದೇ ಪರಿಹಾರವಲ್ಲ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಆತ್ಮಕ್ಕೆ ಹತ್ಯೆ ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಆತ್ಮ ಇದ್ದರೆ ಹತ್ಯೆ ಆಗುವುದು. ಆತ್ಮವೇ ಇಲ್ಲದಿದ್ದರೆ ಏನು ಮಾಡುತ್ತೀರಿ? ರೈತರು ಅನ್ನದಾತರು. ಅವರು ಆತ್ಮಹತ್ಯೆ ಮಾಡಿಕೊಳ್ಳಬಾರದು. ನಮ್ಮ ರಾಜ್ಯದಲ್ಲಿಯೂ ಸಹ ಸುಮಾರು 1,100 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಈಗ ಅದು ಇಳಿಮುಖವಾಗುತ್ತಿದೆ. ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಆ ತಿಂಗಳುಗಳಲ್ಲಿ ಆತ್ಮಹತ್ಯೆಯು ಸ್ವಲ್ಪ ಏರುಮುಖವಾಗಿತ್ತು. ಈಗ ಪುನಃ ಅದು ಇಳಿಮುಖವಾಗುತ್ತಿದೆ. ಆದಕಾರಣ ಯಾರೂ ಸಹ ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರು ಖಾಸಗಿ ಅವರ

ಬಳಿ ಸಾಲ ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದೇವೆ. ಈ ರೀತಿ ಸಾಲ ಕೊಟ್ಟಂತಹ ಅನೇಕ ಜನರ ಮೇಲೆ ಕೇಸ್ ಹಾಕಿದ್ದೇವೆ. ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಮದುಸೂಧನ್ ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳು. ನೀವು ಕೇವಲ ಆತ್ಮದ ಬಗ್ಗೆಯೇ ಯೋಚನೆ ಮಾಡುತ್ತಿದ್ದೀಯ.

ಮಾನ್ಯ ಸಭಾಪತಿಯವರೇ, ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕೆಂದರೆ, ಈ ವರ್ಷ ಸ್ವಲ್ಪ ತೊಂದರೆ ಆಗಿದೆ ನಿಜ. ಇದರ ಜೊತೆಗೆ ಏನಾಗಿದೆ ಎಂದರೆ "ಬರಗಾಲದಲ್ಲಿ ಅಧಿಕ ಮಾಸ" ಎನ್ನುವಂತೆ ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತದಲ್ಲಿ ಅಂದರೆ ಶರಾವತಿಯಲ್ಲಿ ಬೆಂಕಿ ಬಿದ್ದು ಸುಮಾರು 1000 ಮೆ.ವ್ಯಾಟ್ ನಷ್ಟವಾಯಿತು. ಈಗ ನಾವು ಇಷ್ಟೆಲ್ಲಾ ಅದರೂ ಸಹ 3 ಫೇಸ್‌ನಲ್ಲಿ 7 ಗಂಟೆ ವಿದ್ಯುತ್ ಕೊಡುತ್ತೇವೆ. ಅಂದರೆ ಬೇರೆ ಬೇರೆ ಸ್ಟೇಜ್‌ನಲ್ಲಿ. ಸಿಂಗಲ್ ಫೇಸ್‌ನಲ್ಲಿ ಸಾಯಂಕಾಲ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ವಿದ್ಯುತ್ ಕೊಡುತ್ತೇವೆ.

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಜನರಿಗೆ 7 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಮಾತು ಕೊಟ್ಟಿದ್ದೇವೆ, ಅದರಂತೆ ನಾವು 7 ಗಂಟೆಗಳ ಕಾಲ ಸಮರ್ಪಕವಾಗಿ ವಿದ್ಯುತ್ ಕೊಡುತ್ತಿದ್ದೇವೆ. ಬೆಳಿಗ್ಗೆ 4 ಗಂಟೆ, ರಾತ್ರಿ 3 ಗಂಟೆ ವಿದ್ಯುತ್ ಕೊಡುತ್ತಿದ್ದೇವೆ.

**ಶ್ರೀ ಸಿದ್ದರಾಮಯ್ಯ:-** ಈಗೇನು ನಾವು 7 ಗಂಟೆಗಳ ಕಾಲ ಸಮರ್ಪಕವಾಗಿ ವಿದ್ಯುತ್ ಕೊಡುತ್ತಿದ್ದೇವೆ ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಈಗೇನು "ಕತ್ತಲು ಭಾಗ್ಯ" ಇದೆ ಎಂದು ಹೇಳುತ್ತಿದ್ದಾರಲ್ಲ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ. ನಾವು ಪೀಕ್ ಹವರ್ಸ್‌ನಲ್ಲಿಯೂ ಸಹ ವಿದ್ಯುತ್ ಕೊಡುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ವಿದ್ಯುತ್ ಇಲ್ಲ, ನೀರಿಲ್ಲ, ಭೂಮಿ ಇಲ್ಲ, ಕೈಗಾರಿಕೆಗಳು ಬರುವುದಿಲ್ಲ ಎಂದು ಕೆಲವು ಮಾತನಾಡುತ್ತಾರೆ. ಕೈಗಾರಿಕೆಯ ಬೆಳವಣಿಗೆಗೆ conducive atmosphere ಇಲ್ಲ ಎಂದು ಹೇಳುತ್ತಾರೆ. ನಾವು ಫೆಬ್ರವರಿ 3ನೇ ತಾರೀಖಿನಿಂದ 5ನೇ ತಾರೀಖಿನವರೆಗೆ "Global Investors Meet" ಮಾಡಿದೆವು. ಅಲ್ಲಿಗೆ ಬಂದಿದ್ದಂತಹ ಕೆಲವರು ಬಹುಶಃ ಭಾರತದಲ್ಲಿ ಇಂತಹ "ಗ್ಲೋಬಲ್ ಇನ್‌ವೆಸ್ಟರ್ ಮೀಟ್" ನಡೆದೇ ಇಲ್ಲವೆಂದು ಹೇಳಿದರು. ಇಲ್ಲಿ ಎಲ್ಲಾ ಸವಲತ್ತುಗಳು ಇಲ್ಲದೆ ಇದ್ದಿದ್ದರೆ ಆ ರೀತಿ ಮಾತನಾಡುತ್ತಿದ್ರಾ? ಸುಮಾರು 15 ದೇಶ ಹಾಗೂ ವಿದೇಶದಿಂದ 4,300 ಜನ ಕಂಪನಿಯ ಪ್ರತಿನಿಧಿಗಳು ಬಂದಿದ್ದರು. "ಗ್ಲೋಬಲ್ ಇನ್‌ವೆಸ್ಟರ್ ಮೀಟ್" ಗೆ

ರತನ್ ಟಾಟಾ, ಅದಾನಿಯವರು, ಅಂಬಾನಿಯವರು, ಪ್ರೇಂಜೀ, ನಾರಾಯಣ್ ಮೂರ್ತಿ, ಜಿಂದಾಲ್, ಲಕ್ಷ್ಮಿ ಮಿತ್ತಲ್, ಕುಮಾರ ಮಂಗಳಂ, ಇಂತಹ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳೆಲ್ಲರೂ ಬಂದಿದ್ದರು. ಎಲ್ಲರೂ ಕೂಡ ಕರ್ನಾಟಕ ಇನ್‌ವೆಸ್ಟ್ ಮಾಡುವುದಕ್ಕೆ ಬಹಳ ಯೋಗ್ಯವಾದಂತಹ ಸ್ಥಳ ಎಂದು ಹೇಳಿದ್ದಾರೆ. ಕತ್ತಲೆ ಆಗಿದ್ದರೆ ಈ ರೀತಿ ಎಲ್ಲಾ ಹೇಳಿ ಹೋಗುತ್ತಿದ್ದರೆ? ಅದೆಲ್ಲವನ್ನು ನೀವು ಸಹ ನೋಡಿದ್ದೀರಿ. ಸುಮ್ಮ ಸುಮ್ಮನೆ ಸಿದ್ದರಾಮಯ್ಯನವರ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಹೇಳುವುದು. "Take Off " ಆಗೇ ಇಲ್ಲ ಎಂದು ಹೇಳುವುದು. ಈ ಮಾತನ್ನು ನಾನು ಸುಮಾರು 3 ವರ್ಷಗಳಿಂದಲೂ ಕೇಳುತ್ತಲೇ ಇದ್ದೇನೆ. "Take Off" ಆಗುವುದು ವಿಮಾನ ಅಷ್ಟೆ. ಅದು ಹಾರಾಟ ಮಾಡುವುದು, ನಮ್ಮದು ಜನರ ಜೊತೆ ಇರುವಂತಹ ಸರ್ಕಾರ. ನಾವೇನು ಆಕಾಶದಲ್ಲಿ ಓಡಾಡುತ್ತಿಲ್ಲ. ಆದಕಾರಣ ಆ ರೀತಿ ಹೇಳುವವರೆಲ್ಲರೂ ಭೂಮಿಗೆ ಬಂದು ಜನರ ಜೊತೆ ಇದ್ದರೆ ಬಹಳ ಒಳ್ಳೆಯದು. ನಾನು ಮುಖ್ಯಮಂತ್ರಿ ಆಗಿ ಒಂದು ಗಂಟೆಯೊಳಗೆ ಕಂಠೀರವ ಸ್ಟೇಡಿಯಂನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ ನೇರವಾಗಿ ವಿಧಾನಸೌಧಕ್ಕೆ ಬಂದೆ. ನಾನೇನು ದೇವಸ್ಥಾನಗಳಿಗಾಗಲಿ, ಅಲ್ಲಿ, ಇಲ್ಲಿ ಹೋಗಲಿಲ್ಲ. ನೇರವಾಗಿ ವಿಧಾನಸೌಧಕ್ಕೆ ಬಂದು ಕ್ಯಾಬಿನೆಟ್ ಹಾಲ್‌ಗೆ ಹೋಗಿ ಅಲ್ಲಿಯೇ ಡಿಷೀಶನ್ ಮಾಡಿದೆ. ಅನ್ನ ಭಾಗ್ಯ ಕಾರ್ಯಕ್ರಮ, ಕ್ಷೀರ ಭಾಗ್ಯ ಕಾರ್ಯಕ್ರಮ, ಕ್ಷೀರ ಧಾರೆ ಕಾರ್ಯಕ್ರಮ, ಬಡವರಿಗೆ ಸಾಲ ಮನ್ನಾ ಮಾಡಿದ್ದು, 1,350 ಕೋಟಿ ರೂಪಾಯಿ ಅಸಲು ಮತ್ತು ಬಡ್ಡಿ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜ್ ಅರಸ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ. ಇದರಲ್ಲಿ ಇರುವಂತಹ ಎಲ್ಲಾ ಬಡವರ ಸಾಲವನ್ನು ಪೂರ್ಣವಾಗಿ ಮನ್ನಾ ಮಾಡಿದೆ. 2013ನೇ ಸಾಲಿನಲ್ಲಿ ಎಸ್‌ಸಿ/ಎಸ್‌ಟಿ ಜನತೆಗಾಗಿ ನಾವು SCP-TSP (Special Component Plan & Tribal Sub Plan) ಕಾರ್ಯಕ್ರಮ ರೂಪಿಸಿ, ಅದಕ್ಕೆ ಒಂದು ಕಾಯಿದೆಯನ್ನು ಸಹ ಜಾರಿಗೆ ತಂದೆವು. ಆಂಧ್ರ ಪ್ರದೇಶ ರಾಜ್ಯವನ್ನು ಬಿಟ್ಟರೆ ಆ ಕಾಯಿದೆ ಜಾರಿಗೆ ತಂದಿರುವವರಲ್ಲಿ ನಮ್ಮದೇ 2ನೇ ರಾಜ್ಯ. ಅಲ್ಲದೆ, ಈ ಕಾಯಿದೆಯನ್ನು ಆಂಧ್ರ ಪ್ರದೇಶಕ್ಕಿಂತ ಹೆಚ್ಚು ಕ್ರಾಂತಿಕಾರಕವಾಗಿ ನಾವು ಜಾರಿಗೊಳಿಸಿದ್ದೇವೆ. ನಮಗೆ ಬದ್ಧತೆ ಇರುವುದರಿಂದ ಈ ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವಾಯಿತು. ಇವತ್ತಿನ ದಿವಸ ಆ ಕಾಯಿದೆ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ನಮ್ಮ ಪ್ಲಾನ್ ಅಮೌಂಟ್‌ನಲ್ಲಿ ಖರ್ಚು ಮಾಡುವಂಥದ್ದು ಇದೆ. ಈ ಹಿಂದೆ ಈ ರೀತಿಯಾದಂತಹ ಯೋಚನೆಯನ್ನು ಏಕೆ ಮಾಡಿರಲಿಲ್ಲ?

(ಮುಂದು)

(151) 05–03–2016 ಸಿಎಸ್:ವಿಎಸ್ 5:20

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)(ಮುಂದು):_

ಹಿಂದೆ ಏಕೆ ಈ ಕಾಯಿದೆಯನ್ನು ಮಾಡಿರಲಿಲ್ಲ. ಹಿಂದೆ ಇದರ ಬಗ್ಗೆ ಯಾರು ಯೋಚನೆಯನ್ನು ಮಾಡಿರಲಿಲ್ಲ. 2012–13ನೇ ಸಾಲಿನಲ್ಲಿ ಸುಮಾರು 7000 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು. ಈ ಕಾಯಿದೆ ಮಾಡಿದ ಮೇಲೆ 2014–15ರಲ್ಲಿ ರೂ. 15834 ಕೋಟಿ ಆಗಿದೆ. ಎಸ್‌ಟಿಪಿಟಿಎಸ್‌ಪಿನಲ್ಲಿ ಒಂದೇ ಸಲಕ್ಕೆ ದ್ವಿಗುಣ ಆಯಿತು. ಈ ವರ್ಷ 2015–16ನೇ ಸಾಲಿಗೆ 16356 ಕೋಟಿ ರೂಪಾಯಿ ಆಯಿತು. ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ 24.1% ಇದೆ. ನಮ್ಮ ಯೋಜನೆ 72,600 ಕೋಟಿ ರೂಪಾಯಿಗಳಿಷ್ಟಿದೆ. ಅದರಲ್ಲಿ ನಾವು 24.1% ಖರ್ಚು ಮಾಡಬೇಕಾಗಿದೆ. ಕರ್ನಾಟಕದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನಾವು ಇದನ್ನು ಮಾಡಿದ್ದೇವೆ. ಇದನ್ನೆಲ್ಲ ನಿಷ್ಕ್ರೀಯ ಸರ್ಕಾರ ಮಾಡಲು ಸಾಧ್ಯವೇ? ಟೇಕ್ ಆಫ್ ಆಗದಿರುವ ಸರ್ಕಾರ ಮಾಡಲು ಸಾಧ್ಯವೇ? ಯಾವ ಸರ್ಕಾರ ಕೆಲಸವನ್ನು ಮಾಡುತ್ತದೆ, ಯಾವ ಸರ್ಕಾರ ಜನಪರವಾಗಿ ಇರುತ್ತದೆ, ಯಾವ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತದೆ, ಆ ಸರ್ಕಾರ ಮಾತ್ರ ಇದನ್ನೆಲ್ಲ ಮಾಡಲಿಕ್ಕೆ ಸಾಧ್ಯ ಎಂದು ತಿಳಿಸಬಯಸುತ್ತೇನೆ.

ನಮ್ಮ ಸರ್ಕಾರದ ಉದ್ದೇಶ ಏನೆಂದರೆ ಜನರು ಹಸಿವು ಮುಕ್ತರಾಗಬೇಕು, ನಮ್ಮದು ಹಸಿವು ಮುಕ್ತರಾಜ್ಯ ಆಗಬೇಕೆನ್ನುವುದು. ಯಾರು ಹಸಿವಿನಿಂದ ಇರಬಾರದು. ಯಾವ ಬಡವರು ಸಹ ಅನ್ನಕ್ಕಾಗಿ ಇನ್ನೊಬ್ಬರ ಮನೆಯ ಮುಂದೆ ಹೋಗಿ ನಿಲ್ಲಬಾರದು ಎನ್ನುವ ಮಾತನ್ನು ನಾನು ಹಿಂದೆ ಒಂದು ಸಲ ಹೇಳಿದ್ದೆನು. ನಾನು ಸಣ್ಣ ಹುಡುಗ ಆಗಿದ್ದಾಗ ನಮ್ಮ ಊರಿನಲ್ಲಿ ಎಲ್ಲರಿಗೂ ನೀರಾವರಿ ಪ್ರದೇಶ ಇರಲಿಲ್ಲ, ಕೆಲವರಿಗೆ ಮಾತ್ರ ಇದ್ದು ಅವರು ಮಾತ್ರ ಭತ್ತವನ್ನು ಬೆಳೆಯುತ್ತಿದ್ದರು. ಹಿಂದೆ ನಮ್ಮ ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಿ ಮಾತ್ರ ಅನ್ನ ಊಟ ಮಾಡಲಿಕ್ಕೆ ಸಿಗುತ್ತಿತ್ತು. ಅಥವಾ ಮನೆಗೆ ಯಾರಾದರೂ ನೆಂಟರು ಬಂದರೆ ನಮಗೆ ತಿನ್ನಲು ಅನ್ನ ಸಿಗುತಿತ್ತು. ಇಲ್ಲದಿದ್ದರೆ ನಮಗೆಲ್ಲರಿಗೂ ಮುದ್ದೆ ಊಟವೇ; ರಾಗಿ ಇಲ್ಲವೇ ಜೋಳದ ಮುದ್ದೆ, ಉತ್ತರ ಕರ್ನಾಟಕದಲ್ಲಿ ರೊಟ್ಟಿ, ಅವರಿಗೂ ಅನ್ನ ಇಲ್ಲ. ಪಾಪ ಬಡವರ ಮಕ್ಕಳಿಗೆ ಕಾಯಿಲೆ ಬಂದರೆ ಒಂದು ತುತ್ತು ಅನ್ನಕ್ಕಾಗಿ

ಅನ್ನ ಮಾಡಿರುವವರ ಮನೆಯ ಮುಂದೆ ಹೋಗಿ ಕಾಯ್ದುಕೊಂಡು ನಿಲ್ಲುತ್ತಿದ್ದರು. ಇದನ್ನೆಲ್ಲ ನಾನು ನಮ್ಮ ಊರಿನಲ್ಲಿ ಕಣ್ಣಾರೆ ಕಂಡಿದ್ದೆನು. ಅದಕ್ಕಾಗಿಯೇ ಅನ್ನಕ್ಕಾಗಿ ಯಾರು ಇನ್ನೊಬ್ಬರ ಮುಂದೆ ಕೈ ಚಾಚಬಾರದು ಎನ್ನುವುದು ನಮ್ಮ ಉದ್ದೇಶ. ಎಲ್ಲರೂ ಸಹ ಎರಡು ಹೊತ್ತು ಊಟ ಮಾಡತಕ್ಕ ಪರಿಸ್ಥಿತಿ ನಿರ್ಮಾಣ ಆಗಬೇಕು. ಅದಕೋಸ್ಕರವೇ ನಾವು ಈ ಕಾರ್ಯಕ್ರಮವನ್ನು ಮಾಡಿದ್ದು, ಅನ್ನಭಾಗ್ಯ, ಕ್ಷೀರಭಾಗ್ಯ ಕ್ಷೀರಧಾರೆ, ಮನಸ್ವಿನಿ, ಮೈತ್ರಿ, ವಿದ್ಯಾಸಿರಿ ಮಾಡಿದ್ದು, ನಾನು ಬಿಎಸ್‌ಸಿ ಓದುತ್ತಿದ್ದಾಗ ನನಗೆ ನನ್ನ ಅಪ್ಪ ಹಾಸ್ಟೆಲ್‌ಗೆ ಸೇರಿಸಲಿಲ್ಲ. ಪಿಯುಸಿ ತನಕ ನಮ್ಮ ನೆಂಟರ ಮನೆಯಲ್ಲಿ ಇದ್ದುಕೊಂಡು ಊಟ ಮಾಡಿಕೊಂಡು ಓದಿದೆ, ಬಿಎಸ್‌ಸಿ ಗೆ ಬಂದಾಗ ಆ ನೆಂಟರ ಮನೆಯವರು ನನಗೆ ಊಟ ಹಾಕುವುದಿಲ್ಲ ಎಂದರು. ಮೈಸೂರಿನಲ್ಲಿ ನಾವು ಸ್ವಲ್ಪ ಜನ ರೂಮು ಮಾಡಿಕೊಂಡು ಅನ್ನ ಮಾಡಿಕೊಂಡು ಹೋಟೆಲ್‌ನಿಂದ ಸಾಂಬಾರ್ ತಂದು ಊಟ ಮಾಡುತ್ತಿದ್ದೆವು. ರಾತ್ರಿ ನಾವೇ ಪಾತ್ರೆ ಎಲ್ಲಾ ತೊಳೆದಿಡುತ್ತಿದ್ದೆವು. ಇದನ್ನೆಲ್ಲ ಅನುಭವಿಸಿದ್ದ ನಾವು ಬಹಳ ಜನ ವಿದ್ಯಾರ್ಥಿಗಳು ಇಂತಹವರು ಇರುತ್ತಾರೆನ್ನುವ ಭಾವನೆಯಲ್ಲಿ ಈ ವಿದ್ಯಾಸಿರಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಒಂದು ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ 1500 ರೂಪಾಯಿಗಳನ್ನು ನೀಡುತ್ತೇವೆ. ಹತ್ತು ತಿಂಗಳಿಗೆ 15,000 ರೂಪಾಯಿಗಳನ್ನು ನೀಡುತ್ತೇವೆ. ಈ ವರ್ಷ ಸುಮಾರು 75,000 ವಿದ್ಯಾರ್ಥಿಗಳಿಗೆ ನೀಡಿದ್ದೇವೆ. ಇವೆಲ್ಲ ಒಂದು ಸಾಮಾಜಿಕ ನ್ಯಾಯ, ನಾವು ಕೇವಲ ಭಾಷಣದಲ್ಲಿ ಸರ್ವರಿಗೂ ಸಮಪಾಲು ಸಮ ಬಾಳು ಎಂದು ಹೇಳುವುದಲ್ಲ, ಈ ದೇಶದ ಸಂಪತ್ತು ಅಧಿಕಾರ ಎಲ್ಲರಿಗೂ ಹಂಚಿಕೆ ಆಗಬೇಕು. ಅದನ್ನೇ ಬಸವಣ್ಣನವರು 'ಕಾಯಕ ಮತ್ತು ಕೈಲಾಸ' ಎಂದು ಹೇಳಿದ್ದು, ಕಾಯದ ಎಂದರೆ ಉತ್ಪಾದನೆ, ಕಾಯಕವೇ ಕೈಲಾಸ ಎನ್ನುವುದು ಬೇರೆ, ಹಾಗೆಂದರೆ ಕೆಲಸದಲ್ಲಿಯೇ ನೀನು ದೇವರನ್ನು ಕಾಣು ಎನ್ನುವುದು, ಆದರೆ ಕಾಯಕ ಎಂದರೆ ಉತ್ಪಾದನೆ, ದಾಸೋಹ ಎಂದರೆ ಹಂಚಿಕೆ, ಪ್ರತಿಯೊಬ್ಬರು ಸಹ ಈ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು, ಅದಕ್ಕೆ ಕಾಯಕವೇ ಕೈಲಾಸ ಎಂದು ಹೇಳುವುದು, ಅಲ್ಲಿ ಬಂದುದ್ದನ್ನು ಸಮಾನವಾಗಿ ಹಂಚಿಕೆ ಮಾಡಿಕೊಳ್ಳಬೇಕು. ಯಾರು ಕೂಡ ಕುಳಿತು ತಿನ್ನಬಾರದು.

ಕುಳಿತು ತಿಂದರೆ ತೂಕ ಜಾಸ್ತಿಯಾಗುತ್ತದೆ. ಆರೋಗ್ಯಕ್ಕೆ ಅದು ಒಳ್ಳೆಯದಲ್ಲ. ಅದರಿಂದ ಕಾಯಕ ಮತ್ತು ದಾಸೋಹ, ಉತ್ಪಾದನೆ ಆದದ್ದನ್ನು ಎಲ್ಲರೂ ಹಂಚಿಕೊಳ್ಳಬೇಕು. ಇದನ್ನೇ ಸರ್ವರಿಗೂ ಸಮಪಾಲು ಸಮಬಾಳು ಎಂದು ಹೇಳಿದ್ದು, "ಸರ್ವೆ ಜನೋ ಸುಖಿನೋ ಭವಂತು" ನಮಗೆ ಈ ಸಂಸ್ಕೃತ ಹೇಳುವುದು ಕಷ್ಟದ ಕೆಲಸ ನಮಗೆ ನಾಲಿಗೆ ತಿರುಗುವುದಿಲ್ಲ. ನಾನು ವೀರಮಕ್ಕಳ ಕುಣಿತ ಕಲಿಯುವಾಗ ನಮಗೆ ನಂಜೇಗೌಡ ಎನ್ನುವ ಒಬ್ಬ ಮಾಸ್ತರ್ ಇದ್ದರು. ಆಗ ನಾನು ಶಾಲೆಗೆ ಸೇರಿರಲಿಲ್ಲ, 5ನೇ ತರಗತಿಯವರೆಗೆ ನಾನು ಶಾಲೆಗೆ ಸೇರಿರಲಿಲ್ಲ. ನಾನು ನೇರವಾಗಿ 5ನೇ ತರಗತಿಗೆ ಸೇರಿದ್ದು., 1ರಿಂದ 4ನೇ ತರಗತಿಯವರೆಗೆ ನಾನು ಓದಿಯೇ ಇಲ್ಲ. ನಮ್ಮ ಊರಿನಲ್ಲಿ ನನ್ನ ಹಾಗೆ 3 ಜನ ವಿದ್ಯಾರ್ಥಿಗಳು, ನಾನು ಮೆಣಸೇಗೌಡ ಮತ್ತು ಮರಿಲಿಂಗೇಗೌಡ ಎನ್ನುವ ಮೂವರು ನೇರವಾಗಿ 5ನೇ ತರಗತಿಗೆ ಎಂಟ್ರಿ ಆಗಿದ್ದು. ನಮಗೆ ಒಬ್ಬರು ರಾಜಪ್ಪ ಎನ್ನುವ ಮೇಸ್ಟರ್ ಇದ್ದರು. ಅವರು ಊರಿನಲ್ಲಿ ಮನೆಮನೆಗೆ ಹೋಗಿ ಯಾರು ಶಾಲೆ ಬಿಟ್ಟಿದ್ದಾರೆ ಯಾರು ಶಾಲೆಗೆ ಸೇರಿಲ್ಲ ಎನ್ನುವುದನ್ನು ನೋಡಲಿಕ್ಕೆ ಬರುತ್ತಿದ್ದರು. ಅವರು ನನ್ನ ಅಪ್ಪನ ಹತ್ತಿರ ಬಂದು ಏಕೆ ನಿಮ್ಮ ಮಗನನ್ನು ಶಾಲೆಗೆ ಸೇರಿಸಿಲ್ಲ ಎಂದು ಕೇಳಿದರು. ಅವನು ವೀರಮಕ್ಕಳ ಕುಣಿತ ಕಲಿಯುತ್ತಿದ್ದಾನೆ ಅದಕ್ಕೆ ಕಳುಹಿಸಿಲ್ಲ ಎಂದು ನನ್ನಪ್ಪ ಹೇಳಿದ್ದಾರೆ. ನನಗೆ ಅಷ್ಟು ಹೊತ್ತಿಗಾಗಲೇ ಕನ್ನಡ ಓದಲು ಬರೆಯಲು ಬರುತ್ತಿತ್ತು, ಲೆಕ್ಕ ಎಲ್ಲಾ ಚೆನ್ನಾಗಿ ಮಾಡುತ್ತಿದ್ದೆನು. ಕಾಗುಣಿತ ಮಗ್ಗಿ ಎಲ್ಲ ಬರುತ್ತಿತ್ತು. ಅದನ್ನು ಕಲಿಸಿದ ಮೇಲೆ ನಮ್ಮ ನಂಜೇಗೌಡರು 'ಯ ಶಿಕ್ಷ ಜ್ಞಾನದಯಾ ಸಿಂಧು' ಅಮರ ಕೋಶ ಓದಿಸುತ್ತಿದ್ದು ಆದರೆ ಏನು ಮಾಡಿದರೂ ಸಹ ನನಗೆ ಅದನ್ನು ಕಲಿಯಲು ಆಗುತ್ತಿರಲಿಲ್ಲ. ಮಧುಸೂದನ್ ತರಹ ನನಗೆ ಹೇಳಲಿಕ್ಕೆ ಆಗುವುದಿಲ್ಲ, ಇದೇ ನನಗೂ ಅವರಿಗೂ ಇರುವ ವ್ಯತ್ಯಾಸ. ಒಂದು ಸಲ ಜೆ.ಹೆಚ್.ಪಾಟೀಲ್‌ರವರು ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್‌ನಲ್ಲಿ ಒಂದು ಮಾತನ್ನು ಹೇಳಿದ್ದರು. ಆಗ ನಮ್ಮ ಬಿ.ರಾಚಯ್ಯನವರು ಶಿಕ್ಷಣ ಸಚಿವರಾಗಿದ್ದರು, ರಾಚಯ್ಯನವರು ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗ್ಗಡೆಯವರಿಗೆ ನೀವು ಬಹಳ ಮೇಧಾವಿಗಳು, ಬಹಳ ಚಾಣಾಕ್ಷರು ಎಂದು ಹೇಳುತ್ತಿದ್ದರು. ತಕ್ಷಣ ನಮ್ಮ ಜೆ.ಹೆಚ್.ಪಟೇಲರು ಮಧ್ಯಪ್ರವೇಶಿಸಿ "ಅವರು ಬುದ್ಧಿವಂತರಾಗಿ ಇರಲೇ ಬೇಕು, ಏಕೆಂದರೆ

ಅವರಿಗೆ 5000 ವರ್ಷಗಳ ಇತಿಹಾಸವಿದೆ, ಲಿಂಗಾಯಿತ ಆಗಿರುವ ನನಗೆ ಬಸವಣ್ಣನವರು ಬಂದ ಮೇಲೆ 800 ವರ್ಷಗಳ ಇತಿಹಾಸವಿದೆ, ಅಂಬೇಡ್ಕರ್ ನೀಡಿದಂತಹ ಈ ಸಂವಿಧಾನ ಬಂದ ಮೇಲೆ ನಿಮ್ಮ ಇತಿಹಾಸ ಪ್ರಾರಂಭ ಆಗಿದೆ. ಆದ್ದರಿಂದ ಅವರು ಸ್ವಾಭಾವಿಕವಾಗಿ ಮೇಧಾವಿಗಳು ಮತ್ತು ಚಾಣಾಕ್ಷರಾಗಿರಬೇಕು ಎನ್ನುವ ಮಾತನ್ನು ಹೇಳಿದರು.

**ಶ್ರೀ ಬಸವರಾಜ ಹೊರಟ್ಟಿ:–** ಅವತ್ತು ಜೆ.ಹೆಚ್.ಪಟೇಲರು ತಲೆ ಕೂದಲು ಮೊದಲು ಬಂದಿದೆ, ಮೀಸೆ ನಂತರ ಬಂದಿದೆ, ಹಾಗೆಯೇ ಹೆಗ್ಗಡೆಯವರಿಗೆ ಮೀಸೆ ಈಗ ಬಂದಿದೆ ಎನ್ನುವ ಮಾತನ್ನು ಹೇಳಿದ್ದರು.

**ಶ್ರೀ ಸಿದ್ದರಾಮಯ್ಯ:–** ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಸುಮ್ಮನೆ ಅಲ್ಲೊಂದು ಇಲ್ಲೊಂದು ಹೇಳುತ್ತಿದ್ದೇನೆ. ಜೆ.ಹೆಚ್.ಪಟೇಲ್‌ರವರಿಗೆ ಆ ತೀರಿ ತಕ್ಷಣಕ್ಕೆ ಮಾತನಾಡಲು ಅವರಿಗೆ ಹೊಳೆಯುತ್ತಿತ್ತು, ಆ ರೀತಿ ಇಷ್ಟು ವರ್ಷಗಳ ಇತಿಹಾಸದಲ್ಲಿಯೇ ಅವರನ್ನೇ ನಾನು ನೋಡಿದ್ದು ರಾಜಕೀಯ ಜೀವನದಲ್ಲಿ ಆ ರೀತಿ ಮಾತನಾಡುವ ಅವರನ್ನೇ ಮೊದಲು ನೋಡಿದ್ದು.

(ಮುಂದು)

**ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ಎಲ್ಲವನ್ನು ಹೇಳಲು ಹೋಗುವುದಿಲ್ಲ, ಕೆಲವೊಂದು ಮಾತ್ರ ಹೇಳುತ್ತೇನೆ. ಆ ರೀತಿ ತಕ್ಷಣ ಹೊಳೆಯುವುದು ಮಾನ್ಯ ಜೆ.ಎಚ್.ಪಟೇಲ್‌ರಿಗೆ ಮಾತ್ರ. ಆ ರೀತಿ ಬೇರೆ ಯಾರನ್ನು ನನ್ನ 35 ವರ್ಷಗಳ ರಾಜಕೀಯ ಜೀವನದಲ್ಲಿ ನೋಡಲಿಲ್ಲ ಅವರೊಬ್ಬರನ್ನೆ ನೋಡಿದು. ತಕ್ಷಣ ರಿಯಾಕ್ಷನ್ ಕೊಡುವವರು, ಬಹಳ ಶಾರ್ಪ್ ಆಗಿ ಹೊಳೆಯುತ್ತಿತ್ತು ಅವರಿಗೆ. He was a very good parliamentarian. ಎಷ್ಟೆ ಗಂಭೀರವಾಗಿ ಚರ್ಚೆ ನಡೆಯುತ್ತಿದ್ದರೂ ಅದನ್ನು dilute ಮಾಡಿಬಿಡುತ್ತಿದ್ದರು. He had that capacity.

**ಶ್ರೀ ಅಮರನಾಥ್ ಪಾಟೀಲ್:-** ನಮ್ಮ ಕಡೆಯಲ್ಲಿ ಶಾಲನಲ್ಲಿ ಹೊಡೆಯುತ್ತಾರೆ ಎಂದು ಹೇಳುತ್ತಾರೆ. ಆ ರೀತಿ ತಮಗೂ ಸ್ವಲ್ಪ ಆ ಸ್ಥಿತಿಪ್ರಜ್ಞೆ ಇದೆ.

**ಶ್ರೀ ಸಿದ್ದರಾಮಯ್ಯ:-** ಇಲ್ಲ ಮಾನ್ಯ ಜೆ.ಎಚ್.ಪಟೇಲ್‌ರವರಿಗೂ ನನಗೂ compare ಮಾಡಲು ಆಗುವುದೆ ಇಲ್ಲ. ಅದು ಎಲ್ಲರಿಗೂ ಬರುವುದಿಲ್ಲ. ಕೆಲವರು ನೀವು ದೇವರಾಜ ಅರಸರಾಗಬೇಕು ಎಂದು ಹೇಳುತ್ತಾರೆ. ನಾನು ದೇವರಾಜ ಅರಸ ಆಗಲು ಸಾಧ್ಯವೆ? ದೇವರಾಜ ಅರಸ ದೇವರಾಜ ಅರಸರೆ, ಸಿದ್ದರಾಮಯ್ಯ ಸಿದ್ದರಾಮಯ್ಯನೆ, ಬಸವಣ್ಣ ಬಸವಣ್ಣನೆ, ಅಂಬೇಡ್ಕರ್ ಅಂಬೇಡ್ಕರ್‌ರವರೆ. ಅಂಬೇಡ್ಕರ್‌ರವರಷ್ಟು ಮೇಧಾವಿಯಾಗಲು ಸಾಧ್ಯವೆ? ಎಲ್ಲರೂ ಕುವೆಂಪು ಆಗಲು ಸಾಧ್ಯವೆ? ಇವರೆಲ್ಲರೂ ಯುಗಪುರಷರು. ಇನ್ನು ನಾನು ಬಹಳ ಹೊತ್ತು ಮಾತನಾಡವುದು ಬೇಡ ಎಂದು ನನ್ನಗನ್ನಿಸುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾಡಿದ್ದು ಶಿವರಾತ್ರಿ ಊರಿಗೆ ಹೋಗಬೇಕೆಂದು ನೀವೆ ಹೇಳುತ್ತೀರಿ. ನೀವೆ ಹರಿಕಥೆ ಮಾಡತ್ತಾ ಕುಳಿತ್ತರೆ ನಾವು ಏನು ಮಾಡಬೇಕು?

**ಶ್ರೀ ಸಿದ್ದರಾಮಯ್ಯ:-** ಇಲ್ಲಿಯವರೆಗೆ ಚೆನ್ನಾಗಿದೆ ಎಂದು ಹೇಳಿ ಈಗ ಹರಿಕಥೆ ಅಂದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಹರಿಕಥೆ ಚೆನ್ನಾಗಿಲ್ಲ ಎಂದು ಹೇಳಿದ್ದು ಯಾರು?

**ಶ್ರೀ ಎಚ್.ಎಂ.ರೇವಣ್ಣ:-** ಅವರು ಇಷ್ಟೊಂದು ಮಾತನಾಡಲು ಪ್ರೇರಣೆ ಕೊಟ್ಟವರೆ ನೀವು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲ ಎಂದು ಹೇಳಲಿಲ್ಲ, ಆದರೆ ಅವರ ಅನುಭವದ ಮುಂದೆ ನಂದು ಏನು ಅಲ್ಲ. ಹರಿಕಥೆ ನಿಜಕ್ಕೂ ವ್ಯಕ್ತಿಗಳನ್ನು ವ್ಯಕ್ತಿತ್ವದ ಕಡೆ ತೆಗೆದುಕೊಂಡು ಹೋಗುತ್ತದೆ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿರುವುದು ನಿಜಕ್ಕೂ ಚೆನ್ನಾಗಿದೆ. ತಾವು ಬೆಳಗ್ಗೆ ಇಲ್ಲಿಗೆ ಬಂದಿದ್ದರೆ ಚೆನ್ನಾಗಿತ್ತು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಕೆಳಮನೆಯಲ್ಲಿ ನಿನ್ನೆ ಉತ್ತರ ಕೊಡುವುದು ಮತ್ತು ಇವತ್ತು ಈ ಮನೆಯಲ್ಲಿ ಬೆಳಗ್ಗೆ ಉತ್ತರ ಕೊಡುವುದು ಎನ್ನುವುದು ಇತ್ತು. ಆದರೆ ನಿನ್ನೆ ಅಲ್ಲಿ ಚರ್ಚೆ ಮುಗಿಯಲಿಲ್ಲ. ಹೀಗಾಗಿ ಇವತ್ತು ಬೆಳಗ್ಗೆ ಅಲ್ಲಿ ಉತ್ತರ ಕೊಡಬೇಕಾಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮಗೆ ಕೆಳಮನೆಯಲ್ಲಿ ಮೂಡ್ ಇರುವುದಿಲ್ಲ. ಇಲ್ಲಿ ಬಂದರೆ ಮೂಡ್ ಬರುತ್ತದೆ.

**ಶ್ರೀ ಸಿದ್ದರಾಮಯ್ಯ:-** ಈಶ್ವರಪ್ಪನವರನ್ನು ನೋಡಿದರೆ ಒಂದು ರೀತಿ ಮೂಡ್ ಬರುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಈಶ್ವರಪ್ಪನವರಿಗೆ ಅನುಭವ ಮಂಟಪದ ಬಗ್ಗೆ ಗೊತ್ತಿಲ್ಲ. ಹರಿಕಥೆ ಕಟ್ಟೆ ಮಾತ್ರ ಗೊತ್ತು ಅವರಿಗೆ. ಹೀಗಾಗಿ ಹರಿಕಥೆ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನನಗೆ ಅನುಭವ ಮಂಟಪವು ಗೊತ್ತು, ಹರಿಕಥೆಯು ಗೊತ್ತು. ಇವು ಎರಡನ್ನು ವಿರೋಧ ಮಾಡುವುದು ಇವರಿಗೆ ಮಾತ್ರ ಗೊತ್ತು.

**ಶ್ರೀ ವಿ.ಎಸ್.ಉಗ್ರಪ್ಪ:-** ಅದು ಗೊತ್ತಿದರೆ ಈ ರೀತಿ ಹರಿಕಥೆ ಎನ್ನುವ ಡೈಲಾಗ್ ಹೊಡೆಯುತ್ತಿರಲಿಲ್ಲ.

**ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ನಮ್ಮ ಸರ್ಕಾರ ಜನಪರವಾಗಿ, ಬಡವರ ಪರವಾಗಿ, ದಲಿತರ ಪರವಾಗಿ ಕೆಲಸ ಮಾಡುತ್ತಿದೆ, ಇನ್ನು ಮಾಡಬೇಕು. ಇವತ್ತು ಇವರು ಕೊಟ್ಟಿರುವ ಸಲಹೆ-ಸೂಚನೆಗಳನ್ನು, ಟೀಕೆಗಳನ್ನು ಗಮನದಲ್ಲಿ ಇಟ್ಟುಕೊಂಡು ಇನ್ನು ಹೆಚ್ಚಿನ ಕೆಲಸವನ್ನು ಮಾಡಿ ಸರ್ಕಾರವನ್ನು ಜನರ ಹತ್ತಿರ ತೆಗದುಕೊಂಡು ಹೋಗುವಂತಹ, ಜನರ ಸಮಸ್ಯೆಗಳಿಗೆ ಸ್ಪಂಧಿಸುವಂತಹ ಕೆಲಸವನ್ನು ಮಾಡುವ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಆದ್ದರಿಂದ ರಾಜ್ಯಪಾಲರ ಭಾಷಣಕ್ಕೆ ಸದನ ಒಮ್ಮತದಿಂದ, ಒಕ್ಕರಲಿನಿಂದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):- ಮಾನ್ಯ** ಸಭಾಪತಿಗಳೆ, ಎಲ್ಲಾ ವಿಷಯಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ ಎಂದು ತಾವು ಹೇಳಿರುವುದರಿಂದ ನಾವು ಕೂಡಾ ಎಲ್ಲಾ ವಿಷಯಗಳಿಗೆ ಹೋಗುವುದಿಲ್ಲ. ಒಂದೇರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ, ಶುದ್ಧ ಕುಡಿಯುವ ನೀರಿನ ಘಟಕಗಳ ಕೆಲಸವನ್ನು ಜೂನ್ ಒಳಗೆ ಮುಕ್ತಾಯಗೊಳಿಸುತ್ತೇವೆ ಎಂದು ಹೇಳಿದ್ದೀರಿ, ದಯಮಾಡಿ ಆ ಕಡೆಗೆ ಗಮನ ಕೊಡಿ. ಮಲ್ಟಿ ವಿಲೇಜ್ ಸ್ಕೀಮ್‌ನಲ್ಲಿ ಸುಮಾರು 600 ಕೋಟಿ ರೂ.ಗಳಷ್ಟು ಬಾಕಿಯನ್ನು ಗುತ್ತಿಗೆದಾರರಿಗೆ ಕೊಡಬೇಕಾಗಿದೆ. ನಿಮಗೆ ಗೊತ್ತಿದೆ ಕಬಿನ ಒಂದು ಯೋಜನೆಯದೆ 100 ಕೋಟಿ ರೂ.ಗಳ ಬಾಕಿ ಇದೆ. ಹೀಗಾಗಿ ಮಲ್ಟಿ ವಿಲೇಜ್ ಸ್ಕೀಮ್‌ಗಳ ಬಾಕಿ ಇರುವುದನ್ನು ತಕ್ಷಣ ಕ್ಲೀಯರ್ ಮಾಡಿ. ಅದಕ್ಕೆ ಒಂದು ಸಮಯವನ್ನು ಕೊಡಿ. ಹೊಸ ಯೋಜನೆಗಳನ್ನು ನೀವು ತೆಗೆದುಕೊಳ್ಳುತ್ತಿರೊ ಬಿಡುತ್ತಿರೊ ನಿಮಗೆ ಬಿಟ್ಟ ವಿಚಾರ. ಹಳೆಯ ಯೋಜನೆಗಳನ್ನು ಮುಗಿಸಲು ಪ್ರಯತ್ನ ಮಾಡಿ. ಅದರಲ್ಲಿ ಕುಡಿಯುವ ನೀರಿನ ಯೋಜನೆಗೆ ಮೊದಲನೆಯ ಆದ್ಯತೆ ಕೊಟ್ಟರೆ ಒಳ್ಳೆಯದಾಗುತ್ತದೆ. ಬರಗಾಲದ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ 1,540 ಕೋಟಿ ರೂ.ಗಳ ಅನುದಾನ ಬಂದಿರುವುದು ನಿಜ, ಈ ವರೆಗೆ ವಿತರಣೆ ಆಗಿರುವುದು 1,200 ಕೋಟಿ ರೂ.ಗಳು. ನಿಮ್ಮ ಲೆಕ್ಕದ ಪ್ರಕಾರ ಇನ್ನು 340 ಕೋಟಿ ರೂ.ಗಳ ಇವೆ. ಇದಕ್ಕೆ ರಾಜ್ಯ ಸರ್ಕಾರದಿಂದಲೂ ಸ್ವಲ್ಪ ಅನುದಾನವನ್ನು ಕೊಡಿ.

**ಶ್ರೀ ಸಿದ್ದರಾಮಯ್ಯ:-** 10ನೇ ತಾರೀಖಿನವರೆಗೆ ಸಮಯವನ್ನು ಕೊಟ್ಟಿದ್ದೆನೆ. ಅಷ್ಟರಲ್ಲಿ ಮುಗಿಸಲೇ ಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರದಿಂದ ಬಂದಿರುವುದನ್ನು ಖರ್ಚು ಮಾಡಿಸಲು ಖಂಡಿತವಾಗಿ ತಾವು ಪ್ರಯತ್ನ ಮಾಡುತ್ತೀರಿ. ರಾಜ್ಯ ಸರ್ಕಾರದಿಂದಲೂ ಕೊಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ನಾವು ಇವತ್ತಿನವರೆಗೆ ಬಿಡುಗಡೆ ಮಾಡಿರುವಂತಹ ಹಣ 2,066ಕೋಟಿ ರೂ.ಗಳು. ಕೇಂದ್ರ ಸರ್ಕಾರದಿಂದ input subsidy ಮಾತ್ರ ಹೇಳಿದ್ದೆವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಮ್ಮ ವೀರಯ್ಯನವರು ಮಾತನಾಡುತ್ತಾ Special Component Plan and Tribal Sub Plan ಬಗ್ಗೆ ಹೇಳಿದರು. ತಾವೇ ಛಾಟಿ ಏಟು ಕೊಟ್ಟು ಅಧಿಕಾರಿಗಳನ್ನು ಕೂಡಿಸಿ ಕೆಲಸ ಮಾಡಿಸಿದ್ದಿರಿ. ಹೋದ ತಿಂಗಳವರಗೆ 40% ಮಾತ್ರ ಖರ್ಚಾಗಿತ್ತು. ನಿನ್ನೆವರೆಗೆ 57% ಮಾತ್ರ ಖರ್ಚಾಗಿದೆ.

**ಶ್ರೀ ಸಿದ್ದರಾಮಯ್ಯ:-** ಈ ಹಣ ಜನೆವರಿವರೆಗೆ ಮಾತ್ರ 57% ಖರ್ಚಾಗಿರುವುದು. ಇನ್ನು ಫೆಬ್ರವರಿ, ಮಾರ್ಚ್ ತಿಂಗಳ ಲೆಕ್ಕ ಇದರಲ್ಲಿ ಇಲ್ಲ. ಮಾರ್ಚ್‌ನಲ್ಲಿ ಖರ್ಚಾಗಿ ಉಳಿದ ಹಣ ಲ್ಯಾಪ್ಸ್ ಆಗುವುದಿಲ್ಲ. Carry forward ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅದೇ ಅಧಿಕಾರಿಗಳಿಗೆ ಅನುಕೂಲವಾಗಿದೆ. ತಾವು ಸ್ವಲ್ಪ ಬಿಗಿಯಾಗಿ ಕೆಲಸ ಮಾಡಿಸಿದ್ದರಿಂದ ಇಷ್ಟು ಕೆಲಸವಾಗಿದೆ.

**ಶ್ರೀ ಸಿದ್ದರಾಮಯ್ಯ:-** ನಾನು ಇನ್ನೊಂದು ಮೀಟಿಂಗ್ ಕರೆಯುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ, ಬಡವರ ಬಗ್ಗೆ ಆಸಕ್ತಿಯನ್ನು ತೋರಿಸಿ ಕೆಲಸ ಮಾಡುತ್ತೀದ್ದಿರಿ, ಅದಕ್ಕಾಗಿ ಹಣವನ್ನು ಇಟ್ಟಿದ್ದಿರಿ ಇದು ನಿಜ. ಆದರೆ carry forward ಮಾಡಲು ಹೇಗೋ ಹಣವಿದೆಯಲ್ಲ ಎಂದು ಇದನ್ನೆ ಅಭ್ಯಾಸ ಮಾಡಿಕೊಳ್ಳುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಈ ವರ್ಷ ಎರಡು-ಮೂರು ಚುನಾವಣೆಗಳು ಬಂದವು. Code of Conduct ಬಂತು. ಅದಕ್ಕಾಗಿ ಸ್ವಲ್ಪ ತೊಂದರೆಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅಧಿಕಾರಿಗಳಿಗೆ ಎನು ತೊಂದರೆ?

**ಶ್ರೀ ಸಿದ್ದರಾಮಯ್ಯ:-** ಎಲ್ಲಾ ಜಿಲ್ಲಾಧಿಕಾರಿಗಳು ಚುನಾವಣಾ ಕೆಲಸ ಹೋಗುತ್ತಾರೆ. ಹೀಗಾಗಿ ತೊಂದರೆಯಾಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ತಾವು ಆದಷ್ಟು ಬೇಗ ಇನ್ನೊಂದು ಸಭೆಯನ್ನು ಮಾಡಿ. ಏಕೆಂದರೆ ಹಿಂದುಳಿದ ಮತ್ತು ದಲಿತರಿಗೆ ಇಟ್ಟಿರುವ ಹಣ ಅವರಿಗೆ 100% ತಲುಪದಿದ್ದರೆ ತಾವು ಮುಖ್ಯಮಂತ್ರಿಗಳಾದ ಸಮಯದಲ್ಲಿ ಹೀಗಾದರೆ ಅವರಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ತಕ್ಷಣ ಮೀಟಿಂಗ್ ಮಾಡಿ ಮಾರ್ಚ್ 31ರೊಳಗೆ ಇರುವ ಹಣವನ್ನು ದಯಮಾಡಿ ಖರ್ಚು ಮಾಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಇವರು ಕೊಟ್ಟಿರುವ ಸಲಹೆ-ಸೂಚನೆಗಳು ಬಹಳ ಚೆನ್ನಾಗಿವೆ. ನಾನು ಸ್ವಾಗತ ಮಾಡುತ್ತೇನೆ. 100% ಹಣವನ್ನು ಖರ್ಚು ಮಾಡಬೇಕು ಎನ್ನುವುದು ನಮ್ಮ ಉದ್ದೇಶ. ಈ ರೀತಿ extraneous reasons ನಿಂದಾಗಿ ತೊಂದರೆಯಾಗಿದೆ. ಮಾರ್ಚ್ ಒಳಗೆ maximum ಖರ್ಚು ಮಾಡಲು ಪ್ರಯತ್ನ ಮಾಡುತ್ತೇವೆ. ಏಕೆಂದರೆ ಇದು ಲ್ಯಾಪ್ಸ್ ಆಗುವಂತಹ ಹಣವಲ್ಲ. ಕಾನೂನು ಎಲ್ಲಾ ಅಳವಡಿಸಿ ಅಧಿಕಾರಿಗಳು ಕೆಲಸ ಮಾಡುವಂತೆ ಮಾಡಿದ್ದೇವೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಣ ಖರ್ಚು ಮಾಡಲು ಆಗದಿದ್ದರೆ ಅಂತಹ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ. ಅದನ್ನು review ಮಾಡುತ್ತೇವೆ. ತಾವು ಹೇಳಿದ ಹಾಗೆಯು ಮಾಡುತ್ತೇವೆ. ಮಲ್ಟಿ ವಿಲೇಜ್ ಸ್ಕೀಮ್‌ನಲ್ಲಿ ಬಾಕಿ ಇರುವ ಹಣವನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ನಮ್ಮ ಕಡೆಯಲ್ಲಿ...

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಗಳೆ,

**ಶ್ರೀ ಸಿದ್ದರಾಮಯ್ಯ:-**ವೀರಯ್ಯನವರೆ ಮುಂದೆ ಕುಳಿತ್ತಿರುವ ನಾಯಕರು ಕೇಳಿ ಬಿಡಲಿ. ನೀವು ನಾಯಕರೇ, ಆದರೆ ಸ್ವಲ್ಪ ಹಿಂದಿನ ಲೈನ್‌ನಲ್ಲಿ ಕುಳಿತ್ತಿದ್ದಿರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಿಧಾನಸಭೆಯಲ್ಲಿ ಮೂರನೇ ಸ್ಥಾನದಲ್ಲಿ ಕುಳಿತವರು?

**ಶ್ರೀ ಸಿದ್ದರಾಮಯ್ಯ:-** ಅವರು ನಾಯಕರೆ, for our convenience seat arrangements ಮಾಡಿಕೊಂಡಿದ್ದೆವೆ. ಅವರು leader of the people ಆಗಿದ್ದಾರೆ, ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ಮುಂದಿನ ಸಾಲಿನಲ್ಲಿ ಕುಳಿತವರಿಗೆ ಮೊದಲನೆಯ ಆದ್ಯತೆ. ಎರಡನೆಯ ಸಾಲಿನಲ್ಲಿ ಕುಳಿತವರಿಗೆ ನಂತರ ಆದ್ಯತೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಿಧಾನಸಭೆಯಲ್ಲಿ ಮೂರನೇ ಸಾಲಿನಲ್ಲಿ ಕುಳಿತ್ತಿರುವ ಮಂತ್ರಿಗಳ ಕಥೆ ಏನು?

**ಶ್ರೀ ಸಿದ್ದರಾಮಯ್ಯ:-** ಹಾಗೇನು ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಿಧಾನಸಭೆಯಲ್ಲಿ ಮೂರನೆ ಸ್ಥಾನದಲ್ಲಿರುವವರನ್ನು ದಯಮಾಡಿ ಮುಂದಿನ ಸಾಲಿಗೆ ತನ್ನಿ.

**ಶ್ರೀ ಸಿದ್ದರಾಮಯ್ಯ:-** ಯಾರನ್ನ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಪರಮೇಶ್ವವರವರನ್ನು ಮುಂದಿನ ಸಾಲಿಗೆ ತನ್ನಿ.

**ಶ್ರೀ ಸಿದ್ದರಾಮಯ್ಯ:-** ನಮ್ಮಲ್ಲಿ ಆ ರೀತಿ ಮೊದಲನೆಯ ಸಾಲು, ಎರಡನೆಯ ಸಾಲು ಎಂದು ಏನು ಇಲ್ಲ. We are all equals.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ಆತ್ಮಸಾಕ್ಷಿ ಹಾಗೆ ಹೇಳುತ್ತಿದೆ. ಆದರೆ front line ನಲ್ಲಿ ಹಾಗೆ ಇಲ್ಲ. ಅವರು ಮೂರನೇ ಸ್ಥಾನದಲ್ಲಿಯೇ ಇರಬೇಕಾ? ಮೊದಲನೆಯ ಸ್ಥಾನಕ್ಕೆ ತರಲು ಪ್ರಯತ್ನ ಮಾಡಿ.

**ಶ್ರೀ ಸಿದ್ದರಾಮಯ್ಯ:-** ಆಯಿತು, ನಿಮ್ಮ ಸಲಹೆಯನ್ನು ನೆನೆಪಲ್ಲಿ ಇಟ್ಟುಕೊಳ್ಳುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ನಮ್ಮ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ಕಳಸಾ ಬಂಡೂರಿ ಹೋರಾಟ ತೀವ್ರವಾಗಿದೆ. ನಾಳೆ ನಾವು ಊರಿಗೆ ಹೋಗುವುದು ತೊಂದರೆಯಾಗಿದೆ. ಅಲ್ಲಿಯ ರೈತರು ಹೋರಾಟ ಪ್ರಾರಂಭ ಮಾಡಿ ಇವತ್ತಿಗೆ 224ನೇ ದಿನವಾಯಿತು. ಕೇಂದ್ರ ಸರ್ಕಾರದ ವಿಚಾರ ಬಿಡಿ, ರಾಜ್ಯ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಮಾನ್ಯ ವೀರಣ್ಣ ಮತ್ತೀಕಟ್ಟಿಯವರು, ವಿನಯ ಕುಲಕರ್ಣಿ ಮತ್ತು ನಾನು ನಾಳೆ ಊರಿಗೆ ಹೋಗುವುದು ಕಷ್ಟವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವು ಏನು ಎನ್ನುವುದನ್ನು ದಯಮಾಡಿ ಹೇಳಬೇಕು. ಅಲ್ಲಿ

ತುಂಬಾ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಾಳೆ ಆ ಭಾಗದ ಶಾಸಕರ ಮತ್ತು ಮಂತ್ರಿಗಳ ಮನೆಯ ಮುಂದೆ ಧರಣಿ ಮಾಡುತ್ತೇವೆ ಎಂದು ರೈತರು ಹೇಳಿದ್ದಾರೆ. ರೈತರು ಇವತ್ತು ನಮಗೆ ಫೋನ್ ಮಾಡಿ, ಇವತ್ತು ಅಧಿವೇಶನ ಮುಗಿಯುವುದರೊಳಗೆ ಏನಾದರೂ ತೀರ್ಮಾನ ಮಾಡಿದರೆ ಸರಿ ಇಲ್ಲದಿದ್ದರೆ ನಿಮ್ಮನ್ನು ಮನೆಯಿಂದ ಹೊರಗೆ ಬಿಡುವುದೆ ಇಲ್ಲ ಎಲ್ಲರನ್ನು ಘೇರಾವ ಮಾಡುತ್ತೇವೆ. ಬೇಕಾದರೆ ನಮ್ಮನ್ನು ಜೈಲಿಗೆ ತೆಗೆದುಕೊಂಡು ಹೋಗಲಿ, ಅದು ಏನಾಗುತ್ತದೆ ನೋಡುತ್ತೇವೆ ಎಂದು ಇವತ್ತು ಬೆಳಗ್ಗೆ ಜೋರಾಗಿಯೇ ಹೇಳಿದ್ದಾರೆ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಏನಾದರು ಪರಿಹಾರ ಕಂಡುಹಿಡಿಯಿರಿ. ನವಲಗುಂದ-ನರಗುಂದ, ಸವದತ್ತಿ, ಬೆಳಗಾವಿ ಕಡೆಗೆ ಹೋಗದಂತೆ ಕಿತ್ತೂರ ಬಂದ್ ಮಾಡುತ್ತಾರೆ. ನೀವು ಎಲ್ಲರೂ ಏನಾದರೂ ತೀರ್ಮಾನ ಮಾಡಿಕೊಂಡು ಬರಬೇಕು ಇಲ್ಲದಿದ್ದರೆ ನಿಮ್ಮ ಪರಿಸ್ಥಿತಿ ಸರಿಯಾಗುವುದಿಲ್ಲ ಎಂದು ಹೇಳಿದ್ದಾರೆ.

(ಮುಂದು)

**ಶ್ರೀ ಬಸವರಾಜ ಹೊರಟ್ಟಿ (ಮುಂದು)**

ತೀರ್ಮಾನ ಮಾಡಿಕೊಂಡು ಬರದಿದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಇದೇ ಭಾಷೆಯಲ್ಲಿಯೇ ಹೇಳಿದ್ದಾರೆ. ಆದ್ದರಿಂದ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಕಳಸಾ ಬಂಡೂರಿಯ ಬಗ್ಗೆ ಏನಾದರೂ ಒಂದು ರೈತರ ಪರವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಅವರ ಸ್ಟ್ರೈಕ್ ಹಿಂತೆಗೆದುಕೊಳ್ಳುವಂತೆ ಮಾಡಬೇಕು. ಸರ್ಕಾರವು ಅವರ ಮನವೊಲಿಸಿ ಉಪವಾಸ ವಾಪಸ್ಸು ತೆಗೆದುಕೊಳ್ಳುವಂತೆ ಮಾಡಬೇಕು. ದಿನನಿತ್ಯ ಆಗುವ ತೊಂದರೆಗಳಿಂದ ಅವರಿಗೂ ತೊಂದರೆ ಮತ್ತು ನಮಗೂ ತೊಂದರೆಯಾಗುತ್ತದೆ. 224 ದಿವಸಗಳಿಂದ ಸ್ಟ್ರೈಕ್ ನಡೆಯುತ್ತಿದೆ. ಅವರನ್ನು ಕರೆದು ಮಾತನಾಡುವುದೋ ಅಥವಾ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಏನಾದರೊಂದು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ನಾಳೆ ನಮ್ಮ ಪರಿಸ್ಥಿತಿ ಗಂಭೀರವಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):- ಮಾನ್ಯ ಸಭಾಪತಿಯವರೇ, ಕಳಸಾ ಬಂಡೂರಿಯ ಬಗ್ಗೆ ರಾಜ್ಯ ಸರ್ಕಾರದಿಂದ ಆಗಬೇಕಾದ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಿರುವ ಬಗ್ಗೆ ಎಲ್ಲರಿಗೂ ಗೊತ್ತಿಲ್ಲ. ಎಲ್ಲಾ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಭೇಟಿ ಮಾಡಿದ್ದೇವೆ. ಅದರಲ್ಲಿ ರೈತರ ಪ್ರತಿನಿಧಿಗಳು, ಸ್ವಾಮೀಜಿಗಳು, ಎಲ್ಲಾ ಪಕ್ಷಗಳವರು ಇದ್ದರು. ನಾವು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಮಧ್ಯ ಪ್ರವೇಶ ಮಾಡಿ ನ್ಯಾಯಾಧಿಕರಣದ ಹೊರಗೆ ಇತ್ಯರ್ಥ್ಯ ಮಾಡಬೇಕೆಂದು ಮನವಿ ಮಾಡಿದ್ದೇವೆ. ಟ್ರಿಬ್ಯುನಲ್‌ಗೆ ಇಂಟಿರಿಯಂ ಅರ್ಜಿಯನ್ನು ಹಾಕಬೇಕೆಂದು ಡಿಸೆಂಬರ್‌ನಲ್ಲಿ ಅರ್ಜಿ ಹಾಕಿದ್ದೇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಗೋವಾ ಮುಖ್ಯಮಂತ್ರಿಯವರಿಗೆ ಪತ್ರವನ್ನು ಬರೆದು ರಾಜ್ಯದಿಂದ ಮಾತುಕತೆಗಾಗಿ ನಿಯೋಗ ಕರೆದುಕೊಂಡು ಹೋಗುವ ಬಗ್ಗೆ ಹೇಳಿದರು. ಗೋವಾ ಮುಖ್ಯಮಂತ್ರಿಯವರಿಗೂ ಪತ್ರವನ್ನು ಬರೆದೆ. ಅವರು ಟ್ರಿಬ್ಯುನಲ್‌ನಲ್ಲಿಯೇ ಇತ್ಯರ್ಥ್ಯ ಆಗಬೇಕೆಂದು ಉತ್ತರವನ್ನು ಬರೆದರು. ಮಾನ್ಯ ಪ್ರಧಾನ ಮಂತ್ರಿಯವರಿಗೆ ಬರೆದ ಪತ್ರದ ಆಧಾರದ ಮೇಲೆ ಮಾನ್ಯ ಉಮಾ ಭಾರತಿಯವರು ಗೋವಾ ಮತ್ತು ಮಹಾರಾಷ್ಟ್ರದವರೂ ಒಪ್ಪಿಕೊಳ್ಳಬೇಕೆಂದು ಉತ್ತರವನ್ನು ಬರೆದಿದ್ದಾರೆ. ಅವರಿಬ್ಬರೂ ಒಪ್ಪುತ್ತಿಲ್ಲ. ಈಗ ಒಂದೇ ದಾರಿ ಎಂದರೆ ಮಾನ್ಯ ಪ್ರಧಾನ ಮಂತ್ರಿಯವರು ಮಧ್ಯೆ ಪ್ರವೇಶಿಸಿ ಮೂರು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಟ್ರಿಬ್ಯುನಲ್ ಹೊರಗೆ

ಇತ್ಯರ್ಥ್ಯಪಡಿಸಲು ಪ್ರಯತ್ನ ಮಾಡಿದರೆ ಮಾತ್ರ ಪರಿಹಾರ ಇದೆ. ಬೇರೆ ಯಾವುದಾದರೂ ದಾರಿ ಇದ್ದರೆ ಸಲಹೆ ಕೊಟ್ಟರೆ ನಾವು ನಡೆದುಕೊಳ್ಳಲು ತಯಾರಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಮಂತ್ರಿಗಳು ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರುಗಳ ಸಭೆ ಕರೆಯಬೇಕಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಅದನ್ನು ಮಾನ್ಯ ಪ್ರಧಾನ ಮಂತ್ರಿಯವರೇ ಕರೆಯಬೇಕು. ಅವರಿಗೆ ಮಾತ್ರ ಅಧಿಕಾರ ಇದೆ. ಮಾನ್ಯ ಮುಖ್ಯಮಂತ್ರಿಯವರು ಆಗುವುದಿಲ್ಲ ಎಂದು ಉತ್ತರ ಬರೆದಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮುಖ್ಯಮಂತ್ರಿಗಳು ಸರಿ, ಆದರೆ ವಿರೋಧ ಪಕ್ಷದ ನಾಯಕರಿಗೆ ಬರೆದಿದ್ದಾರೆಯೇ? ಅವರುಗಳ ಸಭೆ ಕರೆಯುತ್ತೇವೆ ಎಂದು ಇಬ್ಬರೂ ಒಪ್ಪಿಕೊಂಡಿದ್ದರು. ಅವರನ್ನು ಸಭೆ ಕರೆಯುವ ಬಗ್ಗೆ ಪತ್ರ ಬರೆದು ನಮ್ಮನ್ನು ಸಭೆಗೆ ಕರೆಯುತ್ತೇವೆ ಎಂದು ಹೇಳಿ ಸಭೆ ಕರೆಯಲಿಲ್ಲ. ಆದ್ದರಿಂದ ಮಾನ್ಯ ಪ್ರಧಾನ ಮಂತ್ರಿಯವರ ಮೇಲೆ ಹೊರಿಸಿ ಇವರು ಸರಿದುಕೊಳ್ಳುವುದು ಬೇಡ. ಇಲ್ಲಿ ರಾಜಕಾರಣ ಮಾಡಲು ನಾನು ಇಷ್ಟಪಡುವುದಿಲ್ಲ. ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರಿಗೆ ಮುಖ್ಯಮಂತ್ರಿಗಳು ಪತ್ರ ಬರೆಯಲಿ. ಎರಡು ಕಡೆಗಳಿಂದ ಏನು ಉತ್ತರ ಬರುತ್ತದೆಂದು ನೋಡಿ ನಂತರ ಯೋಚನೆ ಮಾಡೋಣ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಈಶ್ವರಪ್ಪನವರು ನಿಯೋಗದಲ್ಲಿ ಬಂದಿದ್ದರು.

ಶ್ರೀ ಕೆ.ಎಸ್. ಈಶ್ವರಪ್ಪ:- ಹೌದು, ನಾನು ಬಂದಿದ್ದೆನು.

ಶ್ರೀ ಸಿದ್ದರಾಮಯ್ಯ:- ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆಯುವ ಬಗ್ಗೆ ಹೇಳುತ್ತಿದ್ದಾರೆ. ನನಗೆ ಅನುಭವ ಇರುವ ಮಟ್ಟಿಗೆ ಯಾವುದೇ ರಾಜ್ಯಗಳಲ್ಲಿ ..... ಹಿಂದೆ ಇಂದಿರಾಗಾಂಧಿಯವರು ತೆಲಗು ಗಂಗಾ ವಿಷಯದಲ್ಲಿ ಚೆನ್ನೈಗೆ ನೀರು ಕೊಡಲು ಮಧ್ಯೆ ಪ್ರವೇಶ ಮಾಡಿ ಇತ್ಯರ್ಥ್ಯ ಮಾಡಿದ್ದಾರೆ. ವಾಜಪೇಯಿರವರು

ಕಾವೇರಿ ವಿವಾದದ ಬಗ್ಗೆ ನಮಗೆ ಮತ್ತು ತಮಿಳು ನಾಡಿನ ಮಧ್ಯೆ ಪ್ರವೇಶ ಮಾಡಿದ್ದಾರೆ. ನಾನು ಈಗಲೂ ಹೇಳುವುದೇನೆಂದರೆ it is my sincere opinion, the only solution is ಈ ದೇಶದ ಪ್ರಧಾನ ಮಂತ್ರಿಗಳು ಮೂರು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಸರಿಯಾದ ರೀತಿಯಲ್ಲಿ ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಮಾತ್ರ ಟ್ರಿಬ್ಯುನಲ್ ಹೊರಗೆ ಪರಿಹಾರ ಸಿಗಲು ಸಾಧ್ಯವಾಗುತ್ತದೆ. ಅವರು ಹೇಳುವ ಸಲಹೆಯನ್ನು ಮಾಡೋಣ. ಇನ್ನೊಂದು ಸಾರಿ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ:- ಇದನ್ನು ಮಾಡದೇ ಇದ್ದರೆ ಹೇಗಾಗುತ್ತದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಉಮಾಭಾರತಿಯವರು ಹಾಗೂ ಗೋವಾ ಮುಖ್ಯಮಂತ್ರಿಗಳಿಂದ ಉತ್ತರ ಬಂದಿದೆ. ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾರೆ. ಮಾನ್ಯರುಗಳಾದ ಈಶ್ವರಪ್ಪನವರು, ಜಗದೀಶ್ ಶೆಟ್ಟರ್‌ರವರು, ಪ್ರಹ್ಲಾದ್ ಜೋಷಿಯವರು, ಯಡಿಯೂರಪ್ಪನವರು, ಅನಂತ್‌ಕುಮಾರ್‌ರವರು, ಸದಾನಂದಗೌಡರು ಹಾಗೂ ವೆಂಕಯ್ಯನಾಯ್ಡುಗಳವರೆಲ್ಲರೂ ಪ್ರಧಾನ ಮಂತ್ರಿಗಳಿಗೆ ಒತ್ತಾಯ ಮಾಡಬೇಕು. ಇದರ ಬಗ್ಗೆ ಮಧ್ಯೆ ಪ್ರವೇಶ ಮಾಡಿ, ಅವರ ಮನವೊಲಿಸಿ ಇತ್ಯರ್ಥ್ಯ ಮಾಡಲು ಪ್ರಯತ್ನ ಮಾಡಿದರೆ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆಯಲು ತಯಾರಿಲ್ಲ, ಆದರೆ ಬಿಜೆಪಿ ನಾಯಕರುಗಳ ಪಟ್ಟಿ ಕೊಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಜಗತ್ತಿನಲ್ಲಿ ಎಲ್ಲಾದರೂ ಈ ರೀತಿ ನಡೆದಿದೆಯೇ? ಈಗ ಯಾರಾದರೂ ನನ್ನನ್ನು ಕರೆದರೆ ವಿರೋಧ ಪಕ್ಷಗಳ ನಾಯಕರೊಡನೆ ಸಮಾಲೋಚನೆ ಮಾಡದೇ ತೀರ್ಮಾನ ಮಾಡಿಕೊಂಡು ಹೋರಟುಹೋಗುತ್ತೇನೆಯೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನ್ಯಾಯಾಧಿಕರಣಕ್ಕೆ ಹೋಗಲು ಕಾರಣರಾಗಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್:- ಗೋವಾ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇವೆ, .....

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಬರೀ ಕುಡಿಯುವುದಕ್ಕೆ 7 ಟಿಎಂಸಿ ನೀರು ಕೊಡಲು ಕೇಳುತ್ತಿದ್ದೇವೆ. I am making it very very clear. It is only possible by the intervention of the Prime Minister Narendra Modiji, otherwise, it is not possible.

ಶ್ರೀ ಕೆ.ಎಸ್. ಈಶ್ವರಪ್ಪ:- ಈಗ ಇದ್ದಕ್ಕಿದ್ದ ಹಾಗೆ ಬಿಜೆಪಿ ಮೇಲೆ ಗೂಬೆ ಕೂರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ನಾನು ಬರೆಯುತ್ತೇನೆ, ಆದರೆ ನಾನು ಸಲಹೆ ಕೊಡುವುದೇನೆಂದರೆ, 17 ಜನ ಎಂ.ಪಿಗಳು ಕೇಂದ್ರದ ಮಂತ್ರಿಗಳು ಹಾಗು ವಿರೋಧ ಪಕ್ಷದ ನಾಯಕರೆಲ್ಲರೂ ಹೋಗಿ ಪ್ರಧಾನ ಮಂತ್ರಿಯವರನ್ನು ಮನವೊಲಿಸಿ ಮಧ್ಯೆ ಪ್ರವೇಶ ಮಾಡಲು ಪ್ರಯತ್ನ ಮಾಡಬೇಕು. ಆಗ ಆಗುತ್ತದೆ. ಅದಕ್ಕೆ ಪ್ರಿಸಿಡೆನ್ಸ್‌ಗಳು ಇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅನ್ಯಾಯ ಮಾಡುತ್ತಾರೆ,

(ಗೊಂದಲ)

ಶ್ರೀ ಆರ್.ವಿ. ವೆಂಕಟೇಶ್:- ಅದು ಪ್ರಧಾನ ಮಂತ್ರಿಗಳು ಹಕ್ಕು ಹಾಗೂ ಮಾಡಲೇಬೇಕಾದ ಕರ್ತವ್ಯ.

ಶ್ರೀ ಕೆ.ಎಸ್. ಈಶ್ವರಪ್ಪ:- ಶ್ರೀಮತಿ ಸೋನಿಯಾ ಗಾಂಧಿಯವರು ಚುನಾವಣಾ ಸಂದರ್ಭದಲ್ಲಿ ಗೋವಾಕ್ಕೆ ಹೋಗಿ ......

ಶ್ರೀ ಆರ್.ವಿ. ವೆಂಕಟೇಶ್:- ಇದನ್ನೇ ರಾಜಕೀಯ ಎನ್ನುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಯಾವ ದೇಶ ಅಥವಾ ರಾಜ್ಯಗಳಲ್ಲಿ ಆಡಳಿತ ಪಕ್ಷದಲ್ಲಿರುವವರು ಬೇರೆ ರಾಜ್ಯದ ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆದಿರುವ ಒಂದು ನಿದರ್ಶನವನ್ನು

ಹೇಳಲಿ. ನನ್ನ ಜೊತೆ ಅವರೆಲ್ಲರೂ ಬಂದಿದ್ದರೂ ಬಾಯಿ ಬಿಡದೇ ಬೀಗ ಹಾಕಿಕೊಂಡು ಕುಳಿತಿದ್ದರು.

ಶ್ರೀ ಆರ್.ವಿ. ವೆಂಕಟೇಶ್:- 10 ವರ್ಷ ಆಯಿತು.

ಶ್ರೀ ಸಿದ್ದರಾಮಯ್ಯ:- ಮಾನ್ಯ ಪ್ರಧಾನ ಮಂತ್ರಿಯವರ ಬಳಿ ಹೋದ ಸಮಯದಲ್ಲಿ ನಾನು ಮಾತನಾಡಿದಾಗ ಇವರೆಲ್ಲರೂ ಬಂದಿದ್ದು, ಒಬ್ಬರೂ ಮಾತನಾಡಲಿಲ್ಲ. ಯಾರಾದರೂ ಮಾತನಾಡಿದರೇ? ಹೇಳಲಿ. ಶ್ರೀ ಅನಂತ್‌ಕುಮಾರ್ ಮಾತನಾಡಿದರೇ? ಮಾನ್ಯ ಸದಾನಂದಗೌಡರು ಮಾತನಾಡಿದರೇ? ಯಾರಾದರೂ ಮಾತನಾಡಿದರೇ? ಬಾಯಿ ಬಿಡಲಿಲ್ಲ. ಇವರು ಅಲ್ಲೇ ಕುಳಿತಿದ್ದರು. ಸುಮ್ಮನೆ ರಾಜಕೀಯ ಮಾಡುತ್ತಾರೆ. ಆಗದೇ ಇರುವುದಕ್ಕೆ ಮೊಸರಲ್ಲಿ ಕಲ್ಲು ಹುಡುಕುತ್ತಾರೆ.

(ಗೊಂದಲ)

ಶ್ರೀ ಎಸ್.ಆರ್. ಪಾಟೀಲ್:- ಸಭೆ ಪ್ರಾರಂಭವಾಗುವುದಕ್ಕೆ ಮೊದಲು ಅವರನ್ನು ಬೇರೆ ಕಡೆ ಕರೆದುಕೊಂಡು ಹೋಗಿ ಮಾತನಾಡಿ ಆಮೇಲೆ ಬಂದರು.

ಶ್ರೀ ಸಿದ್ದರಾಮಯ್ಯ:- ನಿಜವಾಗಿ ಆ ಭಾಗದ ರೈತರ ಸಮಸ್ಯೆ ಪರಿಹರಿಸಬೇಕು ಮತ್ತು ಕುಡಿಯುವ ನೀರು ಸಿಗಬೇಕಾದರೆ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯೆ ಪ್ರವೇಶ ಮಾಡದೇ ಈ ಸಮಸ್ಯೆ ಇತ್ಯರ್ಥ ಆಗಲು ಸಾಧ್ಯವಿಲ್ಲ. ಇವರೆಲ್ಲರೂ ಪ್ರಧಾನ ಮಂತ್ರಿಗಳ ಮನಸ್ಸನ್ನು ಒಪ್ಪಿಸುವ ಕೆಲಸ ಮಾಡಬೇಕು. ಇದನ್ನು ಮಾಡದೇ ಬರೀ ರಾಜಕೀಯದ ಮಾತುಗಳನ್ನು ಆಡಿದರೆ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಡಾ: ವೀರಣ್ಣ ಮತ್ತಿಕಟ್ಟಿ:- ಮೊದಲು ಪ್ರಧಾನ ಮಂತ್ರಿಗಳನ್ನು ಒಪ್ಪಿಸಲಿ.

(ಗೊಂದಲ)

(ಮುಂದು)

(ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನಮಂತ್ರಿಗಳು ಮಧ್ಯಸ್ಥಿಕೆ ವಹಿಸಿದ ಉದಾಹರಣೆಗಳು ಇವೆ. ಇವರಂತಹ ಹೇಡಿಗಳು. . . .

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರು ಸಂವಿಧಾನದ ಹಕ್ಕಾಗಿದೆ. ಕುಡಿಯುವ ನೀರಿಗೆ ಯಾವುದೇ ಅಡ್ಡಿ ಮಾಡಬಾರದು.

**(ಗೊಂದಲ)**

**ಸಭಾಪತಿಯವರು:–** ಸಾಕು ಅವರು ಪತ್ರ ಬರೆಯುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮತಕ್ಕೆ ಹಾಕಿಬಿಡಿ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ರೈತರ ಸಮಾವೇಶಕ್ಕಾಗಿ ಮಾನ್ಯ ಪ್ರಧಾನಮಂತ್ರಿಗಳು ಬೆಳಗಾವಿಗೆ ಬಂದಿದ್ದರು. ಅಲ್ಲಿಯೂ ಸಹ ಈ ಬಗ್ಗೆ ಒಂದೇ ಒಂದು ಮಾತನಾಡಲಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನೀರಾವರಿ ಮಂತ್ರಿಗಳಿಗೆ ನೀರು ಕೊಡಿಸುವ ಶಕ್ತಿ ಇಲ್ಲ. ಸುಮ್ಮನೆ ರಾಜಕಾರಣ ಮಾಡುತ್ತಾರೆ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಗಳು ಅಧಿವೇಶನಕ್ಕೆ ಬಂದಿದ್ದಾರೆ. ಆಗಲೂ ಏನೂ ಮಾತನಾಡಲಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಗೋವಾ ಪರವಾಗಿ ಶ್ರೀಮತಿ ಸೋನಿಯಾ ಗಾಂಧಿಯವರು ಮಾತನಾಡಿದ ಸಂದರ್ಭದಲ್ಲಿ ಇವರೆಲ್ಲರೂ ಬಾಯಿ ಮುಚ್ಚಿಕೊಂಡು ಕುಳಿತಿದ್ದರು. ನಾವು ಹೋರಾಟ ಮಾಡುತ್ತಿದ್ದೇವೆಂದು ಈಗ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಡೆದ ಮೂರು ಉದಾಹರಣೆಗಳನ್ನು ನಾವು ಕೊಟ್ಟಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು, ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ವಿರೋಧ ಪಕ್ಷದ ನಾಯಕರು ದಯಮಾಡಿ ಕುಳಿತುಕೊಳ್ಳಬೇಕು.

**(ಗೊಂದಲ)**

ಸಭಾಪತಿಯವರುಃ– ಪ್ರಸ್ತಾವ ಏನೆಂದರೆ,

> **“ ಸೋಮವಾರ, ದಿನಾಂಕ 29ನೇ ಫೆಬ್ರವರಿ 2016ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಪರಿಷತ್ತಿನ ಸದಸ್ಯರುಗಳಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದು.”**

ಎಂಬ ಪ್ರಸ್ತಾವವನ್ನು ಸದನದ ಮತಕ್ಕೆ ಹಾಕಲಾಗುತ್ತಿದೆ.

**<u>ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸದನವು ಧ್ವನಿಮತದ ಮೂಲಕ ಅಂಗೀಕಾರ ನೀಡಿತು.</u>**

**ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ವಿಶೇಷ ವರದಿಯ ಶಿಫಾರಸ್ಸುಗಳ ಮಂಡನೆ**

**ಸಭಾಪತಿಯವರುಃ–** ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ವರದಿಯನ್ನು ಸದನದಲ್ಲಿ ಮಂಡಿಸುವುದರ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆಯಾದ ಹಿನ್ನೆಲೆಯಲ್ಲಿ ಸರ್ಕಾರ ಆ ವರದಿಯನ್ನು ಸದನದಲ್ಲಿ ಮಂಡಿಸಲಾಗುತ್ತದೆ ಎನ್ನುವ ತೀರ್ಮಾನಕ್ಕೆ ಬಂದಿತ್ತು. ಆ ವರದಿಯ ಮಂಡನೆಯ ಪ್ರಕ್ರಿಯೆ ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ, ಅದರ ಪ್ರತಿಯನ್ನು ಎಲ್ಲ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸರ್ಕಾರದ ಪರವಾಗಿ ಅಥವಾ ಸರ್ಕಾರ ಕೊಟ್ಟಿರುವ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ವಿಶೇಷ ವರದಿಯ ಶಿಫಾರಸ್ಸುಗಳನ್ನು ಸದನದ ಮುಂದೆ ನಾನು ಮಂಡಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ತಾವೇ ಮಂಡಿಸುತ್ತಿದ್ದೀರಾ?

**ಸಭಾಪತಿಯವರುಃ–** ಹೌದು, ಸರ್ಕಾರ ಅದನ್ನು ನನಗೆ ಕೊಟ್ಟು ಮಂಡಿಸಿ ಎಂದು ಹೇಳಿದೆ. ನಾನು ಮಂಡಿಸಿದ್ದೇನೆ.

**ಶ್ರೀ ಗೋ.ಮಧುಸೂದನ್ಃ–** ಸನ್ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರುಃ–** ಆಯಿತು ಬಿಡಿ. ಮಧ್ಯೆ ಮಾತನಾಡುವುದಕ್ಕೆ ಬರುವುದಿಲ್ಲ. No, I will not allow.

**ಶ್ರೀ ಗೋ.ಮಧುಸೂದನ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಪ್ರಕ್ರಿಯೆಯ ಬಗ್ಗೆ ಹೇಳುತ್ತಿದ್ದೇನೆ. ತಾವು ಈ ರೀತಿ ಹೇಳಿದರೆ ಹೇಗೆ?

**ಸಭಾಪತಿಯವರುಃ–** ನನಗೆ ಗೊತ್ತು ನೀವು ಏನು ಹೇಳುವುದು ಬೇಡ.

**ಶ್ರೀ ಗೋ.ಮಧುಸೂದನ್‌ಃ-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಈಗ ಕೊಟ್ಟಿರುವ ಶಿಫಾರಸ್ಸುಗಳಲ್ಲದೇ, ಮಾನ್ಯ ಅನ್ವರ್ ಮಾನಿಪ್ಪಾಡಿಯವರು ಸರ್ಕಾರಕ್ಕೆ ಕೊಟ್ಟಿರುವ ವರದಿಯ ಪ್ರತಿಯನ್ನು ಮಂಡಿಸಬೇಕಾಗುತ್ತದೆ. ವರದಿಯ ಶಿಫಾರಸ್ಸುಗಳನ್ನು ಅಲ್ಲ. ಇದು ಕೇವಲ ಆಂಕ್ಷನ್ ಟೇಕನ್ ರಿಪೋರ್ಟ್. ನಾವು ವರದಿಯನ್ನು ಮಂಡಿಸಿ ಎಂದು ಕೇಳಿದ್ದೇವೆ. This is bogus. This is bogus.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು)ಃ-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗ ಕಾಯಿದೆಯ ಕಲಂ 10(2)ರಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಅವರು ಓದಿಕೊಳ್ಳಬೇಕಾಗಿದೆ. ಅದರ ಪ್ರಕಾರ ಕೇವಲ ಶಿಫಾರಸ್ಸುಗಳನ್ನು ಮಾತ್ರ ಮಂಡಿಸಬೇಕೆಂದು ಇದೆ.

**(ಗೊಂದಲ)**

**ಶ್ರೀ ಗೋ.ಮಧುಸೂದನ್‌ಃ-** ಸನ್ಮಾನ್ಯ ಸಭಾಪತಿಯವರೇ, ಇದು ಕೇವಲ ಆಕ್ಷನ್ ಟೇಕನ್ ರಿಪೋರ್ಟ್ ಆಗಿದೆ. ವರದಿ ಎಲ್ಲಿದೆ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ವರದಿಯನ್ನು ಮಂಡಿಸಬೇಕು. ಸದನಕ್ಕೆ ಮೋಸ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್‌ಃ-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗ ಕಾಯಿದೆಯ ಕಲಂ 10(2)ರ ಪ್ರಕಾರ ಎರಡೂ ಸದನಗಳಲ್ಲಿ ಶಿಫಾರಸ್ಸುಗಳನ್ನು ಮಾತ್ರ ಮಂಡಿಸಬೇಕೆಂದು ಇದೆ. We have fulfilled that statutory obligation.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ವರದಿ ಮಂಡಿಸಬೇಕು, ಮಾನ್ಯ ಕಾನೂನು ಸಚಿವರು ವರದಿ ಎಲ್ಲಿದೆ ಎನ್ನುವುದನ್ನು ಹೇಳಬೇಕು. ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಮಾತನಾಡಲಿ.

**ಸಭಾಪತಿಯವರು:–** ಒಂದು ನಿಮಿಷ ಇರಿ, ಕಾನೂನು ಸಚಿವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಒಂದು ನಿಯಮ ಮತ್ತು ವಿಧೇಯಕವಿದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಕಾಯಿದೆಯ ಕಲಂ 10(2)ನ್ನು ನಾನು ತಮ್ಮ ಅವಗಾಹನೆಗೆ ತರುತ್ತಿದೇನೆ. It reads thus:

> "The Government shall cause the recommendations of the Commission to be laid before each House of the State Legislature along with the memorandum explaining the action taken or proposed to be taken on the recommendations and the reasons for non-acceptance, of any such recommendations."

ಆ ಶಿಫಾರಸ್ಸುಗಳನ್ನು ಮಂಡನೆ ಮಾಡಿದ್ದೇವೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಶಿಫಾರಸ್ಸು ಎಂದರೆ, ವರದಿ ಎಂದೇ ಅರ್ಥ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, that is treated as a report.

**ಶ್ರೀ ಅಶ್ವತ್ ನಾರಾಯಣಃ–** ಸನ್ಮಾನ್ಯ ಸಭಾಪತಿಯವರೇ, what is there in the report?

**ಶ್ರೀ ಸಿದ್ದರಾಮಯ್ಯಃ–** ಸನ್ಮಾನ್ಯ ಸಭಾಪತಿಯವರೇ, ಸರಿಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಇದರ ಮೇಲೆ ಚರ್ಚೆಗೆ ಅವಕಾಶವಿಲ್ಲ.

**ಸಭಾಪತಿಯವರುಃ–** ಇದರ ಮೇಲೆ ಚರ್ಚೆಗೆ ಅವಕಾಶವಿಲ್ಲ.

**ಶ್ರೀ ಗೋ.ಮಧುಸೂದನ್ಃ–** ಸನ್ಮಾನ್ಯ ಸಭಾಪತಿಯವರೇ, ಸಂಪೂರ್ಣವಾಗಿರುವ ವರದಿಯನ್ನು ಸದನದ ಮುಂದೆ ಮಂಡಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಗಳ ನಿಯಮಾವಳಿಗಳಲ್ಲಿ ಇದಕ್ಕೆ ಅವಕಾಶವಿಲ್ಲ.

**ಸಭಾಪತಿಯವರುಃ–** ಇಲ್ಲ ನಾನು ಇದರ ಮೇಲೆ ಚರ್ಚೆಗೆ ಅವಕಾಶವನ್ನು ನೀಡುವುದಿಲ್ಲ. ಅವರು, 'ಸರ್ಕಾರ ವರದಿಯನ್ನೇ ಮಂಡನೆ ಮಾಡಿಲ್ಲ, ಕೇವಲ ಶಿಫಾರಸ್ಸುಗಳನ್ನು ಮಾತ್ರ ಮಂಡನೆ ಮಾಡಲಾಗಿದೆ. ವರದಿಯನ್ನು ಕೊಡಿ' ಎಂದು ಕೇಳುತ್ತಿದ್ದಾರೆ. ಸರ್ಕಾರ ಕಾನೂನು ಪ್ರಕಾರ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗ ಕಾಯಿದೆಯ ಕಲಂ 10(2)ನ್ನು ಈಗಾಗಲೇ ಮಾನ್ಯ ಕಾನೂನು ಸಚಿವರು ಓದಿ ಹೇಳಿದ್ದಾರೆ. It reads thus:

> "The Government shall cause the recommendations of the Commission to be laid before each House of the State Legislature along with the memorandum explaining the action taken or proposed to be taken on the recommendations and the reasons for non-acceptance, of any such recommendations."

ಎಂದು ಇದೆ.

**ಸಭಾಪತಿಯವರುಃ–** ಇದರಲ್ಲಿ "along with" ಎನ್ನುವ ಪದ ಇದೆ.

**ಶ್ರೀ ಸಿದ್ದರಾಮಯ್ಯಃ–** ಸನ್ಮಾನ್ಯ ಸಭಾಪತಿಯವರೇ, ವರದಿಯನ್ನು ಅಲ್ಲ, ಶಿಫಾರಸ್ಸುಗಳನ್ನು ಮಂಡಿಸಬೇಕೆಂದು ಇದೆ.

**ಶ್ರೀ ಗೋ.ಮಧುಸೂದನ್ಃ–** ಸನ್ಮಾನ್ಯ ಸಭಾಪತಿಯವರೇ,. . . . .

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, there is a statutory obligation on the part of the Government. We should place only the recommendations. We are going by the provision of the Act.

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ ಅದರಲ್ಲಿ ಸರ್ಕಾರ ಯಾವುದನ್ನು ಒಪ್ಪಿಕೊಳ್ಳುತ್ತಿದೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ನೈಜ ವರದಿ ಏನು ಬಂದಿದೆ ಅದನ್ನು ಸಂಪೂರ್ಣವಾಗಿ ಸದನದ ಮುಂದಿಡಬೇಕಾಗುತ್ತದೆ. ಅದನ್ನು ಒಪ್ಪಿಕೊಳ್ಳಲಾಗುತ್ತದೆಯೋ, ಬಿಡುತ್ತದೆಯೋ ಅಥವಾ ಬಿಸಾಡಲಾಗುತ್ತದೆಯೋ ಏನಾದರೂ ಮಾಡಿಕೊಳ್ಳಲಿ.

**ಶ್ರೀ ಎಸ್.ಆರ್.ಪಾಟೀಲ್‌ಃ-** ಸನ್ಮಾನ್ಯ ಸಭಾಪತಿಯವರೇ, the Act is very clear.

**ಶ್ರೀ ರಾಮಚಂದ್ರಗೌಡಃ-** ಸನ್ಮಾನ್ಯ ಸಭಾಪತಿಯವರೇ, no, no. ವರದಿಯನ್ನು ಒಪ್ಪಿಕೊಳ್ಳುವುದು ಬಿಡುವುದು ಬೇರೆ ಪ್ರಶ್ನೆ ಆದರೆ, ವರದಿ ಏನು ಬಂದಿದೆ ಆ ಸಂಪೂರ್ಣ ವರದಿಯನ್ನು ಸದನದ ಮುಂದಿಡಬೇಕಾಗುತ್ತದೆ. ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಲಿ ನಮಗೆ ಅದರ ಬಗ್ಗೆ ತಕರಾರಿಲ್ಲ.

**ಶ್ರೀ ಎಸ್.ಆರ್.ಪಾಟೀಲ್‌ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು ಆ ಆಕ್ಟ್‌ನ್ನು ಓದಬೇಕಾಗಿದೆ. It is clear like a crystal. The Government has to place the recommendations in both the Houses of Legislature. We have to place only the recommendations, not the report. It's very clear.

**ಶ್ರೀ ರಾಮಚಂದ್ರಗೌಡಃ-** ಸನ್ಮಾನ್ಯ ಸಭಾಪತಿಯವರೇ, ಆಕ್ಟ್‌ನ್ನು ನಾನು ಓದಿದ್ದೇನೆ.

**ಶ್ರೀ ಗೋ.ಮಧುಸೂದನ್‌ಃ-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ವಿಶೇಷ ವರದಿ ಎಂದು ಇದೆ. ಆ ಇಡೀ ವರದಿಯೇ ಶಿಫಾರಸ್ಸು. ಅದರಲ್ಲಿ ಕೊನೆಯಲ್ಲಿ ಬರೆದಿರುವುದು that is only a gist of it. ಅದು ಇಡೀ ವರದಿಯ ರೆಕಮೆಂಡೇಷನ್. ಇವರು ಆ ಇಡೀ ವರದಿಯನ್ನೇ ಮಂಡಿಸಬೇಕಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಕಾನೂನನ್ನು ಅನ್ವಯಿಸುವುದಕ್ಕೆ ಇವರಿಗೆ ಬರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್‌ಃ-** ಸನ್ಮಾನ್ಯ ಸಭಾಪತಿಯವರೇ, ಆ ರೀತಿ ಇಲ್ಲ. ಅವರು ಕಾನೂನು ಓದಿಲ್ಲ. ಕೇವಲ ಮಾತನಾಡುವುದನ್ನು ಕಲಿತಿದ್ದಾರೆ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಸಿ.ಎ.ಜಿ. ವರದಿಯಲ್ಲಿ ಕೊನೆಯಲ್ಲಿ conclusion ಎಂದು ಇರುತ್ತದೆ. ಸದನದಲ್ಲಿ ಕೇವಲ conclusion ನ್ನು ಮಾತ್ರವಲ್ಲ ಇಡೀ ವರದಿಯನ್ನೇ ಮಂಡಿಸುತ್ತೇವೆ. ಸಿ.ಎ.ಜಿ. ವರದಿಯನ್ನು ಮತ್ತು ತನಿಖಾ ವರದಿಗಳನ್ನು ಹೀಗೆ ಎಲ್ಲ ರೀತಿಯ ವರದಿಗಳನ್ನು ಸದನದ ಮುಂದೆ ಮಂಡಿಸಲಾಗುತ್ತಿದೆ. ಆದರೆ, ಈಗ ಸರ್ಕಾರ ಕೇವಲ ಶಿಫಾರಸ್ಸುಗಳನ್ನು ಮಾತ್ರ ಮಂಡಿಸುತ್ತಿದೆ. ಇದು ಸರ್ಕಾರ ಸದನಕ್ಕೆ ಮಾಡುತ್ತಿರುವ ಮೋಸವಾಗಿದೆ. ನಾನು ಇದನ್ನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಅಶ್ವತ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಇವು ಬೋಗಸ್ ಶಿಫಾರಸ್ಸುಗಳು.

**ಶ್ರೀ ಎಸ್.ಆರ್.ಪಾಟೀಲ್:–** ವಾರ್ಷಿಕ ವರದಿಯನ್ನು ಮಾತ್ರ ಪ್ಲೇಸ್ ಮಾಡಬೇಕು. ತನಿಖಾವರದಿ ಮತ್ತು ಆಡೀಟ್ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಮಾತ್ರ ಪ್ಲೇಸ್ ಮಾಡಬೇಕೆಂದು ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗ ಕಾಯಿದೆಯ ಕಲಂ 10(2) ರಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ.

**ಸಭಾಪತಿಯವರು:–** ನಾನು ಕಾನೂನಿನ ಪುಸ್ತಕವನ್ನು ತರಿಸಿದ್ದೇನೆ. ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗ ಕಾಯಿದೆಯ ಕಲಂ 10(2)ರಲ್ಲಿ ಏನು ಹೇಳಿದೆ ಎನ್ನುವುದನ್ನು ನಾನು ಒಮ್ಮೆ ಓದುತ್ತೇನೆ. It reads thus:

> "The Government shall cause the recommendations of the Commission to be laid before each House of the State Legislature along with the memorandum explaining the action taken ......."

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, if it has been accepted.

**ಸಭಾಪತಿಯವರು:-** ಪೂರ್ತಿಯಾಗಿ ಓದುವುದಕ್ಕೆ ಬಿಡಿ. It further reads thus:

> "..... along with the memorandum explaining the action taken or proposed to be taken on the recommendations and the reasons for non-acceptance, of any such recommendations."

ಅಂದರೆ ವರದಿಯನ್ನು ಮಂಡಿಸಿದಾಗ ಅದರ ಜೊತೆಗೆ ಶಿಫಾರಸ್ಸುಗಳನ್ನು ಮಂಡಿಸಬೇಕೆಂದು ಇದೆ. ಸರ್ಕಾರ ಕೇವಲ ಶಿಫಾರಸ್ಸುಗಳನ್ನು ಮಾತ್ರ ಮಂಡನೆ ಮಾಡಿದೆ. ವರದಿಯನ್ನು ಮಂಡಿಸಬೇಕಾಗಿತ್ತು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, no, no. Don't jump to that conclusion. I will explain the case here. ಶಿಫಾರಸ್ಸುಗಳನ್ನು ಎರಡೂ ಸದನಗಳಲ್ಲಿ ಮಂಡನೆ ಮಾಡಬೇಕು. ಅದರ ಜೊತೆಯಲ್ಲಿ memorandum ಇರಬೇಕು. If at all the Government has accepted the said report, the said memorandum should contain the action taken by the Government.

(ಮುಂದುವರಿದಿದೆ)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–**

ಆ ಮೆಮೊರ್‍ಯಾಂಡಮ್‌ನಲ್ಲಿ ಆ ರೆಕಮಂಡೇಶನ್ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದು ಇರಬೇಕು. ಒಂದು ವೇಳೆ ಕ್ಯಾಬಿನೆಟ್ ಆ ವರದಿಯನ್ನು ತಿರಸ್ಕರಿಸಿದರೆ, ಏಕೆ ತಿರಸ್ಕರಿಸಿದರೂ ಎನ್ನುವಂಥ ಕಾರಣಗಳನ್ನು ಕೊಡಬೇಕು. It is very clear. As per the provision and as per the statutory obligation, we have placed recommendations along with the Memorandum for rejecting the report and we have mentioned reasons for rejecting the recommendations of the Commission.

**Mr.CHAIRMAN**:- Recommendations of the Commission ಅನ್ನು ತಾವು ಮಂಡಿಸಲೇ ಇಲ್ಲ. ಇಲ್ಲಿ (Section 10(2) )ಏನು ಹೇಳುತ್ತಾರೆಂದರೆ:

> "The Government shall cause the recommendations of the Commission to be laid before each House of the State Legislature ………"

**ಶ್ರೀ ಎಸ್.ಆರ್.ಪಾಟೀಲ್:–** ಇದು ತುಂಬಾ ಸ್ಪಷ್ಟವಾಗಿದೆ. ಬೇಕೆಂದರೆ ನಾವು ಅಡ್ವೊಕೇಟ್ ಜನರಲ್‌ರವರು ನೀಡಿರುವ ಅಭಿಪ್ರಾಯವನ್ನು ಸಹ ತಿಳಿಸುತ್ತೇವೆ.

**Sri RAMACHANDRAGOWDA:-** Mr.Chairman sir, the Government must present it.

**ಶ್ರೀ ಎಸ್.ಆರ್.ಪಾಟೀಲ್:–** ಇದು ಕಾನೂನಿನ ವಿಷಯವಾಗಿರುವುದರಿಂದ ಅಡ್ವೊಕೇಟ್ ಜನರಲ್‌ರವರು ಏನು ಹೇಳಿದ್ದಾರೆಂಬುದನ್ನು ಸಹ ಹೇಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, The Karnataka State Minorities Commission Act ನಲ್ಲಿ ಎರಡು ತರಹದ ವರದಿ ಬರುತ್ತದೆ. ಒಂದು

ವಾರ್ಷಿಕ ವರದಿ. The Annual Report, as it is, has to be placed before both the Houses. ವಿಶೇಷ ವರದಿ ಆದರೆ as per the provision of Section 10(2) of the Act, ಇದನ್ನು ಈಗಾಗಲೇ ನಮ್ಮ ಸಭಾನಾಯಕರು ಓದಿದ್ದಾರೆ. ಏನು ಹೇಳುತ್ತಾರೆಂದರೆ:

> "The Government shall cause the recommendations of the Commission to be laid before each House of the State Legislature along with the memorandum explaining the action taken or proposed to be taken on the recommendations and the reasons for non-acceptance, of any such recommendations."

ಈ ವರದಿಯಲ್ಲಿ ಏನು ಹೇಳಿದ್ದಾರೆ. ಕಾಲಂ ನಂ. 1ರಲ್ಲಿ ವಿಶೇಷ ವರದಿಯ ಶಿಫಾರಸ್ಸುಗಳಿವೆ. ಕಾಲಂ ನಂ. 2ರಲ್ಲಿ ಏನು reasons assigned for rejecting ಎಂಬುದು ಇದೆ. ಹಾಗಾಗಿ ಇವತ್ತು ಮಂಡನೆ ಮಾಡಿರತಕ್ಕಂಥಾದ್ದು, ಇದು it is in conformity with the provisions of Section 10(2) of the Act. ಹಾಗಾಗಿ ಇದರಲ್ಲಿ ಯಾವುದೇ ambiguity ಇಲ್ಲ ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ.

**Sri S.R.PATIL**:- Mr.Chairman Sir, there is no ambiguity.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ತಾವು ಎಜಿ ಯವರ ವರದಿ ಬಗ್ಗೆ ಹೇಳುತ್ತೇನೆಂದು ಹೇಳಿದಿರಿ. ನೀವು ಹೇಳುವುದು ಏನಾದರೂ ಇದೆಯೇ? ಇದ್ದರೆ ಹೇಳಿಬಿಡಿ.

**Sri S.R.PATIL**:- Mr.Chairman Sir, we have taken the opinion of the Advocate General. It is here only.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ರೀತಿ ನಡೆದರೆ ಅದು ತಮಗೂ ಕಷ್ಟ, ನಮಗೂ ಕಷ್ಟ. ನಾವೇನು ಹೇಳುತ್ತೇವೆಂದರೆ, ಇಂತಹ ವಿಚಾರಕ್ಕಾಗಿ ತಾವು ಇಷ್ಟೊತ್ತಿನವರೆವಿಗೂ ಸಮಯವನ್ನು ಕೊಡುತ್ತೀರಿ, ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರ ಎಲ್ಲರೂ ಸೇರಿ ಒಂದು ರೆಸಲ್ಯೂಶನ್ ಮಾಡಿ ಪ್ರಧಾನ ಮಂತ್ರಿಗಳು ಒಂದು ಸಭೆಯನ್ನು ಕರೆಯುವುದಕ್ಕೆ ಹೇಳಬೇಕು

ಎನ್ನುವಂಥಾದ್ದನ್ನು ಈ ಸದನದಲ್ಲಿ ಅನುಮೋದನೆ ಮಾಡಬೇಕೆಂದು ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲರಿಗೂ ಸಮಸ್ಯೆ ಇದೆ. ಕೇಂದ್ರ ಸರ್ಕಾರದಲ್ಲಿ ಬಿಜೆಪಿ ಪಕ್ಷ ಆಡಳಿತದಲ್ಲಿದೆ. ರಾಜ್ಯ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರ ಸಭೆಯನ್ನು ಕರೆಯಬೇಕೆಂದು ಹೇಳುತ್ತಿದ್ದಾರೆ. ನಾನೇನು ಹೇಳುತ್ತೇನೆಂದರೆ, ರಾಜ್ಯದ ಹಿತದೃಷ್ಟಿಯಿಂದ ವಿರೋಧ ಪಕ್ಷದ ನಾಯಕರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರು ಮತ್ತು ಸರ್ಕಾರದವರು ಎಲ್ಲರೂ ಸೇರಿ ಒಂದು ರೆಸಲ್ಯೂಶನ್ ಮಾಡಿ ಪ್ರಧಾನ ಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ಒಂದು ರೆಸಲ್ಯೂಶನ್ ಪಾಸ್ ಮಾಡಬೇಕು.

**ಶ್ರೀ ಮಾನೆ ಶ್ರೀನಿವಾಸ:-** ಸರಿ ಇದೆ. ಇದಕ್ಕೆ ತಾವೂ ಸಹ ಬೆಂಬಲಿಸಿ ಇದು ಆಗಬೇಕು. ರೈತರ ಹಿತದೃಷ್ಟಿಯಿಂದ ಪ್ರಧಾನ ಮಂತ್ರಿಗಳಿಗೆ ಈ ಸದನದಿಂದ ಒಂದು ಮನವಿ ಹೋಗಬೇಕು.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಈ ಸದನದ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಏನು ವಿಚಾರವನ್ನು ಹೇಳಿದ್ದಾರೆ, ಅದು ಬಹಳ ಮಹತ್ತರವಾದುದು.

(ಗೊಂದಲ)

ನಾವು ಈ ರಾಜ್ಯದ ಹಿತದೃಷ್ಟಿಯಿಂದ ಸರ್ವಾನುಮತದಿಂದ ಈ ರೆಸಲ್ಯೂಶನ್ ಮಾಡಬೇಕು. ಇನ್ನುಳಿದ ವಿಚಾರವನ್ನು ನಾವು ನಂತರ ಚರ್ಚೆಗೆ ತೆಗೆದುಕೊಳ್ಳೋಣ. ನಮ್ಮ ರಾಜ್ಯದ ಜ್ವಲಂತ ಸಮಸ್ಯೆಯಾದ ಕಳಸಾ-ಬಂಡೂರಿ ನಾಲಾ ಯೋಜನೆ ಏನಿದೆ, ಅದರ ಬಗ್ಗೆ ನಾವು ಸರ್ವಾನುಮತದಿಂದ...

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಇದನ್ನು ಮುಗಿಸಿದ ನಂತರ ನಿಮ್ಮ ವಿಷಯಕ್ಕೆ ಬರುತ್ತೇನೆ. ನನ್ನ ಕೈ ಮುಂದಿರುವ ಕೆಲಸದಲ್ಲಿ ಎರಡೆರಡು ಕೆಲಸಗಳನ್ನು ಒಟ್ಟಿಗೆ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ನಮ್ಮ ಸಮಿತಿಯ ವರದಿಯ (2013-15 ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ ಎಪ್ಪತ್ತೈದನೇ ವರದಿ) ಪುಟ ಸಂಖ್ಯೆ: 263ರಲ್ಲಿ ಅಂದಿನ ಅಡ್ವೋಕೇಟ್ ಜನರಲ್ ವಿಜಯಶಂಕರ್‌ರವರು ಸರ್ಕಾರಕ್ಕೆ ಏನು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ನಾವು ಮುದ್ರಣ ಮಾಡಿದ್ದೇವೆ. ಮುಖ್ಯಮಂತ್ರಿಗಳಿಗೆ ಹಾಗೂ ಇನ್ನಿತರ ಸಚಿವರಿಗೆ ನಮ್ಮ ವರದಿಯ ಪ್ರತಿಯನ್ನು ಒದಗಿಸಿ. ಅದರಲ್ಲಿ ಪುಟ ಸಂಖ್ಯೆ: 263ರಲ್ಲಿ ಈ ರೀತಿ ಇದೆ:

> "On examining the Special Report of the Commission …"

**ಸಭಾಪತಿಯವರು:-** ಚರ್ಚೆ ಅಲ್ಲ, ಇಲ್ಲಿ ವರದಿಯನ್ನು ಮಂಡಿಸುವುದರ ಬಗ್ಗೆ ಮಾತ್ರ ಚರ್ಚೆ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅದರ ಬಗ್ಗೆ ನೋಟಿಸ್ ಕೊಡಬೇಕು. ಅದಕ್ಕಾಗಿ ತಾವು ಸಮಯವನ್ನು ನಿಗದಿಗೊಳಿಸಬೇಕು. The provision is very clear. As per Section 10(2) of the Act, there is a statutory obligation on the Government. We have already fulfilled that statutory obligation. We have taken an appropriate decision.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ನಾನು ಇದರ ಬಗ್ಗೆಯೇ ಕೇಳುತ್ತಿರುವುದು. ಅಡ್ವೋಕೇಟ್ ಜನರಲ್ ಅಭಿಪ್ರಾಯವೆಂದು ಅವರೇ ಹೇಳಿದರು. ನಾನೂ ಸಹ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನೇ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಟೀಲ್:-** ಉಚ್ಚ ನ್ಯಾಯಾಲಯದಲ್ಲಿರುವಂಥಾದ್ದಕ್ಕೂ ರೆಕಮೆಂಡೇಶನ್ ಇದೆ.

**Sri G.MADHUSUDAN:-** Mr.Chairman Sir, at page No.263 of Privileges Committee Report reads thus:

> "On examining the Special Report of the Commission …"

**Sri S.R.PATIL**:- Mr.Chairman Sir, Hon'ble Member need not discuss on this. I will seriously object for the discussion on this Report.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮಾತನಾಡಲೇಬಾರದೇನು, ಅವರು ಮಾತನಾಡಿದ ನಂತರ ಇವರು ಮಾತನಾಡಲಿ. ಅವರು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ ಮತ್ತು ಅವರೇ ಮಾತನಾಡಬೇಕೆಂದರೆ ಹೇಗೆ?

**Sri S.R.PATIL**:- Mr.Chairman Sir, Hon'ble Member cannot discuss on this Report. He cannot discuss. We have placed the recommendation, as per the statutory obligation as mentioned in Section 10(2) of the Karnataka State Minorities Commission Act.

**ಸಭಾಪತಿಯವರು:-** ನೀವೇನು ವರದಿಯನ್ನು ಮಂಡಿಸಿದ್ದೀರಿ, ಆ ವರದಿ ಬಗ್ಗೆ ನಾನು ಚರ್ಚೆಗೆ ಅವಕಾಶವನ್ನು ಕೊಡುವುದಿಲ್ಲವೆಂದು ನಾನು ಮುಂಚಿನಿಂದ ಹೇಳಿದ್ದೇನೆ. ಆದರೆ ಇಲ್ಲಿ ಇದುವರೆಗೂ ನಡೆದುಕೊಂಡು ಬಂದಿರುವುದೇನೆಂದರೆ, ಅವರೇನು ಆ ವರದಿಯನ್ನು ಮಂಡಿಸಿದ್ದಾರೆ ಅದನ್ನು ತಾವು ಮಂಡಿಸುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ವಾರ್ಷಿಕ ವರದಿ ಇದ್ದಾಗ ವರದಿಯನ್ನು ಮಂಡಿಸಬೇಕು. ಆಡಿಟ್ ವರದಿ ಇರುತ್ತದಲ್ಲಾ ಅದನ್ನು ಮಂಡಿಸಬೇಕು. In case of such Enquiry Commission, only recommendation has to be presented. ಆ ರೆಕಮೆಂಡೇಶನ್ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದರೆ, ಸರ್ಕಾರ ಅದನ್ನು ಅಂಗೀಕರಿಸಿದರೆ ಏನು ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದರ ಬಗ್ಗೆ Memorandum produce ಮಾಡಬೇಕು. ಒಂದು ವೇಳೆ ಆ ವರದಿಯನ್ನು ನಿರಾಕರಿಸಿದರೆ ನಿರಾಕರಣೆಗೆ ಕಾರಣವೇನು ಎನ್ನುವುದನ್ನು Memorandum ನಲ್ಲಿ ಉಲ್ಲೇಖ ಮಾಡಬೇಕು. ಇಲ್ಲಿ ನಾವು ರೆಕಮೆಂಡೇಶನ್ ಅನ್ನು ಕೊಟ್ಟಿದ್ದೇವೆ. The Memorandum contains the reasons for rejection of the Report by

the Government of Karnataka, that too by the Cabinet. We have placed everything; we are as per the law. We have fulfilled the statutory obligation of Section 10(2) of the Act.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳಿ. ಸರ್ಕಾರದವರು ಹೇಳುತ್ತಿದ್ದಾರೆ, ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ತಾವು ಒಂದು ತೀರ್ಮಾನವನ್ನು ತೆಗೆದುಕೊಂಡು ಹೇಳಿ.

**ಸಭಾಪತಿಯವರು:-** ನಾನು suomoto ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಹಾಗಾದರೆ ಇದಕ್ಕೆ ಒಂದು ದಾರಿಯನ್ನು ಹೇಳಿ. ಸುಮ್ಮನೆ ವಾದ ಮಾಡುವುದಕ್ಕಾಗುತ್ತದೆಯೇ? ತಾವು ತೀರ್ಮಾನವನ್ನು ಕೊಡಬೇಕು.

**ಶ್ರೀ ಗೋ.ಮಧುಸೂದನ್:-** ಪುಟ ಸಂಖ್ಯೆ: 263ನ್ನು ನೋಡಬೇಕು. ಅದರಲ್ಲಿ ಅಡ್ವೋಕೇಟ್ ಜನರಲ್‌ರವರು ಏನು ಹೇಳಿದ್ದಾರೆಂದರೆ:

> "On examining the Special Report of the Commission …"

**ಶ್ರೀ ಕೆ.ಎಸ್.ಈಶ್ವರಪ್ಪ:-** ವೀರಯ್ಯನವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:-** ಇಡೀ ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ ಮಾತನಾಡೋಣ.

**Sri G.MADHUSUDAN:-** Mr.Chairman Sir, at page No.263 of Privileges Committee Report reads thus:

> "On examining the Special Report of the Commission, if the State Government were to form the opinion that the Board is to be superseded,

notice to show cause must be issued under the proviso to sub-section (1) of Section 99. ..."

**ಶ್ರೀ ಎಸ್.ಆರ್.ಪಾಟೀಲ್:-** ವಿರೋಧ ಪಕ್ಷದವರಿಗೆ ಯಾವುದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನವುದು ತಿಳಿದಿಲ್ಲ. ಹಿರಿಯ ಸದಸ್ಯರಾದ ಹೊರಟ್ಟಿಯವರು ಅವರ ಜೊತೆಯಲ್ಲಿ ಸೇರಿ ಚರ್ಚೆ ಮಾಡುತ್ತಿದ್ದಾರೆ. ಇದು ಮುಗಿದಿದೆ. We have fulfilled the statutory obligation. It is very much clear like a crystal. We have placed recommendations along with the Memorandum, which contains reasons for rejection.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ಕೆಲಸ ಮಾಡೋಣ. ಇವರು ಕಳಸಾ-ಬಂಡೂರಿ ನಾಲಾ ಯೋಜನೆ ಬಗ್ಗೆ ಚರ್ಚೆ ಮುಗಿಸಿ ನಂತರ ಈ ಚರ್ಚೆಯನ್ನು ತೆಗೆದುಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಇಲ್ಲಿಯೇ ರಾಜಕಾರಣವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಕಳಸಾ-ಬಂಡೂರಿ ನಾಲಾ ಬಗ್ಗೆ, ಉತ್ತರ ಕರ್ನಾಟಕದ ಬಗ್ಗೆ ಇವರಿಗೆ ಮಾತ್ರ ಆಸಕ್ತಿ ಇದೆ ಎಂದು ಅಲ್ಲ, ಕಳಸಾ-ಬಂಡೂರಿ ನಾಲಾ ಯೋಜನೆಯನ್ನು ಆರಂಭ ಮಾಡಿದ್ದು ನಾವು.

**ಶ್ರೀ ಮಾನೆ ಶ್ರೀನಿವಾಸ್:-** ಏನು ಆರಂಭ ಮಾಡಿದಿರಿ? ಕೇವಲ ಚರ್ಚೆ ಮಾಡಿದಿರಿ. ನೀವು ಆರಂಭ ಮಾಡಿದ್ದರಲ್ಲಿ ನೀರು ಬಂತಾ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಳಸಾ-ಬಂಡೂರಿ ನಾಲೆ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ;-** ಮಾನ್ಯ ಸಭಾಪತಿಯವರೆ, ನಾವೇನೂ ಟ್ವಿಸ್ಟ್ ಮಾಡಿಲ್ಲ. ಮೊದಲನೆಯ ದಿನದಿಂದ ನಾವು ಒತ್ತಡ ಹಾಕುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಳಸಾ-ಬಂಡೂರಿ ನಾಲೆ ಬಗ್ಗೆಯೇ ಮೊದಲು ಚರ್ಚೆಗೆ ತೆಗೆದುಕೊಳ್ಳಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಇಲ್ಲವೆಂದರೆ ಈಗೇನು ಸದನದ ಮುಂದೆ ಒಂದು ವಿಚಾರವನ್ನಿಟ್ಟಿದ್ದಾರೆ ಆ ವಿಚಾರದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ. ನಾವು ಯಾವುದಕ್ಕೂ ಅಡ್ಡಿ ಬರುವುದಿಲ್ಲ. ನಿಮ್ಮ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ನೀವು ಯಾವ ವಿಚಾರವನ್ನಾದರೂ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ವಿನಯ್ ಕುಲಕರ್ಣಿ:–** ವಿರೋಧ ಪಕ್ಷದವರನ್ನು ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮಗೂ ಸಹ ಕೈ ಮುಗಿಯುತ್ತೇನೆ. ನಾಟಕ ಮಾಡಬೇಡಿ, ರಾಜಕಾರಣ ಮಾಡಬೇಡಿ. ಮಾನ್ಯ ಸಭಾಪತಿಯವರೆ, ಈ ಡ್ರಾಮಾಗಳು ಬೇಡ. ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ, ಚರ್ಚೆಯಾಗಲಿ. ಮೊದಲು ಇದನ್ನಾದರೂ ಚರ್ಚೆಗೆ ತೆಗೆದುಕೊಳ್ಳಿ ಅಥವಾ ಕಳಸಾ–ಬಂಡೂರಿ ನಾಲೆ ಬಗ್ಗೆಯಾದರೂ ಚರ್ಚೆಗೆ ತೆಗೆದುಕೊಳ್ಳಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ನಮ್ಮ ಸದಸ್ಯರು ತಂದಿರುವ ವಿಷಯವೂ ಚರ್ಚೆಯಾಗಬೇಕು. ಇವರು ಕಳಸಾ–ಬಂಡೂರಿ ವಿಚಾರದ ನೆಪ ಹೇಳುತ್ತಿದ್ದಾರಲ್ಲಾ ಇದನ್ನು ನಾನು ಒಪ್ಪುವುದಿಲ್ಲ. ನೀವು ಯಾವ ವಿಚಾರವನ್ನಾದರೂ ಚರ್ಚೆ ತೆಗೆದುಕೊಳ್ಳಿ, ನಮ್ಮದೇನೂ ಅಭ್ಯಂತರವಿಲ್ಲ, ತೀರ್ಮಾನ ನಿಮ್ಮದು.

(ಮುಂದು)

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

(ಗೊಂದಲ)

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಗಳೆ, ಈ ಸದನ ಒಮ್ಮತದಿಂದ ಮಾನ್ಯ ಪ್ರಧಾನಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೂರು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಈ ಸಮಸ್ಯೆಯನ್ನು ಪರಿಹರಿಸಬೇಕು. ನಾವು ಕುಡಿಯುವುದಕ್ಕೆ ನೀರು ಕೇಳುತ್ತಿದ್ದೇವೆ. . . . (ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** . . .(ಗೊಂದಲ) ಕಳಸಾ–ಬಂಡೂರಿ ಬಗ್ಗೆ ಚರ್ಚೆ ಮಾಡುವುದಾದರೆ ಅದನ್ನು ತೆಗೆದುಕೊಳ್ಳಿ, ಇಲ್ಲವೇ ವಕ್ಫ್‌ಬೋರ್ಡ್ ಪ್ರಾಪರ್ಟಿ ಬಗ್ಗೆ ಚರ್ಚೆ ಮಾಡುವುದಾದರೆ ಇದನ್ನು ತೆಗೆದುಕೊಳ್ಳಿ. ಕಳಸಾ–ಬಂಡೂರಿ ಬಗ್ಗೆ ಚರ್ಚೆ ತೆಗೆದುಕೊಳ್ಳಿ, ನಾವು ತಯಾರಿದ್ದೇವೆ . . .(ಗೊಂದಲ)

**ಡಾ:ಮತ್ತಿಕಟ್ಟಿ ವೀರಣ್ಣ:–** ಚರ್ಚೆ ಮಾಡುವ ಕಾಲ ಮುಗಿದು ಹೋಯಿತು . . . (ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–**ಈ ಎರಡು ವಿಷಯಗಳಲ್ಲಿ ಯಾವುದಾದರೂ ಚರ್ಚೆಗೆ ತೆಗೆದುಕೊಳ್ಳಿ, ನಾವು ಸಿದ್ಧರಿದ್ದೇವೆ . . .(ಗೊಂದಲ) ಮಾನ್ಯ ಸಭಾಪತಿಗಳೆ, ಈ ಎರಡರಲ್ಲಿ ಯಾವುದರ ಬಗ್ಗೆ ಮೊದಲು ಚರ್ಚೆಗೆ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ, ಅದನ್ನು ನಾನು ನಿಮ್ಮ ಮೇಲೆ ಬಿಡುತ್ತೇನೆ (ಗೊಂದಲ) ಒಬ್ಬೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. . . .

(ಗೊಂದಲ)

**ಶ್ರೀ ವಿನಯ್ ಕುಲಕರ್ಣಿ:–** ಪ್ರಧಾನ ಮಂತ್ರಿಗಳ ಮುಂದೆ ನೀವು (ಗೊಂದಲ) . . ಆಗ ಕೇಳಲೇ ಇಲ್ಲ . . . (ಗೊಂದಲ)

**ಸಭಾಪತಿಗಳು:–** ಎಷ್ಟು ಹೊತ್ತು ಹೀಗೆ ಎಲ್ಲರೂ ಮಾತನಾಡುತ್ತೀರಿ? ಎಲ್ಲರೂ ಕುಳಿತುಕೊಳ್ಳಿ. ಕಳಸ–ಬಂಡೂರಿ ವಿಷಯಕ್ಕೆ ಸಂಬಂಧಪಟ್ಟಂತೆ ಆ ಜನ 220 ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ, ನಾವು ಊರಿಗೆ ಹೋಗುವುದೇ ಕಷ್ಟವಾಗುತ್ತಿದೆ, ಸರ್ಕಾರ ಈ ಕುರಿತು ಒಂದು ನಿಲುವು ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರುಗಳು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು, ಇದು ಹೀಗೆ ಮಾಡಿದರೆ ಆಗುತ್ತದೆ,

ಹೀಗೆ ಮಾಡಿದರೆ ಆಗುವುದಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ಹೇಳಿದರು. ವಿರೋಧ ಪಕ್ಷದ ನಾಯಕರು, ನೀವು ಹೇಳಿದ್ದು ಮಾತ್ರ ಆಗುವುದಿಲ್ಲ, ಈ ರೀತಿ ಒಂದು ಪತ್ರ ಬರೆದು ಅವರನ್ನೂ ಇನ್‌ವಾಲ್ವ್ ಮಾಡಬೇಕಾಗುತ್ತದೆ, ವಿರೋಧ ಪಕ್ಷದವರನ್ನೂ ಆ ಎರಡು ರಾಜ್ಯಗಳಲ್ಲಿ ಇನ್‌ವಾಲ್ವ್ ಮಾಡಬೇಕಾಗುತ್ತದೆ ಎಂದರು. ಮುಖ್ಯಮಂತ್ರಿಗಳು, ಆಯಿತು ನಾನು ವಿರೋಧ ಪಕ್ಷದವರಿಗೂ ಪತ್ರ ಬರೆಯುತ್ತೇನೆ ಎಂದು ಹೇಳಿದರು. ಕೂಡಲೇ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದವರಿಗೆ ಪತ್ರ ಬರೆದು, ಆ ಪತ್ರದ ಆಧಾರದ ಮೇಲೆ ಏನು ಫಲಿತಾಂಶ ಬರುತ್ತದೆಯೋ ನೋಡಿ . . .

**ಶ್ರೀ ಸಿದ್ಧರಾಮಯ್ಯ:-** ನಾನು ಅದನ್ನೂ ಹೇಳಿದ್ದೇನೆ. ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆಯಿಂದ ಮಾತ್ರ ಇದು ಸಾಧ್ಯ ಎಂದು ಹೇಳಿದ್ದೇನೆ . . .

**ಸಭಾಪತಿಗಳು:-** ಅದನ್ನೂ ನೀವು ಹೇಳಿ, . . .ನೀವು, ನಾನು ಪತ್ರ ಬರೆಯುತ್ತೇನೆ ಎಂದು ಹೇಳಿದ್ದೀರಿ. ಆ ಪತ್ರ ಬೇಗ ಬರೆದು, ಉತ್ತರ ಬಂದಮೇಲೆ ಮುಂದೇನು ಮಾಡಬೇಕು ಎನ್ನುವುದನ್ನು ನೋಡಬೇಕಾಗುತ್ತದೆ. ಅದುಬಿಟ್ಟು ನಾವು ಈ ರೀತಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಅಭಿಪ್ರಾಯಗಳನ್ನು ಉದ್ವೇಗದಲ್ಲಿ ಹೇಳಿದರೆ ಸರಿಹೋಗುವುದಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು, ಈ ವಿಚಾರಕ್ಕೆ ಸಂಬಂಧಪಟ್ಟವರನ್ನು ಕರೆದು ಸಭೆ ಮಾಡಿ, ಒಂದು ಟೀಮ್ ಮಾಡಿ, ಪತ್ರಗಳ ಆಧಾರದ ಮೇಲೆ, ಪತ್ರಗಳ ಸಮಜಾಯಿಷಿಯ ಆಧಾರದ ಮೇಲೆ ಆದಷ್ಟುಬೇಗ ತೀರ್ಮಾನ ಮಾಡುವುದು ಒಳ್ಳೆಯದಾಗುತ್ತದೆಯೇ ಹೊರತು ಉದ್ವೇಗದಲ್ಲಿ ತೀರ್ಮಾನ ಮಾಡುವುದು ಸರಿಹೋಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ವಿಷಯವನ್ನು ಮುಕ್ತಾಯ ಮಾಡೋಣ.

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೆಪ್ಯಾಸಿಟಿ ಇದೆ, ಅವರು ಪ್ರಧಾನ ಮಂತ್ರಿಗಳ ಹತ್ತಿರ ಒಂದು ಸಲ ಮಾತನಾಡಿದರೆ ಮುಗಿದು ಹೋಗುತ್ತದೆ. . .

**ಸಭಾಪತಿಗಳು:-** ಆ ವಿಷಯವನ್ನು ಆ ಮೀಟಿಂಗ್‌ನಲ್ಲಿ ಮಾತನಾಡೋಣ, ಇಲ್ಲ ಬೇಡ. ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯವನ್ನು ನೀವು ಹೇಳಿದ್ದೀರಿ, ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ಆ ಜನರಿಗೆ ನೀರು ಕೊಡಬೇಕಾದುದು ಧರ್ಮ. ಇದು ಸರ್ಕಾರದ ಮತ್ತು ಸದನದ ಎಲ್ಲಾ ಸದಸ್ಯರ ಅಭಿಪ್ರಾಯ. ನೀರು ಕೊಡುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಮತ್ತೊಮ್ಮೆ ಮತ್ತೊಮ್ಮೆ ಪ್ರಯತ್ನ

ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡಿ, ನನಗೆ ಬೇರೆ ದಾರಿ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ವಿರೋಧ ಪಕ್ಷದ ನಾಯಕರು, ನಾನೊಂದು ಬೇರೆ ದಾರಿ ತೋರಿಸುತ್ತೇನೆ, ಆ ನಿಟ್ಟಿನಲ್ಲೂ ಪ್ರಯತ್ನ ಮಾಡಿ ಎಂದು ಹೇಳುತ್ತಿದ್ದಾರೆ. ಎರಡೂ ಸದನದ ವಿರೋಧ ಪಕ್ಷದ ನಾಯಕರು, ಬೇರೆ ನಾಯಕರುಗಳನ್ನು ಸೇರಿಸಿ, ಆದಷ್ಟು ಬೇಗ ಸಭೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಅದೇರೀತಿ ಮಾಡಿ ಎಂದು ನೀವು ನಿರ್ದೇಶನ ಕೊಡಿ.

**ಸಭಾಪತಿಗಳು:–** ಮಾಡುತ್ತೀರಾ ಎಂದು ಕೇಳಲಿಲ್ಲ, ಮಾಡಿ ಎಂದು ಹೇಳಿಬಿಟ್ಟಿದ್ದೇನೆ . . .

**ಶ್ರೀ ಬಸವರಾಜ ಹೊರಟ್ಟಿ:–**ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ತಾವು ಹೇಳಿದ್ದನ್ನು ಅವರು ಬೇಗನೆ ಕಾರ್ಯರೂಪಕ್ಕೆ ತರಬೇಕು. ಆ ಜನ ನಮಗೆ, ನಾಳೆ ತಿಥಿ ಮಾಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ತಿಥಿ ಆಗುವುದು ಬೇಡ, ಬೇರೆಯವರದು ತಿಥಿ ಆಗಲಿ, ನಮ್ಮ ತಿಥಿ ಏಕೆ ಆಗಬೇಕು? ಮಾನ್ಯ ಸಭಾಪತಿಗಳೆ, ಮೀಟಿಂಗ್ ಕರೆಯಿರಿ ಎಂದು ನೀವು ಅವರಿಗೆ ಹೇಳಿದ್ದಿರಲ್ಲವೇ? . . .

**ಸಭಾಪತಿಗಳು:–** ಹೇಳಿದ್ದೇನೆ . .

**ಶ್ರೀ ಬಸವರಾಜ ಹೊರಟ್ಟಿ:–**ಯಾರಿಗೆ ಹೇಳಿದ್ದೀರಿ?

**ಸಭಾಪತಿಗಳು:–** ಸರ್ಕಾರಕ್ಕಲ್ಲದೇ ಇನ್ಯಾರಿಗೆ ಹೇಳುವುದಕ್ಕೆ ಆಗುತ್ತದೆ?

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಗಳೆ, ನಾವು ಮೀಟಿಂಗ್ ಕರೆಯುವುದಕ್ಕಾಗುವುದಿಲ್ಲ. ಪ್ರಧಾನ ಮಂತ್ರಿಗಳು ಕರೆಯಬೇಕು. ನಾನು ಕರೆದರೆ ಗೋವದವರು ಬರುವುದಿಲ್ಲ. ಅವರು, ಇತ್ಯರ್ಥವೇ ಆಗುವುದಿಲ್ಲ ಎಂದು ಹೇಳಿಬಿಟ್ಟಿದ್ದಾರೆ. ಪ್ರಧಾನ ಮಂತ್ರಿಗಳು ಮಾತ್ರ ಸಭೆ ಕರೆಯಬೇಕು. ಗೋವದ ಮುಖ್ಯಮಂತ್ರಿಗಳು ಬಿಜೆಪಿಯವರು, ಮಹಾರಾಷ್ಟ್ರದಲ್ಲಿರುವ ಮುಖ್ಯಮಂತ್ರಿಗಳೂ ಬಿಜೆಪಿಯವರು, ಪ್ರಧಾನ ಮಂತ್ರಿಗಳೂ ಬಿಜೆಪಿಯವರು, ಇಲ್ಲಿನ ವಿರೋಧ ಪಕ್ಷದವರೂ ಬಿಜೆಪಿಯವರು. ಹಿಂದೆ

ಇಂದಿರಾಗಾಂಧಿಯವರು ಮಾಡಿದಂತಹ ಕೆಲಸವನ್ನು ಈಗ ಇವರು ಮಾಡಿದರೆ ಅದು ಇತ್ಯರ್ಥ ಆಗುತ್ತದೆ, ಆ ಭಾಗದ ಜನರ ಕಷ್ಟ ಪರಿಹಾರ ಆಗುತ್ತದೆ, ಕುಡಿಯುವ ನೀರು ಸಿಗುತ್ತದೆ.

**ಡಾ:ಮತ್ತಿಕಟ್ಟಿ ವೀರಣ್ಣ:-**ನಾನು ಈ ವಿಚಾರವನ್ನು ಒಂದನೆಯ ದಿನದಿಂದಲೇ ಹೇಳುತ್ತಿದ್ದೇನೆ.

**ಸಭಾಪತಿಗಳು:-** ಮಾನ್ಯ ಮುಖ್ಯಮಂತ್ರಿಗಳೆ, ಅವರ ಜೊತೆ ಸಭೆ ಮಾಡಬೇಕು ಎಂದು ಹೇಳಿದ್ದಲ್ಲ. ತಾವು ಯಾವ ವಿಷಯದ ಬಗ್ಗೆ ಪತ್ರ ಬರೆದಿದ್ದೀರೋ ಅದನ್ನು ಕೈಯಲ್ಲಿಟ್ಟುಕೊಂಡು ರಾಜ್ಯದ ಉಭಯ ಸದನಗಳ ವಿರೋಧ ಪಕ್ಷಗಳ ನಾಯಕರನ್ನು ಕರೆದು ಒಂದು ಸಭೆ ಮಾಡಿ, ಅಲ್ಲೊಂದು ದಾರಿ ಹುಡುಕಿ. ಬೇರೆ ದಾರಿಯಿಲ್ಲ ಎಂದು ತಾವೇ ಹೇಳುತ್ತಿದೀರಿ. ಇವರು, ಅಲ್ಲಿನ ವಿರೋಧ ಪಕ್ಷದವರಿಗೆ ಪತ್ರ ಬರೆದು . . . . (ಗೊಂದಲ)

**ಶ್ರೀ ಸಿದ್ಧರಾಮಯ್ಯ:_** ಅದು ಆಗದ ಕಾರ್ಯ. ಗೋವ ಸರ್ಕಾರಕ್ಕೆ ಪತ್ರ ಬರೆದಿದ್ದಾಯಿತು, ಅದಕ್ಕೆ ಅವರು ಉತ್ತರವನ್ನು ಬರೆದು ತಿಳಿಸಿದ್ದಾರೆ. ಮತ್ತೆ, ಬೇರೆ ರಾಜ್ಯದ ವಿರೋಧ ಪಕ್ಷದ ನಾಯಕರಿಗೆ ಇನ್ನೊಂದು ರಾಜ್ಯದ ಮುಖ್ಯಮಂತ್ರಿಗಳು ಪತ್ರ ಬರೆಯುವುದಕ್ಕಾಗುವುದಿಲ್ಲ . . .(ಗೊಂದಲ) ಈಗ ಒಂದು ದಾರಿ ಮತ್ರ ಉಳಿದಿದೆ. ಮಾನ್ಯ ಈಶ್ವರಪ್ಪನವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಸದಾನಂದ ಗೌಡರು, ಮಾನ್ಯ ಅನಂತ್‌ಕುಮಾರ್‌ರವರು, ಮಾನ್ಯ ಜಗದೀಶ್‌ಶೆಟ್ಟರ್‌ರವರು, ಮಾನ್ಯ ಪ್ರಹ್ಲಾದ್‌ಜೋಷಿಯವರು ಹೋಗಿ ಮಾನ್ಯ ನರೇಂದ್ರ ಮೋದಿಯವರ ಹತ್ತಿರ ಕುಳಿತುಕೊಂಡು, ಈ ಕೆಲಸ ಆಗಲೇಬೇಕು, ಹಿಂದೆ ಇಂದಿರಾಗಾಂಧಿಯವರು ಮಾಡಿದ್ದಾರೆ, ಮಾನ್ಯ ವಾಜಪೇಯಿಯವರು ಮಾಡಿದ್ದಾರೆ, ನೀವೇಕೆ ಮಾಡಬಾರದು ಎಂದು ಅವರ ಮೇಲೆ ಒತ್ತಾಯ ಹೇರಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆ . . .(ಗೊಂದಲ) . . .

**ಶ್ರೀ ಗೋ.ಮಧುಸೂದನ್:-** ನಮ್ಮ ಮುಖ್ಯಮಂತ್ರಿಗಳು, ರಾಜ್ಯದ ಲೋಕಸಭಾ ಸದಸ್ಯರು, ಮಾನ್ಯ ಹರಿಪ್ರಸಾದ್‌ರವರು, ಇವರೆಲ್ಲರೂ ಸಹ ಮಾನ್ಯ ರಾಹುಲ್‌ಗಾಂಧಿ ಅವರ ಜೊತೆ, ಶ್ರೀಮತಿ ಸೋನಿಯಾಗಾಂಧಿಯವರ ಜೊತೆ ಕುಳಿತುಕೊಂಡು . . . .(ಗೊಂದಲ) ತೀರ್ಮಾನ ಮಾಡಿದರೆ ಈ ಕೆಲಸ ಆಗುತ್ತದೆ . . . .(ಗೊಂದಲ)

**ಸಭಾಪತಿಗಳು:-** ಒಬ್ಬರೇ ಮಾತನಾಡಿ, ಇಷ್ಟು ಜನ ನಿಂತರೆ ಹೇಗಾಗುತ್ತದೆ? . . .(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-**ಮಾನ್ಯ ಸಭಾಪತಿಗಳೆ, ನಾನು ನಾಲ್ಕು ಸಾಲುಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. *ಕಳಸಾ-ಬಂಡೂರಿ ನದಿಯ 7.50 ಟಿಎಂಸಿ ನೀರನ್ನು ಕರ್ನಾಟಕದ ಜನತೆಯ ಕುಡಿಯುವ ನೀರಿಗಾಗಿ ಉಪಯೋಗಿಸಿಕೊಳ್ಳಲು ರಾಷ್ಟ್ರದ ಪ್ರಧಾನ ಮಂತ್ರಿಗಳು ಮಹದಾಯಿ ನದಿಯ ಅಂತರರಾಜ್ಯ ನದಿಯ ಆಯೋಗದ ಮುಂದಿರುವ ವ್ಯಾಜ್ಯದ ವಿಚಾರವನ್ನು ಆಯೋಗದ ಹೊರತಾಗಿ ಇತ್ಯರ್ಥಪಡಿಸಿಕೊಳ್ಳಲು ಮಹಾರಾಷ್ಟ್ರ, ಗೋವ ಮತ್ತು ಕರ್ನಾಟಕ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕೂಡಲೇ ಕರೆದು ಕಳಸಾ-ಬಂಡೂರಿ ನದಿಯ 7.50 ಟಿಎಂಸಿ ನೀರನ್ನು ಕರ್ನಾಟಕ ಉಪಯೋಗಿಸಿಕೊಳ್ಳಲು ನಿರ್ಣಯ ಮಾಡಬೇಕೆಂದು ಈ ಸದನವು ಒಕ್ಕೊರಲಿನಿಂದ ಒತ್ತಾಯಿಸುತ್ತದೆ.* ಈ ನಿರ್ಣಯವನ್ನು ನಾನು ಮಂಡನೆ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** . . . (ಗೊಂದಲ) ಅವರ ಜೊತೆ ಶಾಮೀಲಾಗಿದ್ದನ್ನು ಮರೆತು ಈಗ ಇದನ್ನು ಮಾಡಿ ಎಂದು ರಾಜಕಾರಣ ಮಾಡುತ್ತಿದ್ದಾರೆ . . .(ಗೊಂದಲ) ಕಳಸಾ-ಬಂಡೂರಿ ಸಮಸ್ಯೆ ಯಾವಾಗಲೂ ಜೀವಂತವಾಗಿರಬೇಕು ಎನ್ನುವುದು ಇವರ ಉದ್ದೇಶವಾಗಿದೆ. ಇದನ್ನು ಹೀಗೆ ಬಿಟ್ಟರೆ ಚುನಾವಣೆಯಲ್ಲಿ ಜನ ಉತ್ತರ ಕೊಡುತ್ತಾರೆ. . .

**ಸಭಾಪತಿಗಳು:-** ಮಾನ್ಯ ಮತ್ತಿಕಟ್ಟಿಯವರು ಆಗಲಿಂದಲೂ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಮೂರ್ನಲ್ಕು ನಿವಿಷ ಅಷ್ಟೇ ಮಾತನಾಡಿ, ಉದ್ದ ಬೆಳೆಸುವುದಕ್ಕೆ ಹೋಗಬೇಡಿ. ನೀರವಾಗಿ ವಿಷಯದ ಬಗ್ಗೆಯೇ ಮಾತನಾಡಿ. . . .

**ಶ್ರೀ ವಿ.ಎಸ್.ಉಗ್ರಪ್ಪ:-ಮಾನ್ಯ** ಸಭಾಪತಿಗಳೆ, ನಾನು ಒಂದು ನಿರ್ಣಯ ಮೂವ್ ಮಾಡಿದ್ದೇನೆ, ಅದನ್ನು ಮತಕ್ಕೆ ಹಾಕಿ . . .(ಗೊಂದಲ)

**ಸಭಾಪತಿಗಳು:-** ಮಾನ್ಯ ಉಗ್ರಪ್ಪನವರು ಒಂದು ನಿರ್ಣಯ ಮೂವ್ ಮಾಡುತ್ತೇನೆ ಎಂದರು. ನಾನೂ ನಿಯಮಾವಳಿಗಳನ್ನು ತಿಳಿದುಕೊಂಡಿದ್ದೇನೆ. ನಾವು ಸದನದ ಸದಸ್ಯರು ಎಲ್ಲರೂ ಒಂದು ನಿರ್ಣಯವನ್ನು ಒಪ್ಪಿಕೊಂಡಿದ್ದೇವೆ, ಸರ್ವಾನುಮತದಿಂದ ಒಪ್ಪಿದ್ದೇವೆ, ಆದ್ದರಿಂದ, ನೀವು ಹೀಗೆಯೇ ಮಾಡಿ

ಎಂದು ನಾವು ಪ್ರಧಾನ ಮಂತ್ರಿಗಳಿಗಾಗಲಿ ಅಥವಾ ಇನ್ನೊಬ್ಬರಿಗಾಗಲಿ ಹೇಳುವುದಕ್ಕೆ ಅಧಿಕಾರ ಇಲ್ಲ. ಆದರೆ ರಿಕ್ವೆಸ್ಟ್ ಮಾಡುವುದಕ್ಕೆ ಅಧಿಕಾರ ಇದೆ, ನೀವು ಹೋಗಿ ರಿಕ್ವೆಸ್ಟ್ ಮಾಡಿಕೊಳ್ಳಿ. ಅದುಬಿಟ್ಟು ಈ ರೀತಿ ನಿರ್ಣಯಗಳನ್ನು ಮಾಡುವುದು ಇವತ್ತು ಶುರುವಾದರೆ ಅದು ಎಲ್ಲಿಗೆ ಹೋಗಿ ತಲುಪುತ್ತದೆಯೋ ಗೊತ್ತಿಲ್ಲ. ಈ ರೀತಿ ಯಾವುದೇ ನಿರ್ಣಯವನ್ನು ಮಾಡುವುದಕ್ಕಾಗುವುದಿಲ್ಲ. ವಿಧಾನ ಪರಿಷತ್ತಿನಲ್ಲಿ ಯಾವುದಾದರೂ ಒಂದು ನಿರ್ಣಯ ಮಾಡಬೇಕಾದರೆ ಅದರ ಸಾಧಕ-ಬಾಧಕ ನೋಡಬೇಕು. ಯಾವುದಾದರೂ ನಿರ್ಣಯ ಬರುವುದಾದರೆ ಅದು ಸರ್ಕಾರದಿಂದ ಬರಬೇಕು. . . .

**ಶ್ರೀ ವಿ.ಎಸ್.ಉಗ್ರಪ್ಪ:-**ಕಾವೇರಿ ವಿಚಾರಲ್ಲಿ ಈ ಸದನದಲ್ಲೇ ನಿರ್ಣಯ ಆಗಿದೆ. ಆ ಮೂಲಕ ಪ್ರಧಾನ ಮಂತ್ರಿಗಳ ಮೇಲೆ ಒತ್ತಡ ತಂದಿದ್ದೆವು. . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಗಳೆ, ಇದಕ್ಕೆ ಹೀಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಇಲ್ಲ ಮುಗಿಸುತ್ತೀರೋ? ಇವರು ಇಲ್ಲಿ ಗಂಟೆಗಟ್ಟಲೆ ಮಾತನಾಡಿ ರಾಜಕಾರಣ ಮಾಡುತ್ತಿದ್ದಾರೆ. . . .(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-ಇವರಿಗೆ** ಏನಾಗಿದೆ ಎಂದರೆ, ಆ ಕಳಸಾ-ಬಂಡೂರಿ ಪ್ರದೇಶದ ಜನರಿಗೆ ತೊಂದರೆ ಕೊಡಬೇಕು ಎನ್ನುವುದು ಇವರ ಮಖ್ಯ ಉದ್ದೇಶವಾಗಿಐದೆ . . .(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-**ಕಳಸಾ-ಬಂಡೂರಿ ಸಮಸ್ಯೆಯನ್ನು ಪರಿಹಾರ ಮಾಡುವ ಆಸಕ್ತಿ ನಿಮ್ಮಲ್ಲಿ ಇಲ್ಲ . . . .(ಗೊಂದಲ)ಇವರಿಗೆ ರಾಜಕಾರಣದಲ್ಲಿ ಮಾತ್ರ ಆಸಕ್ತಿ ಇದೆ. . .

**ಡಾ: ಮತ್ತಿಕಟ್ಟಿ ವೀರಣ್ಣ:-** ನೀವು ರಾಜಕಾರಣವನ್ನು ಮಾಡುತ್ತಿದ್ದೀರಿ.

(ಮುಂದು . . .)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರುಗಳು ಈ ರೀತಿಯೇ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರೋ ಅಥವಾ ಇದನ್ನು ಮುಗಿಸುತ್ತೀರೋ? ನನಗಂತೂ ಅರ್ಥವಾಗುತ್ತಿಲ್ಲ. ಇಲ್ಲಿ ರಾಜಕಾರಣವನ್ನು ಮಾಡಿಕೊಂಡು ಇದನ್ನು ಗಂಟೆಗಟ್ಟಲೆ ಚರ್ಚೆ ಮಾಡಿಕೊಂಡು... ಇವರೇ ಸೋನಿಯಾ ಗಾಂಧೀಯವರ ಹತ್ತಿರ ಮಾತನಾಡಿ ಸೋನಿಯಾ ಗಾಂಧೀಯವರು ಈ ರೀತಿಯಾಗಿ ಹೇಳಿಬಿಟ್ಟರು ಎಂದು ಪತ್ರಿಕಾ ಗೋಷ್ಠಿಯಲ್ಲಿ ಸುಳ್ಳು ಹೇಳಿಬಿಟ್ಟರು. (ಗೊಂದಲ) ಇದೇ ಸೋನಿಯಾ ಗಾಂಧೀಯವರು ಗೋವಾಗೆ ಹೋಗಿ..... ಕಿತ್ತುಕೊಳ್ಳುತ್ತಾರೆ. ಈ ಕಳಸಾ-ಬಂಡೂರಿ ನಾಲಾ ವಿಚಾರವಾಗಿ ಇರುವ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಇವರಿಗೆ ಆಸಕ್ತಿ ಇಲ್ಲ. ಇವರಿಗೆ ರಾಜಕಾರಣದಲ್ಲಿ ಮಾತ್ರ ಆಸಕ್ತಿ ಇದೆ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ರಾಜಕಾರಣದ ಬಗ್ಗೆ ಹೇಳುತ್ತೀರಿ, ತಾವು ರಾಜಕಾರಣವನ್ನು ಮಾಡುತ್ತೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಸೇರಿದಂತೆ ನಾವೆಲ್ಲರೂ ಆ ಸಭೆಯಲ್ಲಿ ಕುಳಿತುಕೊಂಡು ನಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ಕೊಡುತ್ತೇವೆ. ಇದರ ಬಗ್ಗೆ ಅಂತಿಮ ತೀರ್ಮಾನವನ್ನು ನಿಮಗೆ ಬಿಡುತ್ತೇನೆ.

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೆ, ಈ ನಿರ್ಣಯಕ್ಕೆ ಒಪ್ಪಿಕೊಳ್ಳಬಾರದು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಾಂಗ್ರೆಸ್‌ನವರು ಸುಪ್ರೀಂ ಕೋರ್ಟ್‌ಗೆ ಹಾಕುತ್ತೀರಿ. ಅದೇ ರೀತಿ ಕಾಂಗ್ರೆಸ್‌ನವರು ನ್ಯಾಯಾಧಿಕರಣಕ್ಕೆ ಕಳುಹಿಸುತ್ತೀರಿ. ಆವಾಗ ದೇವರ ಸಾಕ್ಷಿಯಾಗಿ ನನಗೆ ಗೊತ್ತಿರಲಿಲ್ಲ. (ಗೊಂದಲ) ಆದರೆ ಈ ರೀತಿ ಸುಪ್ರೀಂ ಕೋರ್ಟ್‌ಗೆ ಕಳುಹಿಸಿ ನ್ಯಾಯಾಧಿಕರಣಕ್ಕೆ....ಈ ರೀತಿ ದುಷ್ಕೃತ್ಯವನ್ನು ಕಾಂಗ್ರೆಸ್‌ನವರು ಮಾಡುತ್ತಾರೆ, ಈ ರೀತಿ ನಾಟಕವಾಡಿ ಮೊಸಳೆ ಕಣ್ಣೀರನ್ನು ಸುರಿಸುತ್ತಾರೆ ಎಂದು ಆವತ್ತು ನನಗೆ ಗೊತ್ತಿರಲಿಲ್ಲ.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ನಾನು from day one ಈ ವಿಚಾರವನ್ನು ಹೇಳುತ್ತಿದ್ದೇನೆ. ಸಂವಿಧಾನಬದ್ಧವಾಗಿ ಆ ರಾಜ್ಯದ

ಮುಖ್ಯಮಂತ್ರಿಗಳು ಅಲ್ಲಿಯ ಎಲ್ಲಾ ಪಕ್ಷದ ನಾಯಕರನ್ನು ಕರೆದು ಮಾತನಾಡಿ ಒಂದು ನಿರ್ಧಾರಕ್ಕೆ ಬರಬಹುದು. ಇದನ್ನು ನಾವು ಪಕ್ಷಾತೀತವಾಗಿ ವಿಚಾರ ಮಾಡುತ್ತೇವೆ. ಈ ಸಮಸ್ಯೆ ಪಕ್ಷಕ್ಕಾಗಿ ಸೀಮಿತವಾದುದಲ್ಲ. ಈ ಸಮಸ್ಯೆಯನ್ನು ಸರ್ಕಾರದ ಹೆಸರಿನ ಮೇಲೆ ಚಿಂತನೆ ಆಗಬೇಕು. 30 ವರ್ಷಗಳ ಕಾಲ ಈ ರಾಜ್ಯದಲ್ಲಿ ತಾವು ಸಭಾನಾಯಕರಾಗಿ, ವಿರೋಧ ಪಕ್ಷದ ನಾಯಕರಾಗಿ, ಸಭಾಪತಿಯಾಗಿ ಕೆಲಸ ಮಾಡಿದ್ದೀರಿ. ಯಾವುದಾದರೂ ವಿಚಾರದಲ್ಲಿ ಪ್ರಧಾನ ಮಂತ್ರಿಗಳಾದವರು ಈ ಟ್ರಿಬ್ಯೂನಲ್‌ನ ಹೊರಗಡೆ ತೆಗೆದುಕೊಂಡಂಥ ನಿರ್ಧಾರಗಳಿವೆ ಎನ್ನುವುದು ಮೊದಲ ವಿಚಾರ. ಎರಡನೆಯದು ಅವರು ಆ ವಿರೋಧ ಪಕ್ಷದವರಿಗೆ ಮಾತನಾಡಬೇಕೆಂದು ಹೇಳಿಲ್ಲ. ಆ ಸರ್ಕಾರಗಳು ಆ ರಾಜ್ಯದ ಎಲ್ಲಾ ಪಕ್ಷದ ನಾಯಕರುಗಳ ಜೊತೆಗೆ ವಿಚಾರ ಮಾಡಿ ಅವರು ಬಂದು ತಮ್ಮ ಅಭಿಪ್ರಾಯವನ್ನು ಹೇಳಬಹುದು. ಇಲ್ಲಿ ನಾವು ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಎಲ್ಲಾ ಪಕ್ಷದ ನಾಯಕರನ್ನು ಕರೆದು ನಿರ್ಣಯವನ್ನು ತೆಗೆದುಕೊಂಡು ಪ್ರಧಾನ ಮಂತ್ರಿಗಳ ಬಳಿಗೆ ಹೋಗಿದ್ದು. ಆಗಸ್ಟ್ 23 ಮತ್ತು 24ನೇ ತಾರೀಖಿನಂದು ನಾವು ಪ್ರಧಾನ ಮಂತ್ರಿಗಳ ಬಳಿಗೆ ಹೋಗಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವಿನ್ನು ಈ ವಿಚಾರವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ಬಿಟ್ಟುಬಿಡುತ್ತೇವೆ. ಏಕೆಂದರೆ ಅವರು ಹೇಳುವುದು, ನಾವು ಹೇಳುವುದು ಈ ರೀತಿ ಸಮಯವನ್ನು ಹಾಳು ಮಾಡುವುದಕ್ಕೆ ನಾವು ತಯಾರಿಲ್ಲ. ನೀವೇನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ಬದ್ಧರಾಗಿದ್ದೇವೆ. ನಾನಿನ್ನು ಅವರ ಯಾವ ಹೇಳಿಕೆಗೂ ಉತ್ತರವನ್ನು ಕೊಡುವುದಿಲ್ಲ. ಅವರೇ ಮಾತನಾಡುತ್ತಾ ಹೋಗಲಿ.

**ಶ್ರೀ ಹೆಚ್.ಎಂ.ರೇವಣ್ಣ:–** ನಿರ್ಣಯವನ್ನು ಮಂಡಿಸಿದ್ದೇವೆ. ಅದು ಬೇಕೋ ಬೇಡವೋ ನೀವು ಹೇಳಿ.

**ಸಭಾಪತಿಯವರು:–** ಇದರ ಬಗ್ಗೆ ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ನಿರ್ಣಯಕ್ಕೆ ನಾವು ಒಪ್ಪುವುದೇ ಇಲ್ಲ. ನಿರ್ಣಯ ಸಾಧ್ಯವಿಲ್ಲ.

**Capt. GANESH KARNIK:** I am on a point of order on the resolution. I am on a point of order.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಯಾವ point of order. ಇಲ್ಲಿ ಪಾಯಿಂಟೇ ಇಲ್ಲ.

**Capt. GANESH KARNIK:** You cannot...*(Interruptions)*...Sorry...

(Interruptions)

**ಡಾ॥ ಮತ್ತಿಕಟ್ಟಿ ವೀರಣ್ಣ:-:-** ಏನು ಹೇಳುತ್ತೀರಿ. Point of order ಹೇಳುತ್ತೀರಿ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ನೀವು ಎಷ್ಟೇ raise ಮಾಡಿ, I am on a point of order. ನೀವು voice raise ಮಾಡಬಹುದು.

**ಡಾ॥ ಮತ್ತಿಕಟ್ಟಿ ವೀರಣ್ಣ:-** ಏನ್ರೀ ನೀವು, ಇದೆಲ್ಲಾ ನಡೆಯುವ ಹಾಗಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಇವರ ವರದಿಗೆ ಒಂದೂಕಾಲು ಗಂಟೆ ಸಮಯವನ್ನು ತೆಗೆದುಕೊಂಡರೆ... ಯಾವ ಪ್ರಾವಿಷನ್ ಕೆಳಗೆ invoke ಮಾಡಿ ಹೇಳುತ್ತಾರೆ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ನೀವು point of order ಅನ್ನುತ್ತೀರಿ. ಜನರಿಗೆ ಅನುಕೂಲ ಒದಗಿಸಿ ಕೊಡುವ ಬಗ್ಗೆ ವಿಚಾರ ಮಾಡುತ್ತೀರಿ. ಇದು ಆ ಭಾಗದ ಜ್ವಲಂತ ಸಮಸ್ಯೆ, ಆ ಸಮಸ್ಯೆಗೆ ತಾವು ಸಹಕಾರ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಕರೆಯುವ ಸಭೆಯಲ್ಲಿ ನಾವು ನಮ್ಮ ಸಲಹೆಯನ್ನು ಕೊಡುತ್ತೇವೆ. ಅಲ್ಲಿ ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಮಾಡೋಣ. ಇವರೆಲ್ಲರೂ ಹೇಳುವುದಕ್ಕೆ ನಾನು ಉತ್ತರ ಕೊಡುವುದಕ್ಕೆ ತಯಾರಿಲ್ಲ. ನೀವೇನು ತೀರ್ಮಾನವನ್ನು ಕೊಡುತ್ತೀರೋ ಅದಕ್ಕೆ ನಾವು ಬದ್ಧ.

**ಸಭಾಪತಿಯವರು:-** ಎಷ್ಟು ಹೊತ್ತು ಬೇಕಾದರೂ ಮಾತನಾಡಿ. ಆದರೆ ಒಂದು ವಿಷಯವನ್ನು ಕೇಳಿ. ಕಾನೂನಿನ ಪ್ರಕಾರ, ನಡವಳಿಕೆಗಳ ಪ್ರಕಾರ ಈ ತರಹ ಸದನದಲ್ಲಿ ಒಂದು ರೆಸಲ್ಯೂಶನ್ ಪಾಸ್

ಮಾಡುವುದಕ್ಕೆ ಬರುವುದಿಲ್ಲ. ನಾನು ಬಿಡುವುದಿಲ್ಲ. ಹಿಂದೆ ಆಗಿದ್ದರೆ ಅದು ತಪ್ಪು. ಅದಕ್ಕೆ ನಾನೇನು ಮಾಡಲಿ. ನಾನು ಮಾಡುವುದಕ್ಕೆ ಬಿಡುವುದಿಲ್ಲ. I will not allow. I will not allow that resolution to be passed. No, that resolution cannot be passed.

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:- ರೈತರಿಗೋಸ್ಕರ ತಪ್ಪು ಮಾಡಿದರೂ ಅಡ್ಡಿ ಇಲ್ಲ, ರೈತರ ಹಿತದೃಷ್ಟಿಯಿಂದ ತಪ್ಪು ಮಾಡಿದರೂ ಅಡ್ಡಿ ಇಲ್ಲ. ಕುಡಿಯುವ ನೀರನ್ನು ಕೊಡಲೇಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ರಾಜ್ಯದ ಹಿತ ಮುಖ್ಯವೋ, ಇಲ್ಲಿ ನಿಯಮಾವಳಿ ಮುಖ್ಯವೋ? ಮೊನ್ನೆ ಒಂದೂಕಾಲು ಗಂಟೆಗಳ ಕಾಲ ಆ ವರದಿಯನ್ನು ಮಂಡಿಸುವುದೋ, ಮಂಡಿಸಬಾರದೋ ಎಂದು ಹೇಳಿ ಯಾವುದೇ ಪ್ರಾವಿಷನ್ ಇಲ್ಲದೇ entertain ಮಾಡಿದಿರಿ. ಇವತ್ತು ರಾಜ್ಯದ ಜನತೆಗೆ ಕುಡಿಯುವ ನೀರಿನ ಹಾಹಾಕಾರವಿದೆ. ಧರಣಿ ನಡೆಯುತ್ತಿದೆ, ಅದಕ್ಕೆ ನಿಯಮಾವಳಿಗಳ ಬಗ್ಗೆ ಮಾತನಾಡುತ್ತೀರಿ.

**ಸಭಾಪತಿಯವರು:-** ರೆಸಲ್ಯೂಷನ್ ನಾವು ಮಾಡುವುದಿಲ್ಲ ಎಂದು ಹೇಳಿದೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ರಾಜ್ಯದ ಹಿತ ಮುಖ್ಯವೋ, ಇಲ್ಲಿ ನಿಯಮಾವಳಿ ಮುಖ್ಯವೋ?

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ಬಿಟ್ಟರೆ ಹುಬ್ಬಳ್ಳಿ-ಧಾರವಾಡ ಎರಡನೇ ದೊಡ್ಡ ಸಿಟಿ. ಅಲ್ಲಿಗೆ ಕುಡಿಯುವ ನೀರಿಲ್ಲ.

**ಸಭಾಪತಿಯವರು:-** ಹೌದಪ್ಪ, ಅದೆಲ್ಲಾ ಗೊತ್ತಿರುವುದೇ. ಅದಕ್ಕಾಗಿಯೆ ಚರ್ಚೆಯಾಗುತ್ತಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ರಾಜ್ಯದ ಹಿತ ಕಾಯಬೇಕು.

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೆ, ನಮ್ಮ ಕಡೆ ಟ್ಯಾಂಕರ್ ಮುಖಾಂತರ ನೀರು ಕೊಡುತ್ತಿದ್ದಾರೆ. ನೀವು ಬೇಕಾದರೆ ವರದಿ ತರಿಸಿಕೊಳ್ಳಿ.

**ಸಭಾಪತಿಯವರು:-** ಹೌದಪ್ಪ, ಇಲ್ಲ ಎಂದು ಯಾರು ಹೇಳಿದರು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದು ಆ ಭಾಗದ ಅತ್ಯಂತ ಜ್ವಲಂತ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ. ಹುಬ್ಬಳ್ಳಿ-ಧಾರವಾಡದಂಥ ದೊಡ್ಡ ಪಟ್ಟಣಗಳ ಕುಡಿಯುವ ನೀರಿನ

ಸಮಸ್ಯೆ. ಅದರ ಜೊತೆಗೆ 300 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. 40 ವರ್ಷಗಳ ನಂತರ ಬರಗಾಲವನ್ನು ಎದುರಿಸುವಂಥ ಸಂದರ್ಭದಲ್ಲಿ ಇದಕ್ಕಾಗಿ ದಯಮಾಡಿ ಸಹಕಾರ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಹೌದು, ಅದನ್ನೇಕೆ repeat ಮಾಡುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹುಬ್ಬಳ್ಳಿ-ಧಾರವಾಡದಲ್ಲಿ ಇವತ್ತಲ್ಲಾ, ಸುಮಾರು 40 ವರ್ಷಗಳಿಂದಲೂ ಕುಡಿಯುವ ನೀರಿನ ಸಮಸ್ಯೆ ಇದೆ. ಇವರೇ ಸಮಸ್ಯೆಗೆ ಕಾರಣ. ಈಗ ಗೂಬೆ ಕೂರಿಸುವುದಕ್ಕೆ ಮತ್ತೊಂದು ರಾಜಕಾರಣವನ್ನು ಮಾಡುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ, ನರಗುಂದ ನೀರಿಲ್ಲ ಎನ್ನುತ್ತಿದ್ದಾರೆ. ಇಷ್ಟು ದಿನ ಏನು ಮಾಡುತ್ತಿದ್ದರು? ನ್ಯಾಯಾಧಿಕರಣಕ್ಕೆ, ಸುಪ್ರೀಂ ಕೋರ್ಟ್‌ಗೆ ಹೋಗಲು ಏಕೆ ಬಿಟ್ಟರು?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಇವರಿಗೆ ಹುಬ್ಬಳ್ಳಿ-ಧಾರವಾಡದ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಕಾಳಜಿ ಇಲ್ಲ, ಬರಗಾಲದ ಬಗ್ಗೆ ಕಾಳಜಿ ಇಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ರಾಜಕೀಯ ಹಿತಾಸಕ್ತಿಯೂ ಸಹ ಇವರಿಗೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ಆ ಜನಗಳ ಒಂದು ರೀತಿ ಅಭಿಪ್ರಾಯವನ್ನು ತೆಗೆದುಕೊಂಡಿದ್ದಕ್ಕೆ... ಈ ಕುತಂತ್ರ ರಾಜಕಾರಣಕ್ಕೆ ಭಾರತೀಯ ಜನತಾ ಪಾರ್ಟಿ ಯಾವ ಕಾರಣಕ್ಕೂ ಬಗ್ಗಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಈ ರಾಜ್ಯದ ಜನರ ಹಿತ ಹಾಳು ಮಾಡುತ್ತಿರುವುದು ನೀವು.

**ಶ್ರೀ ಎಸ್.ಆರ್.ಪಾಟೀಲ್:-** ಇದಕ್ಕೆ ನೀವು ಅಸಹಕಾರ ಮಾಡಿದರೆ ಇದರಲ್ಲಿ consequence ಎದುರಿಸಬೇಕಾಗುತ್ತದೆ. You have to pay the penalty. You will pay the biggest penalty. Your party will pay the penalty.

**ಸಭಾಪತಿಯವರು:-** ಈ ವಿಷಯದ ಬಗ್ಗೆ ಹೊರಟ್ಟಿಯವರು....

**Sri RAMACHANDRA GOWDA:** Sir, I am on a point of order.

**ಸಭಾಪತಿಯವರು:–** ಏನು ಓದುತ್ತೀರೋ ಬೇಗ ಓದಿ.

**ಶ್ರೀ ರಾಮಚಂದ್ರಗೌಡ:–** ಸೆಕ್ಷನ್ 147 ಪ್ರಕಾರ ನ್ಯಾಯಾಧಿಕರಣಗಳು, ಆಯೋಗಗಳು ಇತ್ಯಾದಿಗಳ ಮುಂದೆ ಇರುವ ಬಗ್ಗೆ ಚರ್ಚೆ ಮಾಡಲಾಗುವುದಿಲ್ಲ. ಇವತ್ತು ಅವರು ಒಂದು ರೆಸಲ್ಯೂಶನ್ ತೆಗೆದುಕೊಂಡು ಬಂದರು. ಸೆಕ್ಷನ್ 143 ಪ್ರಕಾರ....

**ಶ್ರೀ ಹೆಚ್.ಎಂ.ರೇವಣ್ಣ:–** ಎಲ್ಲದರಲ್ಲಿಯೂ ಮಾತನಾಡುತ್ತೀರಲ್ಲಾ.

**ಶ್ರೀ ರಾಮಚಂದ್ರಗೌಡ:–** ಸಭಾಪತಿಯವರು ನನಗೆ ಮಾತನಾಡಲು ಸಮಯ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಅದರಲ್ಲಿ point of order ಎಲ್ಲಿದೆ?

(ಗೊಂದಲ)

**Sri V.S. UGRAPPA:** With the permission of the Chairman, I have moved this resolution.

(ಗೊಂದಲ)

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ, ನೀವು ಹೇಳಿದ್ದು ನೋಡಿದೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ:–** ನಿಯಮ 143 ಓದಿ.

**ಸಭಾಪತಿಯವರು:–** ನಾನು ಆಗಲೇ ಹೇಳಿದೆ. ನಮ್ಮ ನಿಯಮಾವಳಿಗಳ ಪ್ರಕಾರ ಯಾವುದೇ ಈ ರೀತಿಯ ರೆಸಲ್ಯೂಷನ್ ಪಾಸ್ ಮಾಡಲಿಕ್ಕೆ ಬರುವುದಿಲ್ಲ. ಅಕಸ್ಮಾತ್ ರೆಸಲ್ಯೂಷನ್ ಮಾಡಬೇಕೆಂದರೆ ನಿಯಮ 143ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನೀವು ಎಲ್ಲರಿಗೂ ಮಾತನಾಲಿಕ್ಕೆ ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಕುಳಿತುಕೊಳ್ಳಿ ಎಂದು ಹೇಳಿದ ಮೇಲೆ ಕುಳಿತುಕೊಳ್ಳಬೇಕು. ಹಾಗೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರಿಗೆ ಒಂದೆರಡು ನಿಮಿಷ ಕಾಲ ಮಾತನಾಡಲಿಕ್ಕೆ ಅವಕಾಶ ಕೊಡಿ.

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನಾನು ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಬಂದಿಲ್ಲ. ನಾನು ನನ್ನ ಭಾವನೆಯನ್ನು ಹೇಳಲಿಕ್ಕೆ ಬಂದಿದ್ದೇನೆ. ನನ್ನ ಭಾವನೆಯನ್ನು ಹೇಳಲಿಕ್ಕೆ ತಾವು ಅವಕಾಶವನ್ನು ಕೊಡಲೇಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರೆ, ಒಂದೆರಡು ನಿಮಿಷ ಕಾಲ ಮಾತನಾಡಿ.

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ಕೊಡುತ್ತಿಲ್ಲ.

**ಸಭಾಪತಿಯವರು:–** ಯತ್ನಾಳ್‌ರವರೆ, ನಾನು ಹೇಳುವುದನ್ನು ನೀವು ಕೇಳಿ, ಕೇಳುವುದಿಲ್ಲವೇ?

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ನಾನು ಎದ್ದು ನಿಂತಾಗ ಪ್ರತಿಯೊಂದಕ್ಕೂ ಕುಳಿತುಕೊಳ್ಳಿ ಎನ್ನುತ್ತೀರಿ. ಇದಕ್ಕೆ ಕಾರಣವೇನು ಎನ್ನುವುದನ್ನಾದರೂ ಹೇಳಬೇಕು. ನಾನು ವೈಯುಕ್ತಿಕವಾಗಿ ಏನು ಮಾತನಾಡುವುದಿಲ್ಲ.

**ಸಭಾಪತಿಯವರು:–** ಛೇರ್ಮನ್ ಹೇಳುವುದನ್ನು ಕೇಳಲೇಬೇಕು. ದಯಮಾಡಿ ಕುಳಿತುಕೊಳ್ಳಿ. ಕುಳಿತುಕೊಳ್ಳುವುದಿಲ್ಲವೆಂದರೆ ನಾನು ಬೇರೆ ತರಹ ನಿಮ್ಮನ್ನು...

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಮಾನ್ಯ ಸಭಾಪತಿಯವರೆ, ಇದು ಉತ್ತರ ಕರ್ನಾಟಕದ ಪ್ರಶ್ನೆ.

**ಸಭಾಪತಿಯವರು:–** ನಾನು ನಿಮಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಅವಕಾಶ ಕೊಡದೇ ಇದ್ದರೆ ನಾನು ಬಾವಿಗೆ ಹೋಗಿ ಪ್ರತಿಭಟನೆಯನ್ನು ಮಾಡುತ್ತೇನೆ.

**ಸಭಾಪತಿಯವರು:–** ನೋಡಿ, ನಾವು ಭಾವೋದ್ವೇಗಕ್ಕೆ ಒಳಗಾಗಿ ಯಾವುದೇ ವಿಷಯವನ್ನು ಚರ್ಚೆ ಮಾಡಿದರೆ ಅದು logical end ಗೂ ಹೋಗುವುದಿಲ್ಲ, ಅದರಿಂದ ಲಾಭವೂ ಇಲ್ಲ. ಹಾಗಾಗಿ ತಾವು ಭಾವೋದ್ವೇಗಕ್ಕೆ ಒಳಗಾಗಿ ಚರ್ಚೆ ಮಾಡುವುದು ಬೇಡ.

(ಮುಂದು)

**ಸಭಾಪತಿಯವರು(ಮುಂದು. .)**

ಅ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆ ಇದೆ. ಅದರ ಬಗ್ಗೆ ನನ್ನ ತಪ್ಪ, ನಿನ್ನ ತಪ್ಪು ಎಂದು ಪರಸ್ಪರ ಹೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಬದಲು ನೀನು ಮಾಡಿದರೆ ಆಗುತ್ತದೆ, ನಾನು ಮಾಡುವುದಿಲ್ಲ, ನಾನು ಮಾಡಿದರೆ ಆಗುತ್ತದೆ, ನೀನು ಮಾಡಿದರೆ ಆಗುವುದಿಲ್ಲ, ಈ ರೀತಿ ಹೇಳಿಕೊಂಡು ಹೋಗುವುದು ಸರಿಯಲ್ಲ. ಅದಕ್ಕಾಗಿ ನಾವು ದಾರಿಯನ್ನು ಹುಡುಕಬೇಕು. ನಾವೆಲ್ಲರೂ ಒಟ್ಟಾಗಬೇಕು. ನಮ್ಮ ರಾಜ್ಯದ ಜನರೆಲ್ಲರೂ ಒಟ್ಟಾದಾಗ ಮಾತ್ರ ಪರಿಹಾರ ಸಾಧ್ಯವಾಗುತ್ತದೆ. ನಾವೆಲ್ಲರೂ ಒಟ್ಟಾಗಿ ಮಾಡಬೇಕೆಂದರೆ, ನನ್ನ ಸಲಹೆಯನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಮತ್ತೊಮ್ಮೆ, ಮಗದೊಮ್ಮೆ, ಈ ರೀತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಾರಿ, ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯದ ಕಾಂಗ್ರೆಸ್ ನಾಯಕರನ್ನು, ಬಿಜೆಪಿ ನಾಯಕರನ್ನು, ಜೆ.ಡಿ(ಎಸ್) ನಾಯಕರನ್ನು ಮತ್ತೆ, ಪ್ರಮುಖರನ್ನು ಕರೆದು ಈಗಾಗಲೇ ಸಭೆಗಳನ್ನು ಮಾಡಿದ್ದೀರಿ. ಮತ್ತೊಂದು ಸಭೆಯನ್ನು ಮಾಡಿ, ಮತ್ತೊಮ್ಮೆ ಚರ್ಚೆಯನ್ನು ಮಾಡಿ. ದಾರಿ ಹುಡುಕಿ, ನಮ್ಮ ರಾಜ್ಯದ ಜನತೆಗೆ, ಆ ಭಾಗದ ಜನರಿಗೆ ಕುಡಿಯುವ ನೀರನ್ನು ಕೊಡಿಸುವುದಕ್ಕೆ ಯಾವ ಪ್ರಯತ್ನ ಮಾಡಿದರೂ ತಪ್ಪಾಗುವುದಿಲ್ಲ. ಯಾವ ಪ್ರಯತ್ನ ಮಾಡಿದರೂ ಕಮ್ಮಿಯಾಗುವುದಿಲ್ಲ. ಈ ರೀತಿಯಲ್ಲಿ ನಾವು ಪ್ರಯತ್ನ ಮಾಡೋಣ. ಇಲ್ಲಿ ಈ ರೀತಿ ಚರ್ಚೆ ಮಾಡಿದರೆ ಏನಾಗುತ್ತದೆ ಎಂದರೆ ನಾವುಗಳು ಭಾವೋದ್ವೇಗಕ್ಕೆ ಒಳಗಾದಾಗ ನಿನ್ನ ತಪ್ಪು, ನನ್ನ ತಪ್ಪು ಎಂದು ಹೇಳುತ್ತಾ ಹೋದರೆ, ಅದು ಎಲ್ಲಿಗೂ ಹೋಗಿಬಿಡುತ್ತದೆ. ಅದರಿಂದ ಪರಿಹಾರ ಸಿಕ್ಕುವುದಿಲ್ಲ. ಅಲ್ಲಿಯ ಜನರು ಸುಮಾರು 220 ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ವಿಚಾರದಲ್ಲಿ ನಿರ್ಣಯ ಮಾಡುವುದಕ್ಕೆ ನಮ್ಮ ಸದನದಲ್ಲಿ ಅವಕಾಶವಿಲ್ಲ. ಈ ವಿಚಾರವಾಗಿ ನಾನು ಹೇಳುವುದನ್ನು ಕೇಳಿ. ನಾನು ಈ ವಿಚಾರವಾಗಿ ಓದಲಿಕ್ಕೆ ಬಯಸುತ್ತೇನೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರು ಈ ಬಗ್ಗೆ ಅನುಮತಿಯನ್ನು ಕೊಟ್ಟಿದ್ಧಾರೆ, ನಾನು ಈ ವಿಷಯವನ್ನು ಮೂವ್ ಮಾಡಿದ್ದೇನೆ. ಈ ವಿಷಯವಾಗಿ ಡಿವಿಜನ್ ಕೇಳಿ, ಸದನದ ಅಭಿಪ್ರಾಯವನ್ನು ಕೇಳಿ.

(ಈ ಹಂತದಲ್ಲಿ ಮೂರು ಜನ ಸದಸ್ಯರು ಒಟ್ಟಿಗೆ ಎದ್ದು ಮಾತನಾಡಲಿಕ್ಕೆ ಪ್ರಾರಂಭ ಮಾಡಿದರು)

**ಸಭಾಪತಿಯವರು:–** 1,2,3 ಜನ ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದು, ಅವರು ಮಾತನಾಡಿದ್ದು, ರೆಕಾರ್ಡ್‌ಗೆ ಹೋಗತಕ್ಕದ್ದಲ್ಲ. ಆದ್ದರಿಂದ, ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಡಿವಿಜನ್‌ಗೆ ಕೇಳಿ, ಸದನದ ಅಭಿಪ್ರಾಯವನ್ನು ಕೇಳಿ. ರಾಜ್ಯದ ಹಿತವನ್ನು ನಾವು ಕಾಪಾಡಬೇಕಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮುಖ್ಯಮಂತ್ರಿಗಳಿಗೆ ಈ ನಿಟ್ಟಿನಲ್ಲಿ ಸಭೆಯನ್ನು ಮಾಡಲಿಕ್ಕೆ ಸಲಹೆಯನ್ನು ಕೊಡುತ್ತೀರಿ,

**ಸಭಾಪತಿಯವರು:–** ಶ್ರೀಯುತ ರೇವಣ್ಣನವರೆ, ಸಲಹೆ ಬೇರೆ, ನಿರ್ಣಯ ಬೇರೆ. ನಾನು ಸಲಹೆಯನ್ನು ಕೊಟ್ಟಿದ್ದೇನೆ. ನಿರ್ಣಯವನ್ನು ಕೊಟ್ಟಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ನೀವು ಈ ಕಡೆ ಸಲಹೆ ಕೊಡುವುದರ ಜೊತೆಗೆ ಅಲ್ಲಿಯೂ ಹೇಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಅನುಮತಿ ಮೇರೆಗೆ ಇದನ್ನು ಮೂವ್ ಮಾಡಿದ್ದೇನೆ. ದಯಮಾಡಿ ನಾನು ಡಿವಿಜನ್‌ಗೆ ಕೇಳುತ್ತಿದ್ದೇನೆ. ಸದನದ ಅಭಿಪ್ರಾಯವನ್ನು ಕೇಳಬೇಕು. ಇಲ್ಲಿ ನಮಗೆ ರಾಜ್ಯದ ಹಿತ ಮುಖ್ಯವಾಗಿದೆ. ನಿಯಮಾವಳಿಗಳನ್ನು ತಾವು ಅನೇಕ ಬಾರಿ ಸಸ್ಪೆಂಡ್ ಮಾಡಿದ್ದೀರಿ. ದಯಮಾಡಿ, ರಾಜ್ಯದ ಹಿತವನ್ನು ಕಾಪಾಡಬೇಕೆಂದರೆ ನಾನು ಈ ಡಿವಿಜನ್‌ಗೆ ಕೇಳುತ್ತಿದ್ದೇನೆ, ಈ ನಿರ್ಣಯದ ಪರ ಯಾರು ಇದ್ದಾರೆ, ವಿರುದ್ಧ ಯಾರು ಇದ್ದಾರೆನ್ನುವುದು ಜನರಿಗೆ ಗೊತ್ತಾಗಬೇಕು. ಬರಲಿ, ಡಿವಿಜನ್ ಮಾಡಿ.

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ನೀವು ಹೇಳಿದ ತಕ್ಷಣ ಮತಕ್ಕೆ ಹಾಕಲು ಬರುವುದಿಲ್ಲ.

> ***Notice of Resolution:-*** *A Member other than a Minister who wishes to move a resolution to that effect shall give at least seven clear days notice before the date of ballot and shall together with notice submit text of the resolution which he wishes to move:*
>
> *Provided that the names of not more than five members shall be taken out in the ballot and shall be placed on the list of resolution on any one day.*

ಹಾಗಾಗಿ, ಈ ರೀತಿಯಲ್ಲಿ ನಾವೇ ಮಾಡಿಕೊಂಡಿರುವ ಕಾನೂನಿನಿಂದ ನಾವು ಇಲ್ಲಿ ಉದ್ವೇಗದ ಬರದಲ್ಲಿ ಯಾವುದೇ resolution ಮಾಡಲಿಕ್ಕೆ ಬರುವುದಿಲ್ಲ. I will not allow that resolution.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, . .

**ಸಭಾಪತಿಯವರು:–** ತಾವು ಸಭಾನಾಯಕರಾಗಿ , resolution move ಮಾಡಿಸುತ್ತೀರಾ? ದಯವಿಟ್ಟು, ಆ ತಪ್ಪನ್ನು ಮಾಡಬೇಡಿ. ಅವರು ಬೇಕಾದ್ದನ್ನು ಹೇಳಲಿ. ನೀವು ಮಾಡಬೇಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, you have got an unfettered discretionary power. You can suspend all the rules. Please come to our rescue. ಆ ಒಂದು ಅಧಿಕಾರ ನಿಮಗೆ ಇದೆ. You have got an inherent power. ಅನೇಕ ಸಲ ವಿಚಾರಣೆ ಮಾಡಿದ್ದೀರಿ. ಆದ್ದರಿಂದ, ನಾನು ಹೇಳಬಯಸುವುದೇನೆಂದರೆ ಉತ್ತರ ಕರ್ನಾಟಕದ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ, ಪ್ರೊಸೀಜರ್ ಏನಿದೆ, ಸಸ್ಪೆಂಡ್ ಮಾಡುವಂತಹ ಅಧಿಕಾರ ಇದೆ, ನೀವು ನಿರ್ಣಯ ತೆಗೆದುಕೊಳ್ಳಬಹುದು. ಏನೂ ತಪ್ಪಾಗುವುದಿಲ್ಲ.

**ಸಭಾಪತಿಯವರು:-** ಆಯಿತು, ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯವೇನೆಂದು ನಾನು ಹೇಳುತ್ತೇನೆ. ನನಗೆ unfettered ಅಧಿಕಾರ ಇದೆ ಎಂದು ಸಭಾನಾಯಕರಾದ ತಾವು ಹೇಳಿದ್ದೀರಿ. ಈ ರೀತಿಯಲ್ಲಿ ದುಡುಕಿ ಮಾತನಾಡಬೇಡಿ. ನೋಡಿ, ಈ ಸಭೆಗಳಿಗೆ ಬಹಳಷ್ಟು ಬಾರಿ ಸರ್ಕಾರಕ್ಕೆ ಬಹುಮತ ಇರುವುದಿಲ್ಲ. ವಿರೋಧ ಪಕ್ಷದವರು ಸರ್ಕಾರವನ್ನು ಛೀಮಾರಿ ಹಾಕುವಂತಹ ರೆಸಲ್ಯೂಷನ್ ತಂದು, ನಾವು ಇವತ್ತು 5 ಜನ ಹೇಳಿದ್ದೇವೆ, 8 ಜನ ಹೇಳಿದ್ದೇವೆ, ರೆಸಲ್ಯೂಷನ್ ಮಾಡಿ ಎಂದು ಕೇಳಿಬಿಟ್ಟರೆ, ನಾನು ಅದನ್ನು allow ಮಾಡಿದರೆ ಏನಾಗುತ್ತದೆ ಎಂದು ಯೋಚನೆ ಮಾಡಿದ್ದೀರಾ? ದಯಮಾಡಿ ಬೇಡ.

(ಗೊಂದಲ)

**ಶ್ರೀ ವಿನಯ್ ಕುಲಕರ್ಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಇದನ್ನು ಮಾಡಿದರೆ ಉತ್ತರ ಕರ್ನಾಟಕದಲ್ಲಿ ಒಂದು ಹೆಸರು ಬರುತ್ತದೆ. ಇದು ಉತ್ತರ ಕರ್ನಾಟಕ ಜನರ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಈ ಬಗ್ಗೆ ಶ್ರೀಯುತ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಹೇಳಬೇಕು. ಮಲಪ್ರಭಾ ಡ್ಯಾಮ್ ಯಾವಾಗ ಕಟ್ಟಿದರು...

(ಗೊಂದಲ)

**ಸಭಾಪತಿಯವರು:-** ಕಳಸಾ-ಬಂಡೂರಿ ವಿಷಯದಲ್ಲಿ ಆ ಭಾಗದ ಜನರಿಗೆ ನೀರು ಕೊಡುವಂತಹ ವಿಷಯವನ್ನು ಬಹಳ ಕಳಕಳಿಯಿಂದ ಹೃದಯ ಮುಟ್ಟುವ ಹಾಗೆ ಅಲ್ಲಿ ನಡೆಯುತ್ತಿರುವುದನ್ನು ಸಹಿಸಲಾರದೆ, ಹಿರಿಯ ಸದಸ್ಯರಾದ ಮಾನ್ಯ ಶ್ರೀ ಹೊರಟ್ಟಿಯವರು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಲಹೆಗಳು ಬಂದಿವೆ. ಅ ಸಲಹೆಗಳ ಹಿನ್ನೆಲೆಯಲ್ಲಿ ಸರ್ಕಾರ ತಾನು ಸರ್ಕಾರ ಎನ್ನುವುದನ್ನು ಮರೆತು, ವಿರೋಧ ಪಕ್ಷದವರು ನಾವು ವಿರೋಧ ಪಕ್ಷದವರೆಂದು ಮರೆತು, ಸರ್ಕಾರ ಮತ್ತು ವಿರೋಧ ಪಕ್ಷದವರು ಒಟ್ಟಾಗಿ ಕುಳಿತು, ಚರ್ಚೆ ಮಾಡಿ, ರಾಜ್ಯದ ಜನರ ದೃಷ್ಟಿಯಿಂದ ಒಳ್ಳೆಯ ತೀರ್ಮಾನ ಮಾಡಿ, ತಾವು ಮುಂದಕ್ಕೆ ಹೋಗಬೇಕೆಂದು ಈ ಸಭೆಯ ಮೂಲಕ ಎಲ್ಲರಿಗೂ ತಿಳಿಸುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ರೆಸಲ್ಯೂಷನ್ ಬಗ್ಗೆ ನಾನು ಡಿವಿಜನ್‌ಗೆ ಕೇಳಿದ್ದೇನೆ. ಇದರ ಪರ ಯಾರು ಇದ್ದಾರೆ . . .

**ಸಭಾಪತಿಯವರು:** ಕೊಡಲಿಕ್ಕೆ ಬರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ನಾನು ರಾಜ್ಯದ ಹಿತದೃಷ್ಟಿಯಿಂದ ಕೇಳುತ್ತಿದ್ದೇನೆ. ಈ ಸದನ ಸರ್ವೋಚ್ಚ.

**ಸಭಾಪತಿಯವರು:** ಕೊಡಲಿಕ್ಕೆ ಬರುವುದಿಲ್ಲ. ತಾವು ಈ ಬಗ್ಗೆ 7 ದಿವಸಗಳ ಮುಂಚೆ ನೋಟೀಸ್ ಕೊಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ದಯಮಾಡಿ. ಈ ಸದನಕ್ಕೆ ಹಕ್ಕು ಇದೆ. ಸದನದ ಸದಸ್ಯರ ಅಭಿಪ್ರಾಯ.

**ಸಭಾಪತಿಯವರು:–** ಮೊದಲು ನೀವು ನೋಟೀಸ್ ಕೊಡಿ. 7 ದಿವಸಗಳ ನಂತರ ನೋಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** 7 ದಿವಸಗಳ ಕಾಲ ಸದನವೇ ನಡೆಯುವುದಿಲ್ಲ. ಹೇಗೆ ಕೊಡಲಿಕ್ಕೆ ಸಾಧ್ಯ?

**ಸಭಾಪತಿಯವರು:–** ನೀವು ಇದನ್ನು ಓದಿ.

**ಶ್ರೀ ವಿ.ಎಸ್.ಉಗ್ರಪ್ಪ:–** ನೀವು ಎಷ್ಟೋ ಬಾರಿ ಈ ನಿಯಮಗಳನ್ನು ಸಡಿಲಿಸಿರುವುದಿಲ್ಲವೇ?

**ಸಭಾಪತಿಯವರು:–** ನೀವು ಹೇಳಿದ ರೀತಿ ಆಗುವುದಿಲ್ಲ. I will not allow this resolution.

**ಶ್ರೀ ವಿ.ಎಸ್.ಉಗ್ರಪ್ಪ:–** ರಾಜ್ಯಕ್ಕಿಂತ ಈ ನಿಯಮಗಳೇ ಹೆಚ್ಚೇ?

**ಸಭಾಪತಿಯವರು:–** ನೀವು ಈ ಪೀಠವನ್ನು disobey ಮಾಡುವುದಾದರೆ, it is for you.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ರಾಜ್ಯದ ಜನತೆಗೋಸ್ಕರ ಈ ಕಾನೂನಿನ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ. ನನಗೋಸ್ಕರ ಅಲ್ಲ, ಈ ರಾಜ್ಯದ ಜನತೆಗೋಸ್ಕರ . . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ಕೊಡುವಂತಹ ರೂಲಿಂಗ್ಸ್ ಬಗ್ಗೆ ಮತ್ತೆ ಮತ್ತೆ ಪ್ರಶ್ನೆ ಮಾಡುತ್ತಿದ್ದಾರೆ, ಮುಖ್ಯಮಂತ್ರಿಗಳಿದ್ದಾರೆ, ಸಭಾನಾಯಕರಿದ್ದಾರೆ, ಕಾನೂನು ಮಂತ್ರಿಗಳಿದ್ದಾರೆ, ನಿಮ್ಮ ರೂಲಿಂಗ್ ಅನ್ನು ಈ ರೀತಿಯಲ್ಲಿ ಇವರು ವಿರೋಧ ಮಾಡುತ್ತಿದ್ದಾರೆಂದರೆ . . . .

(ಗೊಂದಲ)

ಸಭಾಪತಿಯವರ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಮತ್ತೆ, ಈ ವಿಚಾರವಾಗಿ ನಮಗೆ ಹೇಳಬೇಡಿ. ನಿಮ್ಮ ಉಪದೇಶವನ್ನು ನಮಗೆ ಮಾಡಬೇಡಿ. ನಿಮ್ಮ ಶಾಸಕರನ್ನು ಹತೋಟಿಯಲ್ಲಿ ಇಡುವುದಕ್ಕೆ ಆಗುವುದಿಲ್ಲವೆಂದರೆ . . . .

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ನೀವು ಇದಕ್ಕೆ ಶಂಕುಸ್ಥಾಪನೆ ಮಾಡಿದ್ದು, ನಿಮಗೆ ನಾಚಿಕೆ ಆಗುವುದಿಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಸಭಾಪತಿಯವರ ರೂಲಿಂಗ್ ಅನ್ನೇ ಪ್ರಶ್ನೆ ಮಾಡುತ್ತಿದ್ದೀರಿ.

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೆ, ಇವರೇ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಇವರೇ ಅಲ್ಲಿಗೆ ಬಂದು ಅದಕ್ಕೆ ಶಂಕುಸ್ಥಾಪನೆ ಮಾಡಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಾಂಗ್ರೆಸ್ ಪಕ್ಷದವರು ಈ ವಿಚಾರವಾಗಿ ಸುಪ್ರೀಂ ಕೋರ್ಟಿಗೆ ಹೋಗಲಿಕ್ಕೆ ಅವಕಾಶ ಮಾಡಿಕೊಡುತ್ತಾರೆಂದು ನನಗೆ ದೇವರಾಣೆ ಗೊತ್ತಿರಲಿಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ನೀವು ಆ ಭಾಗಕ್ಕೆ ಹೋಗಿ ನಿಮ್ಮ ಗೋಸುಂಬೆತನ ಏನೆಂಬುದು ಗೊತ್ತಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾವು ಆ ಭಾಗದಲ್ಲಿ ಎಂ.ಪಿ. ಸ್ಥಾನವನ್ನು ಗೆದ್ದಿದ್ದೇವೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರು ಮತ್ತು ಕಾನೂನು ಸಚಿವರು ಇಲ್ಲಿ ಕುಳಿತಿದ್ದಾಗ ಇವರು ಹೀಗೆ

ಮಾತನಾಡುತ್ತಾರೆಂದರೆ ಈ ವಿಚಾರವನ್ನು ಈ ರಾಜ್ಯದ ಜತೆಗೆ ಬಿಡುತ್ತೇನೆ. ನಾನು ಮತ್ತೆ ಮಾತನಾಡಲಿಕ್ಕೆ ಹೋಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ರಾಜ್ಯದ ಜನತೆಯ ಬಗ್ಗೆ ಸ್ವಲ್ಪವೂ ಬದ್ಧತೆ ಇಲ್ಲ. ನೀರು ರಾಜಕಾರಣ ಮಾಡುತ್ತೀರಿ, ಈ ವಿಚಾರದಲ್ಲಿ ನಿಮ್ಮ ಪ್ರಧಾನ ಮಂತ್ರಿಗಳಿಗೆ ಒತ್ತಡವನ್ನು ತರಲಿಕ್ಕೆ ಆಗುವುದಿಲ್ಲವೇ?

**ಶ್ರೀ ವಿನಯ್ ಕುಲಕರ್ಣಿ:–** ನಮ್ಮ ಉತ್ತರ ಕರ್ನಾಟಕದ ಕಳಸಾ–ಬಂಡೂರಿ ಹೆಸರಿನ ಮೇಲೆ ಒಂದು ಬಾರಿ ನಿಮ್ಮ ಎಲ್ಲಾ ಶಾಸಕರುಗಳು ಗೆದ್ದಿದ್ದಾರೆ. ಒಂದು ಬಾರಿ ಈದ್ಗಾ ಮೈದಾನದ ವಿಷಯವಾಗಿ ಗೆದ್ದಿದ್ದೀರಿ. ಆದ್ದರಿಂದ, ಅವರ ಬಗ್ಗೆ ಕಳಕಳಿ ಇಟ್ಟುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ಆಯಿತು, ಕುಳಿತುಕೊಳ್ಳಿ. ಒಂದು ಸಣ್ಣ ಪ್ರಕಟಣೆ ಇದೆ.

**ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ, ಈ ಮುಂದಿನ ಸಂದೇಶ ಬಂದಿರುತ್ತದೆ. ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 5–3–2016 ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2016 ಅನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ. ಇದಲ್ಲದೇ, ಕರ್ನಾಟಕ ವಿಧಾನ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 5–3–2016 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

1. **ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ(ತಿದ್ದುಪಡಿ) ವಿಧೇಯಕ, 2016**
2. **ಬಾಲ್ಯ ವಿವಾಹ ನಿಷೇಧ(ಕರ್ನಾಟಕ ತಿದ್ದುಪಡಿ) ವಿಧೇಯಕ, 2016**
3. **ಕರ್ನಾಟಕ ಲೋಕಸೇವಾ ಆಯೋಗ(ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ವಿಧೇಯಕ, 2016**
4. **ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2016**
5. **ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2016**
6. **ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016**

ಈ ವಿಧೇಯಕಗಳನ್ನು ಕಾರ್ಯದರ್ಶಿಯವರು ಮಂಡಿಸುವುದು.

**ಮುಂದು. . .**

**ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ:-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯೊಂದಿಗೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ **2016ನೇ ಸಾಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ** ವನ್ನು

ಹಾಗೂ

**ವಿಧಾನ ಸಭೆಯಿಂದ ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕೃತವಾದ ರೂಪದಲ್ಲಿರುವ**
**ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ(ತಿದ್ದುಪಡಿ) ವಿಧೇಯಕ, 2016**
**ಬಾಲ್ಯ ವಿವಾಹ ನಿಷೇಧ(ಕರ್ನಾಟಕ ತಿದ್ದುಪಡಿ) ವಿಧೇಯಕ, 2016**
**ಕರ್ನಾಟಕ ಲೋಕಸೇವಾ ಆಯೋಗ(ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ವಿಧೇಯಕ, 2016**
**ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2016**
**ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2016**
**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016**

ಈ ವಿಧೇಯಕಗಳ ಪ್ರತಿಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ವಿಷಯಗಳು ಬಹಳ ಗಂಭೀರವಾಗಿರುವಂಥವುಗಳಾಗಿವೆ. ಒಂದು ವರದಿಯನ್ನು ಮಂಡಿಸುವುದಾಗಿ ಈ ಸರ್ಕಾರ ತಿಳಿಸಿತ್ತು, ಆ ವರದಿಯನ್ನು ಮಂಡಿಸುವುದಕ್ಕೆ ಅವರದೇ ಆದಂತಹ ಒಂದು ವ್ಯಾಖ್ಯಾನ ಮಾಡಿ ಅಥವಾ ಅರ್ಥ ಕಲ್ಪಿಸಿಕೊಂಡು ಹೇಳಿದ್ದಾರೆ. ಹಾಗೆಯೇ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ನಾನು ಬೇಕಾದರೆ ತಮಗೆ ಕೊಡುತ್ತೇನೆ ಎನ್ನುವಂತಹ ಮಾತನ್ನು ತಿಳಿಸಿದ್ದಾರೆ. ಈಗ ಅವರು ವಿಶೇಷ ವರದಿಯ ಶಿಫಾರಸ್ಸುಗಳನ್ನು ಮಾತ್ರ ಮಂಡಿಸಿದ್ದಾರೆ, ವರದಿಯನ್ನು ಮಂಡಿಸಿಲ್ಲ. ಇದುವರೆಗೂ ನಡೆದುಕೊಂಡು ಬಂದದ್ದು, ವರದಿಯನ್ನು ಮಂಡಿಸಬೇಕು ಎಂಬುದಾಗಿತ್ತು.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕೋಸ್ಕರ ಅದನ್ನು reject ಮಾಡಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ನಿರ್ಣಯ ಕೂಡ ಅದರಲ್ಲಿದೆ.

**ಸಭಪತಿಯವರು:-** ಅದನ್ನು ನಾನು ನೋಡುತ್ತೇನೆ, ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಈ ಹಿನ್ನೆಲೆಯಲ್ಲಿ ಹೊಸದಾಗಿ ಕೆಲವು ವಿಷಯಗಳು ಉದ್ಭವವಾಗಿವೆ. ಏಕೆಂದರೆ ನೀವು ಹೇಳಿದ್ದು, ನಾನೇನೂ ಆ ರೀತಿ ಒಬ್ಬ ಜಡ್ಜ್ ಕೆಲಸವನ್ನಾಗಲಿ, ಲಾಯರ್ ಕೆಲಸವನ್ನಾಗಲಿ ಮಾಡಲಿಲ್ಲ. ನನ್ನ ಜನರಲ್ ನಾಲೆಡ್ಜ್ ಆಧಾರದ ಮೇಲೆ ಓದಿ, ಅದನ್ನು ಅರ್ಥೈಸುತ್ತಿದ್ದೇನೆ. ಎ.ಜಿ.ರಿಪೋರ್ಟ್ ಎಂದು ತಾವು ಸರ್ಕಾರದಿಂದ ಹೇಳುತ್ತಿದ್ದೀರಿ, ವಿರೋಧ ಪಕ್ಷದ ಪರವಾಗಿ ಮಾನ್ಯ ಮಧೂಸೂದನ್‌ರವರು ಹಾಗೂ ವಿರೋಧ ಪಕ್ಷದ ನಾಯಕರು ನನಗೆ ಹಿಂದಿನ ಎ.ಜಿ.ರವರ ವರದಿಯನ್ನು ಸಹ ಕಳುಹಿಸಿಕೊಟ್ಟಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಇದರ ಬಗ್ಗೆ ಅಂತಿಮ ನಿರ್ಣಯವನ್ನು sudden ಆಗಿ ಕುಳಿತ ಸಂದರ್ಭದಲ್ಲಿಯೇ ಮಾಡುವುದು ಬಹಳ ಕಷ್ಟದ ಕೆಲಸ. ಹಾಗಾಗಿ I need a little time. ಈಗ ಎದ್ದಿರುವಂತಹ ಈ ಗೊಂದಲದ ವಾತಾವರಣದ ಮಧ್ಯದಲ್ಲಿ ಅದರ ಬಗ್ಗೆ ನಾನು ಏನಾದರೂ ಹೇಳಿದರೆ, ನಾನೂ ಉದ್ವೇಗಕ್ಕೆ ಒಳಗಾಗಿ ಮಾಡುವುದು, ಹೀಗಾಗಿ ನಾನು ನಿಮಗೆಲ್ಲಾ ಬುದ್ಧಿ ಹೇಳುವ ಅಧಿಕಾರ ಹೋಗಿಬಿಡುತ್ತದೆ. ಅದಕ್ಕಾಗಿ ಮತ್ತು ಈಗಾಗಲೇ ಇಷ್ಟೊಂದು ಸಮಯ ಕೂಡ ಆಗಿದೆ, ಈ ಎಲ್ಲ ಹಿನ್ನೆಲೆಯಲ್ಲಿ I reserve the judgement on this for some time. ನೀವು ಎತ್ತಿರುವಂತಹ ಅಬ್ಜೆಕ್ಷನ್‌ಗೆ ನಾನು ಒಪ್ಪಿಲ್ಲ. ಅಂದರೆ ಅವರು ಕೊಟ್ಟಿರುವಂತಹ ಸಮಜಾಯಿಷಿಯನ್ನೂ ಒಪ್ಪಲಿಲ್ಲ, ನೀವು ಎತ್ತಿರುವಂತಹ ಅಬ್ಜೆಕ್ಷನ್‌ಗೆ ನಾನು ಒಂದು ತೀರ್ಮಾನ ಕೊಡಬೇಕು. ಆ ತೀರ್ಮಾನ ಕೊಡುವುದಕ್ಕೆ I need a little time.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಒಂದು ಕೆಲಸ ಮಾಡಿ ಸರ್, ಸ್ವಲ್ಪ ತಡೆಯಿರಿ...

(ಗೊಂದಲ)

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ನಾವು ಸದನಕ್ಕೆ ಕೊಟ್ಟಿರುವ ವರದಿ ಏನಿದೆ, ಅದರ ಪುಟ ಸಂಖ್ಯೆ: 263ರಲ್ಲಿ ಸ್ಪಷ್ಟವಾಗಿದೆ, ಅದನ್ನು ಒಂದು ಸಲ ಓದಿ ಹೇಳಿಬಿಡುತ್ತೇನೆ.

(ಗೊಂದಲ)

SRI S.R.PATIL: Mr.Chairman, Sir, you have reserved your ruling. Don't allow further discussion on this.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, I am on a Point of Order. ಯಾವ ನಿಯಮದಲ್ಲಿ ಅವರ ವರದಿಯನ್ನು ತೆಗೆದುಕೊಂಡಿದ್ದೀರಿ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ನೀವು ಸಮಯ ತೆಗೆದುಕೊಳ್ಳಿ, ನಾನು ಬೇಡವೆನ್ನುವುದಿಲ್ಲ. ಆದರೆ ಇವತ್ತು, ನೆನ್ನೆ, ಮೊನ್ನೆಯ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಚರ್ಚೆಯಾಗಿ ಆ ವರದಿಯನ್ನು ಮಂಡಿಸುತ್ತೇವೆ ಎಂದು ಬಹಳ ಸ್ಪಷ್ಟವಾಗಿ ತಿಳಿಸಿ, ನೆನ್ನೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸಚಿವ ಸಂಪುಟ ...

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, you have reserved your ruling. Why are you allowing him?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಮಾತನಾಡಲು ಬಿಡುವಂತೆ ಅವರಿಗೆ ತಿಳಿಸಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೀವು ರೂಲಿಂಗ್ ರಿಸರ್ವ್ ಮಾಡಿದ ಮೇಲೆ why do you allow discussion. You have put an end, you have put a full stop.

(ಗೊಂದಲ)

**ಸಭಾಪತಿಯವರು:-** ಅವರು ಮಾತನಾಡಿ ಮುಗಿಸಲಿ ಬಿಡಿ, ಸಭೆ ಮುಗಿಸೋಣ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** Sir, I am on a point of order.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ನೀವು ಸಮಯ ತೆಗೆದುಕೊಳ್ಳಿ, ಬೇಡ ಎನ್ನುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಮ್ಮ ಡಿಸಿಷನ್ ಮೇಲೆ ನಾವು ಮಾತನಾಡಬಹುದೇ, ಹೇಗೆ? How can he speak after the decision of the Chair.

(ಗೊಂದಲ)

**ಶ್ರೀ ರಾಮಚಂದ್ರಗೌಡ:-** ನೀವು ವರದಿಯನ್ನು ಮಂಡನೆ ಮಾಡಿಯೇ ಇಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಇವರು ವರದಿಯನ್ನು ಮಂಡಿಸುತ್ತೇವೆ ಎಂದು ಬಹಳ ಸ್ಪಷ್ಟವಾಗಿ ತಿಳಿಸಿದ್ದರು. ಆದರೆ, ವರದಿಯನ್ನು ಇನ್ನೂ ಮಂಡಿಸಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ರಿಸರ್ವ್ ಮಾಡಿರುವಾಗ ಆ ವಿಷಯದ ಬಗ್ಗೆ ಮತ್ತೆ ಮಾತನಾಡಲು ತಾವು ಅವಕಾಶ ಕೊಡಬಾರದು. ಆದರೆ ಮತ್ತೆ ಮಾತನಾಡಲು ತಾವು ಅವಕಾಶ ಕೊಡುತ್ತಿರುವುದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಡುವುದಕ್ಕೆ ಸಮಯ ತೆಗೆದುಕೊಂಡಿದ್ದೀರಿ, ತಾವು 1 ಗಂಟೆ, 2 ಗಂಟೆ ಅಥವಾ 3 ಗಂಟೆ ಸಮಯ ತೆಗೆದುಕೊಂಡು ಮತ್ತೆ ಕರೆಯಿರಿ. ಯಾವ ಕಾನೂನು ತಜ್ಞರನ್ನು ಕರೆಯುತ್ತೀರೋ ಕರೆಯಿರಿ. ಅಲ್ಲಿಯವರೆಗೆ ನಾವು ಸದನದಲ್ಲಿ ಧರಣಿ ಕುಳಿತುಕೊಳ್ಳುತ್ತೇವೆ. 1 ದಿನವಾಗಲಿ, 2 ದಿನವಾಗಲಿ 3 ದಿನವಾಗಲಿ, ಅದು ಕ್ಲಿಯರ್ ಆಗಬೇಕು. ನೀವು ಸಮಯ ತೆಗೆದುಕೊಳ್ಳಿ, ನೀವು ಸಮಯ ತೆಗೆದುಕೊಳ್ಳುವುದು ಬೇಡವೆನ್ನುವುದಿಲ್ಲ. ಆದರೆ, ನೀವು ಸಮಯ ತೆಗೆದುಕೊಂಡು ರೂಲಿಂಗ್ ಕೊಡುವವರೆಗೂ ನಾವು ಧರಣಿಯಲ್ಲಿರುತ್ತೇವೆ. ಹಗಲು ರಾತ್ರಿ ಸದನದ ಬಾವಿಯಲ್ಲಿಯೇ ಧರಣಿ ಕುಳಿತುಕೊಳ್ಳುತ್ತೇವೆ.

(ಗೊಂದಲ)

**(ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಒಳಗೊಂಡಂತೆ ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸಹ ಸದನದ ಬಾವಿಗೆ ಬಂದು ಧರಣಿ ಕುಳಿತರು)**

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಗಮನ ಕೊಡುವುದು ಮುಖ್ಯವೆನಿಸುತ್ತಿಲ್ಲ, ಕಳಸಾ-ಬಂಡೂರಿ ನಾಲೆ ಯೋಜನೆ ಇವರಿಗೆ ಮಹತ್ವ ಇಲ್ಲ. ಬರೀ ಧರಣಿ ಮಾಡುವುದರಲ್ಲಿಯೇ ಇರುತ್ತಾರೆ ನೋಡಿ ಇವರು. ರಾಜ್ಯದ ಜ್ವಲಂತ ನೀರಾವರಿ ಸಮಸ್ಯೆಗಳ ಬಗ್ಗೆ ಇವರಿಗೆ ಕಾಳಜಿ ಇಲ್ಲ. ಕಳಸಾ-ಬಂಡೂರಿ ನೀರಾವರಿ

ವಿಚಾರದಲ್ಲಿ ಇವರು ಈ ರೀತಿ ಧರಣಿ ಮಾಡಿದ್ದರೆ ರಾಜ್ಯದ ಜನತೆ ಇವರನ್ನು ಅಪ್ರಿಸಿಯೇಟ್ ಮಾಡುತ್ತಿದ್ದರು. ರಾಜ್ಯದ ಜನ ಇವರ ಮುಖಕ್ಕೆ ಮಂಗಳಾರತಿ ಎತ್ತುತ್ತಾರೆ. ಇವರು ಏನು ಮಾಡುತ್ತಿದ್ದಾರೆ, ಯಾವ ವಿಷಯದ ಮೇಲೆ ಮಾತನಾಡುತ್ತಾರೆ ಎಂಬುದನ್ನು ಈ ರಾಜ್ಯದ ಜನತೆ ನೋಡುತ್ತಿದ್ದಾರೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಯಾವ ಪ್ರಾವಿಜನ್ ಅಡಿಯಲ್ಲಿ ಇವರು ಪ್ರಸ್ತಾಪ ಮಾಡುತ್ತಿದ್ದಾರೆ?

**ಸಭಾಪತಿಯವರು:-** ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಿದ್ದೇನೆ.

**(ಸದನವನ್ನು ಸಂಜೆ 6 ಗಂಟೆ 45 ನಿಮಿಷಕ್ಕೆ 15 ನಿಮಿಷಗಳ ಕಾಲ ಮುಂದೂಡಲಾಯಿತು)**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಸಚಿವ ಸಂಪುಟ ಸಭೆಯಲ್ಲಿ ಪಾಸ್ ಮಾಡಿ ನಾವು ಸಂಜೆಯೇ ಹೇಳುತ್ತೇವೆ ಎನ್ನುವ ಅಂಶವನ್ನು ಮಾನ್ಯ ಕಾನೂನು ಮಂತ್ರಿಗಳಾದ ಜಯಚಂದ್ರರವರು ಹೇಳಿದರು. ಆಗ ಮಾನ್ಯ ಸಭಾನಾಯಕರು ಮತ್ತೊಂದು ದಿವಸ ಸಮಯ ಬೇಕಾಗುತ್ತದೆ, ಅವತ್ತೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಆಯಿತು, ಕೊನೆಗೆ ಎರಡನೇ ದಿನ ಮತ್ತೆ ಇಲ್ಲಿ ಕೇಳಿದಂತಹ ಸಂದರ್ಭದಲ್ಲಿ ವರದಿಯನ್ನು ಮಂಡನೆ ಮಾಡುತ್ತೇವೆ, ವರದಿ ಮಂಡನೆ ಮಾಡುವುದಕ್ಕೆ ನಮಗೆ ಸ್ವಲ್ಪ ಸಮಯ ಬೇಕೆಂದು ಅವರು ಮತ್ತೆ ಕೇಳಿದಾಗ ನಿಮ್ಮ ಕಛೇರಿಗೆ ಬಂದು ಹೇಳುತ್ತೇವೆಂದು ಕೊನೆಗೆ ಇಲ್ಲಿ ಒಪ್ಪಿಕೊಂಡರು. 5ನೇ ತಾರೀಖು ನಾವು ವರದಿ ಮಂಡನೆ ಮಾಡುತ್ತೇವೆಂದು ಹೇಳಿದರು. ಇದು ಮೊದಲನೆಯದು. ಎರಡನೆಯದು, ಈ ಕೋರ್ಟ್ ಆರ್ಡರ್‌ನ್ನು ತಮ್ಮ ಗಮನಕ್ಕೆ ತರುತ್ತೇನೆ. ಪೂರ್ತಿ ವಿವರಕ್ಕೆ ಹೋಗುವುದಿಲ್ಲ. The order passed by the Hon'ble High Court [W.P.No.19245/2015(GM-RES-PIL) decided on 10.09.2015] reads thus:

> "...that the report of the Karnataka State Minorities Commission submitted to the Hon'ble Chief Minister on March 26, 2012, shall be placed before both the Legislative Council and the Legislative Assembly of Karnataka in the February, 2016 session."

ಇಲ್ಲಿ ಏನು ಹೇಳಿದ್ದಾರೆಂದರೆ, "..the report of the Karnataka State Minorities Commission submitted to the Hon'ble Chief Minister.." ಅಂದರೆ ರಿಪೋರ್ಟ್ ಮಂಡನೆ ಮಾಡಬೇಕು ಎನ್ನುವ ಅಂಶವನ್ನು ಕೋರ್ಟ್ ಬಹಳ ಸ್ಪಷ್ಟವಾಗಿ ಹೇಳಿದೆ. ಮೂರನೆಯದು, ತಾವು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ, ಕೋರ್ಟ್ ಆದೇಶ ಏನಾಗಿದೆ ಎಂಬುದು, ಜೊತೆಗೆ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲೂ ಕೂಡ ನೀವು ವರದಿ ಮಂಡನೆ ಮಾಡುತ್ತೇವೆ ಎಂದು ಹೇಳಿದ್ದೀರಿ, ಮಾಡಿ ಎಂದು ಹೇಳಿದಾಗ ಮಾಡುತ್ತೇವೆಂದು ಕೂಡ ಅವರು ಒಪ್ಪಿಕೊಂಡರು. ಈ

ಮೂರು ಕೂಡ ವರದಿಯನ್ನು ಮಂಡನೆ ಮಾಡಬೇಕೆಂದು ಹೇಳಿದೆ. ಕೋರ್ಟ್‌ನಲ್ಲಿ ಆದೇಶ ಆಗಿದೆ, ಕಾರ್ಯ ಕಲಾಪ ಸಲಹಾ ಸಮಿತಿ ಸಭೆಯಲ್ಲೂ ತೀರ್ಮಾನ ಆಗಿದೆ, ತಾವು ಕೂಡ ಅದೇ ರೂಲಿಂಗ್ ಕೊಟ್ಟಿದ್ದೀರಿ. ಆ ಮೂರನ್ನು ಕೂಡ ಅವರು ಒಪ್ಪಿಕೊಂಡರು. ಈಗ ಯಾವುದೋ ಶಿಫಾರಸ್ಸನ್ನು ತಂದಿಟ್ಟು, ಅದೇ ವರದಿ ಅದನ್ನೇ ಒಪ್ಪಿಕೊಳ್ಳಿ ಎನ್ನುವ ಮಾತನ್ನು ಹೇಳಿದರೆ ಇದು ಯಾವ ನ್ಯಾಯ? ನಾನೇನು ಕಾನೂನು ತಜ್ಞ ಅಲ್ಲ. ಹೊರಗಡೆ ಸಾಮಾನ್ಯ ಜನ ಸರ್ಕಾರದ ಬಗ್ಗೆ ಏನು ಹೇಳಬಹುದು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಒಂದನೆಯದು, ಕೋರ್ಟ್ ಆದೇಶದ ಪ್ರಕಾರ ವರದಿ ಮಂಡನೆ ಮಾಡಬೇಕು. ಎರಡನೆಯದು, ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಅವರು ಒಪ್ಪಿಕೊಂಡಿರುವ ಪ್ರಕಾರ ವರದಿಯನ್ನೇ ಮಂಡನೆ ಮಾಡಬೇಕು. ಮೂರನೆಯದು, ತಾವೇ ರೂಲಿಂಗ್ ಕೊಟ್ಟಿರುವ ಪ್ರಕಾರ ವರದಿಯನ್ನು ಮಂಡನೆ ಮಾಡಬೇಕೆಂದು ಅವರು ಒಪ್ಪಿಕೊಂಡಿದ್ದರು. ಈ ಮೂರು ಅಂಶಗಳ ಪ್ರಕಾರ ವರದಿಯನ್ನು ಮಂಡನೆ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಬಹಳ ಮುಖ್ಯವಾಗಿ ಮಾನ್ಯ ಸದಸ್ಯರಾದ ಮಧುಸೂದನ್‌ರವರು ಶ್ರೀ ವಿಜಯಶಂಕರ್ ಅಡ್ವೋಕೇಟ್ ಜನರಲ್‌ರವರು ಕೊಟ್ಟಿರುವ ವರದಿಯನ್ನು ಓದುವ ಪ್ರಯತ್ನ ಮಾಡಿದರು. ತಮ್ಮ ಗಮನಕ್ಕೆ ತರುವುದೇನೆಂದರೆ, final word of the opinion ಏನಿದೆ ಎಂದರೆ "If the Special Report..." This is not an Annual Report. This is a Special Report. The concluding paragraph of the opinion of Sri S.Vijaya Shankar, the then Advocate General reads thus:

> "If the Special Report were to be placed before each House of the State Legislature as required by sub-section(2) of Section 10 of the 1994 Act, a Memorandum explaining the action proposed to be taken on the recommendations of the Commission is also to be placed before each House of the State Legislature."

The provision of the Act is also like that only. ಅದನ್ನು ನಾನು ಈಗಾಗಲೇ ಓದಿ ಹೇಳಿದ್ದೇನೆ. ಅದು ತಮಗೂ ಕೂಡ ಗೊತ್ತಿರತಕ್ಕಂಥದ್ದು. Section 10(2) of the Karnataka State Minorities Commission Act reads thus:

> "The Government shall cause the recommendations of the Commission to be laid before each House of the State Legislature along with the memorandum explaining the action taken or proposed to be taken ......"

ಈ ಹಿನ್ನೆಲೆಯಲ್ಲಿ ನಾನು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಭರವಸೆ ಕೊಟ್ಟಿರುವ ರೀತಿಯಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಮಾಡಿ ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ಸಾಧಕಬಾಧಕಗಳನ್ನು ಚರ್ಚೆ ಮಾಡುವುದರ ಜೊತೆಯಲ್ಲಿ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೂಡ ಕೇಳಿದ್ದೆವು. ಹಿಂದೆ ಶ್ರೀ ವಿಜಯಶಂಕರ್‌ರವರು ಕೊಟ್ಟಿರುವ ವರದಿಯ ಹಿನ್ನೆಲೆಯಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕೊಡಬೇಕೆಂದು ಅವರನ್ನು ಕೇಳಿದಾಗ, ಅವರ ಅಭಿಪ್ರಾಯವನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. I will only read the last paragraph i.e., the operative portion of the opinion.

**ಸಭಾಪತಿಯವರು:–** ತಾವು ಯಾವುದನ್ನು ಓದುತ್ತಿದ್ದೀರಿ?

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಈಗ ಅಡ್ವೋಕೇಟ್ ಜನರಲ್‌ರವರು (ಶ್ರೀ ಮಧುಸೂದನ್.ಆರ್.ನಾಯಕ್) ಕೊಟ್ಟಿರತಕ್ಕಂಥ ಅಭಿಪ್ರಾಯವನ್ನು ಓದುತ್ತಿದ್ದೇನೆ. ಪುಟ ಐದರಲ್ಲಿ ಇರತಕ್ಕಂಥದ್ದನ್ನು ಓದುತ್ತಿದ್ದೇನೆ. It reads thus:

> "9. .... The mandate of Section 10(2) contemplates the recommendations being laid before the House and therefore, in my opinion, it would be sufficient compliance, if the recommendations are placed

before the Legislature, along with the memorandum containing the reasons for non acceptance of the recommendation and would not necessarily include placing of the entire report.

10. On request by the concerned authorities (Hon'ble Home Minister adds: "That means, the Minorities Department), in fact, an application has been made before the Hon'ble High Court for extension of time-frame for compliance of the requirement under Section 10(2) of the Act, which only contemplates placing of the recommendations. The observations of the Court in the order dated 10.09.2015 are to be read in the context of the prayer made and so also the recording of the submissions on behalf of the Respondents. "

Even now this application before the High Court is pending. The Minorities Department has filed an application for compliance of the report. ಏಕೆಂದರೆ, ಕ್ಯಾಬಿನೆಟ್‌ನಲ್ಲಿ ಮಂಡನೆ ಆಗಲಿಲ್ಲ ಎನ್ನುವ ಕಾರಣಕೋಸ್ಕರ they have filed an application before the High Court and it is still pending before the High Court. It is pending for the adjudication. This is the situation. ಅದಕೋಸ್ಕರ ನಾನು ಹೇಳತಕ್ಕಂಥದ್ದು, ತಾವು ಅವರದ್ದು ಕೇಳಿದ್ದೀರಿ, ನಮ್ಮದು ಕೇಳಿದ್ದೀರಿ, ನಾವು ದಾಖಲಾತಿಗಳೆಲ್ಲವನ್ನು ಕೊಡುತ್ತೇವೆ,

ಮಾನ್ಯ ಸಭಾಪತಿಯವರೇ, ಇವತ್ತು ಕೊನೆಯ ದಿವಸ. ನಾವೆಲ್ಲರೂ ಕೂಡ ಇವತ್ತು ಮದುವೆಗಳಿಗೆ ಹೋಗಬೇಕು, ಹಬ್ಬ ಮಾಡಬೇಕು, ಇಂತಹ ಸಂದರ್ಭದಲ್ಲಿ ನಾವು ಹೇಗೂ 18ನೇ ತಾರೀಖು ಸದನ ಸೇರುತ್ತಿದ್ದೇವೆ. ಆ ಸಂದರ್ಭದಲ್ಲಿ ಹತ್ತು ದಿವಸಗಳಲ್ಲಿ ಇನ್ನೇನು ಆಗುವುದಿಲ್ಲ. Moreover, the matter is still pending in the High Court. This is the point that I want to stress before you. ಹಾಗಿದ್ದಾಗ, anything which contravenes that

becomes a violation. ಹಾಗೆ ಆಗುತ್ತದೆ. ದಯಮಾಡಿ ತಾವು ಉಭಯತ್ರರನ್ನು ಕೇಳಿದ್ದೀರಿ. ತಾವು ತೀರ್ಮಾನ ಕೊಡಿ. ಸದನವನ್ನು ಮುಂದಕ್ಕೆ ಹಾಕಿ 18ನೇ ತಾರೀಖಿಗೆ ನಾವು ಚರ್ಚೆ ಮಾಡೋಣ. ಅದರ ಮಧ್ಯದಲ್ಲೂ ನಮ್ಮನ್ನು ಕರೆದರೆ ನಾವು ಬಂದು ಮಾತನಾಡುವುದಕ್ಕೆ ತಯಾರಿದ್ದೇವೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾವು ಕೊಟ್ಟಿರುವ ವರದಿಯಲ್ಲಿ ತಾವು ಪುಟ 87 ಅನ್ನು ದಯಮಾಡಿ ನೋಡಿ. ಪುಟ ಸಂಖ್ಯೆ 87 ರಲ್ಲಿ Section 10(2) of the Karnataka State Minorities Commission Act ಬಗ್ಗೆ ಒಂದು ಅಭಿಪ್ರಾಯವನ್ನು ಹೇಳಿದ್ದಾರೆ. ಅದೇ ಆಕ್ಟ್‌ನಲ್ಲಿ ಸೆಕ್ಷನ್ 15 ಅನ್ನು ತಾವು ಓದಬೇಕು. ಸೆಕ್ಷನ್ 15 ರಲ್ಲಿ ಕೊನೆ ವಾಕ್ಯದಲ್ಲಿ ಏನು ಹೇಳುತ್ತಾರೆಂದರೆ:

> "….The Commission may, at its direction, submit from time to time, special reports on any matter of public importance to the Government."

ಅಂದರೆ, report means 'Special Report' also. ಸೆಕ್ಷನ್ 15 ಏನು ಹೇಳುತ್ತದೆಂದರೆ:

> "**15. Annual report and audit report to be laid before the State Legislature** .- The Government shall cause the annual report together with a memorandum of action taken on the recommendations contained therein, in so far as they relate to the State Government, and the reasons for the non-acceptance, if any, of any of such recommendations to be laid, as soon as may be, after the reports are received, before each House of the State Legislature. The Commission may, at its direction, submit from time to time, special reports on any matter of public importance to the Government."

"...any matter of public importance..." ಎನ್ನುವುದರಲ್ಲಿ 57,000 ಎಕರೆ ಜಾಗ ವಕ್ಫ್ ಆಸ್ತಿ ಅನಧಿಕೃತ ಪರಭಾರೆ ಆಗಿದೆ. Is it not the 'matter of public importance'? Does not the Karnataka State Minorities Commission has got the responsibility of reporting to the Government? Does not the Government has got the responsibility of placing this on the floor of the House as soon as possible, according to Section 15?

(ಮುಂದು)

(160) 5.3.2016 7.50 ಪಿಕೆ:ಜಿಆರ್

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

(ಸದನವು 7.52 ಪುನಃ ಸೇರಿತು. ಬಿಜೆಪಿ ಪಕ್ಷದ ಸದಸ್ಯರು ಬಾವಿಯೊಳಗೆ ಬಂದರು)

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಗಳೆ, ಮೂರು ಅಂಶಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ಕಾನೂನು ಸಚಿವರು, ಸಭಾನಾಯಕರು ಇದ್ದ ಸಂದರ್ಭದಲ್ಲಿ, ಸ್ಟೇಟ್ ಮೈನಾರಿಟಿ ಕಮಿಷನ್ ರಿಪೋರ್ಟನ್ನು ಮಂಡನೆ ಮಾಡಬೇಕು ಎಂದು ಪ್ರಸ್ತಾಪ ಮಾಡಿದಾಗ, ಅವರು, ಇದಕ್ಕೋಸ್ಕರವೇ ನಾಳೆ ಬೆಳಿಗ್ಗೆ ವಿಶೇಷವಾದ ಸಚಿವ ಸಂಪುಟ ಸಭೆಯನ್ನು ಕರೆದಿದ್ದೇವೆ, ಅಲ್ಲಿ ಪಾಸ್ ಮಾಡಿ, ಸಂಜೆಯೇ ಮಂಡನೆ ಮಾಡುತ್ತೇವೆ ಎನ್ನುವ ಅಂಶವನ್ನು ಹೇಳಿದರು.

(ಮುಂದು . . .)

**ಶ್ರೀ ಗೋ. ಮದುಸೂಧನ್**(ಮುಂದು. . .)

ಮತ್ತೆ, ಇನ್ನೊಂದು ಅಂಶ ಏನೆಂದರೆ, ಹಿಂದಿನ ಸರ್ಕಾರ ಈ ವಿಚಾರವನ್ನು ಎರಡು ಬಾರಿ ಕ್ಯಾಬಿನೆಟ್ ಮುಂದೆ ತಂದಿದೆ. ನಾವು ಕೊಟ್ಟಿರುವಂತಹ ವರದಿಯ ಕೊನೆಯ ಪುಟವನ್ನು ತಾವು ದಯವಿಟ್ಟು ತೆಗೆದು ನೋಡಿ. ಪುಟ ಸಂಖ್ಯೆ 288 ಅನ್ನು ನೋಡಿ. ಇದರಲ್ಲಿ ಆರ್.ಚಂದ್ರಶೇಖರ್, ಶಾಖಾಧಿಕಾರಿ, ಸಚಿವ ಸಂಪುಟ ಶಾಖೆ ಇವರಿಗೆ ಇದನ್ನು ತಾವು ಎಂದಾದರೂ ಕ್ಯಾಬಿನೆಟ್ ಮುಂದೆ ಇಟ್ಟಿದ್ದೀರಾ ಎಂದು ನಮ್ಮ ಸಮಿತಿ ವತಿಯಿಂದ ಕೇಳಿದೆವು. ಏನು ವಿಚಾರವೆಂದು ಅವರಿಗೆ ಕೇಳಿದೆವು. ಅದಕ್ಕೆ ಅವರಿಂದ ನಮಗೆ ಉತ್ತರ ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಂದ ಬರೆದ ಅರೆ ಸರ್ಕಾರಿ ಪತ್ರ, ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗದ ವರದಿ ಕುರಿತಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 3–1–2013 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ವರದಿ ಕುರಿತ ವಿಷಯವು ಚರ್ಚೆಗೆ ಬಂದಿದ್ದು, ಸಚಿವ ಸಂಪುಟದ ನಿರ್ಣಯದೊಂದಿಗೆ ಸಂಬಂಧಪಟ್ಟ ಕಡತ ಎಂಡಬ್ಲ್ಯೂಡಿ 38 ಎಲ್ಎಂಆರ್ 2012 ಅನ್ನು ಇಲಾಖೆಗೆ ಹಿಂದಿರುಗಿಸಲಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ನಿರ್ಣಯದ ಅನುಷ್ಠಾನ ವರದಿಯೂ ಸಚಿವ ಸಂಪುಟ ಶಾಖೆಯಲ್ಲಿ ಸ್ವೀಕೃತವಾಗಿಲ್ಲ. ಉಲ್ಲೇಖಿತ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಪ್ರತಿ ಲಗತ್ತಿಸಿದೆ. ಈ ವಿಚಾರವನ್ನು ತಮ್ಮ ಗಮನಸೆಳೆಯುತ್ತಾ, ಸದರಿ ವಿಷಯದಲ್ಲಿ ಸಚಿವ ಸಂಪುಟದ ನಿರ್ಣಯದ ಅನುಷ್ಠಾನ ವರದಿಯನ್ನು ಶೀಘ್ರವಾಗಿ ಸಚಿವ ಸಂಪುಟ ಶಾಖೆಗೆ ಒದಗಿಸಬೇಕೆಂದು ಕೋರಲಾಗಿದೆ. ಅಂದರೆ, ಅದರ ಅರ್ಥ, ಈ ವಿಷಯ ಆಗಲೇ ಸಚಿವ ಸಂಪುಟದ ಮುಂದೆ ಬಂದಿತ್ತು, ನಿರ್ಣಯ ಆಗಿತ್ತು, ಅದರ ಅನುಪಾತ ವರದಿಯನ್ನು ಕೊಡಿ ಎಂದು ಕೇಳಲಾಗಿತ್ತು. ಇದರ ಹಿಂದಿನ ಪುಟ ಸಂಖ್ಯೆ 287 ಅನ್ನು ನೋಡಿ.

**Sri T.B. JAYACHANDRA:** This is only a correspondence.

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಇನ್ನು 5 ನಿಮಿಷಗಳ ಕಾಲ ಅವಕಾಶ ಕೊಡಿ. ಅವರು ಹೇಳಲಿಕ್ಕೆ ಬಿಡಲಿಲ್ಲವೆಂದರೆ ಹೇಗೆ?

**ಶ್ರೀ ಗೋ.ಮದುಸೂಧನ್:–** ಶರಣಪ್ಪನವರು ಎಂದು ಹೇಳಿ, ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಪುಟ ನಂಬರ್ 287 ರಲ್ಲಿ ಅಲ್ಪಸಂಖ್ಯಾತರ

ಆಯೋಗದ ವರದಿ ಕುರಿತಂತೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ನಿರ್ಣಯದ ಬಗ್ಗೆ ಅನುಷ್ಠಾನದ ವರದಿಯನ್ನು ಒದಗಿಸುವಂತೆ ಉಲ್ಲೇಖ 2ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದ್ದು, ಈ ಬಗ್ಗೆ ತಮ್ಮ ಇಲಾಖೆಯಿಂದ ಯಾವುದೇ ಮಾಹಿತಿ ಸ್ವೀಕಾರವಾಗಿರುವುದಿಲ್ಲ. ದಿನಾಂಕ: 3–1–2013 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸದರಿ ವಿಷಯದ ಕುರಿತು ಸಚಿವ ಸಂಪುಟ ಟಿಪ್ಪಣೆಯಲ್ಲಿ ಮಾಡಲಾದ ಸಲಹೆಗಳನ್ನು ಅನುಮೋದಿಸಿ, ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮ ಜರುಗಿಸಲು ನಿರ್ಧರಿಸಲಾಯಿತು. ತದನಂತರದ ಬೆಳವಣಿಗೆಯ ಕುರಿತು ಈ ಶಾಖೆಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಆದ್ದರಿಂದ, ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ಇವರು ಕೋರಿರುವ ಮಾಹಿತಿಯನ್ನು ಸಂಬಂಧಪಟ್ಟ ಕಡತಗಳ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ನಿಯಮಾನುಸಾರ ಪರಿಶೀಲಿಸಿ, ಕ್ರೋಡೀಕೃತ ಮಾಹಿತಿಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನೇರವಾಗಿ ಒದಗಿಸುವಂತೆ ಕೋರಲಾಗಿದೆ ಎಂದು ಹೇಳಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಪತ್ರ ಬರೆದಿದ್ದಾರೆ. ಅಂದರೆ, ಇದರ ಅರ್ಥ ಏನೆಂದರೆ, ಸಚಿವ ಸಂಪುಟ ಸಭೆಯಲ್ಲಿ ಎರಡು ಬಾರಿ ಈ ವಿಚಾರ ಬಂದಿದ್ದು, ಚರ್ಚೆಯಾಗಿ ನಿರ್ಣಯವಾಗಿದೆ. ಒಟ್ಟು 3 ನಿರ್ಣಯಗಳಾಗಿವೆ. ಒಂದನೆಯದಾಗಿ, ಇಲ್ಲಿ ಏನು ಅವ್ಯವಹಾರ ನಡೆದಿದೆ, ಇದರ ಬಗ್ಗೆ ಕೂಲಂಕಷ ತನಿಖೆ ಮಾಡುವುದಕ್ಕೋಸ್ಕರವಾಗಿ ಲೋಕಾಯುಕ್ತರಿಗೆ ತನಿಖೆಗೆ ಆದೇಶ ಮಾಡಬೇಕು. 7(2)(ಎ) ಪ್ರಕಾರವಾಗಿ ಸರ್ಕಾರವೇ ದೂರನ್ನು ಕೊಟ್ಟು ಅದನ್ನು lodge ಮಾಡಿ ಆಗಿ ಹೋಗಿದೆ. ಅದರ ದಾಖಲೆಗಳು ಅದರಲ್ಲಿ ಇವೆ. ಇನ್ನು ಅಲ್ಲಿ ನಡೆದಿರುವಂತಹ ಅವ್ಯವಹಾರದ ಬಗ್ಗೆ ನಮ್ಮ State Accounts Department ನವರು ಒಂದು ತನಿಖೆಯನ್ನು ಮಾಡಿ, ಅದರ ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಇದು ಎರಡನೆಯ ವಿಚಾರ. ಇನ್ನು ಮೂರನೆಯದಾಗಿ, ಪರಭಾರೆಯಾಗಿರುವ ಆ ಎಲ್ಲಾ ಆಸ್ತಿಗಳನ್ನು ವಾಪಸ್ಸು ಪಡೆಯುವುದಕ್ಕೋಸ್ಕರವಾಗಿ ಒಂದು ಟಾಸ್ಕ್ ಫೋರ್ಸ್ ಮಾಡಿ ಎಂದು ಕೇಳಿದರು. A Task Force at the district level in the Chairmanship of the Deputy Commissioner and at the state level in the Chairmanship of the Chief Secretary ಮಾಡಬೇಕೆಂದು ಹೇಳಿದ್ದಾರೆ. ಅದು ಎರಡನ್ನು ಮಾಡಲಾಗಿದೆ. ಅದರ ವರದಿಯ ಅನುಪಾಲನೆಯಾಗಿರುವುದು ತಮ್ಮ ಹತ್ತಿರ ಇದೆ. Recommendations of the Cabinet have been already fulfilled. ಆದರೆ, ಅದರ ಅನುಪಾಲನಾ ವರದಿ ಬಂದಿಲ್ಲವೆಂದು

ಕೇಳುತ್ತಿದ್ದಾರೆ. ಅಲ್ಲಿ ಅನುಪಾಲನೆ ಆಗಿರುವುದರ ಬಗ್ಗೆ ನಮ್ಮ ವರದಿಯಲ್ಲಿ ಮಾಹಿತಿ ಇದೆ. ಇನ್ನು ಅಂದಿನ ಅಡ್ವೋಕೇಟ್ ಜನರಲ್ ರವರು ಏನು ಒಂದು ಅಭಿಪ್ರಾಯವನ್ನು ಕೊಟ್ಟಿದ್ದರು, ಎನ್ನುವುದರ ಬಗ್ಗೆ ಪುಟ ಸಂಖ್ಯೆ 263 ಅನ್ನು ನೋಡಿ. It reads as follows:-

> "On examining the Special Report of the Commission, if the State Government were to form the opinion that the Board is to be superseded…"

ವಕ್ಫ್ ಬೋರ್ಡ್ ಅನ್ನು ಸೂಪರ್‌ಸೀಡ್ ಮಾಡಿ ಎಂದು ತಮ್ಮ recommendation ನ್ನು ಕೊಟ್ಟಿದ್ದರು.

> "…notice to show cause must be issued under the proviso to sub-section (1) of Section 99."

ಅದನ್ನು ಬಿಟ್ಟು ಬಿಟ್ಟರು. ಸೂಪರ್‌ಸೀಡ್ ಮಾಡುವ ಪ್ರಶ್ನೆ ಇಲ್ಲ.

> "…If the Special Report were to be placed before each House of the State Legislature as required by sub-section (2) of Section 10 of the 1994 Act, a Memorandum explaining the action proposed to be taken on the recommendations of the Commission is also to be placed…"

ಅಂದರೆ, ನೀವು ವರದಿಯನ್ನು ಕೊಡಬೇಕಾದರೆ ನೀವು Action Taken Report ಅನ್ನು ಸಹ ಸದನದಲ್ಲಿ ಮಂಡಿಸಬೇಕೆಂದು ಹೇಳಿದ್ದಾರೆಯೇ ವಿನ: ಬರಿ ATR submit ಮಾಡಿಬಿಟ್ಟು, ರಿಪೋರ್ಟ್ ಅನ್ನೇ ಗಯಾಬ್(ಮಾಯ) ಮಾಡಿ ಎಂದು ಹೇಳಿಲ್ಲ. ಇಲ್ಲಿ ನಡೆದಿರುವುದೇನೆಂದರೆ, ಇಲ್ಲಿ ವರದಿಯನ್ನೇ ಕೊಡುವುದಿಲ್ಲ, ಬರಿ ATR ಕೊಡುತ್ತೇವೆಂದು ಹೇಳುತ್ತಿದ್ದೀರಿ.

(ಗೊಂದಲ)

**Sri T.B. JAYACNAHDRA:** The Cabinet has rejected all the suggestions of the Commission. ದಯಮಾಡಿ ಮಂಡನೆ ಮಾಡಿರುವಂತಹ ರಿಪೋರ್ಟ್ ಅನ್ನು ನೋಡಿ. The Cabinet has rejected.

**ಶ್ರೀ ಗೋ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರ ತೆಗೆದುಕೊಂಡಿರುವಂತಹ ನಿರ್ಣಯ, ಹಿಂದಿನ ಸರ್ಕಾರ ಮಾಡಿರುವಂತಹ ತೀರ್ಮಾನ, ಹಿಂದಿನ ಕ್ಯಾಬಿನೆಟ್ ತೀರ್ಮಾನ ಮಾಡಿರುವಂತಹದ್ದಾಗಿದೆ. ಅದನ್ನು ಆಗಲೇ ಲೋಕಾಯುಕ್ತಕ್ಕೆ State Accounts Department ನವರಿಗೆ ಆದೇಶ ಕೊಟ್ಟಾಗಿದೆ. ಟಾಸ್ಕ್ ಪೋರ್ಸ್ ಮಾಡಿ ಆಗಿದೆ. ಅಮೇಲೆ ಬಂದಂತಹ ಸರ್ಕಾರ ಅದನ್ನು ತಿರಸ್ಕಾರ ಮಾಡಬಹುದೇ? ನಾನು ಹೇಳುವುದೇನೆಂದರೆ, Government is a continuous body. 2–3 ವರ್ಷಗಳ ನಂತರದಲ್ಲಿ ಹಿಂದಿನ ಸರ್ಕಾರ ತೆಗೆದುಕೊಂಡಿರುವಂತಹ ನಿರ್ಣಯವನ್ನು ಇವರು ತಿರಸ್ಕಾರ ಮಾಡಲಿಕ್ಕೆ ಯಾರು ಅಧಿಕಾರ ಕೊಡುತ್ತಾರೆ? How can they reject it? Now they have to only place.

ಎರಡನೆಯದಾಗಿ, ಇದನ್ನು ನೀವು ಜನರಿಗೆ ಹೇಳಿದ್ದರೆ, ನಿಮಗೆ ಒಂದು ಓಟು ಸಹ ಬೀಳುತ್ತಿರಲಿಲ್ಲ. ಮಾನ್ಯ ಸಭಾಪತಿಯವರೆ, ನಾನು ಇನ್ನೊಂದು ಸಂಗತಿಯನ್ನು ಹೇಳಲಿಕ್ಕೆ ಬಯಸುತ್ತೇನೆ. ನೀವು ಪುಟ ಸಂಖ್ಯೆ 52–53 ನೋಡಿ.

(ಗೊಂದಲ)

**ಸಭಾಪತಿಯವರು:–** ಅವರು ಹೇಳುವುದನ್ನು ನೀವು 5 ನಿಮಿಷ ಕೇಳಲಿಲ್ಲವೆಂದರೆ ಹೇಗೆ? ನಾನು ಇದರ ಬಗ್ಗೆ ನಿರ್ಣಯ ಕೊಡಬೇಕಲ್ಲವೇ? ನಾನು ನಿರ್ಣಯ ಕೊಡಲಿಕ್ಕೆ ತಾವುಗಳು ಸಹಕಾರ ಮಾಡಿ. ನಾನು ಈ ಬಗ್ಗೆ ನಿರ್ಣಯ ಕೊಡುತ್ತೇನೆ.

**ಶ್ರೀ ಗೊ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಪುಟ ಸಂಖ್ಯೆ 52–53 ಅನ್ನು ನೋಡಿ. ಇದನ್ನು ನಮ್ಮ ಅನಿಲ್‌ಕುಮಾರ್ ಎನ್ನುವವರು ಈ ಒಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿ

ಕೆಲಸ ನಿರ್ವಹಿಸುತ್ತಿದ್ದು, ನಾವು ಅವರಿಗೆ ಪ್ರಶ್ನೆಗಳನ್ನು ಕೇಳಲಾಗಿದ್ದು, ಅವರು ನಮ್ಮ ಸಮಿತಿಗೆ ಅಧಿಕೃತವಾಗಿ ಬರೆದಿರುವಂತಹ ಸರ್ಕಾರಿ ಪತ್ರವಾಗಿದ್ದು, ಸದರಿ ಪತ್ರದಲ್ಲಿ ಇವುಗಳಿಗೆ ಲಿಖಿತವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಪುಟ ಸಂಖ್ಯೆ 52 ರಲ್ಲಿ ಏನು ಹೇಳುತ್ತಾರೆಂದರೆ ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 11–05–2012 ರಲ್ಲಿ ಆಯೋಗದ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ಕ್ಯಾಬಿನೆಟ್ ಶಿಫಾರಸ್ಸಿನ ಪ್ರಕಾರ ರಚಿಸಲಾಗಿತ್ತು. ತದನಂತರ, ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 30–05–2012 ರಂದು ಹಿಂಪಡೆಯಲಾಗಿದೆ. ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ವರದಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಮಾನ್ಯ ಲೋಕಾಯುಕ್ತ ಅಂತಹ ವೃತ್ತಿಪರ ಸಂಸ್ಥೆಯೊಂದರಿಂದ ತನಿಖೆ ಮಾಡುವುದು ಸೂಕ್ತವೆಂದು, ಅಗತ್ಯವೆಂದು ಭಾವಿಸಿ, ಕರ್ನಾಟಕ ಲೋಕಾಯುಕ್ತ ನಿಯಮಗಳ, 1984 ನಿಯಮ 7(2)(ಎ) ಅನುಸಾರ ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 04–07–2012 ರಂದು ಸದರಿ ಪ್ರಕರಣದ ತನಿಖೆಯನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. ಮಾನ್ಯ ಉಪ ಲೋಕಾಯುಕ್ತರಿಂದ ವರದಿಯನ್ನು ನಿರೀಕ್ಷಿಸಲಾಗಿದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದವರು ಸಲ್ಲಿಸಿರುವ ವಕ್ಫ್ ಸಂಸ್ಥೆಯ ಸ್ವತ್ತಿನ ದುರ್ಬಳಕೆಯ ವರದಿಯನ್ನು ದಿನಾಂಕ: 10–12–2012 ರಂದು ಮತ್ತು ದಿನಾಂಕ: 3–1–2013 ರಂದು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿದ್ದು, ಈ ವಿಷಯದ ಕುರಿತು ಮಾನ್ಯ ಅಡ್ವೋಕೇಟ್ ಜನರಲ್, ಕರ್ನಾಟಕ ಇವರ ಈ ಕೆಳಕಂಡ ಅಭಿಪ್ರಾಯಗಳನ್ನು ಅನುಮೋದಿಸಲು ತೀರ್ಮಾನಿಸಲಾಗಿದೆ. ತನ್ನ ಅಭಿಪ್ರಾಯವನ್ನು ಏನು ಅಡ್ವೋಕೇಟ್ ಜನರಲ್‌ರವರು ಕೊಟ್ಟರು, ಅದನ್ನು ಅನುಮೋದಿಸಲು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಲಾಗಿದೆ. It is not just an opinion. The opinion given by the Advocate General has been endorsed by the Cabinet. It has been accepted by the Cabinet. ಅದರಲ್ಲಿ ಪಾಯಿಂಟ್ ನಂಬರ್ 2 ಏನು ಹೇಳುತ್ತದೆ ಎಂದರೆ,

> "If the Special Report were to be placed before each House of the State Legislature as required by sub-section (2) of Section 10 of the 1994 Act, a Memorandum explaining the action proposed to be taken on the

recommendations of the Commission is also to be placed…"

It says, "…is also to be placed…" along with the report.

"…before each House of the State Legislature."

ಮಾನ್ಯ ಸಭಾಪತಿಯವರೆ, ಇದೆಲ್ಲದರ ನಡುವೆ ನಾನು ಪ್ರಸ್ತಾಪ ಮಾಡಿರುವಂತಹದ್ದು, ನಮ್ಮ ಸಮಿತಿ ಕೊಟ್ಟಿರುವಂತಹ ವರದಿಯೂ ಸಹ ಈ ಒಂದು ವಿಶೇಷ ವರದಿಯನ್ನು ಸದನದಲ್ಲಿ ಮಂಡಿಸಿ. ಅದರಲ್ಲೂ, ನಮ್ಮ 2013–15ನೇ ಸಾಲಿನ ಹಕ್ಕುಭಾದ್ಯತಾ ಸಮಿತಿಯ ಶಿಫಾರಸ್ಸು ಇದೆ. ಇದು ಒಂದು unanimous report. ಇದರಲ್ಲಿ ಜನತಾದಳ ಮತ್ತು ಕಾಂಗ್ರೆಸ್‌ನ ಸದಸ್ಯರೂ ಇದ್ದರು. ಇದು ಸದನದ್ದು, ಸಮಿತಿಯದ್ದು unanimous report. ಅದರ ಆಧಾರದ ಮೇಲೆ ವಿಶೇಷ ವರದಿಯನ್ನು ಮಂಡಿಸಿ ಎಂದೇ ತಾವು ಸಹ ರೂಲಿಂಗ್ ಕೊಟ್ಟಿರುವಂತದ್ದಾಗಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ಈಗ ಸರ್ಕಾರ ನಾವು ವರದಿಯನ್ನು ಮಂಡಿಸುವುದಿಲ್ಲ, action taken ಮಾತ್ರ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಆದರೆ, ಕ್ರಮ ಏನೂ ತೆಗೆದುಕೊಳ್ಳುವುದಿಲ್ಲ.

**ಮುಂದು. . .**

**ಶ್ರೀ ಗೋ. ಮದುಸೂಧನ್**(ಮುಂದು. . .)

ಮತ್ತೆ, ಇನ್ನೊಂದು ಅಂಶ ಏನೆಂದರೆ, ಹಿಂದಿನ ಸರ್ಕಾರ ಈ ವಿಚಾರವನ್ನು ಎರಡು ಬಾರಿ ಕ್ಯಾಬಿನೆಟ್ ಮುಂದೆ ತಂದಿದೆ. ನಾವು ಕೊಟ್ಟಿರುವಂತಹ ವರದಿಯ ಕೊನೆಯ ಪುಟವನ್ನು ತಾವು ದಯವಿಟ್ಟು ತೆಗೆದು ನೋಡಿ. ಪುಟ ಸಂಖ್ಯೆ 288 ಅನ್ನು ನೋಡಿ. ಇದರಲ್ಲಿ ಆರ್.ಚಂದ್ರಶೇಖರ್, ಶಾಖಾಧಿಕಾರಿ, ಸಚಿವ ಸಂಪುಟ ಶಾಖೆ ಇವರಿಗೆ ಇದನ್ನು ತಾವು ಎಂದಾದರೂ ಕ್ಯಾಬಿನೆಟ್ ಮುಂದೆ ಇಟ್ಟಿದ್ದೀರಾ ಎಂದು ನಮ್ಮ ಸಮಿತಿ ವತಿಯಿಂದ ಕೇಳಿದೆವು. ಏನು ವಿಚಾರವೆಂದು ಅವರಿಗೆ ಕೇಳಿದೆವು. ಅದಕ್ಕೆ ಅವರಿಂದ ನಮಗೆ ಉತ್ತರ ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಂದ ಬರೆದ ಅರೆ ಸರ್ಕಾರಿ ಪತ್ರ, ಕರ್ನಾಟಕ ಅಲ್ಪ ಸಂಖ್ಯಾತರ ಆಯೋಗದ ವರದಿ ಕುರಿತಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 3–1–2013 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ವರದಿ ಕುರಿತ ವಿಷಯವು ಚರ್ಚೆಗೆ ಬಂದಿದ್ದು, ಸಚಿವ ಸಂಪುಟದ ನಿರ್ಣಯದೊಂದಿಗೆ ಸಂಬಂಧಪಟ್ಟ ಕಡತ ಎಂಡಬ್ಲ್ಯೂಡಿ 38 ಎಲ್ಎಂಆರ್ 2012 ಅನ್ನು ಇಲಾಖೆಗೆ ಹಿಂದಿರುಗಿಸಲಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ನಿರ್ಣಯದ ಅನುಷ್ಠಾನ ವರದಿಯೂ ಸಚಿವ ಸಂಪುಟ ಶಾಖೆಯಲ್ಲಿ ಸ್ವೀಕೃತವಾಗಿಲ್ಲ. ಉಲ್ಲೇಖಿತ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಪ್ರತಿ ಲಗತ್ತಿಸಿದೆ. ಈ ವಿಚಾರವನ್ನು ತಮ್ಮ ಗಮನಸೆಳೆಯುತ್ತಾ, ಸದರಿ ವಿಷಯದಲ್ಲಿ ಸಚಿವ ಸಂಪುಟದ ನಿರ್ಣಯದ ಅನುಷ್ಠಾನ ವರದಿಯನ್ನು ಶೀಘ್ರವಾಗಿ ಸಚಿವ ಸಂಪುಟ ಶಾಖೆಗೆ ಒದಗಿಸಬೇಕೆಂದು ಕೋರಲಾಗಿದೆ. ಅಂದರೆ, ಅದರ ಅರ್ಥ, ಈ ವಿಷಯ ಆಗಲೇ ಸಚಿವ ಸಂಪುಟದ ಮುಂದೆ ಬಂದಿತ್ತು, ನಿರ್ಣಯ ಆಗಿತ್ತು, ಅದರ ಅನುಪಾತ ವರದಿಯನ್ನು ಕೊಡಿ ಎಂದು ಕೇಳಲಾಗಿತ್ತು. ಇದರ ಹಿಂದಿನ ಪುಟ ಸಂಖ್ಯೆ 287 ಅನ್ನು ನೋಡಿ.

**Sri T.B. JAYACHANDRA:** This is only a correspondence.

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಇನ್ನು 5 ನಿಮಿಷಗಳ ಕಾಲ ಅವಕಾಶ ಕೊಡಿ. ಅವರು ಹೇಳಲಿಕ್ಕೆ ಬಿಡಲಿಲ್ಲವೆಂದರೆ ಹೇಗೆ?

**ಶ್ರೀ ಗೋ.ಮದುಸೂಧನ್:–** ಶರಣಪ್ಪನವರು ಎಂದು ಹೇಳಿ, ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಪುಟ ನಂಬರ್ 287 ರಲ್ಲಿ ಅಲ್ಪಸಂಖ್ಯಾತರ

ಆಯೋಗದ ವರದಿ ಕುರಿತಂತೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ನಿರ್ಣಯದ ಬಗ್ಗೆ ಅನುಷ್ಠಾನದ ವರದಿಯನ್ನು ಒದಗಿಸುವಂತೆ ಉಲ್ಲೇಖ 2ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದ್ದು, ಈ ಬಗ್ಗೆ ತಮ್ಮ ಇಲಾಖೆಯಿಂದ ಯಾವುದೇ ಮಾಹಿತಿ ಸ್ವೀಕಾರವಾಗಿರುವುದಿಲ್ಲ. ದಿನಾಂಕ: 3–1–2013 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸದರಿ ವಿಷಯದ ಕುರಿತು ಸಚಿವ ಸಂಪುಟ ಟಿಪ್ಪಣೆಯಲ್ಲಿ ಮಾಡಲಾದ ಸಲಹೆಗಳನ್ನು ಅನುಮೋದಿಸಿ, ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮ ಜರುಗಿಸಲು ನಿರ್ಧರಿಸಲಾಯಿತು. ತದನಂತರದ ಬೆಳವಣಿಗೆಯ ಕುರಿತು ಈ ಶಾಖೆಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಆದ್ದರಿಂದ, ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ಇವರು ಕೋರಿರುವ ಮಾಹಿತಿಯನ್ನು ಸಂಬಂಧಪಟ್ಟ ಕಡತಗಳ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ನಿಯಮಾನುಸಾರ ಪರಿಶೀಲಿಸಿ, ಕ್ರೋಡೀಕೃತ ಮಾಹಿತಿಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನೇರವಾಗಿ ಒದಗಿಸುವಂತೆ ಕೋರಲಾಗಿದೆ ಎಂದು ಹೇಳಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಪತ್ರ ಬರೆದಿದ್ದಾರೆ. ಅಂದರೆ, ಇದರ ಅರ್ಥ ಏನೆಂದರೆ, ಸಚಿವ ಸಂಪುಟ ಸಭೆಯಲ್ಲಿ ಎರಡು ಬಾರಿ ಈ ವಿಚಾರ ಬಂದಿದ್ದು, ಚರ್ಚೆಯಾಗಿ ನಿರ್ಣಯವಾಗಿದೆ. ಒಟ್ಟು 3 ನಿರ್ಣಯಗಳಾಗಿವೆ. ಒಂದನೆಯದಾಗಿ, ಇಲ್ಲಿ ಏನು ಅವ್ಯವಹಾರ ನಡೆದಿದೆ, ಇದರ ಬಗ್ಗೆ ಕೂಲಂಕಷ ತನಿಖೆ ಮಾಡುವುದಕ್ಕೋಸ್ಕರವಾಗಿ ಲೋಕಾಯುಕ್ತರಿಗೆ ತನಿಖೆಗೆ ಆದೇಶ ಮಾಡಬೇಕು. 7(2)(ಎ) ಪ್ರಕಾರವಾಗಿ ಸರ್ಕಾರವೇ ದೂರನ್ನು ಕೊಟ್ಟು ಅದನ್ನು lodge ಮಾಡಿ ಆಗಿ ಹೋಗಿದೆ. ಅದರ ದಾಖಲೆಗಳು ಅದರಲ್ಲಿ ಇವೆ. ಇನ್ನು ಅಲ್ಲಿ ನಡೆದಿರುವಂತಹ ಅವ್ಯವಹಾರದ ಬಗ್ಗೆ ನಮ್ಮ State Accounts Department ನವರು ಒಂದು ತನಿಖೆಯನ್ನು ಮಾಡಿ, ಅದರ ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಇದು ಎರಡನೆಯ ವಿಚಾರ. ಇನ್ನು ಮೂರನೆಯದಾಗಿ, ಪರಭಾರೆಯಾಗಿರುವ ಆ ಎಲ್ಲಾ ಆಸ್ತಿಗಳನ್ನು ವಾಪಸ್ಸು ಪಡೆಯುವುದಕ್ಕೋಸ್ಕರವಾಗಿ ಒಂದು ಟಾಸ್ಕ್ ಫೋರ್ಸ್ ಮಾಡಿ ಎಂದು ಕೇಳಿದರು. A Task Force at the district level in the Chairmanship of the Deputy Commissioner and at the state level in the Chairmanship of the Chief Secretary ಮಾಡಬೇಕೆಂದು ಹೇಳಿದ್ದಾರೆ. ಅದು ಎರಡನ್ನು ಮಾಡಲಾಗಿದೆ. ಅದರ ವರದಿಯ ಅನುಪಾಲನೆಯಾಗಿರುವುದು ತಮ್ಮ ಹತ್ತಿರ ಇದೆ. Recommendations of the Cabinet have been already fulfilled. ಆದರೆ, ಅದರ ಅನುಪಾಲನಾ ವರದಿ ಬಂದಿಲ್ಲವೆಂದು

ಕೇಳುತ್ತಿದ್ದಾರೆ. ಅಲ್ಲಿ ಅನುಪಾಲನೆ ಆಗಿರುವುದರ ಬಗ್ಗೆ ನಮ್ಮ ವರದಿಯಲ್ಲಿ ಮಾಹಿತಿ ಇದೆ. ಇನ್ನು ಅಂದಿನ ಅಡ್ವೋಕೇಟ್ ಜನರಲ್ ರವರು ಏನು ಒಂದು ಅಭಿಪ್ರಾಯವನ್ನು ಕೊಟ್ಟಿದ್ದರು, ಎನ್ನುವುದರ ಬಗ್ಗೆ ಪುಟ ಸಂಖ್ಯೆ 263 ಅನ್ನು ನೋಡಿ. It reads as follows:-

> "On examining the Special Report of the Commission, if the State Government were to form the opinion that the Board is to be superseded…"

ವಕ್ಫ್ ಬೋರ್ಡ್ ಅನ್ನು ಸೂಪರ್‌ಸೀಡ್ ಮಾಡಿ ಎಂದು ತಮ್ಮ recommendation ನ್ನು ಕೊಟ್ಟಿದ್ದರು.

> "…notice to show cause must be issued under the proviso to sub-section (1) of Section 99."

ಅದನ್ನು ಬಿಟ್ಟು ಬಿಟ್ಟರು. ಸೂಪರ್‌ಸೀಡ್ ಮಾಡುವ ಪ್ರಶ್ನೆ ಇಲ್ಲ.

> "…If the Special Report were to be placed before each House of the State Legislature as required by sub-section (2) of Section 10 of the 1994 Act, a Memorandum explaining the action proposed to be taken on the recommendations of the Commission is also to be placed…"

ಅಂದರೆ, ನೀವು ವರದಿಯನ್ನು ಕೊಡಬೇಕಾದರೆ ನೀವು Action Taken Report ಅನ್ನು ಸಹ ಸದನದಲ್ಲಿ ಮಂಡಿಸಬೇಕೆಂದು ಹೇಳಿದ್ದಾರೆಯೇ ವಿನ: ಬರಿ ATR submit ಮಾಡಿಬಿಟ್ಟು, ರಿಪೋರ್ಟ್ ಅನ್ನೇ ಗಯಾಬ್(ಮಾಯ) ಮಾಡಿ ಎಂದು ಹೇಳಿಲ್ಲ. ಇಲ್ಲಿ ನಡೆದಿರುವುದೇನೆಂದರೆ, ಇಲ್ಲಿ ವರದಿಯನ್ನೇ ಕೊಡುವುದಿಲ್ಲ, ಬರಿ ATR ಕೊಡುತ್ತೇವೆಂದು ಹೇಳುತ್ತಿದ್ದೀರಿ.

(ಗೊಂದಲ)

**Sri T.B. JAYACNAHDRA:** The Cabinet has rejected all the suggestions of the Commission. ದಯಮಾಡಿ ಮಂಡನೆ ಮಾಡಿರುವಂತಹ ರಿಪೋರ್ಟ್ ಅನ್ನು ನೋಡಿ. The Cabinet has rejected.

**ಶ್ರೀ ಗೋ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರ ತೆಗೆದುಕೊಂಡಿರುವಂತಹ ನಿರ್ಣಯ, ಹಿಂದಿನ ಸರ್ಕಾರ ಮಾಡಿರುವಂತಹ ತೀರ್ಮಾನ, ಹಿಂದಿನ ಕ್ಯಾಬಿನೆಟ್ ತೀರ್ಮಾನ ಮಾಡಿರುವಂತಹದ್ದಾಗಿದೆ. ಅದನ್ನು ಆಗಲೇ ಲೋಕಾಯುಕ್ತಕ್ಕೆ State Accounts Department ನವರಿಗೆ ಆದೇಶ ಕೊಟ್ಟಾಗಿದೆ. ಟಾಸ್ಕ್ ಪೋರ್ಸ್ ಮಾಡಿ ಆಗಿದೆ. ಅಮೇಲೆ ಬಂದಂತಹ ಸರ್ಕಾರ ಅದನ್ನು ತಿರಸ್ಕಾರ ಮಾಡಬಹುದೇ? ನಾನು ಹೇಳುವುದೇನೆಂದರೆ, Government is a continuous body. 2–3 ವರ್ಷಗಳ ನಂತರದಲ್ಲಿ ಹಿಂದಿನ ಸರ್ಕಾರ ತೆಗೆದುಕೊಂಡಿರುವಂತಹ ನಿರ್ಣಯವನ್ನು ಇವರು ತಿರಸ್ಕಾರ ಮಾಡಲಿಕ್ಕೆ ಯಾರು ಅಧಿಕಾರ ಕೊಡುತ್ತಾರೆ? How can they reject it? Now they have to only place.

ಎರಡನೆಯದಾಗಿ, ಇದನ್ನು ನೀವು ಜನರಿಗೆ ಹೇಳಿದ್ದರೆ, ನಿಮಗೆ ಒಂದು ಓಟು ಸಹ ಬೀಳುತ್ತಿರಲಿಲ್ಲ. ಮಾನ್ಯ ಸಭಾಪತಿಯವರೆ, ನಾನು ಇನ್ನೊಂದು ಸಂಗತಿಯನ್ನು ಹೇಳಲಿಕ್ಕೆ ಬಯಸುತ್ತೇನೆ. ನೀವು ಪುಟ ಸಂಖ್ಯೆ 52–53 ನೋಡಿ.

(ಗೊಂದಲ)

**ಸಭಾಪತಿಯವರು:–** ಅವರು ಹೇಳುವುದನ್ನು ನೀವು 5 ನಿಮಿಷ ಕೇಳಲಿಲ್ಲವೆಂದರೆ ಹೇಗೆ? ನಾನು ಇದರ ಬಗ್ಗೆ ನಿರ್ಣಯ ಕೊಡಬೇಕಲ್ಲವೇ? ನಾನು ನಿರ್ಣಯ ಕೊಡಲಿಕ್ಕೆ ತಾವುಗಳು ಸಹಕಾರ ಮಾಡಿ. ನಾನು ಈ ಬಗ್ಗೆ ನಿರ್ಣಯ ಕೊಡುತ್ತೇನೆ.

**ಶ್ರೀ ಗೊ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಪುಟ ಸಂಖ್ಯೆ 52–53 ಅನ್ನು ನೋಡಿ. ಇದನ್ನು ನಮ್ಮ ಅನಿಲ್‌ಕುಮಾರ್ ಎನ್ನುವವರು ಈ ಒಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿ

ಕೆಲಸ ನಿರ್ವಹಿಸುತ್ತಿದ್ದು, ನಾವು ಅವರಿಗೆ ಪ್ರಶ್ನೆಗಳನ್ನು ಕೇಳಲಾಗಿದ್ದು, ಅವರು ನಮ್ಮ ಸಮಿತಿಗೆ ಅಧಿಕೃತವಾಗಿ ಬರೆದಿರುವಂತಹ ಸರ್ಕಾರಿ ಪತ್ರವಾಗಿದ್ದು, ಸದರಿ ಪತ್ರದಲ್ಲಿ ಇವುಗಳಿಗೆ ಲಿಖಿತವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಪುಟ ಸಂಖ್ಯೆ 52 ರಲ್ಲಿ ಏನು ಹೇಳುತ್ತಾರೆಂದರೆ ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 11–05–2012 ರಲ್ಲಿ ಆಯೋಗದ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ಕ್ಯಾಬಿನೆಟ್ ಶಿಫಾರಸ್ಸಿನ ಪ್ರಕಾರ ರಚಿಸಲಾಗಿತ್ತು. ತದನಂತರ, ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 30–05–2012 ರಂದು ಹಿಂಪಡೆಯಲಾಗಿದೆ. ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ವರದಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಮಾನ್ಯ ಲೋಕಾಯುಕ್ತ ಅಂತಹ ವೃತ್ತಿಪರ ಸಂಸ್ಥೆಯೊಂದರಿಂದ ತನಿಖೆ ಮಾಡುವುದು ಸೂಕ್ತವೆಂದು, ಅಗತ್ಯವೆಂದು ಭಾವಿಸಿ, ಕರ್ನಾಟಕ ಲೋಕಾಯುಕ್ತ ನಿಯಮಗಳ, 1984 ನಿಯಮ 7(2)(ಎ) ಅನುಸಾರ ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ, 99 ಡಬ್ಲ್ಯೂಇಎಸ್ 2012, ದಿನಾಂಕ: 04–07–2012 ರಂದು ಸದರಿ ಪ್ರಕರಣದ ತನಿಖೆಯನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. ಮಾನ್ಯ ಉಪ ಲೋಕಾಯುಕ್ತರಿಂದ ವರದಿಯನ್ನು ನಿರೀಕ್ಷಿಸಲಾಗಿದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದವರು ಸಲ್ಲಿಸಿರುವ ವಕ್ಫ್ ಸಂಸ್ಥೆಯ ಸ್ವತ್ತಿನ ದುರ್ಬಳಕೆಯ ವರದಿಯನ್ನು ದಿನಾಂಕ: 10–12–2012 ರಂದು ಮತ್ತು ದಿನಾಂಕ: 3–1–2013 ರಂದು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿದ್ದು, ಈ ವಿಷಯದ ಕುರಿತು ಮಾನ್ಯ ಅಡ್ವೋಕೇಟ್ ಜನರಲ್, ಕರ್ನಾಟಕ ಇವರ ಈ ಕೆಳಕಂಡ ಅಭಿಪ್ರಾಯಗಳನ್ನು ಅನುಮೋದಿಸಲು ತೀರ್ಮಾನಿಸಲಾಗಿದೆ. ತನ್ನ ಅಭಿಪ್ರಾಯವನ್ನು ಏನು ಅಡ್ವೋಕೇಟ್ ಜನರಲ್‌ರವರು ಕೊಟ್ಟರು, ಅದನ್ನು ಅನುಮೋದಿಸಲು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಲಾಗಿದೆ. It is not just an opinion. The opinion given by the Advocate General has been endorsed by the Cabinet. It has been accepted by the Cabinet. ಅದರಲ್ಲಿ ಪಾಯಿಂಟ್ ನಂಬರ್ 2 ಏನು ಹೇಳುತ್ತದೆ ಎಂದರೆ,

> "If the Special Report were to be placed before each House of the State Legislature as required by sub-section (2) of Section 10 of the 1994 Act, a Memorandum explaining the action proposed to be taken on the

recommendations of the Commission is also to be placed…”

It says, “…is also to be placed…” along with the report.

“…before each House of the State Legislature.”

ಮಾನ್ಯ ಸಭಾಪತಿಯವರೆ, ಇದೆಲ್ಲದರ ನಡುವೆ  ನಾನು ಪ್ರಸ್ತಾಪ ಮಾಡಿರುವಂತಹದ್ದು, ನಮ್ಮ ಸಮಿತಿ ಕೊಟ್ಟಿರುವಂತಹ ವರದಿಯೂ ಸಹ ಈ ಒಂದು ವಿಶೇಷ ವರದಿಯನ್ನು ಸದನದಲ್ಲಿ ಮಂಡಿಸಿ. ಅದರಲ್ಲೂ, ನಮ್ಮ  2013–15ನೇ ಸಾಲಿನ ಹಕ್ಕುಭಾದ್ಯತಾ ಸಮಿತಿಯ ಶಿಫಾರಸ್ಸು ಇದೆ. ಇದು ಒಂದು unanimous report.  ಇದರಲ್ಲಿ ಜನತಾದಳ ಮತ್ತು ಕಾಂಗ್ರೆಸ್‌ನ ಸದಸ್ಯರೂ ಇದ್ದರು.  ಇದು ಸದನದ್ದು, ಸಮಿತಿಯದ್ದು unanimous report.  ಅದರ ಆಧಾರದ ಮೇಲೆ ವಿಶೇಷ ವರದಿಯನ್ನು ಮಂಡಿಸಿ ಎಂದೇ ತಾವು ಸಹ ರೂಲಿಂಗ್ ಕೊಟ್ಟಿರುವಂತದ್ದಾಗಿದೆ.  ಇದೆಲ್ಲದರ ಹಿನ್ನೆಲೆಯಲ್ಲಿ ಈಗ ಸರ್ಕಾರ ನಾವು ವರದಿಯನ್ನು ಮಂಡಿಸುವುದಿಲ್ಲ, action taken ಮಾತ್ರ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಆದರೆ, ಕ್ರಮ ಏನೂ ತೆಗೆದುಕೊಳ್ಳುವುದಿಲ್ಲ.

ಮುಂದು. .

.

(ಪೀಠದಲ್ಲಿ ಸಭಾಪತಿಯವರ ಉಪಸ್ಥಿತಿ)

ಶ್ರೀ ಗೋ.ಮಧುಸೂದನ್(ಮುಂದುವರೆದುದು...

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಈಗ ಸರ್ಕಾರ ನಾವು ವರದಿಯನ್ನು ಮಂಡಿಸುವುದಿಲ್ಲ, action taken ಮಾತ್ರ ತೆಗೆದುಕೊಳ್ಳುತ್ತೇವೆ ಎಂದರೆ, ಆಕ್ಷನ್ ಏನೂ ತೆಗೆದುಕೊಳ್ಳುವುದಿಲ್ಲ. ಈ ರೀತಿಯಾದಂತಹ ಒಂದು ಭಂಡತನಕ್ಕೆ ಬಿದ್ದರೆ ಯಾರೋ ಇವರು ಇದರಲ್ಲಿ ಇನ್ವಾಲ್ವ್ ಆಗಿರುವಂತಹ ಜನಗಳು ಯಾರಿದ್ದಾರೆ, ಅವರನ್ನು ರಕ್ಷಣೆ ಮಾಡುವುದಕ್ಕೆ, ಮತ್ತೆ ಮುಸಲ್ಮಾನರ ಪವಿತ್ರವಾದ ಆಸ್ತಿಯನ್ನು ಭಕ್ಷಿಸಿದವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ನಿಂತಿದೆ. ಇವರು ಮಾನ-ಮರ್ಯಾದೆ ಬಿಟ್ಟು ಈ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಅದನ್ನು ಬಿಟ್ಟು ಇವರು ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಮುಂದಾಗಬೇಕು. ಅದಕ್ಕೆ ಬೇಕಾದಂತಹ ಆದೇಶವನ್ನು ತಾವು ಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರಿಗೆ ಅವರ ನಾಲಿಗೆಯ ಮೇಲೆ ಹಿಡಿತವಿಟ್ಟುಕೊಂಡು ಮಾತನಾಡಲು ತಾವು ತಿಳಿಸಬೇಕಾಗುತ್ತದೆ. ದಯಮಾಡಿ ನಾಲಿಗೆಯ ಮೇಲೆ ಹಿಡಿತವಿಟ್ಟುಕೊಂಡು ಶಬ್ದಗಳನ್ನು ಬಳಕೆ ಮಾಡಲು ಅವರಿಗೆ ತಿಳಿಸಿ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ತಮ್ಮ ನಾಲಿಗೆಯ ಮೇಲೆ ಹಿಡಿತವಿಟ್ಟುಕೊಳ್ಳಬೇಕಾಗುತ್ತದೆ. ನಾನು ಕೊಟ್ಟಿರುವಂತಹ ಶಿಫಾರಸ್ಸಿನ ಎಲ್ಲಾ recommendations of the commission ಏನಿದೆ, ಅದನ್ನು ರಿಜೆಕ್ಟ್ ಮಾಡಿದೆ, ಹಿಂದೆ ಯಾವುದೇ ಕ್ಯಾಬಿನೆಟ್‌ನಲ್ಲಿಯೂ ಕೂಡ ಅದನ್ನು ಅಕ್ಸೆಪ್ಟ್ ಮಾಡಿ ರಿಜೆಕ್ಟ್ ಮಾಡಿದ್ದರೆ ಅದು ಸದನದ ಮುಂದೆ ಬಂದಿರುತ್ತಿತ್ತು. ಅದೇನಿದ್ದರೂ movement ನಲ್ಲಿದ್ದಾರೆಯೇ ವಿನಃ neither they accept or reject it. ಆ ರೀತಿಯಾಗಿ ಆಯಿತು. ಹಾಗಾಗಿ ಈಗ ನಾನು ಅದಕ್ಕೆ specific ಆಗಿ... More than that, still the matter is pending in the High Court. ಈಗಲೂ ಸಹ ಅಪ್ಲಿಕೇಷನ್ ಪೆಂಡಿಂಗ್ ಇದೆ. ಆ last para of the opinion ನ್ನು ನಾನು ಓದಿ ಹೇಳಿದ್ದೇನೆ, ಅದರಲ್ಲಿದೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಕೋರ್ಟ್ ಮುಂದೆ ಪೆಂಡಿಂಗ್ ಇರುವ ಅಪ್ಲಿಕೇಷನ್ ಯಾವಾಗ ಹಾಕಿದರು ಎಂದು ಕೇಳಿ. ಈಗ ಎರಡು ದಿನಗಳ ಮುಂಚೆ ಹಾಕಿರುವಂತಹ ಅಪ್ಲಿಕೇಷನ್ ಅದು; ಈ ಸದನವನ್ನು ದಾರಿ ತಪ್ಪಿಸಲೇಬೇಕು ಎಂದು ಹಾಕಿರುವಂತಹ ಅಪ್ಲಿಕೇಷನ್ ಅದು. ಅವರು ಯಾವ ಅಪ್ಲಿಕೇಷನ್‌ನ್ನು ಕೋರ್ಟ್‌ನಲ್ಲಿ ಹಾಕಿದ್ದಾರೆ, ಅದರ ದಿನಾಂಕ ಏನು, ಅದನ್ನು ಸಬ್ಮಿಟ್ ಮಾಡುವುದಕ್ಕೆ ಹೇಳಿ. ಅದಕ್ಕೆ ಹೈಕೋರ್ಟ್ stay ಕೊಟ್ಟಿಲ್ಲ. The High Court has not given a for that. ಇವರು ಸದನವನ್ನು ದಾರಿ ತಪ್ಪಿಸುವುದಕ್ಕೆ ಏನೋ ಕೋರ್ಟ್‌ನಲ್ಲಿದೆ ಎಂದು ಹೇಳುವಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡುತ್ತಾರೆ ಎಂದರೆ, ಅದು ದುರುಪಯೋಗವಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ರಿಪೋರ್ಟ್‌ನ್ನು ಕೊಡುವುದಕ್ಕೆ ಈ ಆಕ್ಟ್‌ನಲ್ಲಿ 2 ಪ್ರಾವಿಜನ್ಸ್ ಇದೆ. Firstly, Section 10, sub-clause (1) (h) reads as follows:-

> "(h) To study any other matter which, in the opinion of the Commission is important from the point of view of the welfare and Development of minorities and to make appropriate recommendation."

This is one provision for making a recommendation or report. Another provision is Section 14. Section 14 reads as follows:-

> "**14. Annual Report.-** The Commission, shall prepare in such form and at such time for each financial year, as may be prescribed, its annual report giving a full account of its activities during the previous financial year and forward a copy thereof to the Government."

Any report submitted under Section 14 has to be dealt with as per the provisions of Section 15. Section 15 reads as follows:-

> "**15. Annual report and audit report to be laid before the State Legislature.-** The Government shall cause the annual report..."

This is more important.

> "...The Government shall cause the annual report together with a memorandum of action taken..."

ಬಹುಶಃ ಇನ್ನುಳಿದುದನ್ನು ನಾನು ಹೇಳುವಂತಹ ಅವಶ್ಯಕತೆ ಇಲ್ಲ. Annual report... Here is a...

(ಗೊಂದಲ)

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರು ಮಾತನಾಡುವುದಕ್ಕೆ ಬಿಡಿ, ಅವರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬೇಡಿ. ಅವರು ಹೇಳುತ್ತಿರುವುದನ್ನು ನಾನು ಕೇಳಬೇಕು, ನನಗೆ ಅವಕಾಶ ಕೊಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಯಾವುದರ ಮೇಲೆ ಚರ್ಚೆ ಮಾಡುತ್ತಿದ್ದೇವೆ, it is not an Annual report. It is a Special report. So if it is an Annual report, Section 15 says that including annual report has to be placed before the government. So if it is a report under Section 10 sub-clause (1) (h), it has to be placed as per the provisions of sub-clause (2) of Section 10 which says as follows:-

> "(2) The Government shall cause the recommendations..."

In Section 15, it states, "...shall cause the report..." Here,

> "The Government shall cause the recommendations of the commission to be laid before each House of the State Legislature along with the memorandum explaining the action taken or proposed to be taken on the recommendations and the reasons for non-acceptance, of any such recommendations."

So these two provisions make it very very clear. If it is an Annual report, it has to be placed before both the Houses as per the provisions of Section 15. If it is a Special report, it has to be placed before the House as per the provisions of Section 10(2) of the Act which says that only recommendations and the reasons are to be placed. ಇದು ಒಂದು ವಿಚಾರವಾದರೆ, ಎರಡನೆಯದಾಗಿ ತಾವೇನು ಹಿಂದೆ ಆದೇಶ ಮಾಡಿದ್ದೀರಿ, in that order itself, ನೀವು ಸಹ ಅದರಲ್ಲಿ ಹೇಳಿದ್ದೀರಿ, "Section 10(2) ನ್ನು ನಾನು ಗಮನಿಸಿದ್ದೇನೆ" ಎಂದು. ಇದು ಒಂದು. Any order passed by the Hon'ble High Court of Karnataka or the Supreme Court of India or any other court has to be in conformity with the provisions of law. So here is a law which says that only recommendations and the reasons have to be placed. That is why the government has placed the recommendations as well as the reasons. As such, there is no ambiguity at all. ದಯಮಾಡಿ ಇದನ್ನು accept ಮಾಡಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಒಂದೇ ಒಂದು clarification ನೀಡಬಯಸುತ್ತೇನೆ. ಹೈಕೋರ್ಟ್‌ನಲ್ಲಿ ಈಗ ಏನು ತೀರ್ಪು ಬಂದಿದೆ, ಅದು ಹೈಕೋರ್ಟ್ ಕೊಟ್ಟಿರುವ ತೀರ್ಪಲ್ಲ, ಅದು ಇವರ Additional Advocate General ಶಿವಣ್ಣ ಎಂಬುವವರು

ಕೊಟ್ಟಿರುವಂತಹ, ಅವರು ಏನು ಹೇಳಿದ್ದಾರೆ, "In consultation with the department, in consultation with the government, I am giving this" ಎಂದು ಹೇಳಿದ್ದಾರೆ. ಇದರಲ್ಲಿ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದೇನೆಂದರೆ,

> "Mr. A.G. Shivanna, Learned Additional Advocate General-I appears on behalf of the State Respondents and submits after obtaining instructions that the report of the Karnataka State Minorities Commission submitted to the Hon'ble Chief Minister on March 26th of 2012 shall be placed before both the Legislative Council and the Legislative Assembly of Karnataka in February 2016. Recording the said concession, the writ petition stands disposed. We make no orders as to costs."

ಅಂದರೆ, ದಿನಾಂಕ:26ನೇ ಮಾರ್ಚ್ 2012ರಲ್ಲಿ ಯಾವ ರಿಪೋರ್ಟ್ ಸಬ್ಮಿಟ್ ಆಗಿತ್ತು? Annual Report submit ಆಗಿತ್ತೋ, Special Report submit ಆಗಿತ್ತೋ? ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ಸ್ಪೆಷಲ್ ರಿಪೋರ್ಟ್ ಸಬ್ಮಿಟ್ ಆಗಿತ್ತು. ಆ ರಿಪೋರ್ಟ್‌ನ್ನು ಇವರು ಸದನದಲ್ಲಿ ಸಬ್ಮಿಟ್ ಮಾಡಬೇಕೆಂದು ಹೈಕೋರ್ಟ್ ಆರ್ಡರ್ ಆಗಿರುವುದು. ಆ ಆರ್ಡರ್ ಏತಕ್ಕೆ ಆಗಿದೆ ಎಂದರೆ, ಶ್ರೀಯುತ ಶಿವಣ್ಣನವರೇ ಹೋಗಿ ಹೇಳಿದರು, ನಾನು ಸರ್ಕಾರದಿಂದ ಎಲ್ಲಾ ಕೇಳಿಕೊಂಡು ಬಂದಿದ್ದೇನೆ, ಸರ್, ದಯಮಾಡಿ ನಮ್ಮನ್ನು ಬಿಟ್ಟುಬಿಡಿ, ನಾವೆಲ್ಲಾ ಸದನದಲ್ಲಿ ಸಬ್ಮಿಟ್ ಮಾಡುತ್ತೇವೆ ಎಂದು ಹೇಳಿದರು. ಇವರು ಕೇಳಿದಂತಹ bail ಗೆ ಹೈಕೋರ್ಟ್ ಆಯಿತು, ಎಂದು ಹೇಳಿದೆ. ನೀವು ಅಲ್ಲಿ ಹೋಗಿ ಕೈಕಟ್ಟಿಸಿಕೊಂಡು ಬಂದು, ಇಲ್ಲಿ ಬಂದು ಬೇರೆ ವ್ಯಾಖ್ಯಾನ ಮಾಡಿದರೆ ನಿಮ್ಮನ್ನು ಆ ಭಗವಂತನೇ ಕಾಪಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮೊದಲನೆಯದಾಗಿ ಅಡ್ವೋಕೇಟ್ ಜನರಲ್‌ರವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅಡ್ವೋಕೇಟ್

ಜನರಲ್‌ರವರ ಅಭಿಪ್ರಾಯ ಬಹಳ ಮುಖ್ಯವೋ, ಜಡ್ಜ್‌ಮೆಂಟ್ ಮುಖ್ಯವೋ? ಇತ್ತೀಚೆಗೆ ಸಭಾನಾಯಕರಾದ ಮಾನ್ಯ ಎಸ್.ಆರ್. ಪಾಟೀಲ್‌ರವರು ನಾವು ಧರಣಿ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ, 'ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಸುಖಾಂತ್ಯಗೊಳಿಸಬೇಕು, ಸದನವನ್ನು order ಗೆ ತರಬೇಕು' ಎನ್ನುವ ಸದುದ್ದೇಶದಿಂದ ಮಾನ್ಯ ಮುಖ್ಯಮಂತ್ರಿಯವರು ಒಂದು ಸಲಹೆಯನ್ನು ನೀಡಿದ್ದಾರೆ. ಏನು ಸಲಹೆ ಎಂದರೆ, ಹೈಕೋರ್ಟ್ ನಿರ್ಣಯದ ಪ್ರಕಾರ "Report shall be placed before both the Houses i.e., the Legislative Council and the Legislative Assembly of Karnataka in the month of February 2016 session." ಇದನ್ನು ನಾನು ಹೇಳಿರುವುದಲ್ಲ, ಮಾನ್ಯ ಸಭಾನಾಯಕರು ತಿಳಿಸಿದ್ದಾರೆ. ಫೆಬ್ರವರಿ 2016ರಲ್ಲಿ ನಡೆಯುವಂತಹ ಅಧಿವೇಶನದಲ್ಲಿ "It shall be placed before both the Houses" ಎನ್ನುವ ಆದೇಶ ನಮಗಿದೆ, ಇಷ್ಟು ಇದ್ದಾಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು "ಮಾರ್ಚ್‌ನಲ್ಲಿ ಬಜೆಟ್ ಅಧಿವೇಶನ ನಡೆಯುತ್ತದೆ, ಆ ಸಂದರ್ಭದಲ್ಲಿ ತಿಳಿಸುತ್ತೇನೆ" ಎಂದು ಹೇಳಿದ್ದಾರೆ. ಮತ್ತೆ ಮುಂದುವರೆದು ಮಾನ್ಯ ಸಭಾನಾಯಕರು ಏನು ಹೇಳಿದ್ದಾರೆ ಎಂದರೆ, "ಕೊನೆಯಲ್ಲಿ ಅಥವಾ ಫೆಬ್ರವರಿ ತಿಂಗಳಿನಲ್ಲಿ ಬಂದರೂ ನಿಶ್ಚಿತವಾಗಿ ಈ ವರದಿಯನ್ನು ಮಂಡಿಸುತ್ತೇವೆ ಎಂದು ಸರ್ಕಾರದ ಪರವಾಗಿ ಉತ್ತರವನ್ನು ಹೇಳಬಯಸುತ್ತಿದ್ದೇನೆ" ಎಂದು ಹೇಳಿದ್ದಾರೆ. ಅಲ್ಲದೆ "ಸದನವನ್ನು ಹೇಗೆ ನಡೆಸಿಕೊಂಡು ಹೋಗಬೇಕು ಎಂದು ತಿಳಿಸುವಂತಹ ಅತ್ಯಂತ highest position ಇರುವಂತಹ Business Advisory Committee ಯಲ್ಲಿ ಏನು ನಿರ್ಣಯವಾಗಿದೆ ಅದಕ್ಕೆ ಎಲ್ಲರೂ ಒಪ್ಪಬೇಕಾಗಿದೆ. ಅದಕ್ಕಾಗಿಯೇ ನಾನು ಹೇಳಿದೆ, ನಾನು ಕಾನೂನು ತಜ್ಞ ಅಲ್ಲ ಎಂದು. ನಾನು ನೇರವಾಗಿ ತಮ್ಮನ್ನು ಕೇಳುತ್ತೇನೆ, ತಾವು ರೂಲಿಂಗ್ ಕೊಟ್ಟುಬಿಡಿ, ರೂಲಿಂಗ್ ಕೊಡುವಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಈ 'ಶಿಫಾರಸ್ಸು' ಎನ್ನುವುದು ಇಲ್ಲಿ ಬಂದು ಕುಳಿತ ಮೇಲೆ ಇವರು ಮಾಡಿದಂತಹ ಬುದ್ಧಿವಂತಿಕೆ ಇದೆಯಲ್ಲಾ, ಅಲ್ಲಿಯವರೆಗೂ ಈ 'ಶಿಫಾರಸ್ಸು' ಇದೆ ಎಂದು ನಮಗೆ ಕಲ್ಪನೆ ಇರಲಿಲ್ಲ.

(ಮುಂದುವರೆದಿದೆ ...

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**:- ಇವರು ಮಾಡಿರುವ ಬುದ್ದಿವಂತಿಗೆ ಗೊತ್ತಾಗುವವರೆಗೂ ಈ ಶಿಫಾರಸ್ ಬಗ್ಗೆ ನಮಗೆ ಕಲ್ಪನೆ ಇರಲಿಲ್ಲ. ಕಮಿಟಿ ವರದಿಯನ್ನು ಮಂಡಿಸುತ್ತಾರೆ, ಕೋರ್ಟ್ ಆರ್ಡರ್ ಅನುಸರಿಸುತ್ತಾರೆ, ಬಿಎಸಿ ಯಲ್ಲಿ ಏನು ಹೇಳಲಾಗಿದೆ ಅದನ್ನು ಪಾಲಿಸುತ್ತಾರೆ. ಅದೇ ರೀತಿ ನಡೆದುಕೊಳ್ಳುತ್ತಾರೆ ಎಂದು ನಾವು ಅಂದುಕೊಂಡರೆ, ಇವರು ವರದಿಯನ್ನು ಬಿಟ್ಟು ಶಿಫಾರಸ್‌ನ್ನು ಮಂಡನೆ ಮಾಡುತ್ತಾರೆ ಎಂದರೆ ಇದಕ್ಕಾಗಿ ಇಷ್ಟು ವರ್ಷ ಸಾಯಬೇಕಾಗಿತ್ತಾ? ಮುಸ್ಲಿಂ ಜನಾಂಗದ ಆಸ್ತಿಯನ್ನು ಉಳಿಸಬೇಕು ಎಂದು ಪ್ರಯತ್ನ ಮಾಡಲು ಈ ಸಮಿತಿಯನ್ನು ರಚನೆ ಮಾಡಲಾಗಿದೆ. ಜೀವವನ್ನು ಒತ್ತೆ ಇಟ್ಟು ಈ ಕೆಲಸವನ್ನು ಮಾಡಿದ್ದಾರೆ. ಇವತ್ತು ಈ ಶಿಫಾರಸ್ಸನ್ನು ತಂದು ಇಡಲು ಇಷ್ಟು ದಿನ ಬೇಕಾಗಿತ್ತಾ? ನಾವು ಇಷ್ಟು ಹೋರಾಟ ಮಾಡಬೇಕಾಗಿತ್ತಾ? ಕಾನೂನು ಸಚಿವರಾದ ಜಯಚಂದ್ರವರು ತುಂಬಾ ಬುದ್ಧಿವಂತರು. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇಲ್ಲಿ ತಮ್ಮ ಬುದ್ಧಿಯನ್ನು ಉಪಯೋಗ ಮಾಡಿ. ಯಾರ್‍ಯಾರು ಸುಮಾರು 15,000 ಕೋಟಿ ರೂ.ಗಳನ್ನು ಲೂಟಿ ಮಾಡಿದ್ದಾರೆ ಅವರಿಗೆ ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡಬೇಡಿ. ನಾವು ಅಲ್ಪಸಂಖ್ಯಾತರ ರಕ್ಷಣೆ ಮಾಡುವವರು ಎಂದು ಹೇಳಿಕೊಳ್ಳುತ್ತೀರಿ, ಖಂಡಿತವಾಗಿ ಆ ಪ್ರಮಾಣ ಪತ್ರ ನಿಮಗೆ ಸಲ್ಲುತ್ತದೆ. ಇದರಲ್ಲಿ ಏನು ಅನುಮಾನವಿಲ್ಲ. ಆದರೆ ಇಲ್ಲಿ ಇರುವ ಪ್ರಶ್ನೆ ಎಂದರೆ, ಕೋರ್ಟ್ ತೀರ್ಮಾನ, Business Advisory Committee ತೀರ್ಮಾನ, ತಮ್ಮ ತೀರ್ಮಾನ... ಮಾನ್ಯ ಸಭಾಪತಿಯವರು ಸ್ಪಷ್ಟವಾಗಿ ವರದಿಯನ್ನು ಮಂಡನೆ ಮಾಡಬೇಕು ಎಂದು ಹೇಳಿದಾಗ ಸರ್ಕಾರ ಸಮಯ ಕೇಳಿತ್ತು. ಆಗ ಶಿಫಾರಸ್ ಮಂಡನೆ ಮಾಡುತ್ತೇವೆ ಎಂದು ಹೇಳಲಿಲ್ಲ. ಅಥವಾ ತಾವು ನಾವು ಧರಣಿ ಕುಳಿತಾಗ ಶಿಫಾರಸ್‌ನ್ನು ಮಂಡನೆ ಮಾಡಿ ಎಂದು ಒತ್ತಾಯ ಮಾಡಲಿಲ್ಲ. ನಿಮ್ಮ ರೂಲಿಂಗ್‌ನ್ನು ನಾವು ಪ್ರಶ್ನೆ ಮಾಡುವುದಿಲ್ಲ. ನಿಮ್ಮ ರೂಲಿಂಗ್‌ನ್ನು ಮತ್ತೆ ನೆನೆಪು ಮಾಡಿಕೊಡುತ್ತಿದ್ದೇನೆ. ಆ ರೂಲಿಂಗ್‌ನ್ನು ಈಗ ರೂಲಿಂಗ್ ಕೊಡುವ ಸಂದರ್ಭದಲ್ಲಿ, ನಾನು ಈ ರೂಲಿಂಗ್ ಕೊಟ್ಟಿದ್ದೆನೆ ಎನ್ನುವುದನ್ನು ನೆನೆಪಿನಲ್ಲಿಟುಕೊಂಡು ನೀವು ಏನಾದರೂ ರೂಲಿಂಗ್ ಕೊಡಿ ನಾವು ಒಪ್ಪಿಕೊಳ್ಳುತ್ತೇವೆ. ಎರಡನೆಯದು, Advocate General Opinion, ಕೊಟ್ಟಿದ್ದಾರೆ, Court judgment ಇದೆ. ಮೂರನೆಯದು, ಮಾನ್ಯ ಸಭಾನಾಯಕರು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ, highest position ಇರುವಂತಹ Business Advisory Committee ಸಭೆಯಲ್ಲಿ ಏನು ನಿರ್ಣಯವಾಗಿದೆ ಅದಕ್ಕೆ ಎಲ್ಲರೂ ಒಪ್ಪಬೇಕು. ನಿಶ್ಚಿತವಾಗಿ ವರದಿಯನ್ನು ಮಂಡಿಸುತ್ತೇವೆ ಎಂದು ಹೇಳಿದ್ದಾರೆ. ಆಗ ಶಿಫಾರಸ್ ಮಂಡಿಸುತ್ತೇವೆ ಎಂದು ಹೇಳಿದ್ದರೆ.. ನಾನೇನು ಕಾನೂನು ತಜ್ಞನಲ್ಲ, ತಾವು ಏನು ರೂಲಿಂಗ್ ಕೊಟ್ಟಿದ್ದಿರಿ, ಯಾವ

ವರದಿಯನ್ನು ಮಂಡನೆ ಮಾಡಬೇಕು ಎಂದು ಹೇಳಿದ್ದೀರಿ, ಹೇಳಿದ್ದರೆ ನಾನು ಆ ಪೀಠಕ್ಕೆ ಗೌರವ ಕೊಡುತ್ತೇನೆ. ರಿಪೋರ್ಟ್ ಮಂಡನೆ ಮಾಡಿ ಎಂದು ಹೇಳಿದ್ದರೆ ನೀವು ರೂಲಿಂಗ್ ಕೊಡಬೇಕಾದರೆ ದಯಮಾಡಿ ನೋಟ್ ಮಾಡಿಕೊಳ್ಳಿ, Advocate General ಶಿಫಾರಸ್ ಮತ್ತು ಕೋರ್ಟ್ judgment ಎರಡನ್ನು ಗಮನಕ್ಕೆ ತನ್ನಿ. ಮೂರನೆಯದು, Business Advisory Committee ತೀರ್ಮಾನ ಇದು ಸರ್ವೋಚ್ಚ ತೀರ್ಮಾನ ಎನ್ನುವ ಮಾತನ್ನು ಮಾನ್ಯ ಸಭಾನಾಯಕರು ಹೇಳಿದ್ದಾರೆ. ತಾವು ರೂಲಿಂಗ್ ಕೊಡುವ ಸಂದರ್ಭದಲ್ಲಿ ಈ ಮೂರು ಅಂಶಗಳನ್ನು ಗಮನದಲ್ಲಿಟುಕೊಂಡು ತಮ್ಮ ರೂಲಿಂಗ್ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಇಂಗ್ಲೀಷ್‌ನಲ್ಲಿ ರಿಪೋರ್ಟ್, ಕನ್ನಡದಲ್ಲಿ ವರದಿ, ಅದರ ಬಗ್ಗೆ ಹೇಳಿದ್ದಾರೆ. ಆ ವರದಿ ಯಾವ provision ಕೆಳಗೆ ಬರುತ್ತದೆ. It will come under Sec.10(2) of The Karnataka State Minorities Commission Act. ವರದಿಯೇ ಇರಬಹುದು. ನಾವು ಕೊಡುವ ಒಂದು ಪೇಪರ್ ಕೂಡಾ ವರದಿ ರೂಪದಲ್ಲಿಯೇ ಇರುತ್ತದೆ. ಆ ವರದಿಯು Sec.10(2) ಪ್ರಕಾರ ಇರುತ್ತದೆ. You call by any name. Sec.10(2) ಏನು ಹೇಳುತ್ತದೆ 'recommendations are to be placed along with memorandum for action taken or in case of rejection, reasons for rejection. ಈಗ ಇರುವಂತಹ memorandum ಒಂದು recommendation. ವರದಿಯನ್ನು ಮಂಡನೆ ಮಾಡುತ್ತೇವೆ ಎಂದು ಏನು ಹೇಳಿದ್ದೆನೆ ಆ ವರದಿಯನ್ನು ಕಾನೂನಿಗೆ ವ್ಯತರಿಕ್ತವಾಗಿ ಮಂಡನೆ ಮಾಡಲು ಆಗುವುದಿಲ್ಲ. Sec.10(2) is binding on High Court, Supreme Court, even BAC. If there is any contravention with the provisions of any Act and the decision of any authority, ultimately prevailing provision of the law. ಈ ದೇಶದಲ್ಲಿಯ ನ್ಯಾಯಾಲಯಗಳು ಏನು ನಿರ್ಣಯಗಳನ್ನು ಕೊಡುತ್ತವೆ, ಕಾನೂನಿಗೆ ಅನುಗುಣವಾಗಿಯೇ ಕೊಡಬೇಕು. ಇಲ್ಲಿ ವರದಿ ಎಂದು ಏನು ಹೇಳಲಾಗುತ್ತದೆ ಅದು ಸೆಕ್ಷನ್ 10(2) ಪ್ರಕಾರವೆ ವರದಿ. ಸೆಕ್ಷನ್ 10(2) ಪ್ರಕಾರ

ಏನು ಇದೆ ಎಂದರೆ recommendation along with the memorandum. ಇಲ್ಲಿ ನಾವು recommendation ಗಳನ್ನು ಮಂಡನೆ ಮಾಡಿದ್ದೆವೆ. ವರದಿಯ Chapter-XI ನಲ್ಲಿ 16 ಶಿಫಾರಸ್‌ಗಳು ಇವೆ, Chapter-XIIನಲ್ಲಿ 3 ಶಿಫಾರಸ್‌ಗಳು ಇವೆ, segregation ಮಾಡಿದ್ದಾರೆ. It is not embodied in the report. There are separate recommendations. Chapter-XI ನಲ್ಲಿ 16 recommendation ಗಳು ಅದನ್ನು summarize ಮಾಡಿದಂತಹ 3 recommendation ಗಳು, 19 recommendation ಗಳನ್ನು ಮಾಡಿದ್ದಾರೆ. 19 recommendations along with memorandum. ಮಂಡನೆ ಮಾಡಬೇಕೆಂದು ಕಾನೂನು ಹೇಳುತ್ತದೆ. ವರದಿ ಎಂದರೆ 10(2) ಪ್ರಕಾರವೆ ವರದಿ. ವರದಿ ರಿಪೋರ್ಟ್ ಏನು ಅರ್ಥವಾಗುತ್ತಿಲ್ಲ ಇವರಿಗೆ. 10(2) ನ್ನು ಬಿಟ್ಟು ನಾವು ಏನು ಮಾಡಲು ಬರುವುದಿಲ್ಲ. Law is binding on you, it is binding on High Court decision and also it is binding on Business Advisory Committee. we should go by the law of the land. Sec.10(2) is very clear. ಸೆಕ್ಸನ್ 10(2) ಪ್ರಕಾರ ವರದಿ ಎಂದರೆ recommendations along with memorandum. Memorandum accept ಮಾಡಿದರೆ ಅದರಲ್ಲಿ ಇರುವಂತಹ recommendations ಮೇಲೆ ಏನು ಕ್ರಮ ತೆಗೆದುಕೊಂಡಿದ್ದೆವೆ ಎನ್ನುವುದನ್ನು ಆ memorandum ಮೇಲೆ mention ಮಾಡಬೇಕು. ಒಂದು ವೇಳೆ ಕ್ಯಾಬಿನೆಟ್ ಆ ರಿಪೋರ್ಟ್‌ನ್ನು reject ಮಾಡಿದರೆ we should mention reasons for rejection. ಏಕೆ reject ಮಾಡಲಾಯಿತು ಎನ್ನುವುದನ್ನು ಹೇಳಿದ್ದೆನೆ. ಹಿಂದಿನ ಸರ್ಕಾರದಲ್ಲಿ ನಿರ್ಣಯವಾಗಿತ್ತು ಎಂದು ಮಾನ್ಯ ಮಧುಸೂದನ್‌ರವರು ಹೇಳಿದರು. ಹಿಂದಿನ ಸರ್ಕಾರ ಈ ವರದಿಯನ್ನು ಒಪ್ಪೆಯು ಇಲ್ಲ. ಅದನ್ನು accept ಮಾಡಿಲ್ಲ ಎಂದು ಕಾನೂನು ಸಚಿವರು ಹೇಳಿದರು. ಅದನ್ನು ಒಪ್ಪದೆ ಕೆಲವೊಂದು action ಪ್ರಾರಂಭ ಮಾಡಿದ್ದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಪ್ಪಿದ್ದರೆ ಇವೆ ಶಿಫಾರಸ್‌ಗಳನ್ನು ಅಂದೇ place ಮಾಡಬೇಕಾಗಿತ್ತು. ಆ ವರದಿಯನ್ನು ಅವರು ಒಪ್ಪಿಯುಕೊಂಡಿಲ್ಲ, ರಿಜೆಕ್ಟ್ ಕೂಡಾ ಮಾಡಿರುವುದಿಲ್ಲ. ಹಾಗೆಯೇ fileಗೆ life ಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರ ಈಗ ಅದನ್ನು ರಿಜೆಕ್ಟ್ ಮಾಡಿದೆ. ಸೆಕ್ಸನ್

10(2) ಪ್ರಕಾರ 19 ಶಿಫಾರಸ್‌ಗಳು ಇವೆ ಅವುಗಳನ್ನು place ಮಾಡಿದ್ದೆವೆ. ಆ ಶಿಫಾರಸ್‌ಗಳನ್ನು ಏಕೆ ರಿಜೆಕ್ಟ್ ಮಾಡಿದ್ದೇವೆ ಎನ್ನುವುದಕ್ಕೆ reasoning ಇರುವಂತಹ memorandum ಕೂಡ submit ಮಾಡಿದ್ದೇವೆ. It is crystal clear. ಇದರಲ್ಲಿ no ambiguity at all. ಆದ್ದರಿಂದ ಇವತ್ತು ಮಂಡಿಸಿರುವ ವರದಿಯನ್ನು ದಯಮಾಡಿ ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, some ambiguity is here. ಮಾನ್ಯ ಕಾನೂನು ಸಚಿವರು ಓದಿದ್ದನ್ನೆ ಮತ್ತೆ ಓದಿದ್ದಾರೆ. If the special report were to be placed before each House of the State Legislature as required by Sub clause.2 of Sec.10 of The Karnataka State Minorities Commission Act,1994 a memorandum explaining the action taken or proposed to be taken on the recommendations of the Commission is also to be placed... ಅಂದರೆ ಇವರು ಏನು amendment ಮಾಡುತ್ತಾರೆ, that is also to be placed along with the original one. That is the meaning. What is read, I am reading this again. ತಾವೇ ಓದಿರುವುದು, it is also to be placed before each house of the State Legislature.... it is also ಅಂದರೆ.. original with their recommendations... That's all. They have to present. Then, there is no ambiguity at all. It is very clear.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೆ, ಪುಟ ಸಂಖ್ಯೆ.268ನ್ನು ನೋಡಬೇಕು. 1985ರಿಂದ ಈ ಆಯೋಗ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಒಟ್ಟು 284 ಶಿಫಾರಸ್‌ಗಳು ಇವೆ. ಒಟ್ಟು 9 ಜನ ಅಧ್ಯಕ್ಷರಾಗಿದ್ದಾರೆ. ಇಲ್ಲಿಯವರೆಗೆ ಬಂದಂತಹ ಯಾವ ಸರ್ಕಾರವು ಸದನದಲ್ಲಿ ಯಾವುದೇ ಶಿಫಾರಸ್‌ಗಳನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಇವರೆ ಹೇಳುವಂತೆ ಯಾವುದಾದ್ದರು ಇದೆ ಎಂದರೆ ಅದಕ್ಕೆ ಯಾವುದೆ precedence ಇಲ್ಲ. ಏಕೆ precedence ಇಲ್ಲ ಎಂದರೆ, ಇಲ್ಲಿಯವರೆಗೆ ಯಾವುದನ್ನು ಮಂಡನೆ ಮಾಡಿರುವುದಿಲ್ಲ. ಏಕೆ ಮಂಡಿಸಿರುವುದಿಲ್ಲ ಎಂದರೆ ಅದರ ಬಗ್ಗೆ ಇಲ್ಲಿಯವರೆಗೆ ಯಾರು demand

ಮಾಡಿರುವುದಿಲ್ಲ, ಕೇಳಿರುವುದಿಲ್ಲ. ಇವರಿಗೆ ಅಲ್ಪಸಂಖ್ಯಾತರ ಬಗ್ಗೆ ಯಾವುದೆ ಕಾಳಜಿ ಇಲ್ಲ ಅದಕ್ಕೋಸ್ಕರ ಮಾಡಿರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು, ತಾವು ಈಗ ಕೊಡುವ ರೂಲಿಂಗ್ ಇಡೀ ದೇಶಕ್ಕೆ ಮಾದರಿಯಾದ ಚಾರಿತ್ರಿಕವಾದ ರೂಲಿಂಗ್ ಆಗುತ್ತದೆ. ಎರಡನೆಯದಾಗಿ, ಯಾರ್‍ಯಾರು ಭ್ರಷ್ಟಾಚಾರ ಮಾಡಿದ್ದಾರೆ ಅವರೆಲ್ಲರಿಗೂ ಶಿಕ್ಷೆಯಾಗುವ ದಿಕ್ಕಿನಲ್ಲಿ ರೂಲಿಂಗ್ ಕೊಡುತ್ತೀರೊ ಅಥವಾ ರಕ್ಷಣೆಯಾಗುವ ರೀತಿಯಲ್ಲಿ ರೂಲಿಂಗ್ ಕೊಡುತ್ತಿರೊ ಅದನ್ನು ಇಡೀ ದೇಶ ನೋಡುತ್ತದೆ. ಮೂರನೆಯದಾಗಿ, ಯಾರ್‍ಯಾರು ಆ ಮುಸ್ಲಿಂ ಜನಾಂಗದ ಆಸ್ತಿಯನ್ನು ಲೂಟಿ ಮಾಡುವಂತಹ ವ್ಯವಸ್ಥೆ ಮಾಡಿದ್ದಾರೆ ಅವರನ್ನು ಬರಿ ಕರ್ನಾಟಕ ರಾಜ್ಯವಲ್ಲ ಇಡೀ ದೇಶದಲ್ಲಿಯ ಮುಸ್ಲಿಂ ಜನಾಂಗ ನೋಡುತ್ತಿರುತ್ತದೆ. ನಮ್ಮ ಆಸ್ತಿಯನ್ನು ಲೂಟಿ ಮಾಡುವಂತಹ ಜನರ ಮೇಲೆ ಸರ್ಕಾರ ನಿಜವಾಗಿಯು ಸರಿಯಾದ ಕ್ರಮ ತೆಗೆದುಕೊಂಡಿದೆ ಎಂದು ಹೇಳುವಲ್ಲಿ ನಿಮ್ಮ ರೂಲಿಂಗ್ ತೀರ್ಮಾನವಾಗುತ್ತದೆ. ಆದ್ದರಿಂದ ಇದೆಲ್ಲವನ್ನು ತಾವು ಗಮನಿಸಿ ರೂಲಿಂಗ್ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ತಮಗೆ ರೂಲಿಂಗ್ ಕೊಡಲು ಕಷ್ಟವಾಗುತ್ತದೆ ಅನ್ನಿಸಿದರೆ ಇನ್ನು ಒಂದೇರಡು ದಿನಗಳ ಸಮಯಬೇಕು ಎನ್ನಿಸಿದರೆ ತಾವು ಖಂಡಿತವಾಗಿ ಸಮಯ ತೆಗೆದುಕೊಳ್ಳಿ ನಮ್ಮದೇನು ಅಭ್ಯಂತರವಿಲ್ಲ. ಅಲ್ಲಿಯವರೆಗೆ ನಾವು ಇಲ್ಲಿಯೇ ಹಗಲು ರಾತ್ರಿ ಧರಣಿ ಕೊಡುತ್ತೇವೆ. ನಮಗೆ ಶಿವರಾತ್ರಿ ಬೇಡ, ಯಾವ ಹಬ್ಬವು ಬೇಡ. ನೀವು ತೀರ್ಮಾನ ತೆಗೆದುಕೊಂಡು ಒಂದೇರಡು ದಿನ ಬಿಟ್ಟು ಬನ್ನಿ ಹಗಲು-ರಾತ್ರಿ ನಾವು ಇಲ್ಲಿಯೇ ಧರಣಿ ಕೂತ್ತಿರುತ್ತೇವೆ. ತಮಗೆ ನಾವು ಒತ್ತಾಯ ಮಾಡುವುದಿಲ್ಲ. ತಾವು ಎಲ್ಲಾ ದಾಖಲೆಗಳನ್ನು ನೋಡಿ, ಯಾವ Advocate General ಏನು ಹೇಳಿದ್ದಾರೆ, ಕೋರ್ಟ್ ಏನು ಹೇಳಿದೆ ಎಲ್ಲವನ್ನು ನೋಡಿ ನೀವು ಎರಡು ದಿನ ಬಿಟ್ಟು ರೂಲಿಂಗ್ ಕೊಟ್ಟರು ನಾವು ಇಲ್ಲಿಯೇ ಧರಣಿ ಕುಳಿತು ತಾವು ತೀರ್ಮಾನ ತೆಗೆದುಕೊಳ್ಳಲು ಅವಕಾಶ ಕೊಡುತ್ತೇವೆ. ಅದು ನಿಮಗೆ ಬಿಟ್ಟಿದು.

(ಮುಂದು)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ತಾವು ಕೂಡಾ ಈಗ ಇಕ್ಕಟಿನಲ್ಲಿದ್ದಿರಿ ಎನ್ನುವುದು ನಮಗೆ ಗೊತ್ತಾಗುತ್ತದೆ. ಎರಡು ಕಡೆಯವರು ಏನಾದರೂ ಹೇಳಲಿ ತಾವು ಪುಸ್ತಕದ ಪ್ರಕಾರ ಕಾನೂನು ಪ್ರಕಾರ ಏನು ತೀರ್ಮಾನ ತೆಗೆದುಕೊಳ್ಳಬೇಕು ತೆಗೆದುಕೊಳ್ಳಿ. ಇನ್ನೊಂದು ವಿಚಾರ ಎಂದರೆ, ಇಷ್ಟು ವರ್ಷ ಸುಮ್ಮನೆ ಇದ್ದು ಇನ್ನು 10 ದಿನ ಸುಮಯ ಕೊಟ್ಟರೆ ಪ್ರಪಂಚ ಏನು ಪ್ರಳಯವಾಗುವುದಿಲ್ಲ. 19 ಅಥವಾ 20ನೇ ತಾರೀಖಿನಂದು ಈ ವಿಚಾರ ತೆಗೆದುಕೊಳ್ಳಲು ದಿನ ನಿಗದಿ ಮಾಡಿ. ಇದು ನನ್ನ ಸಲಹೆ ಮಾತ್ರ. ಇದನ್ನು ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿದು. 18ನೇ ತಾರೀಖು ಬಜೆಟ್ ಮಂಡನೆಯಾಗುತ್ತದೆ. 19 ಅಥವಾ 20ನೇ ದಿನಾಂಕವನ್ನು ನಿಗದಿ ಮಾಡಿ. ಇಲ್ಲದಿದ್ದರೆ ಇವರು-ಅವರು ಮಾತನಾಡಿದ್ದಾರೆ ಅದರ ಮೇಲೆ ನಿಯಮಾವಳಿಗಳ ಪ್ರಕಾರ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತಿರಿ ಅದನ್ನು ಅನೌನ್ಸ್ ಮಾಡಿ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಪದೇ-ಪದೇ ಇವರು ಹೈಕೋರ್ಟ್ ಆದೇಶ ಎಂದು ಹೇಳುತ್ತಾರೆ. It is not a High Court order. It is only on the submission, recording the said concession the Writ Petition is stand disposed of... ಇದರಲ್ಲಿ ಇನ್ನೊಂದು clarification ಏನೆಂದರೆ... the observation of the Court ಏನಿದೆಯೆಂದರೆ, in the order dated:10.09.2015 ought to be read in the context of the prayer made and so also recording the submission on behalf of the respondents.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇದರಲ್ಲಿ 'Order' ಎಂದು ಬರೆದಿದ್ದಾರೆ. ಕಾನೂನು ಸಚಿವರು ವಕೀಲರು ಹೌದು. ಇದನ್ನು ಆದೇಶ ಅಲ್ಲ ಎಂದರೆ ಇಡೀ ಕರ್ನಾಟಕದ ಜನ ಇಂತಹ ಕಾನೂನು ಸಚಿವರನ್ನು ನಾವು ಪಡೆದುಕೊಂಡಿರುವುದಕ್ಕೆ ನಾವೇ ಧನ್ಯರು ಎಂದು ಭಾವಿಸುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಸ್ವಲ್ಪ ನಾನು ಹೇಳುತ್ತೇನೆ, report means, it refers to action taken report on the recommendations of the Commission under Sec.10 (2) of the Act. **ವರದಿ ಎಂದಾಗ** ಒಟ್ಟಾರೆ ತಾತ್ಪರ್ಯ ಬರುವುದು ಈ ರೀತಿ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೆ, ಹಾಗಾದರೆ, ಈ ವಿಚಾರದಲ್ಲಿ ನ್ಯಾಯಾಲಯದ ನಿರ್ದೇಶನ ಇಲ್ಲವೆ?

**ಶ್ರೀ ಟಿ.ಬಿ.ಜಯಚಂದ್ರ:-** ಸ್ವಲ್ಪ ನಾನು ಹೇಳುವುದನ್ನು ಕೇಳಿ. Correspondences **ನಲ್ಲಿ** ಬೇಕಾದಷ್ಟು ಆಗಿರಬಹುದು.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೆ,

**ಸಭಾಪತಿಯವರು:-** ಮಧ್ಯ ಮಾತನಾಡಿದರೆ ಹೇಗೆ? ಮಾತನಾಡಬೇಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಸ್ವಲ್ಪ ಕೇಳಿ, matter is again pending in the Court. ಈಗಾಗಲೆ ಆ ಮನೆಯಲ್ಲಿ ವರದಿ ಮಂಡನೆಯಾಗಿದೆ. ಆದ್ದರಿಂದ ದಯಮಾಡಿ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ವಾದ-ಪ್ರತಿವಾದ ತಮ್ಮ ಬೇಡಿಕೆ ಏನು ಎನ್ನುವುದೆಲ್ಲವನ್ನು ನಾನು ಕೇಳಿದ್ದೇನೆ. ಒಂದೇರಡು observation ಗಳನ್ನು ನಾನು ಹಿಂದೆ ಮಾಡಿದೆ ಈಗ ಪುನ: ಮಾಡುತ್ತೇನೆ. ಅಲ್ಪಸಂಖ್ಯಾತ ಆಯೋಗದ ಬಗ್ಗೆ ತನಿಖೆ ಮಾಡಲು ಅನ್ವರ ಮಾನಪಾಡಿಯವರ ನೇತೃತ್ವದಲ್ಲಿ ಸಮಿತಿಯನ್ನು ಸರ್ಕಾರ ನೇಮಕ ಮಾಡಿತ್ತು, ಆ ಸಮಿತಿಯು ಬಹಳ ಹಿಂದೆಯೇ ವರದಿಯನ್ನು ಕೊಟ್ಟಿತು. ಆ ವರದಿಯನ್ನು ಸದನದಲ್ಲಿ ಏಕೆ ಮಂಡಿಸಬೇಕು ಎಂದರೆ, ಈ ವಿಷಯವಾಗಿ ಸದನದಲ್ಲಿ ಮಾನ್ಯ ಸಚಿವರು ಕೊಟ್ಟ ಉತ್ತರ ಹಕ್ಕುಚ್ಯುತಿಯಾಗುತ್ತದೆ ಇನ್ನೊಬ್ಬ ಗೌರವಾನ್ವಿತ ಸದಸ್ಯರು ನೋಟಿಸ್ ಕೊಟ್ಟಿದ್ದರು. ಆ ನೋಟಿಸ್‌ನ್ನು ಹಕ್ಕುಬಾಧ್ಯತಾ ಸಮಿತಿಯವರು ತೀರ್ಮಾನ ಮಾಡಿ ಎಂದು ನಾನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಿದೆ. ಆ ಸಮಿತಿಯವರು ಇದು ಹಕ್ಕುಚ್ಯುತಿಯಾಗುತ್ತದೆಯೇ ಇಲ್ಲವೆ ಎನ್ನುವುದನ್ನು ತೀರ್ಮಾನ ಮಾಡಲು ನಮಗೆ ಆ ವರದಿಬೇಕು, ಆ ವರದಿ ಇದ್ದರೆ ಮಾತ್ರ ನಾವು ಹಕ್ಕುಚ್ಯುತಿ ಬಗ್ಗೆ ತೀರ್ಮಾನ ಮಾಡಲು ಸಾಧ್ಯ ಇಲ್ಲದಿದರೆ ಸಾಧ್ಯವೆ ಇಲ್ಲ, ಆದ್ದರಿಂದ ದಯಮಾಡಿ ನಮಗೆ ಆ ವರದಿಯನ್ನು ಕೊಡಿಸಿ

ಎಂದು ಸಮಿತಿಯು ತನ್ನ ವರದಿಯಲ್ಲಿ ಕೊಟ್ಟಿದೆ. ಸಮಿತಿಯು ತನ್ನ ವರದಿಯಲ್ಲಿ ಇದನ್ನು ಕೇಳಿರುವ ಹಿನ್ನೆಲೆಯಲ್ಲಿ ಸದನದಲ್ಲಿ ಅದರ ಬಗ್ಗೆ ಸಾಕಷ್ಟು ವಾದ-ಪ್ರತಿವಾದ ನಡೆದ ಮೇಲೆ, ನಾನು ಹೌದು ಇದು ಹಕ್ಕುಬಾಧ್ಯತಾ ಸಮಿತಿಗೆ ಬೇಕಾಗುತ್ತದೆ ಎಂದು ನನಗೂ ಅನ್ನಿಸುತ್ತದೆ. ಆದ್ದರಿಂದ ಆ ವರದಿಯನ್ನು ಸದನದಲ್ಲಿ ಮಂಡಿಸಿ ಅವರಿಗೆ ಕೊಡಿ ಎಂದು ನಾನು ರೂಲಿಂಗ್‌ನ್ನು ಕೊಟ್ಟಿದೆ. ಆ ರೂಲಿಂಗ್‌ನ್ನು ಪುನ: ಪರಿಶೀಲನೆ ಮಾಡಬೇಕೆಂದು ಸರ್ಕಾರದವರು ನನ್ನನು ಕೇಳಿದಾಗ, ನಾನು ಸಾಕಷ್ಟು ಸಮಯವನ್ನು ತೆಗೆದುಕೊಂಡು ಅದರ ಬಗ್ಗೆ ಕೂಲಂಕಷವಾಗಿ ಎಲ್ಲವನ್ನು ನೋಡಿ ನಂತರ ನನ್ನ ತೀರ್ಮಾನವನ್ನು ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇಲ್ಲ, ಮೊದಲು ನಾನು ಏನು ಹೇಳಿದೆ ಅದರಂತೆ ನಡೆದುಕೊಳ್ಳಿ ಎಂದು ನಾನು ಸರ್ಕಾರಕ್ಕೆ ಹೇಳಿದೆ. In the meanwhile, ಯಾರೊ ಹೈಕೋರ್ಟ್‌ಗೆ ಹೋದಾಗ ಹೈಕೋರ್ಟ್ ಆದೇಶ ಈ ರೀತಿಯಾಗಿದೆ ಎಂದು ಮಾನ್ಯ ಮಧುಸೂದನ್‌ರವರು ಸದನದಲ್ಲಿ ವಿಷಯವನ್ನು ಎತ್ತಿದ ಹಿನ್ನೆಲೆಯಲ್ಲಿ, ಹೈಕೋರ್ಟ್‌ನಲ್ಲಿ ಏನು ಆಗಿದೆ ಎನ್ನುವ ಆದೇಶದ ಒಂದು ಕಾಪಿಯನ್ನು ನನಗೂ ಕೊಟ್ಟಿದ್ದಾರೆ. ಅವರಿಗೂ ಕೊಟ್ಟರು. ಹೈಕೋರ್ಟ್ ಆದೇಶ ಈ ರೀತಿಯಾಗಿರುವ ಕಾರಣಕ್ಕಾಗಿ ಅದರಲ್ಲಿ ಸ್ಪಷ್ಟವಾಗಿ ಆರ್ಡರ್ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಇದನ್ನು ಅವರು ಈಗಾಗಲೇ ಓದಿದ್ದಾರೆ. ನಾನು ಪುನ: ಅದನ್ನು ಓದಲು ಹೋಗುವುದಿಲ್ಲ. ಅದರಲ್ಲಿ ಏನು ಹೇಳಿದ್ದಾರೆ ಎಂದರೆ, *the report of the Karnataka State Minority Commission submitted to the Hon'ble Chief Minister on March 26th, 2012 shall be placed before both the Legislative Council and the Legislative Assembly of Karnataka in the February-2016 Session* ಎಂದು ಅವರು ಕೊಟ್ಟಿರುವ ಕಾರಣಕ್ಕಾಗಿ ಅದನ್ನು ನಾವು comply ಮಾಡೇ ಮಾಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ. ಸದನದಲ್ಲಿ ಚರ್ಚೆಯಾಗಿದೆ, Business Advisory Committee ನಲ್ಲಿ ಚರ್ಚೆಯಾಗಿದೆ. ಇದು ಎಲ್ಲಾ ಆದಮೇಲೆ ಮತ್ತೆ ಸದನದಲ್ಲಿ ಪ್ರಸ್ತಾಪವಾಗಿ, ಎರಡು-ಮೂರು ದಿನಗಳಲ್ಲಿ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡು ಮಂಡಿಸುತ್ತೇವೆ ಎಂದು ಸಭಾನಾಯಕರು ಮತ್ತು ಕಾನೂನು ಸಚಿವರು ಹೇಳಿದರು. ಇದೆಲ್ಲವು ನಡೆದಿರುವ ಘಟನೆಗಳು ಅದರ ಬಗ್ಗೆ ನಾನು ಹೇಳಿದೆ. ಈಗ ಸರ್ಕಾರದ ಪರವಾಗಿ ಮಂಡಿಸುತ್ತೇವೆ ಎಂದು ಹೇಳಿ ವಿಶೇಷವಾಗಿ ಶಿಫಾರಸ್‌ಗಳನ್ನು ಮಾತ್ರ ಮಂಡಿಸಿ ಸೆಕ್ಷನ್.10(2) ಪ್ರಕಾರ ನಾವು ಇಷ್ಟನ್ನು ಮಾತ್ರ ಮಂಡಿಸಲು ಬರುತ್ತದೆ ಬೇರೆಯದನ್ನು ಮಂಡಿಸಲು ಬರುವುದಿಲ್ಲ ಎಂದು ಅವರು ಹೇಳಿದ್ದಾರೆ. ಆ ಚರ್ಚೆ ಬಂದಾಗ ಕೋರ್ಟ್ ಆದೇಶ ಬಂದಿದೆ, ನೀವೆ ಕಮಿಟ್ ಮಾಡಿಕೊಂಡಿದ್ದಿರಿ ಎಂದಾಗ ಚರ್ಚೆ ಮಾಡುತ್ತಾ ಅವರು

ಹೇಳಿದರು, ನಾವು ಇವತ್ತಿನ Advocate General opinion ತೆಗೆದುಕೊಂಡಿದ್ದೆವೆ. Opinion ಏನು ಕೊಟ್ಟಿದ್ದಾರೆ ಎನ್ನುವುದಕ್ಕೆ ಈಗ ನಮ್ಮ ಹತ್ತಿರ ಕಾಪಿ ಇಲ್ಲ ನಂತರ ಕೊಡುತ್ತೇವೆ ಎಂದು ಹೇಳಿ, ನಂತರ ನನ್ನ ಕಛೇರಿಗೆ ಬಂದು ಅದರ ಕಾಪಿಯನ್ನು ಕೊಟ್ಟಿದ್ದಾರೆ ಮತ್ತು ಅದನ್ನು ಇಲ್ಲಿ ಓದಿಯು ಹೇಳಿದ್ದಾರೆ. Advocate General ರವರು ಕೊಟ್ಟಿರುವ ವರದಿಯಲ್ಲಿರುವುದನ್ನು ಸ್ವಲ್ಪ ಇಲ್ಲಿ ಓದುತ್ತೇನೆ. ಇದಕ್ಕಿಂ ಮುಂಚೆ ಸರ್ಕಾರ Advocate General ರವರಿಗೆ ಒಂದು ಪತ್ರವನ್ನು ಬರೆದಿದೆ. ಏನು ಎಂದರೆ '*an opinion is sought on the issue as to whether placing of the recommendation of the Commission before the Legislature along with the memorandum containing reasons for not accepting these recommendations under Sec.10(2) of the Act would mean and include pacing of the entire report are not particularly in the context of the observations made by the Hon'ble High Court …* ಎಂದು ಸರ್ಕಾರ Advocate General ರವರಿಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರಕ್ಕೆ Advocate General ತಮ್ಮ ಅಭಿಪ್ರಾಯ ಬರೆದು ಕಳುಹಿಸಿದ್ದಾರೆ. ಅದರಲ್ಲಿ 7–8 ಅಂಶಗಳಿದೆ. ಬೇಕಾದರೆ ನಂತರ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ಅದರಲ್ಲಿ ಅಂತೇನೂ ಇಲ್ಲ. ಉದ್ದವಾಗಿ ಬರೆದುಕೊಂಡು ಹೋಗಿದ್ದಾರೆ. ಅದರಲ್ಲಿ ಒಂಬತ್ತನೇ ಅಂಶ ಇದು. ಏನಿದೆಯೆಂದರೆ, *even though the recording of submissions by the Counsel to the effect that the report to be placed before House in terms of the requirements under Sec.10(2), it is to be understood as a submission in response to the prayer made in the Writ Petition which was to the effect, the special report be placed before the Legislature as mandate by Sec.10(2) of the Act. The mandate of Sec.10(2) contemplated if the recommendations being laid before the House and therefore in my opinion it would be sufficient compliance if the recommendations are placed before the Legislature*

*along with the memorandum containing the reasons for non-acceptance of the recommendations and would not necessarily include placing of the entire report'* ಎಂದು ಬರೆದಿರುವುದನ್ನು ನನಗೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಆಗಲೇ ನಾನು ಸದನದಲ್ಲಿ ಒಂದು ಮಾತನ್ನು ಹೇಳಿದೆ, ಸರ್ಕಾರವಾಗಲಿ ವಿರೋಧ ಪಕ್ಷವಾಗಲಿ ಬೇಗ ಗಮನಿಸಲಿಲ್ಲ ಎಂದು ನಾನು ಹೇಳಬಯಸುತ್ತೇನೆ. ನಾನು *Advocate* ಅಲ್ಲ Judge ಕೂಡ ಅಲ್ಲ. ದೇವರು ಕೊಟ್ಟಿರುವ ಜ್ಞಾನದ ಹಿನ್ನೆಲೆಯಲ್ಲಿ ಕೆಲವು ವಿಷಯಗಳನ್ನು ತೀರ್ಮಾನ ಮಾಡಿ ಹೇಳುತ್ತಾ ಹೋಗುತ್ತೇನೆ. ಸಾಕಷ್ಟು ಹೇಳಿದ್ದೆನೆ ಸಾಕಷ್ಟು ನನಗೂ ಅರ್ಥವಾಗುತ್ತದೆ. ಇದು ತುಂಬಾ complicated matter ಇದೆ. ಕಾನೂನು ಯಾವ ರೀತಿ interpret ಮಾಡಬೇಕು ಎನ್ನುವುದನ್ನು ಕಾನೂ ತಜ್ಞರಿಂದಲೆ ಕೇಳಬೇಕು. ನಾನು ಹಿರಿಯ ಕಾನೂನು ತಜ್ಞರನ್ನು ಸಂಪರ್ಕಿಸಬೇಕಾಗುತ್ತದೆ. 'Like' ಎನ್ನುವ ಪದವನ್ನು ಉಪಯೋಗಿಸುತ್ತೇನೆ. ಅದಕ್ಕಾಗಿ Advocate General, ಅಂಥವರನ್ನು ಸಂಪರ್ಕಿಸಬೇಕಾಗುತ್ತದೆ. ಎಲ್ಲರನ್ನು ಭೇಟಿ ಮಾಡಿ ಚರ್ಚೆ ಮಾಡಿ ನಂತರ ಯಾವುದು ತಪ್ಪು ಯಾವುದು ಸರಿ, ನಿಮ್ಮ ಗ್ರಹಿಕೆ ತಪ್ಪಾ, ಅವರ ಗ್ರಹಿಕೆ ತಪ್ಪಾ ಎನ್ನುವುದನ್ನು ತೀರ್ಮಾನ ಮಾಡಲು ಸಮಯಬೇಕಾಗುತ್ತದೆ. ಈ ನಿಮಿಷಕ್ಕೆ ತೀರ್ಮಾನ ಮಾಡಿ ಹೇಳಿ ನಾವು ಒಪ್ಪಿಕೊಳ್ಳುತ್ತೇವೆ ಎಂದರೆ, ನೀವು ಒಪ್ಪಿಕೊಳ್ಳುತ್ತೀರಿ ಆದರೆ ನಾನು ಕೊಡುವ ತೀರ್ಮಾನ ಚಾರಿತ್ರಿಕ ತೀರ್ಮಾನವಾಗಬೇಕು. ಇವತ್ತು ಮಾತ್ರ ಅಲ್ಲ ಮುಂದಕ್ಕೂ ಇಡೀ ದೇಶದಲ್ಲಿಯೇ ಇದರ ಬಗ್ಗೆ ಪ್ರತಿಧ್ವನಿಸುತ್ತದೆ. ಆದ್ದರಿಂದ ನಾನು ಯಾವುದೆ ತೀರ್ಮಾನವನ್ನು ಕೊಡಬೇಕಾದರೆ ತುಂಬಾ ಹುಷಾರಾಗಿ ಕೊಡಬೇಕಾಗುತ್ತದೆ. ಪ್ರತಿದಿನದ ವಿಷಯವಾಗಿದ್ದರೆ ತಕ್ಷಣ ಅಲ್ಲಿಯೇ ತೀರ್ಮಾನ ಹೇಳಬಹುದು, ಅಥವಾ ಪುಸ್ತಕವನ್ನು ನೋಡಿ ಹೇಳಬಹುದು. ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ನನಗೆ ಸ್ವಲ್ಪ ಸಮಯಬೇಕು ಎಂದು ಕೇಳಿದೆ.

(ಮುಂದು)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ಗೌರವಾನ್ವಿತ ಎಲ್ಲ ಸದಸ್ಯರ ಮನಸ್ಸಿನಲ್ಲಿ ಸರ್ಕಾರ ಇವತ್ತು ಸಾಯಂಕಾಲ ವರದಿಯನ್ನು ಮಂಡಿಸುತ್ತದೆ, ವರದಿಯನ್ನು ನಾವು ಕೈಯಲ್ಲಿ ತೆಗೆದುಕೊಂಡು ಹೋಗಬಹುದು ಎನ್ನುವ ಭಾವನೆಯಲ್ಲಿ ಅವರು ಇವತ್ತು ಬಂದಿರುವುದು ಸತ್ಯ. ನನ್ನ ಮನಸ್ಸಿನಲ್ಲಿಯು ಹಾಗೆಯೇ ಇತ್ತು. ಪ್ರಮಾಣಿಕವಾಗಿ ಹಾಗೆ ಇತ್ತು. ಇಡೀ ವರದಿಯನ್ನು Action Taken Report ಜೊತೆಗೆ ಮಂಡಿಸುತ್ತಾರೆ ಎನ್ನುವುದು ನನ್ನ ಮನಸ್ಸಿನಲ್ಲಿ ಇತ್ತು. ಆದರೆ ಈಗ ಹೊಸ ವಿಷಯವನ್ನು, ಹೊಸ ಸಂಗತಿಗಳನ್ನು ಪ್ರಸ್ತಾಪ ಮಾಡಿರುವ ಹಿನ್ನೆಲೆಯಲ್ಲಿ ನಾನು ಇದನ್ನು ಯಾವುದೆ ಉದ್ವೇಗಕ್ಕೆ ಒಳಗಾಗಿ ತೀರ್ಮಾನ ಮಾಡುವುದು ತಪ್ಪಾಗುತ್ತದೆ. ಆದ್ದರಿಂದ ನಾನು ಮತ್ತೊಮ್ಮೆ ಕೆಲವು ಕಾನೂನು ತಜ್ಞರನ್ನು ಕರೆಯಿಸುತ್ತೇನೆ, ಸಾಧ್ಯವಾದರೆ ಸರ್ಕಾರದವರೆ ಯಾರಾನಾದರೂ ಕೊಡುತ್ತಾರೊ ಕೇಳುತ್ತೇನೆ, ವಿರೋಧ ಪಕ್ಷದವರನ್ನು ಕೇಳುತ್ತೇನೆ. ವಿಷಯ ತಿಳಿದವರನ್ನು ಕರೆಯಿಸಿ ಅವರ ಜೊತೆಯಲ್ಲಿ ನಾನು ಕೂಲಂಕಷವಾಗಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಈಗ ನನಗೆ ಅನ್ನಿಸುತ್ತಿದೆ. ಈ ನಿಮಿಷಕ್ಕೆ ನಾನು ತೀರ್ಮಾನ ಹೇಳಿಬಿಟ್ಟರೆ ಕಷ್ಟವಾಗುತ್ತದೆ. ತೀರ್ಮಾನ ತೆಗೆದುಕೊಳ್ಳಲು ಸಮಯ ತೆಗೆದುಕೊಳ್ಳಿ, ನೀವು ಎಷ್ಟು ಸಮಯ ತೆಗೆದುಕೊಳ್ಳುತ್ತಿರಿ ಅಷ್ಟು ಸಮಯ ನಾವು ಇಲ್ಲೇ ಕುಳಿತ್ತಿರುತ್ತೆವೆ ಎಂದು ಹೇಳುವುದು.. ಪ್ರಜಾಪ್ರಭುತ್ವದಲ್ಲಿ ಈ ರೀತಿ ಧರಣಿ ಮಾಡುವುದು, ಸರ್ಕಾರದ ಮೇಲೆ ಒತ್ತಡ ತರುವುದು, ನಾವು ಹೇಳುವುದು ನ್ಯಾಯವಾಗಿದೆ, ತಾವು ಇದನ್ನು ಮಾಡುತ್ತಿಲ್ಲ ಎಂದು ಕೇಳುವ ಅಧಿಕಾರ ವಿರೋಧ ಪಕ್ಷಕ್ಕೆ ಅಥವಾ ಬೇರೆ ಯಾರೆ ಸದಸ್ಯರಿಗೆ ಇದೆ. ಆಡಳಿತ ಪಕ್ಷದವರು ಸಹ ಧರಣಿ ಮಾಡಬಹುದು. ವೈಯಕ್ತಿಕ ವಿಷಯಕ್ಕೆ ಆಡಳಿತ ಪಕ್ಷದ ಸದಸ್ಯರು ಧರಣಿ ಮಾಡಿರುವುದನ್ನು ನಾನು ನೋಡಿದ್ದೆನೆ. ಆ ಹಿನ್ನೆಲೆಯಲ್ಲಿ ನಾನು ಎಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನನಗೆ ಸ್ವಲ್ಪ ಸಮಯ ಅವಕಾಶವನ್ನು ಕೊಡಿ, ಅರ್ಧ ದಿನದಲ್ಲಿ, ಒಂದು ದಿನದಲ್ಲಿ ತೀರ್ಮಾನ ಮಾಡಲು ಆಗುವುದಿಲ್ಲ. ನಾಡಿದ್ದು ಶಿವರಾತ್ರಿ ಹಬ್ಬಕ್ಕೆ ಹೋಗಬೇಕು. ನಾವು ಬೇರೆ-ಬೇರೆ ಕಡೆ ಹೋಗಲು ಪ್ರವಾಸ ಹಾಕಿಕೊಂಡಿದ್ದವೆ. ಈ ಎಲ್ಲದರ ಹಿನ್ನೆಲೆಯಲ್ಲಿ ನನಗೆ ಸ್ವಲ್ಪ ಸಮಯ ಕೊಡಿ ಎಂದು ಕೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಶಿಫಾರಸ್‌ಗಳನ್ನು ಮಂಡನೆ ಮಾಡಿರುವುದರಿಂದ ದಯಮಾಡಿ ಇದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. ಎರಡನೆಯದಾಗಿ, ತಾವು ಎರಡು ದಿನ ಅಥವಾ ನಾಲ್ಕು ದಿನ ಎಷ್ಟು ಬೇಕಾದರು ಸಮಯ ತೆಗೆದುಕೊಳ್ಳಿ

ನಮ್ಮದೇನು ಒತ್ತಾಯವಿಲ್ಲ. ದಯಮಾಡಿ ಅಲ್ಲಿಯವರೆಗೆ ನಮಗೆ ಧರಣಿ ಮಾಡಲು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಏನು ಆಗುತ್ತದೆ ಎಂದರೆ, ಇಲ್ಲಿ ಮಂಡನೆ ಮಾಡುತ್ತಾರೆ ಎನ್ನುವ ವಿಷಯವನ್ನು ತಿಳಿದುಕೊಂಡು ಕೋರ್ಟ್‌ಗೆ ಹೋಗಿದ್ದಾರೆ. ಮಂಡನೆ ಮಾಡುತ್ತೇವೆ ಎಂದು Business Advisory Committee ನಲ್ಲಿ ತೀರ್ಮಾನ ಮಾಡಿದ ನಂತರ ಕೋರ್ಟ್‌ಗೆ ಹೋಗಿದ್ದಾರೆ ಎಂದರೆ ಇದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ ಹೌದೊ ಅಲ್ಲವೊ ಹೇಳಿ. ಸಮಯ ಕೊಟ್ಟಷ್ಟು ಲೂಟಿ ಮಾಡಿದವರಿಗೆ ರಕ್ಷಣೆ ಕೊಟ್ಟಹಾಗೆ ಆಗುತ್ತದೆಯೇ ಇಲ್ಲವೆ? ಅದಕ್ಕಾಗಿ ನೀವು ಎಷ್ಟು ದಿನಗಳ ಸಮಯ ಬೇಕಾದರೂ ತೆಗೆದುಕೊಳ್ಳಿ, ರಾಜ್ಯದ ಜನರ ಆಸ್ತಿಯನ್ನು ಉಳಿಸುವುದೆ ನಮಗೆ ಶಿವರಾತ್ರಿ. ಎಷ್ಟು ಸಮಯಬೇಕಾದರೂ ತೆಗೆದುಕೊಳ್ಳಿ ನಾವು ಹಗಲು-ರಾತ್ರಿ ಇಲ್ಲೇ ಇರುತ್ತೇವೆ. ನಮಗೆ ಊಟ-ತಿಂಡಿ, ಬೆಡ್‌ಸೀಟ್ ಏನು ಕೊಡಬೇಡಿ. ನಾವು ಇಲ್ಲೇ ಇರುತ್ತೇವೆ. ಎಷ್ಟು ದಿನಗಳ ಸಮಯಬೇಕು ತೆಗೆದುಕೊಳ್ಳಿ. ಈಗ ನೀವು ಏನಾದರೂ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಿದರೆ ನಾನು ಹೇಳುತ್ತೇನೆ, ಆ ಎಲ್ಲಾ ಭ್ರಷ್ಟರಿಗೂ ರಕ್ಷಣೆ ಸಿಗುತ್ತದೆ. ಆದ್ದರಿಂದ ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ನೀವು ಒಂದು ವಾರ ಸಮಯ ತೆಗೆದುಕೊಳ್ಳಿ ನಾವು ಅಲ್ಲಿಯವರೆಗೂ ಇಲ್ಲಿಯೇ ಇರುತ್ತೇವೆ. ನಂತರ ಬಂದು ನಿಮ್ಮ ರೂಲಿಂಗ್ ಕೊಡಿ. ಮತ್ತೆ ಹೇಳುತ್ತೇನೆ, ನಾನು ಕಾನೂನು ತಜ್ಞನಲ್ಲ. ಮೇಲ್ನೋಟಕ್ಕೆ ಕಂಡಿರುವುದು ವರದಿಯನ್ನು ಮಂಡನೆ ಮಾಡುತ್ತಾರೆ ಎನ್ನುವುದು. ಆದರೆ ಶಿಫಾರಸ್‌ಗಳನ್ನು ಮಂಡನೆ ಮಾಡುತ್ತಾರೆ ಎನ್ನುವುದು ನಿಮ್ಮ ಕಲ್ಪನೆಗೂ ಇರಲಿಲ್ಲ. ಈಗ ಈ ಶಿಫಾರಸ್‌ನ್ನು ವಾಪಸ್ಸ ತೆಗೆದುಕೊಳ್ಳಲಿ ನಂತರ ನಿಮಗೆ ಎಷ್ಟು ದಿನ ಸಮಯಬೇಕು ಸಮಯ ತೆಗೆದುಕೊಳ್ಳಿ. ಅಲ್ಲಿಯವರೆಗೆ ನಾವು ಧರಣಿ ಕೂಡಲು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಂಡಿಸಿರುವ ಶಿಫಾರಸ್‌ಗಳನ್ನು ವಾಪಸ್ ತೆಗೆದುಕೊಳ್ಳುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಅದನ್ನು ವಾಪಸ್ ತೆಗೆದುಕೊಳ್ಳಿ ಇಲ್ಲಾ ಅದೇ ಶಾಶ್ವತ ಎಂದು ಹೇಳುವ ಅಧಿಕಾರ ನನಗೆ ಇಲ್ಲ. ಮಂಡಿಸಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳುವ ಅಧಿಕಾರ ಅವರಿಗೆ ಇರುತ್ತದೆ. ಅವರು ಇಷ್ಟಪಟ್ಟರೆ ವಾಪಸ್ ತೆಗೆದುಕೊಳ್ಳಬಹುದು. ಆದರೆ ದಯಮಾಡಿ ನನಗೆ ಸಮಯ ತೆಗೆದುಕೊಳ್ಳಲು ಹೇಳಿ ತಾವು ಇಲ್ಲಿ ಧರಣಿ ಮುಂದುವರೆಸಿದ್ದರೆ ಒಂದು ರೀತಿಯ ಒತ್ತಡ ಪ್ರಾರಂಭವಾಗುತ್ತದೆ. ಆದ್ದರಿಂದ ದಯಮಾಡಿ ಧರಣಿ ಬೇಡ. ಮುಂದೆ ಅವಕಾಶ ಸಿಕ್ಕಾಗ ಕೇಳಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, 18ನೇ ತಾರೀಖಿನೊಳಗೆ ಸಮಯವನ್ನು ಕೊಟ್ಟರೆ, ಬರೆದಿಟ್ಟುಕೊಳ್ಳಿ ಆ ಎಲ್ಲಾ ಭ್ರಷ್ಟರಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಇವರು ತಯಾರಾಗುತ್ತಾರೆ. ಇವರು ಬುದ್ಧಿವಂತರು ರಕ್ಷಣೆ ಮಾಡಿಬಿಡುತ್ತಾರೆ. ಅದರಲ್ಲಿ ತಾವು ಕೂಡಾ ಪಾಲುದಾರರಾಗುತ್ತೀರಿ.

**ಶ್ರೀ ಟಿ.ಬಿ.ಜಯಚಂದ್ರ( ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಆ ರೀತಿ ಮಾಡಲು ಸಾಧ್ಯವಾಗಿದ್ದರೆ .....

(ಗೊಂದಲ)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ದಯಮಾಡಿ ನಾನು ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಅವರು ಹೇಳುವುದನ್ನು ಹೇಳಿದ್ದಾರೆ, ಇವರು ಹೇಳುವುದನ್ನು ಹೇಳಿದ್ದಾರೆ. ಮುಂದೆ ತೀರ್ಮಾನವನ್ನು ಪೀಠಕ್ಕೆ ಬಿಡಿ. ವಾಪಸ್ ತೆಗೆದುಕೊಳ್ಳಲು ಹೇಳಿದ್ದಾರೆ. ತೆಗೆದುಕೊಳ್ಳುವುದು ಬಿಡುವುದು ಸರ್ಕಾರಕ್ಕೆ ಬಿಟ್ಟಿದು. Pressure create ಮಾಡುವ ರೀತಿಯಲ್ಲಿ ಪೀಠಕ್ಕೆ ಆಗಬಾರದು, ನಿಮ್ಮ ಮೇಲೆ ನಾನು ಹೇಳುತ್ತಿಲ್ಲ. ಆದರೆ ಪೀಠಕ್ಕೆ Pressure create ಮಾಡುವುದು ಸರಿಯಲ್ಲ, ಇವರು ಮಾಡುವುದು ಸರಿಯಲ್ಲ, ಅವರು ಮಾಡುವುದು ಸರಿಯಲ್ಲ. ನಾಡಿದ್ದು ಹಬ್ಬ ಇದೆ. ಎಲ್ಲರೂ ಊರುಗಳಿಗೆ ಹೋಗಬೇಕು. ಇನ್ನು 10ದಿನಗಳಲ್ಲಿ ಪ್ರಪಂಚ ಏನು ಮುಳಗಿ ಹೋಗುವುದಿಲ್ಲ. 19 ಅಥವಾ 20ನೇ ತಾರೀಖನ್ನು ನಿಗದಿ ಮಾಡಿ. ಮಾನ್ಯ ಸಭಾಪತಿಗಳೆ ತಾವು ಅವರನ್ನು ಕೇಳುತ್ತೇನೆ ಇವರನ್ನು ಕೇಳುತ್ತೇನೆ ಎಂದು ಇಲ್ಲಿ ಅನೌನ್ಸ್ ಮಾಡುವುದು ಬೇಕಾಗಿಲ್ಲ. ನಿಮಗೆ ಯಾರ ಹತ್ತಿರ ಮಾತನಾಡಬೇಕು ಅನ್ನಿಸುತ್ತದೆ ಅವರ ಜೊತೆ ಮಾತನಾಡಿ. ತಾವು ಇಲ್ಲಿ ಹೇಳಿರುವುದು ತಮ್ಮ ಉದಾರತ್ವ ಅದು. ನಿಮಗೆ ಬೇಕಾದ ರೀತಿಯಲ್ಲಿ ಯಾರನಾದರೂ ಕರೆಯಿಸಿಕೊಂಡು ಮಾತನಾಡುವಂತಹ ಅಧಿಕಾರ ನಿಮಗೆ ಸಂಪೂರ್ಣವಾಗಿ ಇದೆ. ವಿರೋಧ ಪಕ್ಷದವರ ಜೊತೆಯಲ್ಲಿ ಮಾತನಾಡಿ, ಆಡಳಿತ ಪಕ್ಷದವರ ಜೊತೆಯಲ್ಲಿ ಮಾತನಾಡಿ, ನಿಮಗೆ ಯಾರು ಸೂಕ್ತ ಅನ್ನಿಸುತ್ತದೆ ಅವರ ಹತ್ತಿರ ಮಾತನಾಡಿ, ಸೂಕ್ತವಾದ ಕಾನೂನುಬದ್ಧವಾದ ತೀರ್ಮಾನವನ್ನು ತೆಗೆದುಕೊಳ್ಳಿ. ಆದರೆ ವಿರೋಧ ಪಕ್ಷದ ನಾಯಕರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ ನಾಲ್ಕು ದಿನಗಳಾಗಲ್ಲಿ ಐದು ದಿನಗಳಾಗಲ್ಲಿ ನಾವು ಇಲ್ಲೆ ಇರುತ್ತೇವೆ ಎನ್ನುವುದು ದಯಮಾಡಿ ಬೇಡ. ನಾವು ಎಲ್ಲರೂ ಒಂದೇ ಇಲ್ಲಿ. ವಿಷಯಗಳು ಬೇರೆ-ಬೇರೆ ಇರಬಹುದು. ನಾವು ಎಲ್ಲರೂ ಒಟ್ಟಿಗೆ ಇದ್ದೆವೆ.

ದಯಮಾಡಿ 19 ಅಥವಾ 20ನೇ ತಾರೀಖಿಗೆ ನಿಗದಿ ಮಾಡಿ ಅವತ್ತು ನೀವು ಮಾತನಾಡಿ, ಅವರು ಏನು ಹೇಳುತ್ತಾರೆ ಕೇಳಿ. ಇವರ ಮಾತುಗಳನ್ನು ಕೇಳಿ ತಾವು ತೀರ್ಮಾನವನ್ನು ತೆಗೆದುಕೊಳ್ಳಿ. ಅದಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಗಳೆ, ತಾವು ರೂಲಿಂಗ್ ತಡೆಹಿಡಿದ ಮೇಲೆ ಇದುವರೆಗೆ ಏನು present ಮಾಡಿದ್ದಾರೆ it will have no value. ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು.

SRI T.B.JAYACHANDRA:- It is the decision of the Cabinet, not my opinion. ಸರ್ಕಾರ ಮಂಡನೆ ಮಾಡಿರುವುದನ್ನು ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದೆ ಇಲ್ಲ.

**ಶ್ರೀ ರಾಮಚಂದ್ರಗೌಡ**:- ಅನೇಕ ಸಾರಿ ಇಟ್ಟಿರುವ ಬಿಲ್‌ಗಳನ್ನು ವಾಪಸ್ ತೆಗೆದುಕೊಂಡಿರುವಂತಹ ಪ್ರಸಂಗಗಳು ಇವೆ. This House is supreme. ಹಿಂದೆ ಕಂದಾಯ ಸಚಿವರಾದ ಮಾನ್ಯ ರಾಚಯ್ಯನವರು ಇಟ್ಟಿರುವ ಬಿಲ್‌ನ್ನು ವಾಪಸ್ ತೆಗೆದುಕೊಂಡರು. ಮಾನ್ಯ ಯಡಿಯೂರಪ್ಪನವರು ಒಬ್ಬರೆ ಧರಣಿ ಕುಳಿತ್ತಿದರು. ಇವತ್ತು ಮಂಡನೆ ಮಾಡಿರುವುದು ಏನಿದೆ, it has no value because ruling is reserved. ರೂಲಿಂಗ್ ಬರುವವರೆಗೆ ಅವರು ಇಲ್ಲಿ ಏನೇ ಕಡತ ಇಟ್ಟಿರಲಿ ಅದಕ್ಕೆ ಬೆಲೆ ಇಲ್ಲ. ಆದ್ದರಿಂದ ನಾವು ಮನವಿ ಮಾಡಿಕೊಳ್ಳುತ್ತೇವೆ ದಯಮಾಡಿ ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

**ಸಭಾಪತಿಯವರು**:- ಸಚಿವರು ಹೇಳಲಿ.

SRI S.R.PATIL:- It is the decision of the Government, not the decision of the House.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಗಳೆ, ಸರ್ಕಾರ ಮಂಡನೆ ಮಾಡಿರುವ ಶಿಫಾರಸ್ ಮೇಲಿನ ರೂಲಿಂಗ್‌ನ್ನು ತಾವು ಪೆಂಡಿಂಗ್ ಇಟ್ಟಿದ್ದಿರಿ. Decision ವಾಪಸ್ ತೆಗೆದುಕೊಂಡರೆ then what remains? ರೂಲಿಂಗ್ ಬೇಕಾಗಿಲ್ಲ. ಆದ್ದರಿಂದ ಈ ರೀತಿಯ ಅನೇಕ legal hurdles

ಬಂದಂತಹ ಸಂದರ್ಭದಲ್ಲಿ Union Government ನವರು ಸುಪ್ರಿಮ್ ಕೋರ್ಟ್‌ಗೆ ರೆಫರ್ ಮಾಡಿದ್ದಾರೆ. ಸುಪ್ರಿಮ್ ಕೋರ್ಟ್‌ನ opinion ತೆಗೆದುಕೊಂಡಿರುವಂತಹ precedents ಗಳು ಇವೆ. ಅದೇ ರೀತಿ opinion of the judiciary ತೆಗೆದುಕೊಳ್ಳಲು, examine ಮಾಡಲು ಸಾಧ್ಯವೆ ಎನ್ನುವುದು ಬೇರೆ ಪ್ರಶ್ನೆ. ಆದರೆ ವಾಪಸ್ ತೆಗೆದುಕೊಂಡರೆ ತಾವು ರೂಲಿಂಗ್ ಕೊಡಲು ಅಲ್ಲಿ ಏನು ಉಳಿಯುವುದಿಲ್ಲ. ಆದ್ದರಿಂದ ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಈ ಹಂತದಲ್ಲಿ ಉದ್ಭವವಾಗುವುದಿಲ್ಲ, ವಾಪಸ್ ತೆಗೆದುಕೊಳ್ಳಬಾರದು ಎಂದು ಹೇಳಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ:-** ಇದನ್ನು ಸರ್ಕಾರ ಮಂಡನೆ ಮಾಡಿರುವುದಿಲ್ಲ. ತಾವು ಮಂಡನೆ ಮಾಡಿರುವುದು. ನಿಮ್ಮ ಮುಖಾಂತರ ಮಂಡನೆ ಮಾಡಿದ್ದಾರೆ.

**ಸಭಾಪತಿಯವರು:-** ಸರ್ಕಾರ ಮಂಡಿಸಬೇಕೊ, ಸಭಾಪತಿಯವರು ಮಂಡಿಸಬೇಕೊ ಎನ್ನುವ procedural problems ಬಂದಾಗ, ತಾವು ಮಂಡಿಸಿದರೆ ಸೂಕ್ತವಾಗುತ್ತದೆ ಎನ್ನುವ ಅಭಿಪ್ರಾಯ ಸರ್ಕಾರದಿಂದ ಬಂತು. ನಾನು ಮಂಡಿಸಿದ್ದೇನೆ. ಈಗ ಅದು ಸದನದ ಆಸ್ತಿ. ಮಂಡಿಸಿರುವ ಸದನದ ಆಸ್ತಿಯನ್ನು ವಾಪಸ್ ತೆಗೆದುಕೊಳ್ಳಬೇಕು ಅಥವಾ ಸ್ಟೇ ಮಾಡಬೇಕು ಎಂದರೆ ಮತ್ತೆ ಅದೊಂದು ಕಾನೂನಿನ ಪ್ರಶ್ನೆಯಾಗುತ್ತದೆ. ಆದ್ದರಿಂದ ದಯಮಾಡಿ ಅದಕ್ಕಾಗಿ ಒತ್ತಾಯ ಮಾಡಬೇಡಿ.

(ಮುಂದು)

**ಶ್ರೀ ಟಿ.ಬಿ. ಜಯಚಂದ್ರ:-** ನಾವು ಮಂಡಿಸಿರುವ ವರದಿಯನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಇಲ್ಲ, ತಾವು ಯಾರಿಗೆ ಬೇಕಾದರೂ ರೆಫರ್ ಮಾಡಿ ನಂತರ ತೀರ್ಪು ಕೊಡಿ. ಈಗ ಸಭೆಯನ್ನು ಮುಂದಕ್ಕೆ ಹಾಕಿ, ಎಲ್ಲರೂ ಹಬ್ಬ ಮಾಡಬೇಕು.

ಡಾ: ವೀರಣ್ಣ ಮತ್ತಿಕಟ್ಟಿ:- ಎಲ್ಲರೊಡನೆ ಸಮಾಲೋಚಿಸಿ ನಿರ್ಧಾರ ಕೊಡುವ ಬಗ್ಗೆ ತಿಳಿಸಿದ್ದೀರಿ. ಇದು ಅತ್ಯಂತ ಉತ್ತಮವಾದ ವಿಚಾರ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಮಧುಸೂದನ್ ಸೇರಿದಂತೆ ಎಲ್ಲರಿಗೆ ವಿನಂತಿ ಮಾಡುವುದೇನೆಂದರೆ, ಬಹುಶ: ಪೀಠವನ್ನು ಈ ರೀತಿ ಇಕ್ಕಟ್ಟಿಗೆ ಸಿಲುಕಿಸುವ ಪರಿಸ್ಥಿತಿ......

ಶ್ರೀ ಕೆ.ಎಸ್. ಈಶ್ವರಪ್ಪ:- ಖಂಡಿತ ಇಲ್ಲ, ನಾವು ಸದನ ನಡೆಯುವ ಸಂದರ್ಭದಲ್ಲಿ ವರದಿಯನ್ನು ಮಂಡನೆ ಮಾಡುತ್ತೇವೆ ಎಂದು ಎರಡು ದಿನಗಳಲ್ಲಿ ಕೋರ್ಟ್‌ಗೆ ಹೋಗಿದ್ದಾರೆ. ಇನ್ನು 18ನೇ ತಾರೀಖಿನವರೆಗೆ ಏನೇನು ಆಗಬಹುದೆಂದು ಲೆಕ್ಕ ಹಾಕಿಕೊಳ್ಳಿ. ದಯವಿಟ್ಟು ಇವುಗಳೆಲ್ಲವನ್ನು ನೆನಪಿನಲ್ಲಿಟ್ಟುಕೊಂಡು ರೂಲಿಂಗ್ ಕೊಡಬೇಕು. ಇದಕ್ಕಿಂತ ನಾವೇನೂ ಹೇಳುವುದಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರು ಸಮಯ ಬೇಕು ಎಂದು ಮನವಿ ಮಾಡಿದ್ದರ ವಿರುದ್ಧವಾಗಿ ಧರಣಿ ಮಾಡುವುದಾದರೆ it will contempt of the House.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಬಾವಿಯಲ್ಲಿದ್ದು ಸರ್ಕಾರ ಮಾಡುತ್ತಿರುವ ಅನ್ಯಾಯ ಎಂದು ಮಾತನಾಡಿದರು)

**ಶ್ರೀ ಟಿ.ಬಿ. ಜಯಚಂದ್ರ:-** ಈ ರೀತಿ ವಿತಂಡ ವಾದ ಮಾಡಿದರೆ ಜನರು ಹೊರಗೆ ಹಾಕುತ್ತಾರೆ.

ಶ್ರೀ ಎಸ್.ಆರ್. ಪಾಟೀಲ್:- ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಸದಸ್ಯರಿಗೆ ನಾನು ಸಭಾನಾಯಕನಾಗಿ ಮನವಿ ಮಾಡಿಕೊಳ್ಳುತ್ತೇನೆ. ತಾವು ತಜ್ಞರು ಮತ್ತು

ಕಾನೂನು ತಜ್ಞರು ಸೇರಿದಂತೆ ಯಾರ ಜೊತೆ ಸಮಾಲೋಚನೆ ಮಾಡುತ್ತೀರೋ, ಆ ಕೆಲಸ ಮಾಡಿ, ಯೋಗ್ಯವಾದ ruling ಕೊಡುತ್ತೀರಿ ಎಂಬ ವಿಶ್ವಾಸ ಇದೆ. ಆದರೆ ತಾವು ನಿರ್ಣಯ ಕೊಡುವವರೆಗೂ ಬಾವಿಯಲ್ಲಿ ಇರುತ್ತೇವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ನಿರ್ಣಯ ಮಾಡಿದ್ದಾರೆ, ತಮ್ಮ ಪೀಠದ ಮೇಲೆ ಒತ್ತಡ ತರುವ ವಿಚಾರ ಇಟ್ಟುಕೊಂಡು ಮಾಡಿರುವ ನಿರ್ಣಯ ಸರಿಕಾಣುವುದಿಲ್ಲ. ದಯಮಾಡಿ ಬಾವಿಯಿಂದ ಹೊರಗೆ ಬರಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೂಲಿಂಗ್ ಕೊಟ್ಟ ನಂತರ ನಾವಿಬ್ಬರೂ ಅದಕ್ಕನುಗುಣವಾಗಿ ನಡೆದುಕೊಳ್ಳಬೇಕು. ಆ ದೃಷ್ಟಿಯಿಂದ ಮತ್ತೊಮ್ಮೆ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ. ಈ ರೀತಿಯಾದ ಮೊಂಡುತನ ಸರಿಯಲ್ಲ, ಇದರಿಂದ ಒಳ್ಳೆಯ ಸಂದೇಶ ಹೋಗುವುದಿಲ್ಲ. ಶಿವರಾತ್ರಿ ಹಬ್ಬ ಹಾಗೂ ಬಹಳ ಮಹತ್ವದ ವಿಚಾರಗಳು ಇರುವುದರಿಂದ, ==== ಮುಂದೆ ಬಜೆಟ್ ಅಧಿವೇಶನ ಪ್ರಾರಂಭವಾಗುವ ಹಂತದಲ್ಲಿ ತಾವು ತಜ್ಞರ ಸಮಾಲೋಚನೆಯೊಡನೆ ಯೋಗ್ಯವಾದ ರೂಲಿಂಗ್ ಕೊಡುತ್ತೀರಿ ಎಂಬ ವಿಶ್ವಾಸ ಇದೆ. ಅಲ್ಲಿಯವರೆಗೆ ಬಾವಿಯಲ್ಲಿರುವ ಬಗ್ಗೆ ತೆಗೆದುಕೊಂಡಿರುವ ನಿರ್ಣಯವನ್ನು ಹಿಂತೆಗೆದುಕೊಂಡು ಹೊರಗೆ ಬರಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ದಯಮಾಡಿ 10 ನಿಮಿಷ ಸಭೆಯನ್ನು ಮುಂದೂಡಿ, ತಮ್ಮ ಕೊಠಡಿಯಲ್ಲಿ ಕರೆದು ಚರ್ಚಿಸಿ ಒಂದು ನಿರ್ಧಾರವನ್ನು ಕೊಡಿ.

ಸಭಾಪತಿಯವರು:- ಇದರ ಮೇಲೆ ಏನು ನಿರ್ಧಾರ ಕೊಡುವುದು?

ಶ್ರೀ ಪುಟ್ಟಣ್ಣ:- ಇದರ ಮೇಲಲ್ಲ. ತಮ್ಮೊಡನೆ ಮಾತುಕತೆ ಆದ ನಂತರ ಒಂದು ನಿರ್ಧಾರ ಕೊಡಿ. ತಮಗೆ ಇದರಿಂದ ಇಕ್ಕಟ್ಟಾಗಿದೆ.

ಸಭಾಪತಿಯವರು:- ಹಿಂದಿನ ಮಾನ್ಯ ಉಪಸಭಾಪತಿಯವರ ಸಲಹೆ ಮೇರೆಗೆ ಸದನವನ್ನು ಸ್ವಲ್ಪ ಮುಂದೂಡಿ ಇದನ್ನು ಫೈನಲ್ ಮಾಡುವ ಬಗ್ಗೆ ವಿನಂತಿಸುತ್ತಿದ್ದಾರೆ. ಅವರು ಹೇಳುವುದು ಸರಿಯಿದೆ. ನಾವು ಸ್ವಲ್ಪ ಸಮಾಧಾನವಾಗಿ ಮಾತನಾಡಬೇಕು ಆದ್ದರಿಂದ ನನ್ನ ಕೊಠಡಿಗೆ ಸರ್ಕಾರದ ಪರವಾಗಿ ಇಬ್ಬರೂ ಸಚಿವರು ಹಾಗೂ ಸರ್ಕಾರಿ ಮುಖ್ಯ ಸಚೇತಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರು

ಮತ್ತು ಜೆಡಿ(ಎಸ್) ಪಕ್ಷದ ಪರವಾಗಿ ಮಾನ್ಯ ಹೊರಟ್ಟಿಯವರು ಅಥವಾ ಮಾನ್ಯ ಪುಟ್ಟಣ್ಣನವರು ಕುಳಿತು ಮಾತನಾಡೋಣ. ಇದನ್ನು sort out ಮಾಡೋಣ. ಆ ಕಾರಣದಿಂದ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು 9 ಗಂಟೆ 04 ನಿಮಿಷಗಳಿಗೆ ಮುಕ್ತಾಯಗೊಂಡು ಪುನ: 10 ನಿಮಿಷಗಳ ತರುವಾಗ ಸಭೆ ಸೇರಲು ನಿರ್ಧರಿಸಿತು)

**(ಮತ್ತೆ, ಸದನವು ರಾತ್ರಿ 9 ಗಂಟೆ 58 ನಿಮಿಷಕ್ಕೆ ಸೇರಿತು)**

**(ಸನ್ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು)**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ನಾಡಿದ್ದು, ಶಿವರಾತ್ರಿ ಹಬ್ಬವಾಗಿದ್ದು, ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋಗಬೇಕಾಗಿದೆ. ಜೊತೆಗೆ ಇವತ್ತು ನಾವು 6 ಮದುವೆ ಕಾರ್ಯಕ್ರಮಗಳಿಗೆ ಹೋಗಬೇಕಾಗಿತ್ತು. ಆದರೆ, ನಾವು ಹೋಗಲಿಕ್ಕೆ ಆಗಲಿಲ್ಲ. ಮತ್ತೆ, ಕೆಲವರಿಗೆ ಟ್ರೈನ್‌ಗಳು ಸಹ ಮಿಸ್ ಆಗಿವೆ. ಈ ರೀತಿ ಪರಿಸ್ಥಿತಿ ಇದೆ. ತಮ್ಮ ಮೂಲಕ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ, ಮತ್ತು ನಮ್ಮ ಸನ್ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ತಾವು ಕೂಡ ತಮ್ಮ ವಿಚಾರಗಳನ್ನು ಸಭಾಪತಿಯವರಿಗೆ ಹೇಳಿದ್ದೀರಿ. ಸರ್ಕಾರದವರು ಕೂಡ ಹೇಳಿದ್ದಾರೆ. ಇದಕ್ಕೆ ಸನ್ಮಾನ್ಯ ಸಭಾಪತಿಯವರು ಈ ವಿಚಾರದಲ್ಲಿ ಸ್ವಲ್ಪ ಸಮಯ ಬೇಕು, ಬೇರೆ ಬೇರೆ ಅಡ್ವೋಕೇಟ್‌ಗಳ ಜೊತೆ ಮಾತನಾಡಬೇಕು, ಮತ್ತು ಬೇರೆ ಬೇರೆ ವಿಷಯಗಳನ್ನು ನಾನು ಸಂಗ್ರಹಣೆ ಮಾಡಬೇಕು, ನಂತರ ಈ ವಿಚಾರವಾಗಿ ತಿಳಿಸುತ್ತೇನೆಂದು ಹೇಳಿದ್ದಾರೆ. ದಯಮಾಡಿ, ನಾವೆಲ್ಲರೂ ಕೂಡ ಮಾನ್ಯ ಸಭಾಪತಿಯವರಲ್ಲಿ ವಿಶ್ವಾಸವಿಟ್ಟು, ಶ್ರೀಯುತ ಮದುಸೂಧನ್‌ರವರು ಸೇರಿದಂತೆ ಎಲ್ಲರೂ ಕೂಡ ಧರಣಿಯಿಂದ ವಾಪಸ್ಸು ಬನ್ನಿ. ಮುಂದೆ ನಾವು ಏನು 18ನೇ ತಾರೀಖಿನಿಂದ ಬಜೆಟ್ ಅಧಿವೇಶನ ಸೇರುತ್ತೇವೆ, ಆ ಸಮಯದಲ್ಲಿ ಅವರು 19ನೇ ತಾರೀಖು, ಅಥವಾ 20ನೇ ತಾರೀಖು, 21ನೇ ತಾರೀಖು ತಮ್ಮ ರೂಲಿಂಗ್ ಕೊಡಲಿ, ಈ ನಿಟ್ಟಿನಲ್ಲಿ ಅವಕಾಶ ಕೊಡುತ್ತಾರೆ, ಅಂದು ಅವರು ರೂಲಿಂಗ್ ಕೊಡಲಿ ಅವರು ಕೊಡುವಂತಹ ತೀರ್ಮಾನಕ್ಕೆ ನಾವು ಮತ್ತು ಸರ್ಕಾರದವರು ಇಬ್ಬರು ಒಪ್ಪಿಕೊಳ್ಳೋಣ.

**ಮುಂದು. . .**

(ಸಭಾಪತಿಯವರ ಉಪಸ್ಥಿತಿ)

ಶ್ರೀ ಪುಟ್ಟಣ್ಣ(ಮುಂದುವರೆದುದು ...

ನನ್ನ ಅನಿಸಿಕೆ, ನನ್ನ knowledge ಪ್ರಕಾರ ಇನ್ನು ಹತ್ತು-ಹದಿನೈದು ದಿವಸಗಳಲ್ಲಿ ಈ ವಿಷಯದಲ್ಲಿ ಅಂತಹ ಬದಲಾವಣೆ ಏನೂ ಆಗುವುದಿಲ್ಲ ಎಂದು ಭಾವಿಸಿದ್ದೇನೆ. ಹಾಗಾಗಿ ದಯಮಾಡಿ ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ, ಸರ್ಕಾರದವರು ಕೂಡ ಇದರಲ್ಲಿ ಮತ್ತೆ ಮತ್ತೆ ಕೊಕ್ಕೆ ಹಾಕುವುದು, ಕೆದಕುವುದು; ಅದು ಮುಚ್ಚುವುದು, ಇದು ಸೇರಿಸುವುದು ಅದೆಲ್ಲಾ ಬೇಡ. ನಾನು ತಮ್ಮಲ್ಲಿ ಕೂಡ ಮನವಿ ಮಾಡುತ್ತೇನೆ. ಈ ಸಂದರ್ಭದಲ್ಲಿ ನಾವೆಲ್ಲರೂ ಸಹ ಒಂದೇ, ಕಾಂಗ್ರೇಸ್ ಪಕ್ಷ ಈಗ ಅಧಿಕಾರದಲ್ಲಿದೆ, ಹಿಂದಿನ ಅವಧಿಯಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರದಲ್ಲಿತ್ತು, ನಾವಿದ್ದೆವು. ಹೀಗಾಗಿ ಆಡಳಿತ ಪಕ್ಷ ವಿರೋಧ ಪಕ್ಷದ ಸ್ಥಾನಕ್ಕೆ ಬರುವುದು, ಅದೇರೀತಿ ವಿರೋಧ ಪಕ್ಷ ಆಡಳಿತ ಪಕ್ಷದ ಸ್ಥಾನಕ್ಕೆ ಬರುವುದು ಸರ್ವೇ ಸಾಮಾನ್ಯವಾದಂತಹ ವಿಚಾರ. ಅದೇರೀತಿ ಧರಣಿ ನಡೆಸುವುದು ಕೂಡ ಸರ್ವೇ ಸಾಮಾನ್ಯವಾಗಿದ್ದು, ನಾನು ಸಹ ಕಳೆದ ಸುಮಾರು 14 ವರ್ಷಗಳಿಂದ ಇದನ್ನೆಲ್ಲಾ ನೋಡುತ್ತಿದ್ದೇನೆ. ಧರಣಿ ನಡೆಸುತ್ತಿದ್ದಂತಹ ಸಂದರ್ಭದಲ್ಲಿಯೇ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿರುವುದನ್ನು ಸಹ ನಾನು ನೋಡಿದ್ದೇನೆ, ಸದನದ ಬಾವಿಯಲ್ಲಿಯೇ ಎದ್ದುನಿಂತು ರಾಷ್ಟ್ರಗೀತೆ ಹಾಡಿರುವುದನ್ನು ಸಹ ನಾನು ನೋಡಿದ್ದೇನೆ. ನಂತರ ಎಲ್ಲರೂ ಅವರಷ್ಟಕ್ಕೆ ಅವರು ಹೋದುದನ್ನೂ ನೋಡಿದ್ದೇನೆ. ಆದ್ದರಿಂದ ಅದಕ್ಕೆ ಅವಕಾಶ ಕೊಡುವುದು ಬೇಡ, ದಯಮಾಡಿ ಮಾನ್ಯ ಸಭಾಪತಿಗಳ ಮುಖಾಂತರ ನಾನು ಧರಣಿ ನಡೆಸುತ್ತಿರುವ ಎಲ್ಲ ಸದಸ್ಯರಲ್ಲಿಯೂ ಮನವಿ ಮಾಡುತ್ತೇನೆ, ದಯಮಾಡಿ ತಾವೆಲ್ಲರೂ ಸಹ ಧರಣಿಯನ್ನು ಕೈಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಬನ್ನಿ. ಮಾನ್ಯ ಸಭಾಪತಿಗಳ ಮೇಲೆ ವಿಶ್ವಾಸ ಇಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ವಾಪಸ್ ಬರಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸಭಾಪತಿಯವರು ಏನು ತೀರ್ಮಾನ ಕೊಡುತ್ತಾರೆ ಅದರ ಪ್ರಕಾರ ನಾವು ಮತ್ತು ಸರ್ಕಾರದವರು ಎಲ್ಲರೂ ಕೂಡ ಒಪ್ಪಿಕೊಳ್ಳೋಣ.

ನೋಡಿ, ಪ್ರೆಸ್ ಮತ್ತು ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತಿರುವ ಎಲ್ಲರ ಮುಖಗಳು ಸಹ ಬಾಡಿ ಹೋಗಿವೆ. ಸೋಮವಾರ ಮಹಾ ಶಿವರಾತ್ರಿ ಹಬ್ಬವಿರುವುದರಿಂದ ಇವತ್ತು ಎಲ್ಲರೂ ಊರಿಗೆ ಹೋಗುವ ತವಕದಲ್ಲಿದ್ದೇವೆ. ಆದ್ದರಿಂದ ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ ಬರಬೇಕು. ಎಲ್ಲರೂ ಸಹ ಶಿವರಾತ್ರಿ ಹಬ್ಬವನ್ನು ಸಂತೋಷವಾಗಿ ಆಚರಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಪುಟ್ಟಣ್ಣನವರು ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷಗಳ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಂಡಿದ್ದಾರೆ. ನಾನು ಕೂಡ ಸರ್ಕಾರದ ಪರವಾಗಿ ಸಭಾನಾಯಕನಾಗಿ ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷಗಳ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ಪ್ರಾರ್ಥನಾ ರೂಪದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಮಾನ್ಯ ಪುಟ್ಟಣ್ಣನವರು ಎಲ್ಲ ವಿಚಾರಗಳನ್ನೂ ತಿಳಿಸಿರುವುದರಿಂದ ನಾನು ಪುನಃ ಅದನ್ನೇ ಪುನರುಚ್ಛರಿಸುವುದಕ್ಕೆ ಹೋಗುವುದಿಲ್ಲ. ನಾಡಿದ್ದು ಮಹಾ ಶಿವರಾತ್ರಿ ಹಬ್ಬವಿದ್ದು, ಬಹುತರವಾಗಿ ನಾವೆಲ್ಲರೂ ಒಪ್ಪಿಕೊಂಡಿರುವಂತಹ ಅನೇಕ ಕಾರ್ಯಕ್ರಮಗಳಿರುವುದರಿಂದ ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಮೇಲೆ ವಿಶ್ವಾಸ ಮತ್ತು ನಂಬಿಕೆ ಇಡೋಣ.

ಮಾನ್ಯ ಸಭಾಪತಿಯವರು ಈ ರೂಲಿಂಗ್ ಕೊಡಬೇಕಾದರೆ ಕಾನೂನಿನ ಸಲಹೆ ಪಡೆಯುವುದು ಬಹಳ ಅವಶ್ಯವಾಗಿದೆ. ಏಕೆಂದರೆ ಇದು ಕ್ಲಿಷ್ಟವಾದಂತಹ ಒಂದು ವಿಷಯವಾಗಿರುವ ದೃಷ್ಟಿಯಿಂದ ಅವರಿಗೆ ಕಾನೂನಿನ ಸಲಹೆ ಅಗತ್ಯವಾಗಿದೆ. ಇಲ್ಲದಿದ್ದರೆ ಮಾನ್ಯ ಸಭಾಪತಿಯವರು ಸಮಯ ತೆಗೆದುಕೊಳ್ಳದೆ, ಕ್ಷಣಾರ್ಧದಲ್ಲಿಯೇ ನಿರ್ಣಯ ಕೊಡುತ್ತಿದ್ದರು. ಆ ರೀತಿ ತಕ್ಷಣವೇ ಅವರು ನಿರ್ಣಯ ಕೊಟ್ಟಿರುವಂತಹ ಬಹಳಷ್ಟು ಸಂದರ್ಭಗಳನ್ನು ನಾನು ನೋಡಿದ್ದೇನೆ. ಒಂದು ನಿಮಿಷ ಕೂಡ ತಡ ಮಾಡದೆ, ಅಲ್ಲಿಯೇ ನಿಯಮಾವಳಿಯ ಪುಸ್ತಕವನ್ನು ತರಿಸಿ, ಅಲ್ಲಿಂದಲ್ಲಿಯೇ ರೂಲಿಂಗ್ ಕೊಟ್ಟು ಈ ಸದನವನ್ನು ಅತ್ಯಂತ ಅರ್ಥಪೂರ್ಣವಾದ ರೀತಿಯಲ್ಲಿ ನಡೆಸಿಕೊಂಡು ಹೋದಂತಹ ಖ್ಯಾತಿಗೆ ಅವರು ಪಾತ್ರರಾದವರು. ಆ ಪೀಠಕ್ಕೆ ಗೌರವ ತರುವಂತಹ, ಪೀಠಕ್ಕಿಂತ ಎತ್ತರವಾಗಿರುವಂತಹ ವ್ಯಕ್ತಿತ್ವವನ್ನು ಹೊಂದಿರುವಂತಹ ನಮ್ಮ ಸಭಾಪತಿಗಳ ಮೇಲೆ ನಾವು ನಂಬಿಕೆ ಇಡುವುದು ಬಹಳ ಅವಶ್ಯಕವಾಗಿದೆ. ಅವರು ನಿಶ್ಚಿತವಾಗಿಯೂ ಯೋಗ್ಯವಾದಂತಹ ನಿರ್ಣಯವನ್ನು ಕೊಡುತ್ತಾರೆ. That ruling is binding on all Hon'ble Members of this august House. ಎಲ್ಲರಿಗೂ ಅದು ಸರಿಯಾದಂತಹ, ನ್ಯಾಯಯುತವಾದಂತಹ ನಿರ್ಣಯ ಕೊಡುತ್ತೀರಿ ಎನ್ನುವ ವಿಶ್ವಾಸ ನಮಗೆಲ್ಲರಿಗೂ ಇದೆ ಎಂದು ನಾನು ಭಾವಿಸಿದ್ದೇನೆ.

ಆ ದೃಷ್ಟಿಯಿಂದ ಇವೆಲ್ಲವುಗಳನ್ನು ಸಹ ಪರಿಗಣನೆಗೆ ತೆಗೆದುಕೊಂಡು ಸಭಾನಾಯಕನಾಗಿ ಸರ್ಕಾರದ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ವಿರೋಧ ಪಕ್ಷದ ನಾಯಕರಾದಂತಹ ಗೌರವಾನ್ವಿತ ಕೆ.ಎಸ್.ಈಶ್ವರಪ್ಪನವರು ಸಂಸದೀಯ ವ್ಯವಸ್ಥೆಯಲ್ಲಿ ಅಪಾರವಾದಂತಹ ಅನುಭವವನ್ನು ಹೊಂದಿರುವುದರ ಜೊತೆಗೆ ಪ್ರತಿಪಕ್ಷವಾದ ಭಾರತೀಯ ಜನತಾ ಪಕ್ಷದ ಎಲ್ಲ ಗೌರವಾನ್ವಿತ ಸದಸ್ಯರಿಗೆ ದಯಮಾಡಿ ಈ ಧರಣಿಯನ್ನು ಹಿಂಪಡೆದು ತಮ್ಮ ಸ್ಥಾನಗಳಿಗೆ ಹೋಗಿ ಸನ್ಮಾನ್ಯ ಸಭಾಪತಿಯವರು ಕೊಡುವಂತಹ ನಿರ್ಣಯವನ್ನು ಕಾಯೋಣ, ಅವರು ಕೊಟ್ಟಂತಹ ನಿರ್ಣಯವನ್ನು ನಾವೆಲ್ಲರೂ ಒಟ್ಟಾರೆಯಾಗಿ ಒಪ್ಪೋಣ ಎಂದು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಈ ಧರಣಿಯನ್ನು ಇಷ್ಟಕ್ಕೆ ನಿಲ್ಲಿಸಿ ಮಹಾ ಶಿವರಾತ್ರಿಯಲ್ಲಿ ಎಲ್ಲರೂ ಪಾಲ್ಗೊಳ್ಳುವಂತಹ ಅವಕಾಶವನ್ನು ತಾವು ಕಲ್ಪಿಸಿಕೊಡಿರಿ. ಬಹುಶಃ ಇದೇ ತಿಂಗಳ 18ನೇ ತಾರೀಖು ಮತ್ತೆ ಅಧಿವೇಶನ ಪ್ರಾರಂಭವಾದರೆ, 18ನೇ ತಾರೀಖು, 19ನೇ ತಾರೀಖು ಅಥವಾ 20ನೇ ತಾರೀಖು ತಾವು ಯಾವಾಗ ನಿರ್ಣಯ ಕೊಡುತ್ತೀರೋ, ಆ ನಿರ್ಣಯವನ್ನು ನಾವೆಲ್ಲರೂ ಶಿರಸಾವಹಿಸಿ ಪಾಲನೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಾ, ಮತ್ತೊಮ್ಮೆ ತಮಗೆಲ್ಲರಿಗೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ಬಾವಿಗೆ ಬಂದು ಧರಣಿ ನಡೆಸುತ್ತಿರುವ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕು, ಮಾನ್ಯ ಸಭಾಪತಿಯವರಿಗೆ ಸದನವನ್ನು ನಡೆಸಲು ಅವಕಾಶ ಕಲ್ಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಗೋ.ಮಧುಸೂದನ್:-** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಪೀಠಕ್ಕೆ ಕಟ್ಟಕಡೆಯ ಮನವಿಯನ್ನು ಮಾಡುತ್ತಿದ್ದೇನೆ. Karnataka Minorities Commission Act, Section 10(2), 15, judgment of High Court ಇವೆಲ್ಲವೂ ಅಪ್ರಸ್ತುತ.

ಮಾನ್ಯ ಸಭಾಪತಿಯವರೇ, ಈ ಸದನದ ಸರ್ವೋಚ್ಚ ಪೀಠದಲ್ಲಿ ಕುಳಿತಿರುವಂಥವರು ತಾವು. ತಮ್ಮ ರೂಲಿಂಗ್ ಏನಿದೆ, that is above all these sections. ತಾವು ಇದು ಸೆಕ್ಷನ್‌ನಲ್ಲಿದೆಯೋ-ಇಲ್ಲವೋ, ಸಂವಿಧಾನದ ಪ್ರಕಾರ ಇದೆಯೋ-ಇಲ್ಲವೋ, ಅವರಿಗೆ ಅದು ಒಪ್ಪಿಗೆಯಾಗುತ್ತದೆಯೋ-ಇಲ್ಲವೋ, ಇವರಿಗದು ಒಪ್ಪಿಗೆಯಾಗುತ್ತದೆಯೋ-ಇಲ್ಲವೋ ಅದಾವುದೂ ಅಲ್ಲ. ತಾವು ಅಲ್ಲಿ ಕುಳಿತಿರುವಂಥದ್ದು ನ್ಯಾಯಪೀಠ. ಆ ಕಾರಣಕ್ಕೋಸ್ಕರವಾಗಿ ತಾವು ಸರ್ಕಾರ ವರದಿಯನ್ನು ಮಂಡಿಸಬೇಕೆಂದು ಮೊದಲನೆಯ

ಬಾರಿ ರೂಲಿಂಗ್ ಕೊಟ್ಟಿರಿ, ಅವರು ಆ ಬಗ್ಗೆ ತಮ್ಮಲ್ಲಿ ಮರುಮನವಿಯನ್ನು ಮಾಡಿದರು. ತಾವು ಬಹಳ ಚಿಂತನೆಯನ್ನು ಮಾಡಿ ಎರಡನೇ ಬಾರಿ ಹೇಳಿದಿರಿ, 'ನಾನು ಹೇಳಿರುವುದು ಸರಿ, ನೀವು ವರದಿಯನ್ನು ಮಂಡಿಸಲೇಬೇಕು' ಎಂದು ತಾವು ತಿಳಿಸಿದ್ದೀರಿ. ಬೇರೆ ಎಲ್ಲವನ್ನೂ ಬಿಟ್ಟುಬಿಡೋಣ, ತಮ್ಮ ಆದೇಶವೇನಿದೆ, ಅದು ಈ ಸದನದಲ್ಲಿ ಪಾಲನೆಯಾಗಬೇಕೇ, ಬೇಡವೇ? This is going to be a bench mark. ಒಮ್ಮೆ ನಾವು ಈ ಸದನದಲ್ಲಿ ಸಭಾಪತಿಗಳ ನಿರ್ಣಯವನ್ನು ಉಲ್ಲಂಘಿಸಿ ನಡೆದುಕೊಳ್ಳಬಹುದು ಎನ್ನುವಂತಹ ಒಂದು precedent ನ್ನು ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಈ ದೇಶದಲ್ಲಿ ಇವತ್ತು ಹಾಕುತ್ತದೆ ಎನ್ನುವುದು ತೀರ್ಮಾನವಾಗುವ ಹಾಗಿದ್ದರೆ ಅದು ಸಹ ತೀರ್ಮಾನವಾಗಬೇಕಾಗುತ್ತದೆ ಎಂದು ತಮ್ಮಲ್ಲಿ ಹೇಳಬಯಸುತ್ತೇನೆ.

ಸದನದ ಸರ್ವೋಚ್ಛ ಪೀಠದಲ್ಲಿರುವಂತಹ ತಮ್ಮ ನಿರ್ಣಯವನ್ನು ಪಾಲನೆ ಮಾಡದಿರುವಂತಹ ಸರ್ಕಾರ ಇದೆ. ತಾವು ಎರಡು-ಮೂರು ಬಾರಿ ಕೊಟ್ಟಿರುವಂತಹ ನಿರ್ಣಯ, ಈಗಲೂ ತಾವು ಅವರಿಗೆ ಹೇಳಿದಿರಿ, ಎಲ್ಲವನ್ನೂ ನೋಡಿದಾಗ ನನಗನಿಸುತ್ತಿದೆ, ನಾನೂ ಅದೇ ಭಾವನೆಯಲ್ಲಿದ್ದೆ, ನೀವು ವರದಿಯನ್ನು ಕೊಟ್ಟುಬಿಡುತ್ತೀರಿ ಎನ್ನುವ ಭಾವನೆಯಲ್ಲಿದ್ದೆ ಎನ್ನುವಂಥದ್ದಿರಬೇಕಾದರೆ ನಮಗೆಲ್ಲರಿಗೂ ಸಹ ನಯವಂಚನೆಯನ್ನು ಮಾಡುವಂತಹ ಕಾನೂನಿನಲ್ಲಿರುವಂತಹ ಅನೇಕ ಪರಿಚ್ಛೇದಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಭ್ರಷ್ಟರ ರಕ್ಷಣೆಗೆ ಉಪಯೋಗಿಸುವಂತಹ ದುಸ್ಸಾಹಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ, ಈ ಸರ್ಕಾರ ಮಾಡುತ್ತಿದೆ. ಇದು ಇತಿಹಾಸದ ಪುಟಗಳಲ್ಲಿ ಸೇರಬೇಕಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಾ, ನಾನು ಎಲ್ಲ ವಿಷಯವನ್ನು ತಮ್ಮ ನಿರ್ಧಾರಕ್ಕೆ ಬಿಡುತ್ತಾ, ನನ್ನ ಅಂತಿಮ ವಾದವನ್ನು ಮುಕ್ತಾಯ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು.

**ಸಭಾಪತಿಯವರು:-** ದಯಮಾಡಿ ಸಭೆಯ ಎರಡೂ ಕಡೆಯ, ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವ ಪುಟ್ಟಣ್ಣನವರು ಮತ್ತು ಆಡಳಿತ ಪಕ್ಷದ ಸ್ಥಾನದಲ್ಲಿ ಕುಳಿತಿರುವವರು ಸಹ ಕೇಳುತ್ತಿದ್ದಾರೆ. ನಾನು ಈಗಾಗಲೇ ಏನು ನಿರ್ಣಯವನ್ನು ಕೊಟ್ಟಿದ್ದೇನೆ, ನನಗೆ ಸ್ವಲ್ಪ ಸಮಯ ಬೇಕು, ಕಾನೂನು ತಜ್ಞರ ಜೊತೆಯಲ್ಲಿ ನಾನು ಇನ್ನೂ ಸ್ವಲ್ಪ ಚರ್ಚೆ ಮಾಡಿ ನನ್ನ ನಿರ್ಣಯವನ್ನು ತಿಳಿಸುವುದಕ್ಕೆ ನನಗೆ ಸಮಯ ಬೇಕು. ಇವತ್ತು ಸದನದ ಕೊನೆಯ ದಿವಸ, ಆದ್ದರಿಂದ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ನಾನು ಕೊಡುವ ನಿರ್ಣಯಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಿ, ನನಗೆ ಸ್ವಲ್ಪ ಸಮಯ ಕೊಡಿ ಎಂದು

ಮತ್ತೊಮ್ಮೆ ಕೇಳುತ್ತೇನೆ. ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಮತ್ತೊಮ್ಮೆ ನಾನು ವಿನಂತಿ ಮಾಡುತ್ತೇನೆ, ಎಲ್ಲರನ್ನೂ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:–** ಬನ್ನಿ ಸರ್, ವಿರೋಧ ಪಕ್ಷದ ನಾಯಕರೇ, ಬನ್ನಿ. ದಯಮಾಡಿ ತಮ್ಮ ಸ್ಥಾನಕ್ಕೆ ಹಿಂತಿರುಗಿ ಬನ್ನಿ ಸರ್. ಮಾನ್ಯ ರಾಮಚಂದ್ರಗೌಡರೇ, ದಯಮಾಡಿ ಬನ್ನಿ.

**(ವಿರೋಧ ಪಕ್ಷದ ನಾಯಕರು ಸಹ ಒಳಗೊಂಡಂತೆ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿಯೇ ಧರಣಿಯನ್ನು ಮುಂದುವರೆಸುತ್ತಿದ್ದರು)**

## ಸಾರಾಂಶ

(ಪ್ರತಿಯನ್ನು ಲಗತ್ತಿಸಲಾಗಿದೆ)

**(ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು)**

**(ಸದನವನ್ನು ರಾತ್ರಿ 10 ಗಂಟೆ 10 ನಿಮಿಷಕ್ಕೆ ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಯಿತು)**